ಮಂಗಳವಾರ, ಜನವರಿ 23, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 23 | ಪುಟ 14

• www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಚಿನ್ನ (Std. 10g)	ಶುದ್ಧ ಬೆಳ್ಳಿ (kg)
₹ 64,375 (ಬೆಂಗಳೂರು) ▲	₹73,748 (ಬೆಂಗಳೂರು) ▲



ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು

ಜೈ ಶ್ರೀರಾಮ್ ಘೋಷಣೆ ಕೂಗಿದ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೈ ಶ್ರೀರಾಮ್ ಎನ್ನುವುದು ಯಾರದ್ದೋ ಖಾಸಗಿ ಸ್ವತ್ತಲ್ಲ. ಅದು ಪ್ರತಿಯೊಬ್ಬ ಭಕ್ತರ ಸೊತ್ತು' ಎಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಜೈ ಶ್ರೀರಾಮ್' ಘೋಷಣೆ ಕೂಗಿ ಭಕ್ತರನ್ನು ಹುರಿದುಂಬಿಸಿದರು.

ನಗರದ ಹೊರವಲಯದ ಬಿದರಹಳ್ಳಿ ಹೋಬಳಿಯ, ಹಿರಂಡಹಳ್ಳಿ ಶ್ರೀರಾಮ ಟೆಂಪಲ್ ಟ್ರಸ್ಟ್ ನಿರ್ಮಿಸಿರುವ ರಾಮ ಸೀತಾ ಲಕ್ಷ್ಮಣ ದೇವಾಲಯ ಹಾಗೂ 33 ಅಡಿ ಎತ್ತರದ ಏಕಶಿಲಾ ಆಂಜನೇಯ ಸ್ವಾಮಿ ವಿಗ್ರಹದ ಶಿಲಾ ಪ್ರತಿಷ್ಠಾಪನಾ ಕಾರ್ಯಕ್ರಮ ಈ ಉದ್ಘೋಷಕ್ಕೆ ಸಾಕ್ಷಿಯಾಯಿತು.

'ಜೈ ಶ್ರೀರಾಮ್ ಎಂದು ನಾವು ಹೇಳಲ್ವ? ನೀವು ಹೇಳಲ್ವ; ಎಲ್ಲರೂ ಹೇಳಬೇಕು' ಎಂದು ಸಿದ್ದರಾಮಯ್ಯ ಅವರು ಸಭೆಯಲ್ಲಿ ಭಾಗವಹಿಸಿದ್ದವರನ್ನು ಪ್ರಶ್ನಿಸಿದರು. 'ಹೇಳಿ ಒಂದು ಸಾರಿ ಜೈ ಶ್ರೀರಾಮ್' ಎಂದು ಸಾರ್ವಜನಿಕರಿಂದಲೂ ಹೇಳಿಸಿದರು.

ಮುಖ್ಯ ಯಜಮಾನನ ಸ್ಥಾನದಲ್ಲಿ ನಿಂತು ಪ್ರಾಣ ಪ್ರತಿಷ್ಠಾಪನೆ ನೆರವೇರಿಸಿದ ಪ್ರಧಾನಿ ಮೋದಿ • ಎಂಟು ಸಾವಿರ ಅತಿಥಿಗಳು ಸಾಕ್ಷಿ

ಅಯೋಧ್ಯೆಯಲ್ಲಿ ನೆಲೆಸಿದ ಬಾಲರಾಮ

• ಸಂಜಯ್ ಪಾಂಡೆ

ಅಯೋಧ್ಯೆ: ಕೋಟ್ಯಂತರ ಮಂದಿ ಆಸ್ತಿಕರು ವರ್ಷಗಳಿಂದ ಕಾಯುತ್ತಿದ್ದ ಬಾಲರಾಮನ ವಿಗ್ರಹದ ಪ್ರಾಣ ಪ್ರತಿಷ್ಠಾಪನೆಯ ಕಾರ್ಯವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಅಯೋಧ್ಯೆಯ ರಾಮ ಮಂದಿರದಲ್ಲಿ ಮುಖ್ಯ ಯಜಮಾನನ ಸ್ಥಾನದಲ್ಲಿ ನಿಂತು ವೈದಿಕ ಸಂಪ್ರದಾಯಕ್ಕೆ ಅನುಗುಣವಾಗಿ ಸೋಮವಾರ ನೆರವೇರಿಸಿದರು.

ರಾಮ ಮಂದಿರದ ಆವರಣದಲ್ಲಿ ಉಪಸ್ಥಿತರಿದ್ದ ಸರಿಸುಮಾರು ಎಂಟು ಸಾವಿರ ಅತಿಥಿಗಳು ಈ ಐತಿಹಾಸಿಕ ಕ್ಷಣಗಳಿಗೆ ನೇರವಾಗಿ ಸಾಕ್ಷಿಯಾದರು. ದೇಶ ಹಾಗೂ ವಿದೇಶಗಳಲ್ಲಿ ಇರುವ ಕೋಟ್ಯಂತರ ಮಂದಿ ಟಿ.ವಿ. ಪರದೆಯ ಮೂಲಕ ಈ ಕಾರ್ಯಕ್ರಮವನ್ನು ವೀಕ್ಷಿಸಿದರು. ರಾಮ ಮಂದಿರದ ಉದ್ಘಾಟನೆಯು ದೇಶದ ರಾಜಕೀಯ ಹಾಗೂ ಧಾರ್ಮಿಕ ಇತಿಹಾಸದಲ್ಲಿ ಬಹಳ ಮಹತ್ವದ್ದು ಎಂದು ವಿಶ್ಲೇಷಿಸಲಾಗಿದೆ.

ರಾಮ ಮಂದಿರ ಭೇಟಿಗೆ ಸಾರ್ವಜನಿಕರಿಗೆ ಮಂಗಳವಾರದಿಂದ ಅವಕಾಶ ಸಿಗಲಿದೆ.

ಲಕ್ಷ್ಮೀಕಾಂತ ದೀಕ್ಷಿತ್ ಮತ್ತು ಗಣೇಶ್ವರ ದ್ರಾವಿಡ್ ನೇತೃತ್ವದಲ್ಲಿ 121 ಮಂದಿ ವೈದಿಕ ವಿದ್ವಾಂಸರು ಮಂತ್ರ ಪಠಣ ಹಾಗೂ ವಿಶೇಷ ಪೂಜೆಯ ಮೂಲಕ ಪ್ರಾಣ ಪ್ರತಿಷ್ಠಾಪನೆಯ ವಿಧಿ ವಿಧಾನಗಳನ್ನು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ರಾಮ ಮಂದಿರದ ಗರ್ಭಗುಡಿಯಲ್ಲಿ ಮೋದಿ ಅಷ್ಟೇ ಅಲ್ಲದೆ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ರಾಜ್ಯಪಾಲೆ ಆನಂದಿಬೆನ್ ಪಟೇಲ್, ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘಚಾಲಕ ಮೋಹನ್ ಭಾಗವತ್ ಮತ್ತಿತರರೂ ಇದ್ದರು.

ಮೋದಿ ಅವರು ಶುಭಪ್ರದವಾದ ಅಭಿಜಿತ್ ಮುಹೂರ್ತದಲ್ಲಿ ಪ್ರಾಣ ಪ್ರತಿಷ್ಠಾಪನೆ ಕಾರ್ಯವನ್ನು ನಡೆಸಿದರು. ಈ ಮುಹೂರ್ತವು 84 ಸೆಕೆಂಡುಗಳಷ್ಟು ಅವಧಿಗೆ ಇತ್ತು. ವಿಗ್ರಹದ ಪ್ರಾಣ ಪ್ರತಿಷ್ಠಾಪನೆಗೂ ಮೊದಲು ಮೋದಿ ಅವರು ಧಾರ್ಮಿಕ ವಿಧಿಯ ಭಾಗವಾಗಿ ಸಂಕಲ್ಪ ನೆರವೇರಿಸಿದರು.

ಪಂಡಿತ್ ಸುನಿಲ್ ಶಾಸ್ತ್ರಿ ಅವರಿಂದ ಮೋದಿ ಅವರು ಸಂಕಲ್ಪ ಸ್ವೀಕರಿಸಿದರು.

7ನೇ ಪುಟ ನೋಡಿ

ವಿಶೇಷ ಪುಟಗಳು 6,7



ಪ್ರಾಣ ಪ್ರತಿಷ್ಠಾಪನೆಯ ವಿಧಿ ವಿಧಾನ ನೆರವೇರಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಬಾಲರಾಮನ ವಿಗ್ರಹಕ್ಕೆ ನಮಸ್ಕರಿಸಿದರು. ಉಡುಪಿಯ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಸಹ ಧಾರ್ಮಿಕ ವಿಧಿಯಲ್ಲಿ ಪಾಲ್ಗೊಂಡರು —ಪಿಟಿಐ ಚಿತ್ರ

ಮಂದಿರವನ್ನು ಎಲ್ಲಿ ನಿರ್ಮಿಸಬೇಕೆಂದು ಸಂಕಲ್ಪ ತೊಟ್ಟಿದ್ದೆವೋ, ಅಲ್ಲಿಯೇ ನಿರ್ಮಿಸಲಾಗಿದೆ. ರಾಮ ಮಂದಿರವು ರಾಷ್ಟ್ರ ಮಂದಿರವೂ ಹೌದು



ಯೋಗಿ ಆದಿತ್ಯನಾಥ
ಉತ್ತರ ಪ್ರದೇಶ ಮುಖ್ಯಮಂತ್ರಿ

ಈ ಕ್ಷಣಕ್ಕಾಗಿ ಹಲವು ತಲೆಮಾರುಗಳು ತ್ಯಾಗ ಮಾಡಿವೆ. ಆದರೆ, ಶ್ರೀರಾಮ ಜನ್ಮಭೂಮಿಯಲ್ಲಿ ಮತ್ತೆ ಮಂದಿರ ನಿರ್ಮಾಣ ಮಾಡುವ ಸಂಕಲ್ಪವನ್ನು ಅಲುಗಾಡಿಸಲು ಯಾವ ಬೆದರಿಕೆಗೂ ಸಾಧ್ಯವಾಗಲಿಲ್ಲ



ಅಮಿತ್ ಶಾ, ಕೇಂದ್ರ ಗೃಹ ಸಚಿವ

ನಾನೇ ಅತ್ಯಂತ ಅದೃಷ್ಟವಂತ: ಅರುಣ್



ಅಯೋಧ್ಯೆ (ಪಿಟಿಐ): ರಾಮ ಮಂದಿರದ ಗರ್ಭಗುಡಿಯಲ್ಲಿ ನೆಲೆಸಿರುವ ಬಾಲರಾಮನ ಮೂರ್ತಿಯನ್ನು ಕೆತ್ತಿದ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಅವರ ಸಂತಸಕ್ಕೆ ಎಲ್ಲೆಯೇ ಇಲ್ಲವಾಗಿದೆ. ಮೂರ್ತಿ ಕೆತ್ತನೆಯ ಕಾರ್ಯಕ್ಕೆ ಶ್ರೀರಾಮನೇ ತಮ್ಮನ್ನು ಆಯ್ಕೆ ಮಾಡಿದ್ದಾನೆ ಎಂದು ಅವರು ನಂಬಿದ್ದಾರೆ. ಅಲ್ಲದೆ, ಜಗತ್ತಿನ ಅತ್ಯಂತ ಅದೃಷ್ಟವಂತ ವ್ಯಕ್ತಿ ತಾವು ಎಂದು ಕೂಡ ಅವರು ಖುಷಿಯಿಂದ ಹೇಳಿದ್ದಾರೆ.

'ನನ್ನನ್ನು ಮತ್ತು ನನ್ನ ಕುಟುಂಬವನ್ನು ಶ್ರೀರಾಮನೇ ಎಲ್ಲ ಕೆಡುಕುಗಳಿಂದ ರಕ್ಷಿಸುತ್ತಿದ್ದಾನೆ ಎಂಬುದು ನನ್ನ ನಂಬಿಕೆ' ಎಂದು ಸುದ್ದಿಸಂಸ್ಥೆಯ ಜೊತೆ ಮಾತನಾಡಿದ ಅವರು ಹೇಳಿದ್ದಾರೆ. ಅರುಣ್ ಅವರು ಕೆತ್ತಿರುವ ಮೂರ್ತಿಯ ಬಗ್ಗೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ.

'ಮೂರ್ತಿ ಕೆತ್ತನೆಯ ಸಂದರ್ಭದಲ್ಲಿ ನಾನು ನಿದ್ದೆಗೆಟ್ಟು ಕೆಲಸ ಮಾಡಿದ್ದೇನೆ. ಅಷ್ಟು ಶ್ರಮ ಹಾಕಿದ್ದಕ್ಕೆ ಫಲ ಸಿಕ್ಕಿದೆ... ಇದು ನನ್ನ ಜೀವನದ ಅತ್ಯಂತ ಶ್ರೇಷ್ಠ ದಿನ' ಎಂದು ಅವರು ಹೇಳಿದ್ದಾರೆ. 'ನಾನು ಮೂರ್ತಿ ಕೆತ್ತುವ ಕೆಲಸ ಕಲಿತಿದ್ದು ನನ್ನ ತಂದೆಯಿಂದ. ಅವರು ಇದ್ದಿದ್ದರೆ ನನ್ನನ್ನು ಇಲ್ಲಿ ಕಂಡು ಬಹಳ ಹೆಮ್ಮೆಪಡುತ್ತಿದ್ದರು' ಎಂದು ಹೇಳಿದ್ದಾರೆ.

ಅರುಣ್ ಅವರು ಪ್ರಾಣ ಪ್ರತಿಷ್ಠಾಪನೆಯ ಸಂದರ್ಭದಲ್ಲಿ ಅಯೋಧ್ಯೆಯಲ್ಲಿ ಇದ್ದರು. ಅವರ ಕುಟುಂಬದ ಸದಸ್ಯರು ಮೈಸೂರಿನಿಂದಲೇ ಕಾರ್ಯಕ್ರಮ ವೀಕ್ಷಿಸಿದರು.

ರಾಮನಲ್ಲಿ ಕ್ಷಮೆಯಾಚಿಸಿದ ಪ್ರಧಾನಿ ಮೋದಿ

ಪ್ರಜಾವಾಣಿ ವಾರ್ತೆ

ಅಯೋಧ್ಯೆ: ಶ್ರೀರಾಮನನ್ನು ವರ್ಷಗಳಿಂದ ಟೆಂಟ್‌ನಲ್ಲಿ ಇರಿಸಿದ್ದಕ್ಕಾಗಿ ಕ್ಷಮೆಯಾಚಿಸಿದ ಪ್ರಧಾನಿ ನರೇಂದ್ರ ಮೋದಿ ಅವರು, 'ಬಾಲರಾಮ ಇನ್ನು ಟೆಂಟ್‌ನಲ್ಲಿ ಇರಬೇಕಾಗಿಲ್ಲ, ಅವನು ಇನ್ನು ಭವ್ಯವಾದ ಮಂದಿರದಲ್ಲಿ ಇರುತ್ತಾನೆ' ಎಂದು ಹೇಳಿದರು. ದೇಶದ ಸಂವಿಧಾನದ ಮೊದಲ ಪ್ರತಿಯಲ್ಲಿ ರಾಮ ಇದ್ದ ಎಂಬುದನ್ನು ನೆನಪಿಸಿಕೊಂಡರು.

ಅಲ್ಲದೆ, ನ್ಯಾಯ ಕೊಡಿಸಿದ್ದಕ್ಕಾಗಿ ಅವರು ದೇಶದ ನ್ಯಾಯಾಂಗಕ್ಕೆ ಧನ್ಯವಾದ ಅರ್ಪಿಸಿದರು. 2019ರಲ್ಲಿ ನೀಡಿದ್ದ ಸರ್ವಾನುಮತದ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್, ಅಯೋಧ್ಯೆಯಲ್ಲಿ ವಿವಾದಕ್ಕೆ ಗುರಿಯಾಗಿದ್ದ ಜಾಗವು ಹಿಂದೂಗಳಿಗೆ ಸೇರಿದ್ದು ಎಂದು ಹೇಳಿತ್ತು.


ಜನವರಿ 22ನೇ ತಾರೀಕು ದೇಶದ ಪಾಲಿಗೆ ಹೊಸ ಆರಂಭವನ್ನು ತಂದಿದೆ, ಹೊಸ ಯುಗ ಶುರುವಾಗುತ್ತಿರುವುದನ್ನು ಸೂಚಿಸಿದೆ ಎಂದು ಮೋದಿ ಹೇಳಿದರು.

7ನೇ ಪುಟ ನೋಡಿ

ಬಿಯರ್ ದರ ₹8ರಿಂದ ₹10 ಹೆಚ್ಚಳಕ್ಕೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಯರ್ ಮೇಲಿನ ಹೆಚ್ಚುವರಿ ಅಬಕಾರಿ ತೆರಿಗೆಯನ್ನು (ಎಇಡಿ) ಶೇಕಡ ಹತ್ತರಷ್ಟು ಹೆಚ್ಚಿಸಲು ಅಬಕಾರಿ ಇಲಾಖೆ ಮುಂದಾಗಿದ್ದು, 650 ಮಿ.ಲೀ. ಅಳತೆಯ ಪ್ರತಿ ಬಾಟಲಿ ಬಿಯರ್‌ನ ದರದಲ್ಲಿ ₹8ರಿಂದ ₹10ರವರೆಗೆ ಹೆಚ್ಚಳವಾಗಲಿದೆ.



ಬಿಯರ್ ಮೇಲಿನ ಹೆಚ್ಚುವರಿ ಅಬಕಾರಿ ತೆರಿಗೆಯನ್ನು ಮೂಲ ಘೋಷಿತ ದರದ ಶೇಕಡ 185ರಿಂದ ಶೇ 195ಕ್ಕೆ ಏರಿಕೆ ಮಾಡಲು ಅವಕಾಶ ಕಲ್ಪಿಸಿ ಕರ್ನಾಟಕ ಅಬಕಾರಿ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು) ನಿಯಮಗಳಿಗೆ ತಿದ್ದುಪಡಿ ತರಲು ಇಲಾಖೆ ಸಿದ್ಧತೆ ನಡೆಸಿದೆ. ಇದಕ್ಕಾಗಿ ಕರ್ನಾಟಕ ಅಬಕಾರಿ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು) (ತಿದ್ದುಪಡಿ) ನಿಯಮಗಳು-2024ರ ಕರಡನ್ನು ಶನಿವಾರ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.

2023ರ ಜುಲೈ ತಿಂಗಳಲ್ಲಿ ಭಾರತೀಯ ಮದ್ಯದ ಮೇಲಿನ ಹೆಚ್ಚುವರಿ ಅಬಕಾರಿ ತೆರಿಗೆಯನ್ನು ಶೇ 20ರಷ್ಟು ಮತ್ತು ಬಿಯರ್ ಮೇಲಿನ ಹೆಚ್ಚುವರಿ ಅಬಕಾರಿ ತೆರಿಗೆಯನ್ನು ಶೇ 10ರಷ್ಟು ಹೆಚ್ಚಳ ಮಾಡಲಾಗಿತ್ತು. ಆರು ತಿಂಗಳಲ್ಲೇ ಮತ್ತೊಮ್ಮೆ ಬಿಯರ್ ಮೇಲಿನ ಹೆಚ್ಚುವರಿ ಅಬಕಾರಿ ತೆರಿಗೆ ಏರಿಕೆಗೆ ಪ್ರಕ್ರಿಯೆ ಆರಂಭಿಸಲಾಗಿದೆ.

ಹೆಚ್ಚುವರಿ ಅಬಕಾರಿ ತೆರಿಗೆ ಏರಿಕೆಗೆ ಅವಕಾಶ ಕಲ್ಪಿಸುವ ಕರಡು ನಿಯಮಗಳಿಗೆ ಆಕ್ಷೇಪಣೆ ಸಲ್ಲಿಸಲು ಶನಿವಾರದಿಂದ ಏಳು ದಿನಗಳ ಕಾಲಾವಕಾಶ ನೀಡಲಾಗಿದೆ. ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ ಆಕ್ಷೇಪಗಳನ್ನು ಸಲ್ಲಿಸಲು ಅವಕಾಶವಿದೆ.

'ಜನವರಿ ಕೊನೆಯ ವಾರ ಅಥವಾ ಫೆಬ್ರುವರಿ ಮೊದಲ ವಾರ ಹೊಸ ನಿಯಮಗಳನ್ನು ಜಾರಿಗೊಳಿಸುವ ಸಾಧ್ಯತೆ ಇದೆ. 650 ಮಿ.ಲೀ. ಅಳತೆಯ ಪ್ರತಿ ಬಾಟಲ್ ಬಿಯರ್‌ನ ದರದಲ್ಲಿ ₹8ರಿಂದ ₹10ರವರೆಗೂ ಏರಿಕೆಯಾಗಲಿದೆ' ಎಂದು ಅಬಕಾರಿ ಇಲಾಖೆ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಒಳ ಪುಟಗಳು



ಹಾವನೂರು: ಕಾನೂನು ಕಾಲೇಜು ಮಾಲೀಕ ಆತ್ಮಹತ್ಯೆ

ಬೆಂಗಳೂರು: ಬಾಗಲಗುಂಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಕಾನೂನು ಕಾಲೇಜಿನ ಮಾಲೀಕರೊಬ್ಬರು ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಹಾವನೂರು ಲೇಔಟ್ ನಿವಾಸಿ ಅಶೋಕ್ ಹಾವನೂರು (62) ಆತ್ಮಹತ್ಯೆ ಮಾಡಿಕೊಂಡವರು.

ಅವರ ಪತ್ನಿ ನೀಡಿದ ದೂರು ಆಧರಿಸಿ, ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ರಾಮಮೂರ್ತಿ ನಗರದಲ್ಲಿ ಅಶೋಕ್ ಅವರು, ಹಾವನೂರು ಕಾನೂನು ಕಾಲೇಜು ನಡೆಸುತ್ತಿದ್ದರು. ಕಳೆದ 15 ದಿನಗಳಿಂದ ಇವರು ಯಾರೊಂದಿಗೆ ಅಷ್ಟಾಗಿ ಬೆರೆಯುತ್ತಿರಲಿಲ್ಲ ಎಂದು ಕುಟುಂಬಸ್ಥರು ತಿಳಿಸಿದ್ದಾರೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ' ಎಂದು ಪೊಲೀಸರು ಹೇಳಿದರು.

'ಭಾನುವಾರ ಬೆಳಿಗ್ಗೆ ತಡವಾಗಿ ಎದ್ದು ಕೆಲ ಸಮಯದ ನಂತರ ಮನೆಯಿಂದ ಹೊರಕ್ಕೆ ತೆರಳಿದ್ದರು. ಮಧ್ಯಾಹ್ನ ಮನೆಗೆ ಬಂದು ನಾಲ್ಕು ಗಂಟೆ ನಂತರ ಊಟ ಮಾಡುವುದಾಗಿ ಕುಟುಂಬಸ್ಥರಿಗೆ ತಿಳಿಸಿ, ತಮ್ಮ ಕೊಠಡಿಗೆ ತೆರಳಿ ಬಾಗಿಲು ಬಂದ್ ಮಾಡಿಕೊಂಡಿದ್ದರು. ಬಹಳಷ್ಟು ಸಮಯವಾದರೂ ಅವರು ಕೊಠಡಿಯಿಂದ ಹೊರಕ್ಕೆ ಬಂದಿರಲಿಲ್ಲ. ಆಗ ಅನುಮಾನಗೊಂಡು ಬಾಗಿಲು ತೆರೆದು ಪರಿಶೀಲಿಸಿದಾಗ ಫ್ಯಾನ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಕುಟುಂಬಸ್ಥರಿಗೆ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

ಬಿಬಿಎಂಪಿ ವ್ಯಾಪ್ತಿಯ 28 ವಿಧಾನಸಭೆ ಕ್ಷೇತ್ರ: ಕರಡು ಪಟ್ಟಿಗಿಂತ ಅಧಿಕ

ಆರು ಲಕ್ಷ ಮತದಾರರು ಹೆಚ್ಚಳ

ಪ್ರಜಾವಾಣಿ ವಾರ್ತೆ

98,43,577 ನಗರದಲ್ಲಿರುವ ಒಟ್ಟು ಮತದಾರರು

50,78,525 ಪುರುಷರು | **47,63,268** ಮಹಿಳೆಯರು | **1,784** ಇತರೆ

ಅತಿಹೆಚ್ಚು ಮತದಾರರಿರುವ ವಿಧಾನಸಭೆ ಕ್ಷೇತ್ರಗಳು

ಕ್ಷೇತ್ರ	ಮತದಾರರು
ಬೆಂಗಳೂರು ದಕ್ಷಿಣ	7,17,201
ಮಹದೇವಪುರ	6,27,809
ಯಶವಂತಪುರ	5,78,075
ಕೆ.ಆರ್. ಪುರ	5,24,855
ಬ್ಯಾಟರಾಯನಪುರ	5,14,109

ಅತಿಕಡಿಮೆ ಮತದಾರರಿರುವ ವಿಧಾನಸಭೆ ಕ್ಷೇತ್ರಗಳು

ಕ್ಷೇತ್ರ	ಮತದಾರರು
ಶಿವಾಜಿನಗರ	1,95,309
ರಾಜಾಜಿನಗರ	2,06,493
ಜಯನಗರ	2,10,369
ಶಾಂತಿನಗರ	2,25,714
ಮಲ್ಲೇಶ್ವರ	2,26,817



ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಅಂತಿಮ ಮತದಾರರ ಪಟ್ಟಿ ಪ್ರಕಟವಾಗಿದ್ದು, ಕಳೆದ ವರ್ಷಕ್ಕಿಂತ ಆರು ಲಕ್ಷ ಮತದಾರರು ನಗರದಲ್ಲಿ ಹೆಚ್ಚಾಗಿದ್ದಾರೆ.

2023ರ ಜನವರಿ 1ರಂದು ಪ್ರಕಟವಾಗಿದ್ದ ಅಂತಿಮ ಮತದಾರರ ಪಟ್ಟಿಯಲ್ಲಿ 92,09,917 ಮತದಾರರಿದ್ದರು. ಇದಕ್ಕೆ ಹೋಲಿಸಿದರೆ 6,33,660 ಮತದಾರರು 2024ರ ಅಂತಿಮ ಮತದಾರರ ಪಟ್ಟಿಯಲ್ಲಿ ಅಧಿಕವಾಗಿದ್ದಾರೆ.

ವಿಧಾನಸಭೆ ಚುನಾವಣೆ ನಂತರ ಪ್ರಕಟಿಸಿದ್ದ ಪಟ್ಟಿಯಲ್ಲಿ 97,13,349 ಮತದಾರರಿದ್ದರು. 2023ರ ಅಕ್ಟೋಬರ್‌ನಲ್ಲಿ ಪ್ರಕಟಿಸಿದ್ದ ಕರಡು ಪಟ್ಟಿಯಲ್ಲಿ 97,90,499 ಮತದಾರರಿದ್ದರು.

ಕರಡು ಪಟ್ಟಿಯಲ್ಲಿದ್ದ ಗಾಂಧಿನಗರ, ರಾಜಾಜಿನಗರ, ಸಿ.ವಿ. ರಾಮನ್‌ನಗರ, ವಿಜಯನಗರ, ಬಸವನಗುಡಿ, ಬಿ.ಟಿ.ಎಂ. ಲೇಔಟ್, ಜಯನಗರ ವಿಧಾನಸಭೆ ಕ್ಷೇತ್ರಗಳ ಮತದಾರರ ಸಂಖ್ಯೆ, ಅಂತಿಮ ಪಟ್ಟಿಯಲ್ಲಿ ಕಡಿಮೆಯಾಗಿದೆ.

ಜಿಲ್ಲಾ ಚುನಾವಣಾಧಿಕಾರಿ ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಸೋಮವಾರ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ-2024 ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಿದರು.

1,86,487 ಮತದಾರರು ಹೊಸದಾಗಿ ಸೇರ್ಪಡೆಯಾಗಿದ್ದು, 47,960 ಮಂದಿ ತಿದ್ದುಪಡಿ ಮಾಡಿಸಿಕೊಂಡಿದ್ದಾರೆ. 1,33,409 ಮತದಾರರನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಅಂತಿಮ ಮತದಾರರ ಪಟ್ಟಿಯಲ್ಲಿ 18 ವರ್ಷದಿಂದ 19 ವರ್ಷದ 1,12,242 ಯುವ ಮತದಾರರಿದ್ದಾರೆ ಎಂದು ಮಾಹಿತಿ ನೀಡಿದರು.


ಕೇಂದ್ರ, ಉತ್ತರ, ದಕ್ಷಿಣ ಮತ್ತು ಬೆಂಗಳೂರು ನಗರದ ಅಂತಿಮ ಮತದಾರರ ಪಟ್ಟಿಯ ಪ್ರತಿಗಳನ್ನು ಎಲ್ಲಾ ಮತದಾರರ ನೊಂದಣಾಧಿಕಾರಿಗಳ ಕಚೇರಿ, ಸಹಾಯಕ ಮತದಾರರ ನೋಂದಣಾಧಿಕಾರಿಗಳ ಕಚೇರಿ ಹಾಗೂ ವಾರ್ಡ್ ಕಚೇರಿಗಳಲ್ಲಿ ಪ್ರಕಟಿಸಲಾಗಿರುತ್ತದೆ. ಮತದಾರರು ತಮ್ಮ ವಿವರಗಳನ್ನು ಪರಿಶೀಲಿಸಿಕೊಂಡು ಖಾತರಿಪಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. www.ceokarnataka.kar.nic.in ಮತ್ತು www.bbmp.gov.in ವೆಬ್‌ಸೈಟ್‌ನಲ್ಲಿಯೂ ಅಂತಿಮ ಮತದಾರರ ಪಟ್ಟಿ ಲಭ್ಯವಿದೆ ಎಂದು ಮಾಹಿತಿ ನೀಡಿದರು.

ವೆಬ್ ಪೋರ್ಟಲ್ voters.eci.gov.in, ಮೊಬೈಲ್ ಆ್ಯಪ್ Voter Helpline ಹಾಗೂ ಮತದಾರರ ಸಹಾಯವಾಣಿ 1950 ಮೂಲಕ ಮತದಾರರ ಪಟ್ಟಿಯನ್ನು ಪರಿಶೀಲಿಸಿ, ತಪ್ಪುಗಳಿದ್ದರೆ ಅರ್ಜಿ ಸಲ್ಲಿಸಬಹುದಾಗಿದೆ ಎಂದರು.

ಚುನಾವಣಾ ವಿಭಾಗದ ವಿಶೇಷ ಆಯುಕ್ತ ಆರ್. ರಾಮಚಂದ್ರನ್, ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿಗಳಾದ ಡಾ. ಹರೀಶ್ ಕುಮಾರ್, ದಯಾನಂದ, ಸ್ನೇಹಲ್, ವಿನೋತ್ ಪ್ರಿಯಾ ಹಾಜರಿದ್ದರು.

ಬಿಬಿಎಂಪಿ ಬಜೆಟ್: ಸಲಹೆಗೆ ಆಹ್ವಾನ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬಿಬಿಎಂಪಿಯ 2024–25ನೇ ಸಾಲಿನ ಆಯವ್ಯಯಕ್ಕೆ ನಾಗರಿಕರಿಂದ ಸಲಹೆಗಳನ್ನು ಆಹ್ವಾನಿಸಲಾಗಿದೆ.

ಬಜೆಟ್ ಸಿದ್ಧತೆ ಕಾರ್ಯ ಪ್ರಗತಿಯಲ್ಲಿದ್ದು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಿರ್ದೇಶನದಂತೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು, ನಾಗರಿಕ ಸಂಘ-ಸಂಸ್ಥೆಗಳು ಹಾಗೂ ಸಾರ್ವಜನಿಕರಿಂದ ಸಲಹೆಗಳನ್ನು ಆಹ್ವಾನಿಸಲಾಗಿದೆ.

ಬಿಬಿಎಂಪಿ ಕೇಂದ್ರ ಕಚೇರಿಯ ಮುಖ್ಯದ್ವಾರದ ಬಳಿ ಸಲಹಾ ಪೆಟ್ಟಿಗೆ ಇರಿಸಿದ್ದು, ಅಲ್ಲಿಗೆ ಸಲಹಾ ಪತ್ರಗಳನ್ನು ಹಾಕಬಹುದು ಎಂದು ಹಣಕಾಸು ವಿಭಾಗದ ವಿಶೇಷ ಆಯುಕ್ತ ಶಿವಾನಂದ್ ಕಲ್ಕೆರೆ ತಿಳಿಸಿದ್ದಾರೆ. ಇ-ಮೇಲ್ bbmpbudget@gmail.com, suggestions2bbmpbudget@gmail.com ಗಳಿಗೆ ಸಲಹೆ, ಸೂಚನೆಗಳನ್ನು ಫೆಬ್ರುವರಿ 10ರೊಳಗೆ ಕಳುಹಿಸಬಹುದು ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಪಿಎಸ್‌ಐ ನೇಮಕಾತಿ ಇಂದು ಮರು ಪರೀಕ್ಷೆ

ಬೆಂಗಳೂರು: ನಗರದ 117 ಪರೀಕ್ಷಾ ಕೇಂದ್ರಗಳಲ್ಲಿ ಮಂಗಳವಾರ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಸಿವಿಲ್ – ಪುರುಷ ಹಾಗೂ ಮಹಿಳಾ) ನೇರ ನೇಮಕಾತಿಗೆ ಮರು ಪರೀಕ್ಷೆ ನಡೆಯಲಿದೆ.

ಪರೀಕ್ಷೆಗಳನ್ನು ಸುಗಮವಾಗಿ ಹಾಗೂ ಸುವ್ಯವಸ್ಥಿತವಾಗಿ ನಡೆಸುವ ಸಲುವಾಗಿ ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀಟರ್ ಪ್ರದೇಶದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ನಗರ ಪೊಲೀಸ್ ಆಯುಕ್ತ ಬಿ.ದಯಾನಂದ್ ಆದೇಶಿಸಿದ್ದಾರೆ. ಮುನ್ನೆಚ್ಚರಿಕಾ ಕ್ರಮವಾಗಿ ಪರೀಕ್ಷಾ ಕೇಂದ್ರದ ಬಳಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿದೆ.



ಬೆಳಿಗ್ಗೆ ಪೇಪರ್–1 (50 ಅಂಕ) ಹಾಗೂ ಮಧ್ಯಾಹ್ನ ಪತ್ರಿಕೆ-2ಕ್ಕೆ (150 ಅಂಕ) ಪರೀಕ್ಷೆ ನಡೆಯಲಿದೆ. ಅಭ್ಯರ್ಥಿಗಳನ್ನು ಸೂಕ್ತ ತಪಾಸಣೆಗೆ ಒಳಪಡಿಸುವುದರಿಂದ ಬೆಳಿಗ್ಗೆ ಸಮಯಕ್ಕೆ ಸರಿಯಾಗಿ ಪರೀಕ್ಷಾ ಕೇಂದ್ರದಲ್ಲಿ ಹಾಜರಿರಬೇಕು. ನೀರಿನ ಬಾಟಲ್, ಮೊಬೈಲ್ ನಿಷೇಧಿಸಲಾಗಿದೆ. ಮೊಬೈಲ್‌ನಲ್ಲಿ ಗುರುತಿನ ಚೀಟಿ ತೋರಿಸಲು ಅವಕಾಶ ಇರುವುದಿಲ್ಲ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತಿಳಿಸಿದೆ.

ವಿದ್ಯಾರ್ಥಿ ನಾಪತ್ತೆ: 4 ತಂಡ ರಚನೆ

ಬೆಂಗಳೂರು: ನಗರದ ವೈಟ್‌ಫೀಲ್ಡ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 12 ವರ್ಷದ ವಿದ್ಯಾರ್ಥಿಯೊಬ್ಬ ನಾಪತ್ತೆಯಾಗಿದ್ದು, ವಿದ್ಯಾರ್ಥಿಯ ಪತ್ತೆಗೆ ನಾಲ್ಕು ಪ್ರತ್ಯೇಕ ತಂಡ ರಚಿಸಿರುವ ಪೊಲೀಸರು ಶೋಧ ನಡೆಸುತ್ತಿದ್ದಾರೆ.

'ಭಾನುವಾರ ವಿದ್ಯಾರ್ಥಿಯನ್ನು ಪೋಷಕರು ಟ್ಯೂಷನ್‌ಗೆ ಕಳುಹಿಸಿ ಮನೆಗೆ ತೆರಳಿದ್ದರು. ವಿದ್ಯಾರ್ಥಿಯನ್ನು ಮನೆಗೆ ಕರೆದೊಯ್ಯಲು ಪೋಷಕರು ಬರುವುದು ತಡವಾಗಿತ್ತು. ಅಷ್ಟರಲ್ಲಿ ವಿದ್ಯಾರ್ಥಿ ನಾಪತ್ತೆಯಾಗಿದ್ದಾನೆ' ಎಂದು ಹೇಳಲಾಗಿದೆ.

ಭಾನುವಾರ ಮಧ್ಯಾಹ್ನದಿಂದ ಬಾಲಕ ಕಾಣಿಸುತ್ತಿಲ್ಲ. ಮಾರತ್‌ಹಳ್ಳಿ ಸೇತುವೆ ಬಳಿ ಬಿಎಂಟಿಸಿ ಬಸ್ ಹತ್ತಲು ವಿದ್ಯಾರ್ಥಿ ನಡೆದು ಸಾಗುತ್ತಿರುವ ದೃಶ್ಯ ಸಿಸಿ ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ವಿದ್ಯಾರ್ಥಿ ಅರಿಶಿಣ ಬಣ್ಣದ ಟಿ–ಶರ್ಟ್ ಧರಿಸಿದ್ದ. ಜತೆಗೆ ಬ್ಯಾಗ್ ಇತ್ತು. ಬಾಲಕ ಓದುತ್ತಿದ್ದ ಶಾಲೆ, ಟ್ಯೂಷನ್ ಬಳಿ ಹಾಗೂ ಆತ ನಡೆದು ಸಾಗುತ್ತಿರುವ ಬೇರೆ ಬೇರೆ ರಸ್ತೆಗಳಲ್ಲಿ ಸಿಸಿ ಟಿ.ವಿ ಕ್ಯಾಮೆರಾಗಳನ್ನು ಪರಿಶೀಲಿಸಲಾಗಿದೆ. ವಿದ್ಯಾರ್ಥಿ ಬಳಿ ಮೊಬೈಲ್ ಇರಲಿಲ್ಲ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಾಲಕರ ನಾಪತ್ತೆ ಪ್ರಕರಣಗಳಲ್ಲಿ ಅಪಹರಣ ಪ್ರಕರಣ ದಾಖಲಿಸುವಂತೆ ಸುಪ್ರೀಂ ಕೋರ್ಟ್ ಸೂಚನೆಯಿದ್ದು ಅದರಂತೆ ವೈಟ್‌ಫೀಲ್ಡ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕಛೇರಿ — ಇನ್ಫೊಸಿಸ್ ಪ್ರತಿಷ್ಠಾನ ಹಾಗೂ ಭಾರತೀಯ ವಿದ್ಯಾಭವನದ ಸಹಯೋಗದಲ್ಲಿ ಸೋಮವಾರ ಆಯೋಜಿಸಿದ್ದ 'ಫ್ಯೂಷನ್ ಸಂಗೀತ ಹಾಗೂ ನೃತ್ಯೋತ್ಸವ' ಕಾರ್ಯಕ್ರಮದಲ್ಲಿ ಸೋಮವಾರ ಮೌನಾ ರಾಮಚಂದ್ರ ಅವರು ಸಂಗೀತ ಕಛೇರಿ ಪ್ರಸ್ತುತ ಪಡಿಸಿದರು. ಪಕ್ಕ ವಾದ್ಯದಲ್ಲಿ ಹಾರ್ಮೋನಿಯಂ–ಸೂರ್ಯ ಉಪಾಧ್ಯ, ತಬಲ–ಸಾಗರ್ ಭರತ್ ರಾಜ್, ತಂಬೂರಿ– ಸುನೀತಾ ವೇಣುಗೋಪಾಲ್ ಸಾಥ್ ನೀಡಿದರು –ಪ್ರಜಾವಾಣಿ ಚಿತ್ರ

25ಕ್ಕೆ ಪಿಂಚಣಿದಾರರ ಅದಾಲತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಸ್ರೊ ಸಂಸ್ಥೆಯ ಲಿಕ್ವಿಡ್ ಪ್ರೊಪಲ್ಷನ್ ಸಿಸ್ಟಮ್ಸ್ ಸೆಂಟರ್‌ವತಿಯಿಂದ(ಎಲ್‌ಪಿಎಸ್‌ಸಿ) 25ರಂದು ಮಧ್ಯಾಹ್ನ 2 ಗಂಟೆಗೆ ಪಿಂಚಣಿ ಅದಾಲತ್ ಆಯೋಜಿಸಲಾಗಿದೆ.

ನಗರದ ಎಚ್‌ಎಎಲ್ 2ನೇ ಹಂತದಲ್ಲಿರುವ ಎಲ್‌ಪಿಎಸ್‌ಸಿ– ಇಸ್ರೊ ಕೇಂದ್ರದ ನೇತ್ರಾವತಿ ಸಮ್ಮೇಳನ ಸಭಾಂಗಣದಲ್ಲಿ ಈ ಅದಾಲತ್ ನಡೆಯಲಿದೆ.

ಬೆಂಗಳೂರಿನ ಎಲ್‌ಪಿಎಸ್‌ಸಿ ಪಿಂಚಣಿದಾರರು/ ಕುಟುಂಬ ಪಿಂಚಣಿದಾರರು ದೂರುಗಳಿದ್ದಲ್ಲಿ, ಜ.24ರೊಳಗೆ ಹಿರಿಯ ಆಡಳಿತಾಧಿಕಾರಿ, ಎಲ್.ಪಿ.ಎಸ್.ಸಿ, ಇಸ್ರೊ, ಎಚ್‌ಎಎಲ್ 2ನೇ ಸ್ಟೇಜ್, ಬೆಂಗಳೂರು ಈ ವಿಳಾಸಕ್ಕೆ ಅಂಚೆ ಮೂಲಕ ಅಥವಾ ಇಮೇಲ್ (sado@lpsb.gov.in) ಮೂಲಕ ಎಲ್‌ಪಿಎಸ್‌ಸಿ ಹಿರಿಯ ಆಡಳಿತಾಧಿಕಾರಿಗಳಿಗೆ ಕಳುಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕೆಪಿಎಸ್‌ಸಿ ಅಧ್ಯಕ್ಷರ ಪಿ.ಎ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಎಸ್‌ಸಿ ಕಿರಿಯ ಸಹಾಯಕ, ಅಧ್ಯಕ್ಷರ ಆಪ್ತ ಸಹಾಯಕನಾಗಿ ಕರ್ತವ್ಯ ನಿರ್ವಹಿಸುತ್ತಿರುವ ಎಂ.ಎಸ್. ಗೋವಿಂದರಾಜು ಅವರನ್ನು ಅಧಿಕಾರ ದುರುಪಯೋಗ ಆರೋಪದಲ್ಲಿ ಅಮಾನತುಗೊಳಿಸಿ ಕಾರ್ಯದರ್ಶಿ ಕೆ.ಎಸ್. ಲತಾ ಕುಮಾರಿ ಆದೇಶ ಹೊರಡಿಸಿದ್ದಾರೆ.

'ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಅಭ್ಯರ್ಥಿಯೊಬ್ಬರ ಸಂಬಂಧಿಕರನ್ನು ಗೋವಿಂದರಾಜು ಕಚೇರಿಗೆ ಕರೆಸಿಕೊಂಡಿರುವುದು ಅಕ್ಷಮ್ಯ ಅಪರಾಧವಾಗಿದೆ. ಅಧ್ಯಕ್ಷರ ಆಪ್ತ ಸಹಾಯಕನಾಗಿ ಕಾರ್ಯನಿರ್ವಹಿಸುತ್ತಿದ್ದರೂ ಸರ್ಕಾರದ ನಿಯಮಗಳನ್ನು ಪಾಲಿಸಿಲ್ಲ. ಕಡತದಲ್ಲಿ ಅನುಮೋದನೆ ಪಡೆಯದೆ ಮಾಹಿತಿಯೊಂದನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಹಿರಿಯ ಅಧಿಕಾರಿಗಳ ಮೇಲೆ ಒತ್ತಡ ಹೇರಿರುವುದು ಅಧಿಕಾರದ ದುರುಪಯೋಗವಾಗಿದೆ' ಎಂದು ಆದೇಶದಲ್ಲಿ ತಿಳಿಸಿದ್ದಾರೆ.

'ಹಲವು ಅಭ್ಯರ್ಥಿಗಳು ಗೋವಿಂದರಾಜು ವಿರುದ್ಧ ಮೌಖಿಕವಾಗಿ ದೂರುಗಳನ್ನು ನೀಡಿದ್ದಾರೆ. 15 ವರ್ಷಕ್ಕಿಂತ ಹೆಚ್ಚು ಅವಧಿಯಿಂದ ಸರ್ಕಾರಿ ಕರ್ತವ್ಯದಲ್ಲಿದ್ದು, ನಿಯಮಾನುಸಾರ ಕಾರ್ಯನಿರ್ವಹಿಸದಿರುವುದು ಕಂಡುಬಂದಿದೆ. ಎರಡು ಬಾರಿ ಕಾರಣ ಕೇಳಿ ನೋಟಿಸ್ ನೀಡಲಾಗಿದೆ. ಕಚೇರಿಯ ಲಿಖಿತ ಆದೇಶವನ್ನು ಪದೇ ಪದೇ ಉಲ್ಲಂಘಿಸಿರುವುದು ಬೇಜವಾಬ್ದಾರಿ ವರ್ತನೆ ಮತ್ತು ಗಂಭೀರ ಸ್ವರೂಪದ ಲೋಪ ಎಂದು ಪರಿಗಣಿಸಿ, ನಿಯಮಗಳನ್ವಯ ಇಲಾಖಾ ವಿಚಾರಣೆ ಬಾಕಿ ಇರಿಸಿ ಅಮಾನತುಗೊಳಿಸಲಾಗಿದೆ' ಎಂದೂ ಅವರು ವಿವರಿಸಿದ್ದಾರೆ.

ಕಾಮಾಕ್ಷಿಪಾಳ್ಯ, ಕೆಂಗೇರಿ ಸಂಚಾರ ಠಾಣಾ ವ್ಯಾಪ್ತಿಯಲ್ಲಿ ಅಪಘಾತ

ಗಾಲ್ಫ್ ಕೋಚ್, ಬ್ಯಾಂಕ್ ಉದ್ಯೋಗಿ ಸಾವು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ನಗರದ ಕಾಮಾಕ್ಷಿಪಾಳ್ಯ ಹಾಗೂ ಕೆಂಗೇರಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಪ್ರತ್ಯೇಕ ಅಪಘಾತ ಪ್ರಕರಣಗಳಲ್ಲಿ ಬ್ಯಾಂಕ್ ಉದ್ಯೋಗಿ ಹಾಗೂ ಗಾಲ್ಫ್ ಕೋಚ್ ಮೃತಪಟ್ಟಿದ್ದಾರೆ.

ಸುಮನಹಳ್ಳಿ ಬಿಎಂಟಿಸಿ ಬಸ್ ಡಿಪೊ ಬಳಿಯ ಬಾಬು ಜಗಜೀವನ್ ರಾಮ್ ಸಂಶೋಧನೆ ಹಾಗೂ ತರಬೇತಿ ಕೇಂದ್ರದ ಎದುರು ಮರಕ್ಕೆ ಬೈಕ್ ಡಿಕ್ಕಿಯಾಗಿ ಬಿಡದಿಯ ಈಗಲ್‌ಟನ್ ಕ್ಲಬ್‌ನಲ್ಲಿ ಗಾಲ್ಫ್ ಕೋಚ್ ಆಗಿದ್ದ ಚಂದ್ರಶೇಖರ್ (28) ಅವರು ಮೃತಪಟ್ಟಿದ್ದಾರೆ.

ಭಾನುವಾರ ರಾತ್ರಿ 10.30ರ ಸುಮಾರಿಗೆ ಚಂದ್ರಶೇಖರ್ ಹಾಗೂ ಅವರ ಸ್ನೇಹಿತ ಕಿರಣ್ ಬೈಕ್‌ನಲ್ಲಿ ತೆರಳುತ್ತಿದ್ದರು. ಕಿರಣ್ ಅವರು ಬೈಕ್ ಚಲಾಯಿಸುತ್ತಿದ್ದರು. ಹೊರವರ್ತುಲ ರಸ್ತೆಯಲ್ಲಿ ಲಗ್ಗೆರೆ ಕಡೆಯಿಂದ ಸುಮನಹಳ್ಳಿ ಕಡೆಗೆ ತೆರಳುತ್ತಿದ್ದ ವೇಳೆ ಈ ಅಪಘಾತ ಸಂಭವಿಸಿದೆ. ಡಿಕ್ಕಿ ಹೊಡೆದ ರಭಸಕ್ಕೆ ಇಬ್ಬರು ರಸ್ತೆಗೆ ಬಿದ್ದು ಗಾಯಗೊಂಡಿದ್ದರು. ಕೂಡಲೇ ಗಾಯಾಳುಗಳನ್ನು ಆಂಬುಲೆನ್ಸ್‌ನಲ್ಲಿ ಹತ್ತಿರದ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅದರಲ್ಲಿ ಚಂದ್ರಶೇಖರ್ ಅವರು ಮಾರ್ಗ ಮಧ್ಯದಲ್ಲೇ ಮೃತಪಟ್ಟಿದ್ದರು. ಅಪಘಾತಕ್ಕೆ ಕಾರಣನಾದ ಬೈಕ್ ಸವಾರ ಕಿರಣ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ, ಮೃತರ ಸಂಬಂಧಿ ನರಸಿಂಹ ಅವರು ಕಾಮಾಕ್ಷಿಪಾಳ್ಯ ಸಂಚಾರ ಠಾಣೆಗೆ ದೂರು ನೀಡಿದ್ದಾರೆ.

ಕೆಂಗೇರಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಅಪಘಾತದಲ್ಲಿ ಬ್ಯಾಂಕ್ ಉದ್ಯೋಗಿ, ಮೈಲಸಂದ್ರದ ನಿವಾಸಿ ಧ್ರುವ (32) ಅವರು ಮೃತಪಟ್ಟಿದ್ದಾರೆ. ಧ್ರುವ ಅವರು ಭಾನುವಾರ ರಾತ್ರಿ 10.15ರ ಸುಮಾರಿಗೆ ಮೈಲಸಂದ್ರ 8ನೇ ಕ್ರಾಸ್ ಜಂಕ್ಷನ್ ಬಳಿ ಬೈಕ್‌ನಲ್ಲಿ ಮನೆಗೆ ತೆರಳುತ್ತಿದ್ದರು. ಆಗ ಕಾರು ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದೆ. ಬೈಕ್‌ನಿಂದ ಕೆಳಕ್ಕೆ ಬಿದ್ದಿದ್ದ ಧ್ರುವ ಅವರು ಗಂಭೀರವಾಗಿ ಗಾಯಗೊಂಡಿದ್ದರು. ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗದಲ್ಲಿ ಅವರು ಮೃತಪಟ್ಟಿದ್ದಾರೆ.

ಬಾಲಕನಿಗೆ ಬೈಕ್ ನೀಡಿದ ಮಾಲೀಕನಿಗೆ ದಂಡ

ಬೆಂಗಳೂರು: ಬಾಲಕನಿಗೆ ಬೈಕ್ ಚಾಲನೆ ಮಾಡಲು ಕೊಟ್ಟ ಮಾಲೀಕನಿಗೆ 2ನೇ ಎಂಎಂಟಿಸಿ ಸಂಚಾರ ನ್ಯಾಯಾಲಯವು ₹ 22,200 ದಂಡ ವಿಧಿಸಿದೆ. ಬೈಕ್ ಮಾಲೀಕ ಸೆಲ್ವಂ (59) ಎನ್ನುವವರನ್ನು ನ್ಯಾಯಾಲಯ ದೋಷಿ ಎಂದು ಹೇಳಿದ್ದು ದಂಡ ವಿಧಿಸಿ ಆದೇಶಿಸಿದೆ.

ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ನೈಸ್ ರಸ್ತೆಯಲ್ಲಿ ಕಳೆದ ವರ್ಷದ ಜ.9ರಂದು ಸಂಜೆ 4.30ರ ಸುಮಾರಿಗೆ ಬಾಲಕನೊಬ್ಬ ಬೈಕ್‌ನಲ್ಲಿ ವಿಲೇ ನಡೆಸುತ್ತಿದ್ದ. ಆತನನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದರು. ಆತ ಕಾನೂನು ಸಂಘರ್ಷಕ್ಕೆ ಒಳಪಟ್ಟ ಬಾಲಕ ಆಗಿದ್ದರಿಂದ ಬಾಲ ನ್ಯಾಯಮಂಡಳಿಗೆ ದೋಷಾರೋಪಣಾ ಪಟ್ಟಿ ಸಲ್ಲಿಸಲಾಗಿತ್ತು. ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ನಡೆದು, ಬಾಲಕ 'ದೋಷಿ' ಎಂದು ಸಾಬೀತಾಗಿತ್ತು. 2023ರ ಜೂನ್ 5ರಂದು ನ್ಯಾಯಾಲಯವು ಬಾಲಕನಿಗೆ ₹2 ಸಾವಿರ ದಂಡ ವಿಧಿಸಿ ಆದೇಶಿಸಿತ್ತು. ಬಾಲಕನಿಗೆ ಬೈಕ್ ಚಾಲನೆ ಮಾಡಲು ನೀಡಿದ ಮಾಲೀಕನಿಗೆ ಸೋಮವಾರ ನ್ಯಾಯಾಲಯ ದಂಡ ವಿಧಿಸಿದೆ.

₹2.64 ಲಕ್ಷ ದಂಡ: ಏಕಮುಖ ರಸ್ತೆಯಲ್ಲಿ ವಾಹನ ಚಲಾಯಿಸಿದವರ ವಿರುದ್ಧ ಕಾರ್ಯಾಚರಣೆ ನಡೆಸಿದ ಸಂಚಾರ ವಿಭಾಗದ ಪೊಲೀಸರು, 525 ಪ್ರಕರಣ ದಾಖಲಿಸಿಕೊಂಡು ₹2.64 ಲಕ್ಷ ದಂಡ ವಸೂಲಿ ಮಾಡಿದ್ದಾರೆ.

ಏಕಮುಖ ರಸ್ತೆಯಲ್ಲಿ ವಾಹನ ಚಲಾಯಿಸಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ತೊಂದರೆ ಉಂಟು ಮಾಡುತ್ತಿದ್ದವರ ವಿರುದ್ಧ ಸೋಮವಾರ ಸಂಜೆ 6ರಿಂದ 7.30ರ ವರೆಗೆ ವಿಶೇಷ ಕಾರ್ಯಾಚರಣೆ ನಡೆಸಲಾಗಿತ್ತು. ಕಾರ್ಯಾಚರಣೆಯಲ್ಲಿ ವಾಹನಗಳ ಮಾದರಿ ಆಧಾರದ ಮೇಲೆ ಪ್ರಕರಣ ದಾಖಲಿಸಿಕೊಂಡು ದಂಡ ವಿಧಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ನಗರದಲ್ಲಿ ಇಂದು

ಖಂಡನಾ ಸಭೆ: ಅಧ್ಯಕ್ಷತೆ: ತಲಕಾಡು ಚಿಕ್ಕರಂಗೇಗೌಡ, ಭಾಷಣಕಾರರು: ಬಿ.ಟಿ. ಲಲಿತಾ ನಾಯಕ್, ಜೆ. ಹುಚ್ಚಪ್ಪ, ಮಾವಳ್ಳಿ ಶಂಕರ್, ಬೆಳಗೂರು ಸಮಿವುಲ್ಲಾ, ಎಲ್. ಶಿವಶಂಕರ್, ಕೆ.ಸಿ. ಮೂರ್ತಿ, ರುದ್ರು ಪುನೀತ್, ವಿ. ತ್ಯಾಗರಾಜ್, ಎಸ್. ಸುದರ್ಶನ್, ಎಂ. ಮುನಿರಾಜು, ಆಯೋಜನೆ: ಕನ್ನಡಪರ ಹಿರಿಯ ಹೋರಾಟಗಾರರ ಸಮಿತಿ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ನೃತ್ಯ ಸಂಭ್ರಮ: ಅತಿಥಿಗಳು: ಆರ್. ಚಂದ್ರಶೇಖರ್, ಲೇಪಾಕ್ಷಿ ಸಂತೋಷ್ ರಾವ್, ಪ್ರಸನ್ನ ಪಂಚಾಕ್ಷರಯ್ಯ, ಎಂ.ಎ. ರಂಗಸ್ವಾಮಿ, ಆಯೋಜನೆ: ನೃತ್ಯ ದಿಶಾ ಟ್ರಸ್ಟ್, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಮಧ್ಯಾಹ್ನ 3

ಸೋಮಸುಂದರಂ 'ಗಾನ ವೈವಿಧ್ಯ': ಉದ್ಘಾಟನೆ: ವೊಡೇ ಪಿ. ಕೃಷ್ಣ, ಉಪಸ್ಥಿತಿ: ಎಸ್. ಸೋಮಸುಂದರಂ, ಅತಿಥಿಗಳು: ಮಂಜುಳಾ ನಾಯ್ಡು, ಶ್ರೀನಿವಾಸ್ ಜಿ. ಕಪ್ಪಣ್ಣ, ಬಿ.ವಿ. ರಾಜಾರಾಮ್, ಎ. ಅಮೃತ್‌ರಾಜ್, ಬಂಡ್ಲಹಳ್ಳಿ ವಿಜಯಕುಮಾರ್, ರುದ್ರೇಶ್ ಅದರಂಗಿ, ವಿಜಯ್ ಭರ್ತೂರ್, ಆಯೋಜನೆ: ರಂಗ ಸಂಸ್ಥಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4

ಎಂ.ಎನ್. ಶ್ರೀನಿವಾಸ್ ಸ್ಮಾರಕ ಉಪನ್ಯಾಸ: ಜಾನಕಿ ನಾಯರ್, ಆಯೋಜನೆ: ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್, ಜೆಆರ್‌ಡಿ ಟಾಟಾ ಸಭಾಂಗಣ, ಐಐಎಸ್‌ಸಿ, ಸಂಜೆ 4

'ನೃತ್ಯ ವೈಭವ'ದ ಉದ್ಘಾಟನೆ: ಕೆ.ಎ. ದಯಾನಂದ, ಅತಿಥಿಗಳು: ಸಿದ್ದಲಿಂಗಪ್ಪ ಬಿ. ಪೂಜಾರಿ, ವೀಣಾ ಗಂಗಾಧರ್, ಅಧ್ಯಕ್ಷತೆ: ಸರಸ್ವತಿ, ಆಯೋಜನೆ: ಪದ್ಮಿನಿಪ್ರಿಯ ನೃತ್ಯ ಕಲಾ ಅಕಾಡೆಮಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

ಫ್ಯೂಷನ್ ಸಂಗೀತ ಮತ್ತು ನೃತ್ಯೋತ್ಸವ: ಮಿಸ್ಟಿಕ್ ವೈಬ್ಸ್: ಕೊಳಲು: ಅಮಿತ್ ನಾಡಿಗ್, ಟ್ರಮ್‌ಫೆಟ್: ಮ್ಯಾಥಿಯಾಸ್ ಶ್ರೀಫಲ್, ತಬಲ–ತಾಳವಾದ್ಯಗಳು: ಮುತ್ತು ಕುಮಾರ್, ಪಿಯಾನೊ: ಅಮನ್ ಮಹಾಜನ್, 'ಶಕ್ತಿ' ಸೀಕಿಂಗ್ ದ ಫ್ರೆಂಡ್ ವಿತ್‌ಇನ್: ಚಿತ್ರಾ ಅರವಿಂದ್, ದೇವಪ್ರಿಯಾ ದಾಸ್, ಅಲಾರ್ ಅರವಿಂದ್, ಅತಿಥಿಗಳು: ಎನ್. ಬಾಲಕೃಷ್ಣನ್, ಜೋಗಿ (ಗಿರೀಶ್ ರಾವ್ ಹತ್ವಾರ್), ಹುಣಸವಾಡಿ ರಾಜನ್, ಆಯೋಜನೆ: ಇನ್ಫೊಸಿಸ್ ಪ್ರತಿಷ್ಠಾನ, ಭಾರತೀಯ ವಿದ್ಯಾಭವನ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 6ರಿಂದ

ಭಜನೆ, ಪ್ರವಚನ ಸಂಕೀರ್ತನೆ: ಭಜನೆ: ಕೆಂಗೇರಿ ಚಂದ್ರಿಕಾ ಭಜನಾ ಮಂಡಳಿ, 'ಶ್ರೀಮದ್ ವಾಲ್ಮೀಕಿ ರಾಮಾಯಣ' ಉಪನ್ಯಾಸ: ಗುರುರಾಜ ಕುಲಕರ್ಣಿ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಕೆಂಗೇರಿ ಉಪನಗರ, ಸಂಜೆ 6

ಚೀನಾದಲ್ಲಿ ಭೂಕಂಪ ದೆಹಲಿಯಲ್ಲೂ ಕಂಪನ

ನವದೆಹಲಿ (ಪಿಟಿಐ): ಚೀನಾದ ಷಿನ್‌ಜಿಯಾಂಗ್ ಪ್ರಾಂತ್ಯದಲ್ಲಿ ಸೋಮವಾರ ರಾತ್ರಿ 7.2 ತೀವ್ರತೆಯ ಭೂಕಂಪ ಸಂಭವಿಸಿದ್ದು, ದೆಹಲಿ–ಎನ್‌ಸಿಆರ್ ಪ್ರದೇಶದಲ್ಲೂ ಕಂಪನದ ಅನುಭವ ಉಂಟಾಗಿದೆ.

ದಕ್ಷಿಣ ಚೀನಾದ ಷಿನ್‌ಜಿಯಾಂಗ್ ಪ್ರಾಂತ್ಯದಲ್ಲಿ 80 ಕಿ.ಮೀ ಆಳದಲ್ಲಿ ಭೂಕಂಪ ಸಂಭವಿಸಿದೆ ಎಂದು ರಾಷ್ಟ್ರೀಯ ಭೂಕಂಪನ ಮಾಪನ ಕೇಂದ್ರ 'ಎಕ್ಸ್'ನಲ್ಲಿ ತಿಳಿಸಿದೆ.

ರಾಜ್ಯ ಸರ್ಕಾರದ ಮೇಲ್ಮನವಿ ವಿಚಾರಣೆ: ಪ್ರತಿವಾದಿಗೆ ನೋಟಿಸ್

ಬಹುಕೋಟಿಯ ಅರಣ್ಯವೀಗ ಲೇಔಟ್!

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ವಿಮಾನ ನಿಲ್ದಾಣಕ್ಕೆ ಹೊಂದಿಕೊಂಡ ರಾಜ್ಯ ಅರಣ್ಯದ 50 ಎಕರೆ ಕಣ್ಮರೆ..!
- ಇಲ್ಲೀಗ ಕೇವಲ 8 ಎಕರೆ 25 ಗುಂಟೆ ಮಾತ್ರವೇ ಅರಣ್ಯ ಪ್ರದೇಶವಾಗಿ ಉಳಿದಿದೆ
- ವಲಯ ಅರಣ್ಯಾಧಿಕಾರಿ ಶ್ರಮದಿಂದ ದಾಖಲೆ ಕ್ರೋಡೀಕರಣ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೊಂದಿಕೊಂಡಂತಿರುವ ಭುವನಹಳ್ಳಿಯ 'ರಾಜ್ಯ ಅರಣ್ಯ' ವ್ಯಾಪ್ತಿಯಲ್ಲಿರುವ 8 ಎಕರೆ 35 ಗುಂಟೆ ಜಮೀನು ವ್ಯಾಜ್ಯಕ್ಕೆ ಸಂಬಂಧಿಸಿದ ಮೇಲ್ಮನವಿ ಸಂಬಂಧಿಸಿದ ಸ್ಥಿರಾಸ್ತಿ ಸ್ವತ್ತಿನ ಅಧಿಕಾರವನ್ನು ಯಾವುದೇ ಮೂರನೇ ವ್ಯಕ್ತಿಗೆ ಘೋಷಿಸದಂತೆ ನಿರ್ಬಂಧಿಸಿ ಮಧ್ಯಂತರ ಆದೇಶ ಹೊರಡಿಸಿದೆ.

ಈ ಸಂಬಂಧ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ದೇವನಹಳ್ಳಿ ತಾಲ್ಲೂಕು ವಲಯ ಅರಣ್ಯ ಅಧಿಕಾರಿ ಸಲ್ಲಿಸಿರುವ ನಿಯಮಿತ ಪ್ರಥಮ ಮೇಲ್ಮನವಿಯನ್ನು ನ್ಯಾಯಮೂರ್ತಿ ಎಚ್‌.ಟಿ.ನರೇಂದ್ರ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಕಿರಣ್ ಎಂ.ರೋಣ ಅವರು ವಾದ ಮಂಡಿಸಿ, 'ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕು ಕಸಬಾ ಹೋಬಳಿಯಲ್ಲಿ ಚಿಕ್ಕಸಣ್ಣೆ ಮತ್ತು ಭುವನಹಳ್ಳಿಯನ್ನು ಒಳಗೊಂಡ 59 ಎಕರೆ 8 ಗುಂಟೆ ಪ್ರದೇಶವನ್ನು ರಾಜ್ಯದ ಅರಣ್ಯ ಎಂದು ಮೈಸೂರು ಅರಣ್ಯ ನಿಯಂತ್ರಣ ಕಾಯ್ದೆಯ ಕಲಂ 17ರ ಅನುಸಾರ 1921ರ ಜನವರಿ 8ರಲ್ಲೇ ಅಧಿಸೂಚನೆ ಹೊರಡಿಸಲಾಗಿದೆ' ಎಂದರು.

'ಭುವನಹಳ್ಳಿ ರಾಜ್ಯ ಅರಣ್ಯ ಬ್ಲಾಕ್‌ನಲ್ಲಿರುವ ಚಿಕ್ಕಸಣ್ಣೆಯ ಸರ್ವೆ ನಂಬರ್ 69ರಲ್ಲಿ (ಹಳೆಯ ಸರ್ವೆ ನಂಬರ್ 67) ವ್ಯಾಜ್ಯಕ್ಕೆ ಒಳಪಟ್ಟಿರುವ 8 ಎಕರೆ 35 ಗುಂಟೆ ಜಮೀನು ಕೂಡಾ ಸೇರಿದೆ. ಇದರಲ್ಲಿ ಮೇಲ್ಮನವಿಯ ಪ್ರತಿವಾದಿಗಳು ಮತ್ತು ಅವರ ಕಡೆಯವರು ವ್ಯಾಜ್ಯ ಪ್ರದೇಶದಲ್ಲಿ ಲೇ ಔಟ್ ನಿರ್ಮಾಣ ಮಾಡಿದ್ದು, ಅರಣ್ಯ ಪ್ರದೇಶದ ಮೇಲೆ ಮೂರನೇ ವ್ಯಕ್ತಿ ಸ್ವತ್ತಿನ ಅಧಿಕಾರ ಹೊಂದಲು ಅವಕಾಶ ಮಾಡಿಕೊಟ್ಟಿದ್ದಾರೆ' ಎಂದು ಆಕ್ಷೇಪಿಸಿದರು.



'ಇದರಂತೆಯೇ ಸುತ್ತಲಿನ ಇನ್ನುಳಿದ ರಾಜ್ಯ ಅರಣ್ಯದಲ್ಲೂ ಮೂರನೇ ವ್ಯಕ್ತಿಗಳು ಪೋಡಿ ಮಾಡಿಕೊಂಡು ಲೇ ಔಟ್ ನಿರ್ಮಿಸಿದ್ದು ಅರಣ್ಯ ಪ್ರದೇಶವೇ ಇಲ್ಲದಂತಾಗಿದೆ ಮತ್ತು ಇಲ್ಲೀಗ ಕೇವಲ 8 ಎಕರೆ 25 ಗುಂಟೆ ಮಾತ್ರವೇ ಅರಣ್ಯ ಪ್ರದೇಶವಾಗಿ ಉಳಿದಿದೆ' ಎಂದು ವಿವರಿಸಿದರು.

'ಸರ್ಕಾರವು ಅರಣ್ಯ ಪ್ರದೇಶದ ಒತ್ತುವರಿಯನ್ನು ಕಾಲಕಾಲಕ್ಕೆ ಗುರುತಿಸಿ ತಡೆಯುತ್ತಿರಬೇಕು ಮತ್ತು ದಾಖಲೆಗಳನ್ನು ಜತನವಾಗಿ ಕಾಪಾಡುತ್ತಿರಬೇಕು. ಈ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಆದೇಶದ ಅನುಸಾರ ವಲಯ ಅರಣ್ಯ ಅಧಿಕಾರಿ ಯು.ಜೆ.ಪವಿತ್ರಾ ಅವರ ಶ್ರಮ ವಹಿಸಿ ರಾಜ್ಯ ಅರಣ್ಯ ಪ್ರದೇಶಕ್ಕೆ ಸಂಬಂಧಿಸಿದ ದಾಖಲೆಗಳನ್ನು ಜತನದಿಂದ ಕ್ರೋಡೀಕರಿಸಿದ್ದಾರೆ. ಈ ಕ್ರೋಡೀಕೃತ ದಾಖಲೆಗಳನ್ನು ನ್ಯಾಯಪೀಠ ಪರಿಶೀಲಿಸಬೇಕು' ಎಂದು ಕೋರಿದರು.

ವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿಯಾಗಿರುವ ಚಿಕ್ಕಸಣ್ಣೆ ಗ್ರಾಮದ ಸಗಟು ಹಣ್ಣಿನ ವ್ಯಾಪಾರಿ ಎಂ.ಎ.ಮೊಹಮದ್ ಸನಾವುಲ್ಲಾ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿದೆ.

ಏನಿದು ಪ್ರಕರಣ?

ಚಿಕ್ಕಸಣ್ಣೆ ಗ್ರಾಮ ವ್ಯಾಪ್ತಿಯಲ್ಲಿನ ಭುವನಹಳ್ಳಿಯ ರಾಜ್ಯ ಅರಣ್ಯದ ಕೆಲ ಭಾಗವನ್ನು 1936ರ ಸೆಪ್ಟೆಂಬರ್ 30ರಂದು ಮೈಸೂರು ಭೂ ಕಂದಾಯ ಸಂಹಿತೆ ಅನುಸಾರ ಹರಾಜು ಹಾಕಿದಾಗ ಸುಬ್ಬರಾಯ ಮೊದಲಿಯಾರ್ ಎಂಬುವರು 43 ಎಕರೆ 24 ಗುಂಟೆ ಜಮೀನನ್ನು ಖರೀದಿಸಿದ್ದರು. ಸುಬ್ಬರಾಯ ಅವರಿಗೆ 1936 ನವೆಂಬರ್ 19 ರಂದು ಮಾರಾಟ ಪ್ರಮಾಣ ಪತ್ರ ನೀಡಲಾಗಿದೆ. ಈ ಸ್ವತ್ತನ್ನು 1977ರಲ್ಲಿ ಸದ್ಯ ಪ್ರತಿವಾದಿಯಾಗಿರುವ ಕಡೆಯವರು ಖರೀದಿಸಿದ್ದರಲ್ಲದೆ, ಈ ಕುರಿತಂತೆ ಸಿವಿಲ್ ವ್ಯಾಜ್ಯಗಳು ಉದ್ಭವಿಸಿ ಈಗ ಎರಡನೇ ಸುತ್ತಿನ ವ್ಯಾಜ್ಯ ನಡೆಯುತ್ತಿದೆ.

ಸ್ವತ್ತಿಗೆ ಸಂಬಂಧಿಸಿದ ಅಸಲು ದಾವೆಯಲ್ಲಿ ದೇವನಹಳ್ಳಿಯ ಪ್ರಧಾನ ಹಿರಿಯ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ 2023ರ ಡಿಸೆಂಬರ್ 15ರಂದು ಆದೇಶ ನೀಡಿದ್ದು, ಪ್ರತಿವಾದಿಗಳಿಗೆ ಸ್ವತ್ತಿನ ಅಧಿಕಾರ ಘೋಷಣೆ ಮಾಡುವಂತೆ ನಿರ್ದೇಶಿಸಿತ್ತು. ಇದನ್ನು ಪ್ರಶ್ನಿಸಿರುವ ರಾಜ್ಯ ಸರ್ಕಾರ, 'ಅರಣ್ಯ ಇಲಾಖೆಗೆ ಸೇರಿದ ಜಮೀನನ್ನು ಕಂದಾಯ ಇಲಾಖೆ ಹರಾಜು ಹಾಕಲು ಕಾನೂನಿನಲ್ಲಿ ಅವಕಾಶವಿಲ್ಲ' ಎಂದು ಮೇಲ್ಮನವಿ ಸಲ್ಲಿಸಿದೆ.

'ಜಯಲಲಿತಾ ಆಸ್ತಿ ಹರಾಜು ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಮಿಳುನಾಡು ಮಾಜಿ ಸಿಎಂ ಜೆ.ಜಯಲಲಿತಾ ಅವರಿಂದ ಜಪ್ತಿ ಮಾಡಲಾದ ಕೋಟ್ಯಂತರ ರೂಪಾಯಿ ಬೆಲೆಬಾಳುವ ವಸ್ತುಗಳನ್ನು ಹರಾಜು ಹಾಕುವ ಬದಲು ತಮಿಳುನಾಡು ಸರ್ಕಾರದ ಸುಪರ್ದಿಗೆ ನೀಡುವಂತೆ ಬೆಂಗಳೂರಿನ ಸಿಟಿ ಸಿವಿಲ್ ಮತ್ತು ಸೆಷನ್ಸ್ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಆರ್‌ಟಿಐ ಕಾರ್ಯಕರ್ತ ಟಿ.ನರಸಿಂಹ ಮೂರ್ತಿ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಾಲಯ, ಜಯಲಲಿತಾ ಅವರ ಒಡವೆಗಳನ್ನು ತಮಿಳುನಾಡು ಸರ್ಕಾರಕ್ಕೆ ಹಸ್ತಾಂತರಿಸಬೇಕು ಎಂದು ಕರ್ನಾಟಕದ ಗೃಹ ಇಲಾಖೆ ಕಾರ್ಯದರ್ಶಿ ಮತ್ತು ಪೊಲೀಸ್ ಇಲಾಖೆಗೆ ನಿರ್ದೇಶಿಸಿದೆ.

ಜಯಲಲಿತಾ ವಿರುದ್ಧದ ಅಕ್ರಮ ಆಸ್ತಿ ಗಳಿಕೆ ಪ್ರಕರಣದ ವಿಚಾರಣೆಗಾಗಿ ವೆಚ್ಚವಾಗಿರುವ ₹5 ಕೋಟಿ ಮೊತ್ತವನ್ನು ಡಿಡಿ ರೂಪದಲ್ಲಿ ಕರ್ನಾಟಕ ಸರ್ಕಾರಕ್ಕೆ ಪಾವತಿಸುವಂತೆಯೂ ತಮಿಳುನಾಡು ಸರ್ಕಾರಕ್ಕೆ ಸೂಚಿಸಿದೆ.



ಪ್ರಕರಣದಲ್ಲಿ ರಾಜ್ಯ ಸರ್ಕಾರದ ವಿಶೇಷ ಪ್ರಾಸಿಕ್ಯೂಟರ್ ಆದ ಹಿರಿಯ ವಕೀಲ ಕಿರಣ್ ಎಸ್.ಜವಳಿ, ಜಪ್ತಿಯಾದ ಜಯಲಲಿತಾ ಅವರ ಆಸ್ತಿ-ವಸ್ತುಗಳ ವಿವರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದರು. ಅದನ್ನು ಪರಿಗಣಿಸಿದ ನ್ಯಾಯಾಲಯ ಈ ಆದೇಶ ಮಾಡಿದೆ.

ಅಕ್ರಮ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿ ಬೆಂಗಳೂರಿನ ವಿಶೇಷ ನ್ಯಾಯಾಲಯ 2014ರ ಸೆ.27ರಂದು ಜಯಲಲಿತಾಗೆ ನಾಲ್ಕು ವರ್ಷ ಜೈಲು ಮತ್ತು ₹ 100 ಕೋಟಿ ದಂಡ ವಿಧಿಸಿ ಆದೇಶಿಸಿತ್ತು. ಜತೆಗೆ, 'ಜಪ್ತಿ ಮಾಡಲಾದ ಜಯಲಲಿತಾ ಅವರ ಬೆಲೆಬಾಳುವ ವಸ್ತುಗಳನ್ನು ಆರ್‌ಬಿಐ, ಎಸ್‌ಬಿಐಗೆ ಅಥವಾ ಸಾರ್ವಜನಿಕ ಹರಾಜು ಮೂಲಕ ಮಾರಾಟ ಮಾಡಬೇಕು. ಅದರಿಂದ ಬಂದ ಹಣವನ್ನು ದಂಡದ ಮೊತ್ತಕ್ಕೆ ಹೊಂದಾಣಿಕೆ ಮಾಡಬೇಕು' ಎಂದು ನಿರ್ದೇಶಿಸಿತ್ತು.

ಏನೆಲ್ಲಾ ವಸ್ತುಗಳಿವೆ?

7040 ಗ್ರಾಂ ತೂಕದ 468 ಬಗೆಯ ಚಿನ್ನ ಹಾಗೂ ವಜ್ರಖಚಿತ ಆಭರಣಗಳು, 700 ಕೆ.ಜಿ. ತೂಕದ ಬೆಳ್ಳಿ ಆಭರಣಗಳು, 740 ದುಬಾರಿ ಚಪ್ಪಲಿಗಳು, 11,344 ರೇಷ್ಮೆ ಸೀರೆಗಳು, 250 ಶಾಲು, 12 ರೆಫ್ರಿಜರೇಟರ್, 10 ಟಿ.ವಿ. ಸೆಟ್‌ಗಳು , 8 ವಿಸಿಆರ್, 1 ವಿಡಿಯೊ ಕ್ಯಾಮೆರಾ, 4 ಸಿಡಿ ಪ್ಲೇಯರ್, 2 ಆಡಿಯೊ ಡೆಕ್, 24 ಟೂ-ಇನ್ ಒನ್ ಟೇಪ್ ರೇಕಾರ್ಡರ್, 1040 ವಿಡಿಯೊ ಕ್ಯಾಸೆಟ್, 3 ಐರನ್ ಲಾಕರ್, ₹ 1,93,202 ನಗದು ಸೇರಿದಂತೆ ಹಲವು ವಸ್ತುಗಳನ್ನು ಜಯಲಲಿತಾ ಅವರಿಂದ ಜಪ್ತಿ ಮಾಡಲಾಗಿತ್ತು.

ಹೈಕೋರ್ಟ್‌ನಲ್ಲಿ ಕೆಟ್ಟುನಿಂತ ಲಿಫ್ಟ್: ಪರದಾಡಿದ ಸಿಬ್ಬಂದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್‌ನಲ್ಲಿರುವ ಅಡ್ವೊಕೇಟ್ ಜನರಲ್ ಕಚೇರಿಗೆ ಹೊಂದಿಕೊಂಡ ನೂತನ ಲಿಫ್ಟ್ ಸೋಮವಾರ ಮಧ್ಯಾಹ್ನ ದಿಢೀರನೆ ಕೆಟ್ಟು ನಿಂತಿತು. ಇದರಿಂದ ಒಳಗಿದ್ದ ಇಬ್ಬರು ಸರ್ಕಾರಿ ಸಿಬ್ಬಂದಿ 20 ನಿಮಿಷಗಳ ಕಾಲ ಪರದಾಡಿ ಆತಂಕಕ್ಕೆ ಒಳಗಾದರು.

ಲಿಫ್ಟ್ ಕೆಟ್ಟ ಕೂಡಲೇ ಅದರಲ್ಲಿ ಒಳಗಿದ್ದವರು ಮೇಲಿಂದ ಮೇಲೆ ಅಪಾಯದ ಕರೆಗಂಟೆ ಒತ್ತಿದರಾದರೂ ತಕ್ಷಣವೇ ಯಾರೂ ಹತ್ತಿರ ಸುಳಿಯಲಿಲ್ಲ. ಹದಿನೈದು ನಿಮಿಷಗಳ ನಂತರ ಸ್ಥಳದಲ್ಲಿಯೇ ಓಡಾಡುತ್ತಿದ್ದ ಕೆಲವರು ಧಾವಿಸಿ ಬಂದು ಲಿಫ್ಟ್‌ನ ಕೆಲ ಬಟನ್‌ಗಳನ್ನು ಒತ್ತುವ ಮೂಲಕ ಅವರನ್ನು ರಕ್ಷಿಸಲು ನೆರವಾದರು.

ಹೈಕೋರ್ಟ್ ಕಟ್ಟಡದ ಮೂಲ ಸ್ವರೂಪದ ಭಾಗವನ್ನು ಒಡೆದು ಇತ್ತೀಚೆಗಷ್ಟೇ ದುಬಾರಿ ವೆಚ್ಚದ ಈ ಲಿಫ್ಟ್ ಅನ್ನು ಅತ್ಯಂತ ಆಕರ್ಷಣೀಯವಾಗಿ ನಿರ್ಮಿಸಲಾಗಿದೆ. ಲಿಫ್ಟ್ ನೇರವಾಗಿ ನೆಲ ಮಹಡಿಯಿಂದ ಒಂದನೇ ಮಹಡಿಯಲ್ಲಿರುವ ಅಡ್ವೊಕೇಟ್ ಜನರಲ್ ಕಚೇರಿಗೆ ಮತ್ತು ಹೈಕೋರ್ಟ್‌ನ ಒಂದನೇ ಮಹಡಿಯಲ್ಲಿರುವ ಇತರೆ ಸರ್ಕಾರಿ ವಕೀಲರ ಕಚೇರಿಗೆ ತಲುಪಲು ಅನುವು ಮಾಡಿಕೊಡುತ್ತದೆ.

'ಪ್ರತಿದಿನ ಅಡ್ವೊಕೇಟ್ ಜನರಲ್ ಅವರೂ ಸೇರಿದಂತೆ ನೂರಾರು ಸರ್ಕಾರಿ ಸಿಬ್ಬಂದಿ ಹೈಕೋರ್ಟ್ ವಕೀಲರು, ಕೋರ್ಟ್ ಸಿಬ್ಬಂದಿಗಳು ಇದೇ ಲಿಫ್ಟ್‌ನಲ್ಲಿ ಇಳಿಯಲು ಮತ್ತು ಹತ್ತಲೂ ಅವಕಾಶ ಕಲ್ಪಿಸಲಾಗಿದೆ. ಹೈಕೋರ್ಟ್‌ನ ಐದೂ ಗೇಟುಗಳಲ್ಲಿ ಒಳ ಬರುವ ವಕೀಲರು, ಕಕ್ಷಿದಾರರು ಮತ್ತು ನ್ಯಾಯಮೂರ್ತಿಗಳಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಎಲ್ಲೆಡೆಯೂ ಲಿಫ್ಟ್ ಅವಕಾಶ ಕಲ್ಪಿಸಲಾಗಿದೆ. ಆದರೆ, ದಟ್ಟಣೆಯ ಅವಧಿಯನ್ನು ಹೊರತುಪಡಿಸಿ ಲಿಫ್ಟ್ ಆಪರೇಟರ್‌ಗಳು ಲಿಫ್ಟ್‌ನಲ್ಲಿ ಇರುವುದೇ ಇಲ್ಲ' ಎಂದು ಹೆಸರು ಹೇಳಲು ಇಚ್ಛಿಸದ ವಕೀಲರೊಬ್ಬರು ದೂರಿದರು.

400 ಕುಟುಂಬಗಳ ತೆರವಿಗೆ ಬಿಬಿಎಂಪಿ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪೂರ್ವಭಾಗದಲ್ಲಿರುವ ಗಂಗಶೆಟ್ಟಿಹಳ್ಳಿ ಕೆರೆಯಲ್ಲಿ ಒತ್ತುವರಿ ಮಾಡಿಕೊಂಡು 30 ವರ್ಷಗಳಿಂದ ವಾಸಿಸುತ್ತಿರುವ 400ಕ್ಕೂ ಹೆಚ್ಚು ಕುಟುಂಬಗಳನ್ನು ತೆರವುಗೊಳಿಸಬೇಕೆಂದು ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಗೆ ಬಿಬಿಎಂಪಿ ಪತ್ರ ಬರೆದಿದೆ.

ಕೆರೆಯಲ್ಲಿ ಸುಮಾರು 3 ಎಕರೆ ಒತ್ತುವರಿ ಮಾಡಿಕೊಂಡಿರುವವರಿಗೆ ಪುನರ್ವಸತಿ ಕಲ್ಪಿಸಬೇಕು ಎಂದು ಪತ್ರದಲ್ಲಿ ಉಲ್ಲೇಖಿಸಿದೆ. ಕೆ.ಆರ್. ಪುರದಲ್ಲಿರುವ ಈ ಕೆರೆಯಲ್ಲಿ 14 ಒತ್ತುವರಿದಾರರಿದ್ದು, ಕೆರೆ ಮಾಲೀಕತ್ವ ಹೊಂದಿರುವ ಕಂದಾಯ ಇಲಾಖೆಯೂ ಒತ್ತುವರಿ ಮಾಡಿಕೊಂಡು ತಹಶೀಲ್ದಾರ್ ಕಚೇರಿ ನಿರ್ಮಿಸಿದೆ.

ಜಿಲ್ಲಾಡಳಿತಕ್ಕೂ ಪತ್ರ ಬರೆದಿರುವ ಬಿಬಿಎಂಪಿ, ಗಂಗಶೆಟ್ಟಿಹಳ್ಳಿ ಕೆರೆಯಲ್ಲಿರುವ ಒತ್ತುವರಿ ತೆರವುಗೊಳಿಸಬೇಕು ಎಂದು ಮನವಿ ಮಾಡಿದೆ. ಕೆ.ಆರ್. ಪುರದ ಶಾಸಕ ಬೈರತಿ ಬಸವರಾಜು ಅವರು ಕೆರೆಯ ಗಡಿಯನ್ನು ಗುರುತಿಸಲು ಅಡ್ಡಿಪಡಿಸುತ್ತಿದ್ದಾರೆ ಎಂದೂ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

'ಹೊಸಕೋಟೆ ಬಳಿಯ ಮೇಡಹಳ್ಳಿಯಲ್ಲಿ ಒಂದು ಎಕರೆಯಲ್ಲಿ ಒತ್ತುವರಿದಾರರಿಗೆ ಪುನರ್ವಸತಿ ಕಲ್ಪಿಸಲು ಜಿಲ್ಲಾಧಿಕಾರಿ ಸ್ಥಳ ಗುರುತಿಸಿದ್ದಾರೆ. ಮುಂದಿನ ಮಂಡಳಿ ಸಭೆಯಲ್ಲಿ ವಸತಿ ಕಲ್ಪಿಸುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುತ್ತದೆ' ಎಂದು ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಆಯುಕ್ತ ಬಿ. ವೆಂಕಟೇಶ್ ಹೇಳಿದರು.

'ನಾವು 1992ರಿಂದ ಇಲ್ಲಿ ವಾಸಿಸುತ್ತಿದ್ದೇವೆ. ನೀರು, ವಿದ್ಯುತ್ ಸೇರಿದಂತೆ ಸರ್ಕಾರ ನಮಗೆ ಸೌಲಭ್ಯವನ್ನು ಕಲ್ಪಿಸಿದೆ. ಹಕ್ಕುಪತ್ರವನ್ನೂ ನೀಡಿದ್ದಾರೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಪರ್ಯಾಯ ಸ್ಥಳ ನೀಡಿದರೆ ಈ ಜಾಗವನ್ನು ತೆರವು ಮಾಡಲು ನಾವು ಸಿದ್ಧರಿದ್ದೇವೆ' ಎಂದು ಕೆರೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಮಾರುತಿ ತಿಳಿಸಿದರು.



ಭಾರತೀಯ ವಿದ್ಯಾಭವನ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ವಾಂಸ ಕೆ.ಜಿ.ರಾಘವನ್(ಎಡದಿಂದ ಎರಡನೆಯವರು) ಅವರು ಇಂಗ್ಲಿಷಿನಲ್ಲಿ ಬರೆದು ಎಂ.ಸಿ. ಪ್ರಕಾಶ್ (ಎಡದಿಂದ ಮೂರನೆಯವರು) ಅವರು ಕನ್ನಡಕ್ಕೆ ಅನುವಾದಿಸಿರುವ 'ಸುಂದರಕಾಂಡ ಸುಂದರ' ಪುಸ್ತಕವನ್ನು ಲೋಕಾರ್ಪಣೆ ಮಾಡಲಾಯಿತು. 'ಅಭಿನವ' ರವಿಕುಮಾರ, ವಿದೂಷಿ ಸತ್ಯವತಿ, ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್‌.ಎನ್. ಸುರೇಶ್, ಜಂಟಿ ನಿರ್ದೇಶಕಿ ನಾಗಲಕ್ಷ್ಮಿ ಕೆ. ರಾವ್ ಪಾಲ್ಗೊಂಡಿದ್ದರು

ಚಿಕ್ಕಹಾಗಡೆಯಲ್ಲಿ ಕಾಡಾನೆಗಳ ಓಡಾಟ


ಪ್ರಜಾವಾಣಿ ವಾರ್ತೆ

ಆನೇಕಲ್: ಮೂರು ಕಾಡಾನೆಗಳ ಹಿಂಡು ಸೋಮವಾರ ಬೆಳಗಿನ ಜಾವ ಆನೇಕಲ್ ತಾಲ್ಲೂಕಿನ ಚಿಕ್ಕಹಾಗಡೆ, ಸಿಡಿಹೊಸಕೋಟೆಯ ವಿವಿಧ ತೋಟಗಳಿಗೆ ನುಗ್ಗಿ ಬೆಳೆಯನ್ನು ತಿಂದು ಹಾಳುಮಾಡಿವೆ.

ಚಿಕ್ಕಹಾಗಡೆಯ ರಾಜಪ್ಪ ಅವರಿಗೆ ಸೇರಿದ ಒಂದು ಎಕರೆ ಟೊಮೆಟೊ ತೋಟದಲ್ಲಿನ ಬೆಳೆಯನ್ನು ಕಾಡಾನೆಗಳು ತಿಂದು, ತುಳಿದು ಹಾಕಿವೆ. ಇದರಿಂದಾಗಿ ಕೊಯ್ಲಿಗೆ ಬಂದಿದ್ದ ಲಕ್ಷಾಂತರ ಬೆಳೆ ಹಾಳಾಗಿದೆ. ಕಾಡಾನೆಗಳು ರಾಗಿಯ ಮೆದೆಗಳನ್ನು ತಿಂದು ಹಾಕಿವೆ ಮತ್ತು ಬಾಳೆ ತೋಟಕ್ಕೆ ನುಗ್ಗಿ ತುಳಿದು ಹಾಕಿವೆ. ವರ್ಷವಿಡೀ ಕಷ್ಟಪಟ್ಟು ಬೆಳೆದಿದ್ದ ಬೆಳೆ ಒಂದೇ ದಿನದಲ್ಲಿ ಹಾಳಾಗಿದೆ. ಇದರಿಂದಾಗಿ ರೈತರು ಪರದಾಡುವಂತಾಗಿದೆ.

ತಮಿಳುನಾಡಿನ ಕಡೆಯಿಂದ ಬಂದ ಕಾಡಾನೆಗಳು ಮುತ್ಯಾಲಮಡುವುದು ಮೂಲಕ ಆನೇಕಲ್ ದೊಡ್ಡಕೆರೆಯ ಮಾರ್ಗವಾಗಿ ಸಿಡಿಹೊಸಕೋಟೆ, ಚಿಕ್ಕಹಾಗಡೆ ಗ್ರಾಮಗಳ ವಿವಿಧ ರೈತರ ಬೆಳೆಗಳನ್ನು ಹಾಳು ಮಾಡಿವೆ. ಅರಣ್ಯ ಇಲಾಖೆಗೆ ಮಾಹಿತಿ ಬರುತ್ತಿದ್ದಂತೆ ಸಿಬ್ಬಂದಿ ಪಟಾಕಿಗಳನ್ನು ಸಿಡಿಸಿ ಆನೆಗಳನ್ನು ಕಾಡಿನತ್ತ ಓಡಿಸಿದ್ದಾರೆ.

ಕೆಲ ದಿನಗಳಿಂದ ವಣಕನಹಳ್ಳಿ, ಮೆಣಸಿಗಹಳ್ಳಿ, ಸುಣವಾರ, ಪಟ್ಟಣಗೆರೆ ಗೊಲ್ಲಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಆನೆಗಳು ದಾಳಿ ನಡೆಸಿ ಬೆಳೆಗಳನ್ನು ಹಾಳುಮಾಡುತ್ತಿವೆ. ಅರಣ್ಯ ಇಲಾಖೆಯ ಸಿಬ್ಬಂದಿ ಹರಸಾಹಸ ಮಾಡಿದರು ಕಣ್ತಪ್ಪಿಸಿ ಆನೆಗಳು ಕಾಡಿನಿಂದ ಗ್ರಾಮಗಳತ್ತ ನುಗ್ಗುತ್ತಿರುವುದು ರೈತರ ಆತಂಕಕ್ಕೆ ಕಾರಣವಾಗಿದೆ.



ಆನೇಕಲ್ ತಾಲ್ಲೂಕಿನ ಚಿಕ್ಕಹಾಗಡೆ ಗ್ರಾಮದಲ್ಲಿ ಕಾಡಾನೆಗಳ ದಾಳಿಯಿಂದ ಹಾಳಾಗಿರುವ ಟೊಮೊಟೊ ಬೆಳೆ

'ಶೌಚಾಲಯ ಸ್ವಚ್ಛತಾ ಸಿಬ್ಬಂದಿಗೆ ಸುರಕ್ಷತಾ ಸಾಮಗ್ರಿಗಳಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ 48 ಸಾರ್ವಜನಿಕ ಶೌಚಾಲಯಗಳು ಅತ್ಯಂತ ದುಸ್ಥಿತಿಯಲ್ಲಿದ್ದು, ಅವುಗಳ ಸ್ವಚ್ಛತೆ ಕಾರ್ಯ ನಿರ್ವಹಿಸುವ ಸಿಬ್ಬಂದಿ ಸುರಕ್ಷತಾ ಸಾಮಗ್ರಿಗಳಿಲ್ಲದೆ ದಯನೀಯ ಸ್ಥಿತಿಯಲ್ಲಿದ್ದಾರೆ ಎಂದು ಸಮೀಕ್ಷೆ ತಿಳಿಸಿದೆ.

'ಸ್ಟ್ಯಾಂಡ್‌4ಶೀ' ಉಪಕ್ರಮದ ಮುಖ್ಯಸ್ಥೆ ಕೆ.ಆರ್. ಅರ್ಚನಾ ನೇತೃತ್ವದಲ್ಲಿ 32 ಸ್ವಯಂಸೇವಕರ ತಂಡ ರಾಜಾಜಿನಗರ, ಜಯನಗರ, ಬಸವನಗುಡಿ, ಮಹಾಲಕ್ಷ್ಮಿ ಲೇಔಟ್, ಬಸವೇಶ್ವರನಗರ, ಚಿಕ್ಕಪೇಟೆ ಹಾಗೂ ಎಚ್‌ಎಸ್‌ಆರ್ ಲೇಔಟ್‌ಗಳಲ್ಲಿನ 48 ಶೌಚಾಲಯಗಳ ಸಮೀಕ್ಷೆ ನಡೆಸಿದೆ.

ಸಾರ್ವಜನಿಕ ಶೌಚಾಲಯಗಳಲ್ಲಿರುವ ಸ್ವಚ್ಛತಾ ಸಿಬ್ಬಂದಿಗೆ ಸುರಕ್ಷತಾ ಕವಚ, ಸಾಮಗ್ರಿಗಳನ್ನು ನೀಡಿಲ್ಲ. ನಿಗದಿತ ವೇತನ ಅಥವಾ ಗೌರವಧನ ಇಲ್ಲ. ನೀರಿನ ಕೊರತೆ ಇದ್ದು, ಅಡುಗೆ ಮಾಡಲು, ರಾತ್ರಿ ನಿದ್ರಿಸಲು ಪ್ರತ್ಯೇಕ ಸ್ಥಳಗಳಿಲ್ಲ ಎಂದು ಸಮೀಕ್ಷೆಯಲ್ಲಿ ಸಿಬ್ಬಂದಿ ಹೇಳಿಕೊಂಡಿದ್ದಾರೆ.

ಸುರಕ್ಷತಾ ಸಾಮಗ್ರಿಗಳು ಇಲ್ಲದಿರುವುದರಿಂದ ಚರ್ಮ ರೋಗದಂತಹ ಹಲವು ಅಲರ್ಜಿ ಸಮಸ್ಯೆಗಳನ್ನು ಸಿಬ್ಬಂದಿ ಎದುರಿಸುತ್ತಿದ್ದಾರೆ. ಈ ಕೆಲಸಗಾರರು ನಾಗರಿಕರು ನೀಡುವ ಹಣದ ಮೇಲೆ ಪೂರ್ಣ ಅವಲಂಬಿತರಾಗಿದ್ದಾರೆ. ನೀರಿನ ಕೊರತೆ ಶೌಚಾಲಯ ಗಲೀಜಿಗೆ ಕಾರಣವಾಗಿದ್ದು, ಇದರಿಂದ ನಾಗರಿಕರ ಕೋಪಕ್ಕೂ ಗುರಿಯಾಗಬೇಕಿದೆ ಎಂದು ಹೇಳಲಾಗಿದೆ.

'ಸಾರ್ವಜನಿಕ ಶೌಚಾಲಯಗಳ ನಿರ್ವಹಣೆಯನ್ನು ಹೊರಗುತ್ತಿಗೆದಾರರಿಗೆ ವಹಿಸಲಾಗಿದೆ. ಸ್ವಚ್ಛತಾ ಸಿಬ್ಬಂದಿಗೆ ಹಣ ನೀಡುವುದು ಗುತ್ತಿಗೆದಾರರ ಜವಾಬ್ದಾರಿ' ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

ನಿವೃತ್ತರ ನೇಮಕಕ್ಕೆ ಕಡಿವಾಣ: ಸಿಎಸ್‌ಗೆ ಸಿ.ಎಂ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಇಲಾಖೆಗಳಲ್ಲಿ ಗುತ್ತಿಗೆ, ಹೊರ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ನಿವೃತ್ತ ಸರ್ಕಾರಿ ನೌಕರರನ್ನು ತಕ್ಷಣ ಕರ್ತವ್ಯದಿಂದ ಬಿಡುಗಡೆಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಮುಖ್ಯ ಕಾರ್ಯದರ್ಶಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯೂ ಸೇರಿ ರಾಜ್ಯ ಸರ್ಕಾರದ ಕೆಲವು ಇಲಾಖೆಗಳಲ್ಲಿ ಮತ್ತು ಸಚಿವಾಲಯದಲ್ಲಿ ಅನಗತ್ಯ ಹುದ್ದೆಗಳನ್ನು ಸೃಜಿಸಿ, ನಿವೃತ್ತ ಅಧಿಕಾರಿ, ನೌಕರರನ್ನು ಸಮಾಲೋಚಕರು, ವಿಶೇಷ ಸಂಪನ್ಮೂಲ ವ್ಯಕ್ತಿಗಳಾಗಿ ನೇಮಿಸಿಕೊಳ್ಳಲಾಗಿದೆ.

ಗ್ರೂಪ್ ವೃಂದದ ಕೆಲವು ಹುದ್ದೆಗಳಿಗೂ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ.ಇವರಿಗೆ ವೇತನ, ವಾಹನ ಸೌಲಭ್ಯ ಮತ್ತಿತರ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಹೆಚ್ಚುವರಿ ಆರ್ಥಿಕ ಹೊರೆ ಆಗುತ್ತಿದೆ. ಅಲ್ಲದೆ, ಕಾರ್ಯಕ್ಷಮತೆಯ ಗುಣಮಟ್ಟ ಹಾಗೂ ಉತ್ತರದಾಯಿತ್ವದ ಕೊರತೆಯೂ ಎದ್ದು ಕಾಣುತ್ತಿದೆ ಎಂದು ಸಿಎಸ್‌ಗೆ ಬರೆದ ಟಿಪ್ಪಣಿಯಲ್ಲಿ ಮುಖ್ಯಮಂತ್ರಿ ಉಲ್ಲೇಖಿಸಿದ್ದಾರೆ.

ಹೀಗಾಗಿ, ಗುತ್ತಿಗೆ, ಹೊರ ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಂಡವರನ್ನು ಬಿಡುಗಡೆ ಮಾಡಿ ಈ ಹುದ್ದೆಗಳಿಗೆ ಹಾಲಿ ಕರ್ತವ್ಯದಲ್ಲಿರುವ ಅಧಿಕಾರಿ, ಸಿಬ್ಬಂದಿ ನಿಯೋಜನೆ ಮಾಡಬೇಕು ಎಂದೂ ಅವರು ತಿಳಿಸಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಪ್ರಶಸ್ತಿ ಪ್ರದಾನ

19 ಮಕ್ಕಳಿಗೆ ರಾಷ್ಟ್ರೀಯ ಬಾಲ ಪುರಸ್ಕಾರ

ನವದೆಹಲಿ (ಪಿಟಿಐ): ಒಂಬತ್ತು ವರ್ಷದ ಪರ್ವತಾರೋಹಿ, ಕಿರಿಯ ಎಐ ವಿಜ್ಞಾನಿ, ವಿಶೇಷ ಸಾಮರ್ಥ್ಯವುಳ್ಳ ಚಿತ್ರಕಾರ, 'ಗೂಗಲ್ ಬಾಯ್' ಸೇರಿದಂತೆ ದೇಶದ 19 ಮಕ್ಕಳು ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರಕ್ಕೆ (2024) ಸೋಮವಾರ ಭಾಜನರಾದರು.

ಅಸಾಧಾರಣ ಸಾಧನೆ ತೋರಿರುವ ಈ ಮಕ್ಕಳಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರಶಸ್ತಿ ಪ್ರದಾನ ಮಾಡಿದರು.

ಮಹಾರಾಷ್ಟ್ರದ 12 ವರ್ಷದ ಬಾಲಕ ಆದಿತ್ಯ ವಿಜಯ್ ಬ್ರಾಹ್ಮಣೆ ಅವರ ಅಪ್ರತಿಮ ಧೈರ್ಯಕ್ಕಾಗಿ ಮರಣೋತ್ತರವಾಗಿ ಪ್ರಶಸ್ತಿ ವಿತರಿಸಲಾಯಿತು. ನದಿಯಲ್ಲಿ ಮುಳುಗುತ್ತಿದ್ದ ತನ್ನ ಸಹೋದರ ಸಂಬಂಧಿಗಳಾದ ಹರ್ಷ ಮತ್ತು ಶ್ಲೋಕ್ ಅವರನ್ನು ರಕ್ಷಿಸಿ, ಆದಿತ್ಯ ಅಸುನೀಗಿದ್ದರು.

ಕರ್ನಾಟಕದ 9 ವರ್ಷದ ಎ. ಚಾರ್ವಿ ಅವರು 8 ವರ್ಷದೊಳಗಿನ ವಿಶ್ವ ಚೆಸ್ ಚಾಂಪಿಯನ್ ಆದವರು. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಅನೇಕ ಪ್ರಶಸ್ತಿಗಳನ್ನು ಗಳಿಸಿದ್ದಾರೆ.

ರಾಜಸ್ಥಾನದ 17 ವರ್ಷದ ಚತುರ ಬಾಲಕ ಆರ್ಯನ್ ಸಿಂಗ್, ರೈತರ ಜೀವನವನ್ನು ಸರಳಗೊಳಿಸುವುದಕ್ಕೆ ಪೂರಕವಾಗಿ ಆಗ್ರೋಬೋಟ್, ಕೃತಕ ಬುದ್ಧಮತ್ತೆ ಚಾಲಿತ ರೋಬೋಟ್‌ನಂತಹ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಸಂಯೋಜಿಸಿದ್ದಾರೆ.

ಛತ್ತೀಸಗಢದಲ್ಲಿ 'ಗೂಗಲ್ ಬಾಯ್' ಎಂದೇ ಪ್ರಸಿದ್ಧಿಯಾಗಿರುವ 6 ವರ್ಷದ ಅರ್ಮಾನ್ ಉಬ್ರಾನಿ, ಗಣಿತ ಮತ್ತು ವಿಜ್ಞಾನದಲ್ಲಿ ಅತ್ಯುತ್ತಮ ಪರಾಕ್ರಮ ಮೆರೆದಿದ್ದಾರೆ. ಪುಸ್ತಕ ಸರಣಿಯ ಕಿರಿಯ ಲೇಖಕ ಎಂಬ ಹಿರಿಮೆಯೂ ಇವರಿಗಿದೆ.

ಉತ್ತರ ಪ್ರದೇಶದ ಎಂಟು ವರ್ಷದ ಅನುಷ್ಕಾ ಪಾಠಕ್ ಅವರು ಅಸಾಧಾರಣ 'ಕಥಾ ವಾಚನ' (ಧಾರ್ಮಿಕ ಪಠ್ಯ ನಿರೂಪಣೆ) ಸಾಮರ್ಥ್ಯ ಹೊಂದಿದ್ದಾರೆ. ಪಶ್ಚಿಮ ಬಂಗಾಳದ 13 ವರ್ಷದ ಅರಿಜೀತ್ ಬ್ಯಾನರ್ಜಿ ಅವರು ಪಖಾವಾಜ್ ನುಡಿಸುವಲ್ಲಿ ಮಹತ್ವದ ಛಾಪು ಮೂಡಿಸಿದ್ದಾರೆ.

ತೀವ್ರತರವಾದ ಸೆರೆಬ್ರಲ್ ಪಾಲ್ಸಿ ಸಮಸ್ಯೆ ಎದುರಿಸುತ್ತಿದ್ದರೂ ಗುಜರಾತಿನ 13 ವರ್ಷದ ಹೆಟ್ವಿ ಕಾಂತಿಭಾಯ್ ಖಿಮ್ಸೂರ್ಯ ಅಸಾಮಾನ್ಯ ಕಲಾತ್ಮಕ ಸಾಮರ್ಥ್ಯ ಹೊಂದಿದ್ದಾರೆ. ಅವರು 250 'ಫ್ರೀ-ಹ್ಯಾಂಡ್ ಪೇಂಟಿಂಗ್' ಕೃತಿಗಳನ್ನು ರಚಿಸಿ ಹಲವು ಪ್ರಶಸ್ತಿ ಪಡೆದಿದ್ದಾರೆ.



ನವದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 19 ಮಕ್ಕಳಿಗೆ ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕರ ಪ್ರದಾನ ಮಾಡಿದರು. ಕೇಂದ್ರ ಸಚಿವೆ ಸ್ಮೃತಿ ಇರಾನಿ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ





ಗೋವಿಂದರಾಜನಗರ ಕ್ಷೇತ್ರದ ವಿಜಯನಗರ ಮಾರುತಿ ಮಂದಿರ ದೇವಸ್ಥಾನದಲ್ಲಿ ನಡೆದ ವಿಶೇಷ ಪೂಜೆ ಮತ್ತು ದೇವರನಾಮ ಕೀರ್ತನೆ ಕಾರ್ಯಕ್ರಮದಲ್ಲಿ ಮಾಜಿ ಸಚಿವ ವಿ. ಸೋಮಣ್ಣ ಅವರು ರಾಮನ ವೇಷಧಾರಿಯಲ್ಲಿದ್ದ ಬಿಲ್ಲುಬಾಣವನ್ನು ತೆಗೆದುಕೊಂಡು ಜನರೆಡೆಗೆ ಗುರಿ ಹಿಡಿದರು. ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್‌ಅಶೋಕ, ಸಂಸದ ತೇಜಸ್ವಿಸೂರ್ಯ, ಅರುಣ್ ಸೋಮಣ್ಣ ಭಾಗವಹಿಸಿದ್ದರು. 2. ನಗರದ ಮೈಸೂರು ರಸ್ತೆಯ ಗಾಳಿ ಆಂಜನೇಯಸ್ವಾಮಿ ದೇವಸ್ಥಾನದ ಸೀತಾ ಸಮೇತ ಕೋದಂಡರಾಮನಿಗೆ 108 ಕಳಶದ ನೀರಿನ ಅಭಿಷೇಕ ಮಾಡಿದ ಪುರೋಹಿತರು. 3. ನಗರದ ಎಂ.ಜಿ ರಸ್ತೆಯಲ್ಲಿ ರಾಮನ ಮೂರ್ತಿಯನ್ನು ಇಟ್ಟು ನಾಗರಿಕರ ಸಂಭ್ರಮಿಸಿದರು. – ಪ್ರಜಾವಾಣಿ ಚಿತ್ರಗಳು

ರಾಮೋತ್ಸವ ಸಂಭ್ರಮದಲ್ಲಿ ಮಿಂದೆದ್ದ ಭಕ್ತರು • ದೇವಸ್ಥಾನಗಳಲ್ಲಿ ವಿಶೇಷ ಪೂಜೆ, ಬೀದಿಗಳಲ್ಲಿ ಮೆರವಣಿಗೆ, ಪಾನಕ, ಪ್ರಸಾದ ವಿತರಣೆ

ಎಲ್ಲೆಲ್ಲೂ ಮೊಳಗಿದ ರಾಮಜಪ, ಜೈ ಶ್ರೀರಾಮ್ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಯೋಧ್ಯೆಯಲ್ಲಿ ಬಾಲ ರಾಮನ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮ ನಡೆಯುತ್ತಿರುವ ಸಮಯದಲ್ಲಿ ನಗರದ ಬಹುತೇಕ ಪ್ರದೇಶಗಳಲ್ಲಿ ರಾಮಜಪ, ಜೈ ಶ್ರೀರಾಮ್ ಘೋಷಣೆಗಳು ಮೊಳಗಿದವು.

ವಾಹನಗಳ ಮೇಲೆ ಕೇಸರಿ ಬಾವುಟಗಳು ರಾರಾಜಿಸಿದವು. ಹೋಟೆಲ್, ಅಂಗಡಿಗಳಲ್ಲಿ ಮಾತ್ರವಲ್ಲದೇ, ಸಂಘ ಸಂಸ್ಥೆಗಳ ಸದಸ್ಯರು ರಸ್ತೆ ಬದಿಯಲ್ಲಿ ಪಾನಕ, ಮಜ್ಜಿಗೆ, ಕೇಸರಿಬಾತ್, ಸಿಹಿ ತಿಂಡಿಗಳನ್ನು ಹಂಚಿ, 'ಜೈಶ್ರೀರಾಮ್' ಘೋಷಣೆ ಕೂಗಿ ಸಂಭ್ರಮಿಸಿದರು.

ಚಿಕ್ಕಪೇಟೆ, ಮಾಮೂಲ್ ಪೇಟೆ, ಎಸ್.ಪಿ. ರೋಡ್ ಸಹಿತ ಹಲವು ಕಡೆಗಳಲ್ಲಿ ಅಂಗಡಿಗಳನ್ನು ಸ್ವಯಂ ಪ್ರೇರಿತವಾಗಿ ಬಂದ್ ಮಾಡಿ, ರಸ್ತೆಗಳನ್ನು ಬಂಟಿಂಗ್ಸ್, ಬ್ಯಾನರ್‌ಗಳಿಂದ ಅಲಂಕರಿಸಲಾಗಿತ್ತು. ಶ್ರೀರಾಮನ ಕಟೌಟ್ ನಿಲ್ಲಿಸಲಾಗಿತ್ತು.

ಬಹುತೇಕ ದೇಗುಲಗಳಲ್ಲಿ ವಿಶೇಷ ಅಭಿಷೇಕ, ಪೂಜೆ, ಹೋಮ ನಡೆದವು. ರಾಜಾಜಿನಗರದ ರಾಮ ಮಂದಿರ ದೇವಾಲಯದಲ್ಲಿ ಬೆಳಿಗ್ಗೆ 3ಗಂಟೆಗೆ ರಾಮದೇವರಿಗೆ ಅಭಿಷೇಕ ಮಾಡಲಾಯಿತು. ಬಳಿಕ ವಿಶೇಷ ಅಲಂಕಾರ ಮಾಡಲಾಯಿತು. ಭಕ್ತರು ಬೆಳಿಗ್ಗೆ 6ರಿಂದಲೇ ದೇವರ ದರ್ಶನ ಪಡೆಯಲು ಆರಂಭಿಸಿದರು. ಮಹಾಮಂಗಳಾರತಿ, ರಾಮತಾರಕ ಹೋಮ, ಪೂರ್ಣಾಹುತಿ ನಡೆದವು. ಸಾರ್ವಜನಿಕರ ಅನುಕೂಲಕ್ಕೆ ಎಲ್‌ಇಡಿ ವ್ಯವಸ್ಥೆ ಮಾಡಲಾಯಿತು. ಸಂಜೆ 6ಕ್ಕೆ ದೀಪಗಳನ್ನು ಬೆಳಗಿಸಲಾಯಿತು. ದೇವಾಲಯದಲ್ಲಿ ನಿರಂತರ ಭಜನೆ ಹಮ್ಮಿಕೊಳ್ಳಲಾಗಿತ್ತು.

ಗೋವಿಂದರಾಜನಗರ: ವಿಧಾನ ಸಭಾ ಕ್ಷೇತ್ರದ ವಿಜಯನಗರ ಮಾರುತಿ ಮಂದಿರದಲ್ಲಿ ವಿಶೇಷ ಪೂಜೆ ಮತ್ತು ದೇವರನಾಮ ಕೀರ್ತನೆ ಕಾರ್ಯಕ್ರಮ ನಡೆಯಿತು. ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಮಾಜಿ ಸಚಿವ ವಿ.ಸೋಮಣ್ಣ, ಸಂಸದ ತೇಜಸ್ವಿಸೂರ್ಯ, ಯುವ ನಾಯಕ ಅರುಣ್ ಸೋಮಣ್ಣ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಶಂಕರ ಸೇವಾ ಸಮಿತಿ: ರಾಜಾಜಿನಗರನಗರದ ಶಂಕರ ಸೇವಾ ಸಮಿತಿ ವತಿಯಿಂದ ಲೋಕಕಲ್ಯಾಣಕ್ಕಾಗಿ ರಾಮ ತಾರಕ ಹೋಮ ಆಯೋಜಿಸಲಾಗಿತ್ತು. ಸಮಿತಿ ಅಧ್ಯಕ್ಷ ಲಕ್ಷ್ಮಿಕಾಂತ್, ಕಾರ್ಯದರ್ಶಿ ರಾಮ್ರಸಾದ್, ವೇದ ಬ್ರಹ್ಮ ಅಮರನಾರಾಯಣ ಶರ್ಮ ರಾಮ ತಾರಕ ಹೋಮಕ್ಕೆ ಶುಭಾರಂಭ ನೀಡಿದರು. ಶ್ರೀರಾಮನ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಶಾಸಕ ಎಸ್. ಸುರೇಶ್ ಕುಮಾರ್ ನೇತೃತ್ವದಲ್ಲಿ ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಕಾಮಾಕ್ಷಿಪಾಳ್ಯ, ಶ್ರೀರಾಮಮಂದಿರ, ದಯಾನಂದನಗರ ಮತ್ತು ಶಿವನಗರ, ಬಸವೇಶ್ವರನಗರ, ರಾಜಾಜಿನಗರ ವಾರ್ಡ್‌ಗಳಲ್ಲಿ ಶ್ರೀರಾಮನ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಿ, ಸಿಹಿ ವಿತರಿಸಲಾಯಿತು. ನಗರದ ಹಲವೆಡೆ ಅಯೋಧ್ಯೆಯ ಶ್ರೀರಾಮಮಂದಿರ ಲೋಕಾರ್ಪಣೆ ಕಾರ್ಯಕ್ರಮದ ನೇರಪ್ರಸಾರದ ವ್ಯವಸ್ಥೆ ಮಾಡಲಾಗಿತ್ತು.

ನೇರ ಪ್ರಸಾರ: ಬಿಜೆಪಿ ಬೆಂಗಳೂರು ಮಹಾನಗರ ಘಟಕದಿಂದ ಬಾಣಸವಾಡಿಯ ಆಂಜನೇಯ ದೇವಸ್ಥಾನದಲ್ಲಿ ವಿಶೇಷ ಪೂಜೆ ಮತ್ತು ನಂತರ ಅಯೋಧ್ಯೆಯಲ್ಲಿ ನಡೆದ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದ ನೇರ ಪ್ರಸಾರದ ವ್ಯವಸ್ಥೆ ಮಾಡಲಾಗಿತ್ತು.

ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ರಾಜ್ಯ ಪ್ರಧಾನ ಕಾರ್ಯದರ್ಶಿ ನಂದೀಶ್ ರೆಡ್ಡಿ, ರಾಜ್ಯಸಭಾ ಸದಸ್ಯ ಲೆಹರ್ ಸಿಂಗ್, ವಿಧಾನಪರಿಷತ್ ಸದಸ್ಯೆ ಭಾರತಿ ಶೆಟ್ಟಿ, ಕಾರ್ಯಕರ್ತರು ಭಾಗವಹಿಸಿದ್ದರು.

ಆಹಾರ ವಿತರಣೆ: ಭರವಸೆ ತಂಡವು 'ಬಡವರಿಗೆ ಭರವಸೆಯ ಬುತ್ತಿ' ಕಾರ್ಯಕ್ರಮದ ಅಡಿಯಲ್ಲಿ ಉಚಿತವಾಗಿ ಆಹಾರ ಹಂಚಿತು. 'ಜೈ ಶ್ರೀರಾಮ' ಎಂಬ ಹೆಸರಿನ ಊಟದ ಪೊಟ್ಟಣಗಳನ್ನು ರಸ್ತೆ ಬದಿಯಲ್ಲಿರುವ ನಿರ್ಗತಿಕರಿಗೆ, ಲಿಂಗತ್ವ ಅಲ್ಪಸಂಖ್ಯಾತರಿಗೆ, ಚರ್ಮ ರೋಗ ಪೀಡಿತರಿಗೆ ನೀಡಲಾಯಿತು.

ಜೌಗುಪಾಳ್ಯ ನಾಗರಿಕರ ಸೇವಾ ಸಮಿತಿ ವತಿಯಿಂದ ರಾಮ, ಸೀತಾ ಮತ್ತು ಲಕ್ಷ್ಮಣರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಮಾಜಿ ಮೇಯರ್ ಗೌತಮ್ ಪಾಲ್ಗೊಂಡಿದ್ದರು.

ಬಸವನಗುಡಿಯ ಕಾರಂಜಿ ಶ್ರೀ ರಾಮ ಸ್ವಾಮಿ ದೇವಸ್ಥಾನದಲ್ಲಿ ಹೋಮ, ಹವನ ವಿಶೇಷ ಪೂಜಾ ವಿಧಿ ವಿಧಾನವನ್ನು ನೆರವೇರಿಸಲಾ ಯಿತು. ವಿಧಾನ ಪರಿಷತ್ ಸದಸ್ಯ ಟಿ. ಎ. ಶರವಣ ವಿಶೇಷ ಪೂಜೆ ಸಲ್ಲಿಸಿದರು.

ಲಗ್ಗೆರೆ ಲಿಟಲ್ ಕಿಡ್ಸ್ ಶಾಲೆ ಸೇರಿದಂತೆ ಹಲವು ಶಾಲೆಗಳಲ್ಲಿ ಮಕ್ಕಳು ರಾಮಜಪ ಮಾಡಿದರು. ದಿ ಬೆಂಗಳೂರು ಸಿಟಿ ಇನ್‌ಸ್ಟಿಟ್ಯೂಟ್ ವತಿಯಿಂದ ಸಂಸ್ಥೆಯ ಆವರಣದಲ್ಲಿ ದೀಪ ಬೆಳಗುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.



ಅಯೋಧ್ಯೆಯಲ್ಲಿ ನಡೆದ ಬಾಲ ರಾಮನ ಪ್ರತಿಷ್ಠಾಪನೆಯ ನೇರ ಪ್ರಸಾರವನ್ನು ಬೆಂಗಳೂರಿನ ಶಂಕರ ಮಠದಲ್ಲಿ ದೊಡ್ಡ ಪರದೆಯ ಮೇಲೆ ಸಾರ್ವಜನಿಕರು ವೀಕ್ಷಿಸಿದರು.

ಕಾರ್ಯಕ್ರಮ ಸ್ಥಳಗಳಲ್ಲಿ ಪೊಲೀಸ್ ಬಂದೋಬಸ್ತ್

ಬೆಂಗಳೂರು: ಅಯೋಧ್ಯೆಯ ರಾಮಮಂದಿರದಲ್ಲಿ ನಡೆದ ಬಾಲರಾಮನ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮದ ಅಂಗವಾಗಿ ನಗರದ ಹಲವು ದೇವಸ್ಥಾನಗಳಲ್ಲೂ ವಿಶೇಷ ಪೂಜೆ, ಪ್ರಾರ್ಥನೆ ನಡೆಯಿತು. ಸಂಘಟನೆಗಳು ವಿವಿಧ ಸ್ಥಳಗಳಲ್ಲಿ ಆಯೋಧ್ಯೆ ಕಾರ್ಯಕ್ರಮದ ನೇರ ಪ್ರಸಾರದ ವ್ಯವಸ್ಥೆ ಮಾಡಿದ್ದವು. ಆ ಸ್ಥಳಗಳಲ್ಲಿ ಹೆಚ್ಚಿನ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು.

ನಗರದ ಸೂಕ್ಷ್ಮ ಪ್ರದೇಶಗಳಲ್ಲಿ ಪೊಲೀಸರು ಗಸ್ತು ತಿರುಗಿದರು. ಕೆಎಸ್‌ಆರ್‌ಪಿ ತುಕಡಿ ಸಹ ನಿಯೋಜನೆ ಮಾಡಲಾಗಿತ್ತು. ಮೆಜೆಸ್ಟಿಕ್, ರೈಲು ನಿಲ್ದಾಣ, ಮೆಟ್ರೊ ನಿಲ್ದಾಣಗಳ ಬಳಿ ಹೆಚ್ಚಿನ ಪೊಲೀಸರು ಕಾಣಿಸಿಕೊಂಡರು. ಹೊಯ್ಸಳ, ಚಿತಾ ವಾಹನಗಳ ಗಸ್ತು ನಡೆಯಿತು.

'ಸಾಮಾಜಿಕ ಜಾಲತಾಣಗಳಾದ 'ಎಕ್ಸ್', ಫೇಸ್‌ಬುಕ್, ಇನ್‌ಸ್ಟಾಗ್ರಾಂಗಳ ಮೇಲೆ ಪೊಲೀಸ್ ಇಲಾಖೆ ಸೋಷಿಯಲ್ ಮೀಡಿಯಾ ಘಟಕ ನಿಗಾ ವಹಿಸಿತ್ತು. ನಗರದ ಯಾವುದೇ ಭಾಗದಲ್ಲೂ ಸಮಸ್ಯೆಯಾಗಿಲ್ಲ. ಎಲ್ಲ ಕಾರ್ಯಕ್ರಮಗಳು ಸುಗಮವಾಗಿ ನಡೆದವು.

ಕೆಲವರು ಬೈಕ್ ರ್‍ಯಾಲಿ, ಮೆರವಣಿಗೆಗೆ ಅವಕಾಶ ಕೋರಿದ್ದರು. ಆದರೆ, ಹೈಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಯಾವುದೇ ಸಂಘಟನೆಗಳಿಗೂ ಅವಕಾಶ ನೀಡಲಿಲ್ಲ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಕೈ' ಕಾರ್ಯಕರ್ತರಿಂದ ವಿಶೇಷ ಪೂಜೆ

ಅರಮನೆ ರಸ್ತೆಯಲ್ಲಿರುವ ಮಾರುತಿ ಭಗವಾನ್ ದೇವಾಲಯದಲ್ಲಿ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತ ರಿಂದ ವಿಶೇಷ ಪೂಜೆ ನಡೆಯಿತು. ಬಳಿಕ ಸಾರ್ವಜನಿಕರಿಗೆ ಸಿಹಿ ವಿತರಿಸಲಾಯಿತು.

'ಸಿದ್ದರಾಮಯ್ಯ ಸರ್ಕಾರಕ್ಕೆ ಶಾಶ್ವತ ರಜೆ'

'ಸಿದ್ದರಾಮಯ್ಯ ಅವರ ಸರ್ಕಾರ ಬಾಲರಾಮ ಪ್ರತಿಷ್ಠಾಪನೆ ದಿನದಂದು ಅರ್ಧ ದಿನ ರಜೆ ಕೊಟ್ಟಿಲ್ಲ. ಮುಂದಿನ ದಿನಗಳಲ್ಲಿ ಜನರು ಇವರಿಗೆ ಶಾಶ್ವತವಾಗಿ ರಜೆ ಕೊಡುತ್ತಾರೆ' ಎಂದು ಸಂಸದ ತೇಜಸ್ವಿ ಸೂರ್ಯ ಹೇಳಿದರು.

ಬಿಜೆಪಿ ಮುಖಂಡ ಅರುಣ್ ಸೋಮಣ್ಣ ನೇತೃತ್ವದಲ್ಲಿ ಮಾರುತಿ ದೇವಸ್ಥಾನದಲ್ಲಿ ಆಯೋಜಿಸಿದ್ದ 'ಅಯೋಧ್ಯೆ ಶ್ರೀರಾಮ ಮಂದಿರ ಲೋಕಾರ್ಪಣೆ ನೇರ ಪ್ರಸಾರ', ಹತ್ತು ಸಾವಿರ ದೀಪ ಬೆಳಗುವ ಕಾರ್ಯಕ್ರಮ ಹಾಗೂ ಭಕ್ತರಿಗೆ ಲಡ್ಡು ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ನಗರದ ಅರಮನೆ ರಸ್ತೆಯಲ್ಲಿರುವ ಮಾರುತಿ ಭಗವಾನ್ ದೇವಾಲಯದಲ್ಲಿ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಂದ ವಿಶೇಷ ಪೂಜೆ ನಡೆಯಿತು



ನಗರದ ಸಂಪಿಗೆ ರಸ್ತೆಯಲ್ಲಿ ಹಣತೆಗಳನ್ನು ಬೆಳಗಲಾಯಿತು –ಪ್ರಜಾವಾಣಿ ಚಿತ್ರ



ಜಯನಗರದ ವಿನಾಯಕ ದೇವಸ್ಥಾನದಲ್ಲಿ ರಾಮ, ಆಂಜನೇಯ ಸಹಿತ ವಿವಿಧ ವೇಷಧಾರಿಗಳು ಜನರನ್ನು ಆಕರ್ಷಿಸಿದರು



ದಿ ಬೆಂಗಳೂರು ಸಿಟಿ ಇನ್‌ಸ್ಟಿಟ್ಯೂಟ್ ವತಿಯಿಂದ ಸಂಸ್ಥೆಯ ಆವರಣದಲ್ಲಿ ದೀಪ ಬೆಳಗುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು



ನಗರದ ಎಸ್‌ಬಿಎಂ ವೃತ್ತದಲ್ಲಿರುವ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ರಾಮ, ಲಕ್ಷ್ಮಣ, ಸೀತೆ ಹಾಗೂ ವಾನರ ಸೈನ್ಯದ ವೇಷಧಾರಿಗಳು ಸೋಮವಾರ ಭಕ್ತಿ ಗೀತೆಗಳಿಗೆ ನೃತ್ಯ ಮಾಡಿದರು



ಅಯೋಧ್ಯೆಯಲ್ಲಿ ರಾಮಲಲ್ಲಾ ಮೂರ್ತಿಯ ಪ್ರಾಣಪ್ರತಿಷ್ಠಾಪನಾ ದಿನವಾದ ಸೋಮವಾರದಂದು ವಿಜಯನಗರದ ಪತ್ರಿಕಾ ವಿತರಕರ ಬಳಗದಿಂದ ರಾಮೋತ್ಸವವನ್ನು ಆಚರಿಸಲಾಯಿತು.



ಪೀಣ್ಯ ದಾಸರಹಳ್ಳಿ ಸಮೀಪದ ಹೆಸರಘಟ್ಟ ಮುಖ್ಯ ರಸ್ತೆಯಲ್ಲಿರುವ ಪಾಟಿದಾರ್ ಸಮಾಜದಲ್ಲಿ ಆರ್‌.ಎಸ್‌.ಎಸ್ ಮುಖಂಡರು ಮತ್ತು ಉತ್ತರ ಭಾರತದ ನಿವಾಸಿಗಳು ಸಂಭ್ರಮದ ರಾಮೋತ್ಸವ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ರಾಮ ಸೀತೆ, ಲಕ್ಷ್ಮಣ, ಆಂಜನೇಯ ವೇಷಭೂಷಣಗಳನ್ನು ತೊಟ್ಟು ಎಲ್ಲರ ಗಮನ ಸೆಳೆದರು. ಹೋಮ, ಭಜನೆ, ಭಕ್ತಿ ಗೀತೆಗಳು ಮೂಲಕ ಶ್ರೀರಾಮಚಂದ್ರ ದೇವರಿಗೆ ಪೂಜೆ ಸಲ್ಲಿಸಿದರು. ಕ್ಷೇತ್ರದ ಬಿಜೆಪಿ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಭರತ್ ಸೌಂದರ್ಯ ಅವರು ಭಾಗವಹಿಸಿ ಪೂಜೆ ಸಲ್ಲಿಸಿದರು.

ಆಂಜನೇಯಸ್ವಾಮಿಗೆ ವಿಶೇಷ ಪೂಜೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಸಮೀಪದ ಶೆಟ್ಟಿಹಳ್ಳಿಯಲ್ಲಿ ಶ್ರೀಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಶೆಟ್ಟಿಹಳ್ಳಿ ಬಿ. ಸುರೇಶ್ ನೇತೃತ್ವದಲ್ಲಿ ರಾಮೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಬೆಳಿಗ್ಗೆಯಿಂದ ಶ್ರೀರಾಮ, ಆಂಜನೇಯ ದೇವರಿಗೆ ಹೋಮ, ಪೂಜೆ, ಭಜನೆ ನಡೆಯಿತು. ನಂತರ ಪ್ರಸಾದ ವಿನಿಯೋಗ ಮಾಡಲಾಯಿತು.

ಅಯೋಧ್ಯೆಯಲ್ಲಿ ನಡೆದ ಶ್ರೀರಾಮಮಂದಿರ ಉದ್ಘಾಟನೆ ಮತ್ತು ಬಾಲರಾಮ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮದ ನೇರ ಪ್ರಸಾರ ವೀಕ್ಷಣೆಗೆ ವ್ಯವಸ್ಥೆ ಮಾಡಲಾಗಿತ್ತು. ಭಕ್ತರು ಕಾರ್ಯಕ್ರಮವನ್ನು ವೀಕ್ಷಿಸಿದರು.

ಶಾಸಕ ಎಸ್. ಮುನಿರಾಜು ಮತ್ತು ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಜಿ.ಮರಿಸ್ವಾಮಿ ಅವರು ಭಾಗವಹಿಸಿ ಪೂಜೆ ಸಲ್ಲಿಸಿದರು. ನಂತರ ಶ್ರೀರಾಮಚಂದ್ರ ದೇವರ ಭಾವಚಿತ್ರದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಕಾರ್ಯಕ್ರಮಕ್ಕೆ ಬಂದ ಭಕ್ತರಿಗೆ ಸುರೇಶ್ ಅವರು, ಶ್ರೀರಾಮಚಂದ್ರ ದೇವರ ಫೋಟೊ ವಿತರಿಸಿದರು.

ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತ ಚೇತನ್, ದಾಸರಹಳ್ಳಿ ಮಂಡಲ ಅಧ್ಯಕ್ಷ ಸೋಮಶೇಖರ್, ಬಿಜೆಪಿ ಮುಖಂಡರಾದ ಕೃಷ್ಣಕುಮಾರ್, ಚೇತನ್, ಕಿರಣ್ ಹಾಗೂ ನೂರಾರು ಭಕ್ತರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಶಾಸಕ ಎಸ್. ಮುನಿರಾಜು ಮತ್ತು ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಜಿ. ಮರಿಸ್ವಾಮಿ ಅವರು ಶ್ರೀರಾಮಚಂದ್ರ ದೇವರ ಭಾವಚಿತ್ರವಿರುವ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿದರು.

ಎರಡೂವರೆ ಸಾವಿರ ಕುಟುಂಬಗಳಿಗೆ ಫಲತಾಂಬೂಲ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣಪ್ರತಿಷ್ಠಾಪನೆಯ ಅಂಗವಾಗಿ ಕಗ್ಗಲೀಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ಕೆ.ಎಸ್.ಪರ್ವೀಜ್ ಅವರು ಎರಡೂವರೆ ಸಾವಿರ ಕುಟುಂಬಗಳಿಗೆ ಅರಿಶಿಣ, ಕುಂಕುಮ, ಎಲೆ ಅಡಿಕೆ, ಫಲ ತಾಂಬೂಲ ನೀಡಿದರು. ಜೊತೆಗೆ ತಿರುಪತಿಯ ಲಡ್ಡು ವಿತರಿಸಿದರು.

ಕಾರ್ಯಕ್ರಮದ ಅಂಗವಾಗಿ, ಕೆ.ಎಸ್.ಪರ್ವೀಜ್ ಅವರ ಕಚೇರಿಯ ಮುಂಭಾಗ ಶ್ರೀರಾಮ, ಆರ್ಟ್ ಆಫ್ ಲಿವಿಂಗ್‌ನ ಶ್ರೀರವಿಶಂಕರ್ ಗುರೂಜಿ, ಸಿದ್ದಗಂಗಾ ಮಠದ ಶಿವಕುಮಾರ ಸ್ವಾಮಿಜಿ ಅವರ ಕಟ್‌ಔಟ್ ಅಳವಡಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಶಾಸಕ ಎಸ್. ಟಿ.ಸೋಮಶೇಖರ್, 'ಭಾರತೀಯರಾದ ನಾವೆಲ್ಲರೂ ಸಹೋದರರು, ಎಲ್ಲ ವರ್ಗ, ಧರ್ಮಿಯರು ಒಗ್ಗೂಡಿ ಜೀವನ ಸಾಗಿಸುತ್ತೇವೆ ಎಂಬುದಕ್ಕೆ ಈ ಕಾರ್ಯಕ್ರಮ ಸಾಕ್ಷಿ' ಎಂದರು.

ಸೋಂಪುರ: ವಿಶೇಷ ಪೂಜೆ

ದಾಬಸ್ ಪೇಟೆ: ಸೋಂಪುರ ಹೋಬಳಿಯ ದೇವಾಲಯಗಳು ಸೋಮವಾರ ಬಾಳೆಕಂದು, ತಳಿರು ತೋರಣ ಹಾಗೂ ವಿದ್ಯುತ್ ದೀಪಗಳಿಂದ ಅಲಂಕೃತಗೊಂಡಿದ್ದವು. ಪೂಜಾ ಕಾರ್ಯಗಳು ನಡೆದವು.

ಅಹಲ್ಯ ವಿಮೋಚನಾ ಬೆಟ್ಟ ಎಂದೇ ಹೆಸರಾದ, ಶ್ರೀರಾಮನ ಪಾದುಕೆ ಇರುವ ರಾಮೇನಹಳ್ಳಿಯ ರಾಮದೇವರ ಬೆಟ್ಟ ಹಾಗೂ ರಾಮ ವನವಾಸಕ್ಕೆ ಬಂದಾಗ ತನ್ನ ಕುದುರೆಯನ್ನು ಕಟ್ಟಿದನೆಂಬ ಪ್ರತೀತಿ ಇರುವ ಹೆಗ್ಗುಂದ ಬೆಟ್ಟದ ರಾಮ ಪಾದುಕೆ ದೇವಾಲಯಗಳು, ನರಸೀಪುರ ತೋಪಿನ ಆತ್ಮರಾಮ ದೇವಾಲಯದಲ್ಲಿ ವಿಶೇಷ ಪೂಜೆ ನಡೆದವು. ಆಗಲಕುಪ್ಪೆಯ ಕುಮಟರಾಮ ದೇವಾಲಯಗಳಲ್ಲಿ ಶ್ರೀರಾಮ ದೇವರಿಗೆ ಫಲಪಂಚಾಮೃತ ಅಭಿಷೇಕ, ಶ್ರೀರಾಮ ತಾರಕ ಹೋಮ ಮತ್ತು ಭಜನಾ ಕಾರ್ಯಕ್ರಮ ಹಾಗೂ ಪೂಜಾ ಕಾರ್ಯಗಳು ನಡೆದವು. ನೂರಾರು ಭಕ್ತರು ಪಾಲ್ಗೊಂಡಿದ್ದರು.

ಶಿವಗಂಗೆಯ ಗಂಗಾಧರೇಶ್ವರ–ಹೊನ್ನಾದೇವಿ ದೇವಾಲಯ, ದೇವರ ಹೊಸಹಳ್ಳಿಯ ಭದ್ರಕಾಳಿ ಸಮೇತ ವೀರಭದ್ರಸ್ವಾಮಿ ದೇವಾಲಯ, ಹಳೆನಿಜಗಲ್ಲು ವೀರಭದ್ರೇಶ್ವರ ದೇವಾಲಯ ಹಾಗೂ ಚನ್ನೋಹಳ್ಳಿ, ಇಮಚೇನಹಳ್ಳಿ, ಹಾಲೇನಹಳ್ಳಿ, ಕೆರೆಪಾಳ್ಯ, ಕುರುವೆಲ್ ತಿಮ್ಮನಹಳ್ಳಿ ಆಂಜನೇಯ ದೇವಾಲಯಗಳಲ್ಲಿಯೂ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿತ್ತು.

ನರಸೀಪುರದ ಆತ್ಮಾರಾಮ ದೇವಾಲಯ, ಸೋಂಪುರದ ಸೋಮೇಶ್ವರ ದೇವಾಲಯಗಳಲ್ಲಿ ಶ್ರೀರಾಮ ಪ್ರತಿಷ್ಠಾಪನಾ ಕಾರ್ಯದ ನೇರಪ್ರಸಾರದ ವೀಕ್ಷಣೆಯ ವ್ಯವಸ್ಥೆಯನ್ನು ಮಾಡಲಾಗಿತ್ತು.

'ದಲಿತ ವಿರೋಧಿ, ಇಲ್ಲಿಗೇಕೆ ಬಂದಿದ್ದೀರಿ?'

ಪ್ರಜಾವಾಣಿ ವಾರ್ತೆ

ಜಯಪುರ (ಮೈಸೂರು ಜಿಲ್ಲೆ): ಅಯೋಧ್ಯೆಯ ಬಾಲರಾಮನ ವಿಗ್ರಹದ ಕೃಷ್ಣಶಿಲೆ ಸಿಕ್ಕ ಸ್ಥಳವಾದ ತಾಲ್ಲೂಕಿನ ಹಾರೋಹಳ್ಳಿಯಲ್ಲಿ ಸೋಮವಾರ ನಿಗದಿಯಾಗಿದ್ದ ಪೂಜೆಯಲ್ಲಿ ಪಾಲ್ಗೊಳ್ಳಲು ಬಂದ ಸಂಸದ ಪ್ರತಾಪ ಸಿಂಹ ಅವರಿಗೆ ದಲಿತ ಮುಖಂಡರು ಘೇರಾವ್ ಹಾಕಿದರು.

ಶಿಲೆ ಸಿಕ್ಕಿರುವ ದಲಿತ ಸಮುದಾಯದ ರಾಮದಾಸ್ ಎಂಬವರ ಜಮೀನಿನಲ್ಲಿ ರಾಮ ಮಂದಿರ ಸ್ಥಾಪನೆಗೆ ಬೆಳಿಗ್ಗೆ 7ರ ವೇಳೆ ಪೂಜೆ ನಡೆದಿತ್ತು. ಆ ವೇಳೆ ಸಂಸದರು ಬಂದಾಗ, ಜೆಡಿಎಸ್ ಮುಖಂಡ ಧನಗಳ್ಳಿ ಸ್ವಾಮಿ, ಚಲುವ ರಾಜು, ಕಾಂಗ್ರೆಸ್ ಮುಖಂಡ ಸುರೇಶ್ ಕುಮಾರ್ ಸೇರಿದಂತೆ ಹಲವರು, 'ದಲಿತ ವಿರೋಧಿ ಹೇಳಿಕೆ ಗಳನ್ನು ನೀಡುವ ನೀವೇಕೆ ಇಲ್ಲಿಗೆ ಬಂದಿದ್ದೀರಿ. ದಲಿತರ ಜಮೀನಿನಲ್ಲಿ ನಡೆಯುವ ಪೂಜೆಗೆ ಬರಬೇಡಿ. ಮಹಿಷ ದಸರೆ ಆಯೋಜನೆ ಸಂದರ್ಭದಲ್ಲಿ ದಲಿತರನ್ನು ನಿಂದಿಸಿದ್ದೀರಿ. ಸಮಾಜದ ಸಾಮರಸ್ಯ ಹಾಳುಮಾಡುವ ನೀವು ದಲಿತರ ಜಮೀನಿನಲ್ಲಿ ಆಯೋಜಿಸಿರುವ ರಾಮನ ಪೂಜೆಯಲ್ಲಿ ಭಾಗವಹಿಸಬೇಡಿ' ಎಂದರು.

ಶಾಸಕರಾದ ಜಿ.ಟಿ ದೇವೇಗೌಡ, ಟಿ.ಎಸ್.ಶ್ರೀವತ್ಸ, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮುಖಂಡ ಸಾ.ರಾ.ಮಹೇಶ್ ಅವರು ಮುಖಂಡರ ಮನವೊಲಿಸಲು ಮುಂದಾದರು. ಆದರೆ, ಜನರು ಪೂಜಾ ಕಾರ್ಯಕ್ರಮಕ್ಕೆ ಬರದಂತೆ ಅಡ್ಡಗಟ್ಟಿದರು. ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಮರು ಮಾತನಾಡದೆ ಸಂಸದರು ಕಾರಿನಲ್ಲಿ ತೆರಳಿದರು.



ಸಂಸದ ಪ್ರತಾಪ ಸಿಂಹ ಅವರಿಗೆ ದಲಿತ ಮುಖಂಡರು ಘೇರಾವ್ ಹಾಕಿದರು. ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ ಘಟನೆಗೆ ಸಾಕ್ಷಿಯಾದರು

'ಕಾಂಗ್ರೆಸ್ ಪುಢಾರಿಗಳ ತರಲೆ ಕೆಲಸ'

'ರಾಜಕೀಯಕ್ಕಾಗಿ ಹಾರೋಹಳ್ಳಿಯ ಕಾಂಗ್ರೆಸ್ ಪುಢಾರಿಗಳು ಹಾಗೂ ಮಹಿಷ ಭಕ್ತರು ನನ್ನ ವಿರುದ್ಧ ಘೋಷಣೆ ಕೂಗಿದ್ದಾರೆ. ನನ್ನನ್ನು ಸೋಲಿಸಲು ಸಾಧ್ಯವಿಲ್ಲದ್ದರಿಂದ ತರಲೆ ಕೆಲಸ ಮಾಡಿದ್ದಾರೆ. ಅದಕ್ಕೆ ಸೊಪ್ಪು ಹಾಕುವುದಿಲ್ಲ' ಎಂದು ಪ್ರತಾಪ ಸಿಂಹ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ವಿಜೃಂಭಣೆಯ ದೀಪೋತ್ಸವ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ರಾಮಮೂರ್ತಿ ನಗರ ಸಮೀಪದ ಯರ್‍ರಯ್ಯನಪಾಳ್ಯ ಪಾಳ್ಯದ ಕೋದಂಡರಾಮ ಸ್ವಾಮಿಯ ದೀಪೋತ್ಸವ ವಿಜೃಂಭಣೆಯಿಂದ ನಡೆಯಿತು.

ಸಂಜೆ 6.30ಕ್ಕೆ ಯರ್‍ರಯ್ಯನಪಾಳ್ಯ ದೇವಾಲಯದಿಂದ ಪ್ರಾರಂಭ ವಾದ ಕೋದಂಡರಾಮಸ್ವಾಮಿ ಹಾಗೂ ದೀಪೋತ್ಸವ ಮೆರವಣಿಗೆ ರಾಮಮೂರ್ತಿ ನಗರ ಮುಖ್ಯರಸ್ತೆಯಲ್ಲಿ ಅದ್ಧೂರಿಯಾಗಿ ನಡೆಯಿತು.

ಸಾವಿರಾರು ಮಹಿಳೆ ಯರು ಬೆಲ್ಲದ ಆರತಿಯೊಂದಿಗೆ ದೀಪೋತ್ಸವ ಮೆರವಣಿಗೆಯಲ್ಲಿ ಪಾಲ್ಗೊಂಡರು. ದೇವಾಲಯದಲ್ಲಿ ದೇವರಿಗೆ ವಿಶೇಷ ಪೂಜೆ ನೆರವೇರಿಸಲಾಯಿತು. ಶಾಸಕ ಬೈರತಿ ಬಸವರಾಜ್, ಮುಖಂಡರಾದ ಬಾಕ್ಸರ್ ನಾಗರಾಜ್, ಪಿ.ಡಿ. ಚಂದ್ರಶೇಖರ್, ಜಗದೀಶ್, ಹಿಟಾಚಿ ಮಂಜುನಾಥ್ ಭಾಗವಹಿಸಿದ್ದರು.



ಯರ್‍ರಯ್ಯನಪಾಳ್ಯದ ಕೋದಂಡರಾಮ ಸ್ವಾಮಿಯ ದೀಪೋತ್ಸವ ಮೆರವಣಿಗೆಯಲ್ಲಿ ಮಹಿಳೆಯರು ಬೆಲ್ಲದ ಆರತಿಯೊಂದಿಗೆ ಪಾಲ್ಗೊಂಡರು

ಅಯೋಧ್ಯೆಗೆ ನೇರ ರೈಲು ಸಂಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಯೋಧ್ಯೆಯ ಶ್ರೀರಾಮ ದರ್ಶನಕ್ಕೆ ಹೋಗಿ ಬರುವ ಭಕ್ತರ ಅನುಕೂಲಕ್ಕಾಗಿ ಜನವರಿ 31ರಿಂದ ಐದು ವಿಶೇಷ ರೈಲುಗಳು ಸಂಚರಿಸಲಿವೆ.

ನೈರುತ್ಯ ರೈಲ್ವೆಯು ಬೆಂಗಳೂರು, ಮೈಸೂರು, ತುಮಕೂರು, ಚಿತ್ರದುರ್ಗ, ಬೆಳಗಾವಿಯಿಂದ ಒಂದು ತಿಂಗಳು ವಿಶೇಷ ರೈಲು ಓಡಿಸಲು ನಿರ್ಧರಿಸಿದೆ.

ಬೆಂಗಳೂರಿನ ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್‌ನಿಂದ ಅಯೋಧ್ಯೆ ವಿಶೇಷ ರೈಲುಗಳು ಜನವರಿ 31, ಫೆಬ್ರುವರಿ 14 ಮತ್ತು 28 ರಂದು ಸಂಚರಿಸಲಿವೆ. ಅರಸೀಕೆರೆ, ಗದಗ, ವಿಜಯಪುರ ಮಾರ್ಗವಾಗಿ ಸಂಚರಿಸಿ ಅಯೋಧ್ಯೆ ಧಾಮ ಕಡೆಗೆ ತೆರಳಲಿದೆ. ಅಯೋಧ್ಯೆ ಧಾಮದಿಂದ ವಿಶ್ವೇಶ್ವರಯ್ಯ ಟರ್ಮಿನಲ್‌ಗೆ ಫೆಬ್ರುವರಿ 3, 17 ಮತ್ತು ಮಾರ್ಚ್ 2ರಂದು ರೈಲು ವಾಪಸ್ ಹೊರಡಲಿದೆ. ಮೈಸೂರು-ಅಯೋಧ್ಯೆ ವಿಶೇಷ ರೈಲು ಫೆಬ್ರುವರಿ 4, 18ರಂದು ಮೈಸೂರಿನಿಂದ ಹೊರಡಲಿದೆ. ಬೆಂಗಳೂರು, ಅರಸೀಕೆರೆ, ಹೊಸಪೇಟೆ ಮಾರ್ಗವಾಗಿ ಅಯೋಧ್ಯೆ ಧಾಮ ಕಡೆಗೆ ಸಾಗಲಿದೆ. ಅಯೋಧ್ಯೆ ಧಾಮದಿಂದ ಫೆ.7 ಮತ್ತು 21ರಂದು ವಾಪಸ್ ಮೈಸೂರಿಗೆ ಹೊರಡಲಿದೆ. ಮೈಸೂರು ಅಯೋಧ್ಯೆ ನಡುವಿನ ಇನ್ನೊಂದು ವಿಶೇಷ ರೈಲು ಫೆ.17ರಂದು ಮೈಸೂರಿನಿಂದ ಹೊರಡಲಿದೆ. ಫೆ.20 ರಂದು ಅಯೋಧ್ಯೆ ಧಾಮದಿಂದ ವಾಪಸ್ಸಾಗಲಿದೆ.

ಸಂಸ್ಕೃತಿ ಸಚಿವಾಲಯ
ಭಾರತ ಸರ್ಕಾರ

ಪರಾಕ್ರಮ ದಿವಸ
ಜನವರಿ 23

ದೇಶಭಕ್ತಿಯ ಮಹಾಕಾವ್ಯ ಎಂದೆನಿಸುವ ನೇತಾಜಿ ಸುಭಾಷ್ ಚಂದ್ರ ಬೋಸ್ ರವರ
ಶೌರ್ಯ ಮತ್ತು ಸಾಹಸಗಳಿಗೆ ಅನಂತ ನಮನಗಳು



ಪರಾಕ್ರಮ ದಿವಸ

23 ಜನವರಿ

ನೇತಾಜಿ ಸುಭಾಷ್ ಚಂದ್ರ ಬೋಸ್ ರವರ
127ನೇ ಜನ್ಮ ವಾರ್ಷಿಕೋತ್ಸವದ ಸಂದರ್ಭದಲ್ಲಿ

ಪ್ರಧಾನಮಂತ್ರಿ ನರೇಂದ್ರ ಮೋದಿ

ಇವರಿಂದ 9 ದಿನಗಳ ಪರಾಕ್ರಮ ಉತ್ಸವ ಉದ್ಘಾಟನೆ

ದಿನಾಂಕ

23 ಜನವರಿ 2024 | ಸಂಜೆ 4 ಗಂಟೆ | ಕೆಂಪುಕೋಟೆ, ದೆಹಲಿ

ಕಾರ್ಯಕ್ರಮದ ನೇರಪ್ರಸಾರವನ್ನು ದೂರದರ್ಶನದಲ್ಲಿ ವೀಕ್ಷಿಸಿ



"ಸುಭಾಷ್ ಚಂದ್ರ ಬೋಸ್ ಅದೆಂತಹ ಮಹಾನ್ ವ್ಯಕ್ತಿಯಾಗಿದ್ದರು ಎಂದರೆ, ಇವರು ಪದವಿ ಮತ್ತು ಸಂಪನ್ಮೂಲಗಳಿಗೂ ಮಿಗಿಲಾಗಿದ್ದರು. ಇವರ ಸ್ವೀಕಾರ ಮನೋಭಾವವನ್ನು ಕಂಡು ಇಡಿ ಪ್ರಪಂಚವೇ ಇವರನ್ನು ನೇತಾಜಿ ಎಂದು ಪರಿಗಣಿಸಿತು. ನೇತಾಜಿಯವರ ಆ ಶಕ್ತಿಯೇ ಇಂದು ನಮ್ಮ ದೇಶವನ್ನು ಮುನ್ನಡೆಸಲಿ ಎಂಬುದು ನಮ್ಮ ಆಶಯ."

ಪ್ರಧಾನಮಂತ್ರಿ ನರೇಂದ್ರ ಮೋದಿ

ಜನವರಿ 23–31 ವರೆಗಿನ ಪರಾಕ್ರಮ ಉತ್ಸವದ ಪ್ರಮುಖ ಆಕರ್ಷಣೆಗಳು

ಪ್ರತಿದಿನ ಬೆ:10 ಸಂ:6ರವರೆಗೆ

- **ಪುಸ್ತಕಗಳು, ಚಿತ್ರಪಟಗಳು ಮತ್ತು ಸಂಗ್ರಾಹ್ಯಗಳ ಪ್ರದರ್ಶನ**
  ನೇತಾಜಿಯವರ ಬದುಕು ಮತ್ತು ಹೋರಾಟಕ್ಕೆ ಸಂಬಂಧಿತ ಪುಸ್ತಕಗಳು, ಅಪರೂಪದ ಚಿತ್ರಪಟಗಳು ಹಾಗೂ ದಾಖಲಾತಿಗಳ ಸೊಗಸಾದ ಪ್ರದರ್ಶನ.
- **ಕಲೆ ಮತ್ತು ಶಿಲ್ಪಕಲೆ ಕಾರ್ಯಾಗಾರ**
  ಮಣ್ಣು, ಮರ ಮತ್ತು ಶಿಲೆಗಳ ಕಲಾವಿದರಿಂದ ಸ್ಥಳದಲ್ಲೇ ಧಿಡೀರ್ ಚಿತ್ರಕಲೆ, ಶಿಲ್ಪಕಲೆ ಪ್ರದರ್ಶಿಸುವ ಕಾರ್ಯಾಗಾರ.
- **ಎಆರ್, ವಿಆರ್ ಪ್ರದರ್ಶನ**
  ತಂತ್ರಜ್ಞಾನದ ಮೂಲಕ ನೇತಾಜಿಯವರ ಸಂಪೂರ್ಣ ಜೀವನಯಾತ್ರೆಯ ರೋಮಾಂಚಕ ಅನುಭೂತಿ ನೀಡುವ ಪ್ರದರ್ಶನ.
- **ಪ್ರಾಜೆಕ್ಷನ್ ಮ್ಯಾಪಿಂಗ್ ಶೋ ಮುಖಾಂತರ ಲೈವ್ ಕಾರ್ಯಕ್ರಮ**
  (ಸಂಜೆ 6:00 ರಿಂದ 6:30)
  ಅತ್ಯಾಧುನಿಕ ಧ್ವನಿ ಮತ್ತು ಬೆಳಕಿನ ತಂತ್ರಜ್ಞಾನ ಅಡಿಯಲ್ಲಿ ನೇತಾಜಿಯವರ ಜೀವನದ ಕಥೆಗಳನ್ನು ಹೇಳುತ್ತ, ರಾಷ್ಟ್ರೀಯ ನಾಟಕ ಶಾಲೆಯ (ಎನ್‌ಎಸ್‌ಡಿ) ಕಲಾವಿದರಿಂದ ಕಾರ್ಯಕ್ರಮ ಪ್ರದರ್ಶನ.
- **ವರಿಷ್ಠ ಐಎನ್‌ಎ ಸೇನಾನಿಗಳಿಗೆ ಗೌರವಾರ್ಪಣೆ**
- **ಭಾರತ ಪರ್ವ 2024 – ಡಿಜಿಟಲ್ ಉದ್ಘಾಟಣೆ**

CBC 09102/13/0004/2324

ನಿಮ್ಮೆಲ್ಲರಿಗೂ ಆದರದ ಸ್ವಾಗತ

ಉಚಿತ ಪ್ರವೇಶ

ಕ್ಷೇಮ ಕುಶಲ



ಪರೀಕ್ಷೆ ಮಕ್ಕಳೊಂದಿಗೆ ಪೋಷಕರೂ ಸಿದ್ಧವಾಗಬೇಕು

ರಮ್ಯಾ ಶ್ರೀಹರಿ

ಮಕ್ಕಳು ಬೆಳವಣಿಗೆಯ ವಿವಿಧ ಹಂತಗಳನ್ನು ದಾಟುತ್ತಹೋದಂತೆ ಮಕ್ಕಳು ಮತ್ತು ಪೋಷಕರ ನಡುವಿನ ಬಾಂಧವ್ಯದ ಸ್ವರೂಪವೂ ಅನಾವರಣಗೊಳ್ಳುತ್ತಾ ಹೋಗುತ್ತದೆ. ಮಕ್ಕಳು ಶಾಲೆಗೆ ಹೋಗುವ ಮುನ್ನ ಅಥವಾ ಶೈಕ್ಷಣಿಕ ಪರೀಕ್ಷೆಗಳು ಮಕ್ಕಳಲ್ಲಿ ಒತ್ತಡ ಉಂಟುಮಾಡದ ವಯಸ್ಸಿನಲ್ಲಿ ಪೋಷಕರಿಗೆ ಒದಗುವ ಸವಾಲುಗಳೇ ಬೇರೆ. ಆಗ ಮಕ್ಕಳ ಆಟ, ಆಹಾರ, ನಿದ್ರೆ, ಭದ್ರತಾಭಾವ, ನಡೆ ನುಡಿ, ಮಕ್ಕಳ ಹಠ, ವಿಶಿಷ್ಟ ಸ್ವಭಾವಗಳು, ಅಭ್ಯಾಸಗಳು – ಇವುಗಳ ಕಡೆಗೆ ಪೋಷಕರ ಗಮನ ಹೆಚ್ಚಿರುತ್ತದೆ. ಆಗ ಪೋಷಕರ ಮತ್ತು ಮಕ್ಕಳ ಬಾಂಧವ್ಯದ ಸ್ವರೂಪ ಒಂದು ರೀತಿಯದಾಗಿ ತೋರುತ್ತದೆ. ಆದರೆ ಮಕ್ಕಳು ಬೆಳೆದು ಪ್ರಪಂಚವನ್ನು ನೋಡುತ್ತಾ ಅದರ ಪ್ರಭಾವಗಳಿಗೆ ತೆರೆದುಕೊಳ್ಳುತ್ತಾ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತಾ ಸಾಗುವಾಗ ಪೋಷಕರಿಗೆ ಬೇರೆ ಬಗೆಯ ಸವಾಲುಗಳು ಹುಟ್ಟಿಕೊಳ್ಳುತ್ತದೆ.

ಏಕೆಂದರೆ ಆಗ ಮಕ್ಕಳು ತಮ್ಮತನವನ್ನು ವ್ಯಕ್ತಪಡಿಸಲು, ತಮ್ಮ 'ಐಡೆಂಟಿಟಿ'ಯನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿರುತ್ತಾರೆ. 'ನಾನು ಯಾರು?' 'ನಾನು ಏನಾಗಬಲ್ಲೆ?' 'ಏನು ಮಾಡಬಲ್ಲೆ?' – ಎಂಬ ಅನ್ವೇಷಣೆ ಮಕ್ಕಳಲ್ಲಿ ಸುಮಾರು ಹನ್ನೊಂದರಿಂದ ಹತ್ತೊಂಬತ್ತು ವಯಸ್ಸಿನವರೆಗೂ ತೀಕ್ಷ್ಣವಾಗಿರುತ್ತದೆ. ಹಾಗಾಗಿ ಈ ವಯಸ್ಸಿನಲ್ಲಿ 'ಐಡೆಂಟಿಟಿ'ಯ ಬಗೆಗಿನ ಗೊಂದಲ ಜಾಸ್ತಿಯಿರುತ್ತದೆ ಎನ್ನುತ್ತಾರೆ, ಮನೋವಿಜ್ಞಾನಿ ಎರಿಕ್ ಎರಿಕ್ಸೊನ್; ಮನುಷ್ಯನ ಮನೋ-ಸಾಮಾಜಿಕ ಬೆಳವಣಿಗೆಯ ಹಲವು ಹಂತಗಳನ್ನು ಗುರುತಿಸಿ ಹೇಳುವಾಗ ಇದನ್ನು ಪ್ರಸ್ತಾಪಿಸಿದ್ದಾರೆ.

ಹನ್ನೊಂದರಿಂದ ಹತ್ತೊಂಬತ್ತು ವಯಸ್ಸಿನ ನಡುವೆಯೇ ಮಕ್ಕಳು ತಮ್ಮ ಶೈಕ್ಷಣಿಕ ಜೀವನದ ಪ್ರಮುಖ ಪರೀಕ್ಷೆಗಳನ್ನು ಎದುರಿಸಬೇಕಾಗಿರುವುದರಿಂದ, ಪರೀಕ್ಷೆ, ಅದರ ಫಲಿತಾಂಶ, ಪರೀಕ್ಷೆಯ ಬಗೆಗಿನ ಆಲೋಚನೆ, ಭಾವನೆ ಎಲ್ಲವೂ ಮಕ್ಕಳ ಸ್ವ-ನಂಬಿಕೆಯ ಮೇಲೆ ಆಳವಾದ ಪರಿಣಾಮ ಬೀರುತ್ತದೆ. ಮಕ್ಕಳ ಈ ತಮ್ಮತನದ ಅನ್ವೇಷಣೆ ಮತ್ತು ಅದರ ಬಗೆಗಿರುವ ಗೊಂದಲಗಳನ್ನು ಅರಿತು ಪೋಷಕರು ಮಕ್ಕಳ ಜೊತೆ ಮಾತನಾಡುವುದು, ಪರೀಕ್ಷೆಗೆ ಅವರನ್ನು ಸಿದ್ಧಪಡಿಸುವುದು ಪ್ರಯೋಜನಕಾರಿ; ಅದಲ್ಲದೆ ಮಕ್ಕಳು ತಮ್ಮ ಅಪೇಕ್ಷೆಗೆ ತಕ್ಕಂತೆ ದಿನಕ್ಕೆ ಇಂತಿಷ್ಟು ಗಂಟೆಗಳು ಓದುತ್ತಿಲ್ಲ, ತಮ್ಮ ನಿರೀಕ್ಷೆಯಂತೆ ಅಂಕಗಳನ್ನು ಗಳಿಸುತ್ತಿಲ್ಲ ಎಂದು ದೂರುವುದು, ದುಃಖಿಸುವುದು, ಮಕ್ಕಳ ಮೇಲೆ ಕೋಪಗೊಂಡು ಅವರನ್ನು ನಿಂದಿಸುವುದು ಮಕ್ಕಳಲ್ಲಿ ತಮ್ಮ ಬಗೆಗಿನ ಗೊಂದಲವನ್ನು ಮತ್ತೂ ಹೆಚ್ಚಿಸುತ್ತದೆ.

ಮಕ್ಕಳಿಗೆ ಸ್ವಾತಂತ್ರ್ಯ ಬೇಕು, ಆದರೆ ನಿಯಮಗಳಿಗೆ ಒಳಪಡಲೂಬೇಕು; ಮಕ್ಕಳು ತಮ್ಮತನವನ್ನು ಅಭಿವ್ಯಕ್ತಿಸಬೇಕು. ಆದರೆ ಸಮಾಜದ ರೀತಿನೀತಿಗಳನ್ನೂ ಕಲಿಯಬೇಕು. ಮಕ್ಕಳು ತಮ್ಮ ಪೋಷಕರಿಗಿಂತ ಭಿನ್ನ, ಅನನ್ಯ; ಹಾಗೆಂದು ಅವರಿಗೆ ಪೋಷಕರ ಮಾರ್ಗದರ್ಶನ ಬೇಡವೆಂದು ಅಲ್ಲ; ಮಕ್ಕಳಿಗೆ ಅತಿಯಾದ ನಿರ್ದೇಶನಗಳನ್ನು ಕೊಡುತ್ತಿದ್ದರೆ ಅವರು ಮಂಕಾಗುತ್ತಾರೆ. ಏನೂ ಹೇಳದೆ ಅವರಷ್ಟಕ್ಕೇ ಅವರನ್ನು ಬಿಟ್ಟುಬಿಟ್ಟರೆ ದಿಕ್ಕೇ ತೋಚದಂತಾಗುತ್ತಾರೆ. ಇದನ್ನೆಲ್ಲಾ ಗಮನಿಸಿದಾಗ ಪೋಷಕತ್ವವೆಂದರೆ 'ಸಮತೋಲನ' ಎನ್ನುವುದನ್ನು ಕಲಿಯುವ, ಕಲಿಸುವ ಪ್ರಕ್ರಿಯೆಯೆಂದರೆ ತಪ್ಪಾಗುವುದಿಲ್ಲ. ಮಕ್ಕಳ ಪರೀಕ್ಷೆಯ ಸಮಯ ಪೋಷಕರಿಗೂ ತಾವು 'ಸಮತೋಲನ'ವನ್ನು ಎಷ್ಟು ಚೆನ್ನಾಗಿ ಕಲಿತಿದ್ದಾರೆ ಎನ್ನುವುದನ್ನು ಪರೀಕ್ಷಿಸಿಕೊಳ್ಳುವ ಸಮಯ.

ಮಕ್ಕಳು ಮತ್ತು ಪೋಷಕರ ನಡುವಿನ ಒಡನಾಟ ಎಷ್ಟು ಪ್ರೀತಿಪೂರ್ವಕವಾಗಿರುತ್ತದೆಯೋ ಅಷ್ಟು ಮಕ್ಕಳ ಪರೀಕ್ಷಾ ತಯಾರಿಯು ಪರಿಣಾಮಕಾರಿಯಾಗಿರುತ್ತದೆ.

ಈ ದಿಕ್ಕಿನಲ್ಲಿ ಕೆಲವು ವಿಷಯಗಳನ್ನು ನೆನಪಿಟ್ಟುಕೊಳ್ಳುವುದು ಉಪಯೋಗಕಾರಿ:

1. ಪರೀಕ್ಷೆಯ ಸಮಯದಲ್ಲಿ ಮಗುವಿಗೆ ಅತಿ ಹೆಚ್ಚು ಸಮಸ್ಯೆ ತರುತ್ತಿರುವ ವಿಷಯದ ಬಗೆಗೆ ಪೋಷಕರು ಮಗುವಿನ ಜೊತೆಗೆ ಸಮಾಧಾನದಿಂದ ಚರ್ಚಿಸುವುದು ಒಳ್ಳೆಯದು. ಉದಾಹರಣೆಗೆ: ಸಮಯ ಪಾಲನೆ, ಏಕಾಗ್ರತೆ, ನೆನಪಿನ ಶಕ್ತಿ, ಬರೆವಣಿಗೆಗೆ ಸಂಬಂಧಪಟ್ಟ ತೊಂದರೆಗಳು, ಸೋಲಿನ ಭಯ, ಭವಿಷ್ಯದ ಆತಂಕ – ಹೀಗೆ ಮಕ್ಕಳನ್ನು ತಮ್ಮ ಸಮಸ್ಯೆಗಳ ಬಗೆಗೆ ಮಾತನಾಡುವಂತೆ ಪ್ರೋತ್ಸಾಹಿಸುವುದು. ಸಮಸ್ಯೆಗೆ ಪರಿಹಾರ ಎರಡನೆಯ ಹಂತ. ಆದರೆ ತಮ್ಮ ಸಮಸ್ಯೆಯನ್ನು ಆಲಿಸುವ, ಪ್ರೀತಿಯಿಂದ ಸ್ಪಂದಿಸುವ ಪೋಷಕರಿದ್ದಾರೆ ಎನ್ನುವುದು ಮಕ್ಕಳಿಗೆ ಸ್ಥೈರ್ಯ ಕೊಡುತ್ತದೆ.
2. ಪರೀಕ್ಷೆಯ ಸಮಯದಲ್ಲಿ ಏಕಾಗ್ರತೆ ಸಾಮಾನ್ಯವಾಗಿ ಎಲ್ಲ ಮಕ್ಕಳ ದೊಡ್ಡ ಸಮಸ್ಯೆ ಯಾಗಿರುತ್ತದೆ. ಇದಕ್ಕೆ ಒಳ್ಳೆಯ ಪರಿಹಾರವೆಂದರೆ ಅಧ್ಯಯನದ ಸಮಯದಲ್ಲಿ ಬರವಣಿಗೆಯ ಅಭ್ಯಾಸವನ್ನು ರೂಢಿಸಿಕೊಳ್ಳುವುದು. ಪಾಠದ ಸಾರಾಂಶ, ಪ್ರಶ್ನೆಗಳು, ಸಂದೇಹಗಳು, ಪಾಠದ ಮುಖ್ಯ ಅಂಶಗಳು, ಪರಿಕಲ್ಪನೆಗಳು, ಸೂತ್ರಗಳು ಎಲ್ಲವನ್ನೂ ಬರೆದಿಡುವುದು. ಮಕ್ಕಳು ಪರೀಕ್ಷೆಯ ಸಮಯವಷ್ಟೇ ಅಲ್ಲದೆ ಬೇರೆ ದಿನಗಳಲ್ಲೂ ತಮ್ಮ ಆಲೋಚನೆ, ಅನುಭವಗಳನ್ನು ಬರೆಯುವ ಅಭ್ಯಾಸವಿಟ್ಟುಕೊಂಡರೆ ಏಕಾಗ್ರತೆಯನ್ನು ಮತ್ತಷ್ಟು ಹೆಚ್ಚುಮಾಡಿಕೊಳ್ಳಬಹುದು. ಮಕ್ಕಳಲ್ಲಿ ಸೂಕ್ಷ್ಮವಾಗಿ ಎಲ್ಲವನ್ನೂ ಗಮನಿಸುವ ಪ್ರವೃತ್ತಿ, ಕುತೂಹಲ, ಇನ್ನಷ್ಟು ಅರಿಯುವ ತವಕ, ನೆನಪಿನ ಶಕ್ತಿ, ಇಲ್ಲಿಯವರೆಗೆ ಕಲಿತಿರುವುದರ ಬಗೆಗೆ ಸಂತಸ, ಸಮಾಧಾನವನ್ನು ನೀಡುವಲ್ಲಿಯೂ ಬರವಣಿಗೆಯ ಅಭ್ಯಾಸ ಸಹಕಾರಿ.
3. ಮಕ್ಕಳು ಸಾಮಾನ್ಯವಾಗಿ ಓದುವಾಗ ಮನಸ್ಸಿಲ್ಲವೆಂದೋ, ಓದುವುದಕ್ಕೆ ಬೇಜಾರೆಂದೋ, ಓದುವುದಕ್ಕೆ ಪ್ರೇರಣೆ (Motivation) ಇಲ್ಲವೆಂದೋ ಕಾಲಹರಣ ಮಾಡುತ್ತಿರುತ್ತಾರೆ. ಆದರೆ ಓದಲು ಪ್ರೇರಣೆಗಿಂತಲೂ ಶಿಸ್ತು (Discipline) ಮುಖ್ಯ ಎಂದು ಎಚ್ಚರಿಸಬೇಕಾದ್ದು ಪೋಷಕರ ಕರ್ತವ್ಯ.
4. ಒಂದು ದಿನ ಅತಿಯಾಗಿ ಓದುವುದರಿಂದ ಏನೂ ಸಾಧಿಸಲಾಗುವುದಿಲ್ಲ; ಅಥವಾ ಕೆಲವೊಂದು ದಿನಗಳು ಎಷ್ಟು ಕಷ್ಟಪಟ್ಟರೂ ಒಂದು ಪಾಠವನ್ನೂ ಪೂರ್ತಿಯಾಗಿ ಅರ್ಥಮಾಡಿಕೊಳ್ಳಲು ಆಗುವುದಿಲ್ಲ. ಈ ಎಲ್ಲ ಏರುಪೇರುಗಳು ಅಧ್ಯಯನದಲ್ಲಿ ಸಾಮಾನ್ಯ. ಯಾವ ಕಾರಣಕ್ಕೂ ಶಿಸ್ತುಬದ್ಧವಾಗಿ ಓದುವ ಬರೆಯುವ ಅಭ್ಯಾಸವನ್ನು ಒಂದು ದಿನವೂ ತಪ್ಪಿಸಬಾರದೆನ್ನುವುದು ಮುಖ್ಯ.
5. ಮಕ್ಕಳು ಪರೀಕ್ಷೆಗೆ ತಯಾರಾಗುವಾಗ ಅವರಿಗೆ ಎದುರಾಗುವ ದೊಡ್ಡ ತೊಡಕೆಂದರೆ ಅದು ಅವರ ಮನಸ್ಸೇ ಹೌದು ಎನ್ನುವುದನ್ನು ಅರಿಯಲು ಪೋಷಕರು ನೆರವಾಗಬಹುದು. ಮನಸ್ಸು/ ಗಮನ ಎತ್ತೆತ್ತಲೋ ಹರಿಯುವುದು ಸಹಜ. ಅದನ್ನು ಮತ್ತೆ ಎಳೆದು ತಂದು ಅಧ್ಯಯನದಲ್ಲಿ ತೊಡಗಿಸುವುದು ಸಾಧ್ಯ, ಹಾಗೆ ಮಾಡಿಯೇ ಎಲ್ಲ ಸಾಧಕರು ತಮ್ಮ ಗುರಿಯನ್ನು ತಲುಪಿರುವುದು ಎನ್ನುವ ಸಕಾರಾತ್ಮಕ ವಿಷಯವನ್ನು, ಸಾಧಕರ ಜೀವನಕಥೆಗಳನ್ನು ಆಗಾಗ ಮಕ್ಕಳಿಗೆ ನೆನಪು ಮಾಡಿಕೊಡುವುದು ಮಕ್ಕಳಿಗೆ ಉತ್ತೇಜನವನ್ನು ಕೊಟ್ಟಂತಾಗುತ್ತದೆ. ❖

ಫಿಸಿಯೋಥೆರಪಿ ಮರುಜೀವ ಕೊಡುವ ಚಿಕಿತ್ಸೆ



ಡಾ. ವಿನಯ ಶ್ರೀನಿವಾಸ್

ಅನೇಕ ದಿನಗಳಿಂದ ಕುತ್ತಿಗೆನೋವಿನಿಂದ ಬಳಲುತ್ತಿದ್ದ ಲೀಲಾ ಕಾರಣವನ್ನು ಪತ್ತೆ ಮಾಡಲು ಎಕ್ಸ್-ರೇ, ಎಂ. ಆರ್. ಐ. ಪರೀಕ್ಷೆಗಳಿಗೂ ಒಳಗಾಗಿದ್ದಳು. ಗೆಳತಿಯ ಸಲಹೆಯ ಮೇರೆಗೆ ಫಿಸಿಯೋಥೆರಪಿತಜ್ಞರ ಬಳಿ ಹೋದಾಗಲೇ ಗೊತ್ತಾದದ್ದು ಆಕೆ ಕಚೇರಿಯಲ್ಲಿ ಕುಳಿತುಕೊಂಡು ಕಂಪ್ಯೂಟರ್ ಕೆಲಸ ಮಾಡುತ್ತಿದ್ದ ಭಂಗಿಯೇ ಆಕೆಯ ನೋವಿಗೆ ಕಾರಣ ಎಂದು. ದಿನವೂ ಕುಳಿತುಕೊಳ್ಳುವ ಭಂಗಿಯಲ್ಲಿ ಸ್ವಲ್ಪ ಬದಲಾವಣೆ ಮತ್ತು ಒಂದಿಷ್ಟು ಸರಳ ವ್ಯಾಯಾಮಗಳು ಲೀಲಾಳ ಕುತ್ತಿಗೆನೋವನ್ನು ಸಂಪೂರ್ಣ ಶಮನಗೊಳಿಸಿದ್ದವು.

ಹೌದು, 'ಫಿಸಿಯೋಥೆರಪಿ' ಚಿಕಿತ್ಸಾಕ್ರಮವು ಅಪಘಾತ, ಪೆಟ್ಟು, ಮೂಳೆಮುರಿತ, ಪಾರ್ಶ್ವವಾಯು, ಅಂಗವೈಕಲ್ಯ ಮೊದಲಾದ ಸಮಸ್ಯೆಗಳಿಂದ ಬಳಲಿದ ವ್ಯಕ್ತಿಗೆ ಪುನರ್ವಸತಿ ಕಲ್ಪಿಸಲು ನೆರವಾಗುತ್ತದೆ. ವಿವಿಧ ವಿಧಾನಗಳನ್ನು ಬಳಸಿ ವ್ಯಕ್ತಿ ಮೊದಲಿನಂತಾಗಲು ಈ ಚಿಕಿತ್ಸೆ ಸಹಕರಿಸುತ್ತದೆ. ಎಷ್ಟೋ ಬಾರಿ ದೈನಂದಿನ ಜೀವನದಲ್ಲಿ ನಾವು ನಿಲ್ಲುವಾಗ, ನಡೆಯುವಾಗ ಕುಳಿತುಕೊಳ್ಳುವಾಗ ಅನುಸರಿಸುವ ತಪ್ಪು ಕ್ರಮಗಳಿಂದ ಉಂಟಾದ ನೋವು, ಪೆಡಸುತನ ಮೊದಲಾದ ಸಮಸ್ಯೆಗಳಿಗೆ ಈ ಚಿಕಿತ್ಸಾಕ್ರಮ ಪವಾಡದಂತೆ ಕೆಲಸ ಮಾಡಬಲ್ಲದು.




ಸ್ನಾಯುಗಳ ಹಿಗ್ಗುವಿಕೆ ಮತ್ತು ಕುಗ್ಗುವಿಕೆ ಮತ್ತು ಆ ಮೂಲಕ ಚಲನೆಗಳು ಅವು ಸುತ್ತುವರೆದ ಮೂಳೆ, ಆಸುಪಾಸಿನ ಕೀಲುಗಳು, ರಕ್ತಪರಿಚಲನೆ, ನರಗಳ ಪ್ರಚೋದನೆ ಮೊದಲಾದ ಅಂಶಗಳ ಮೇಲೆ ಅವಲಂಬಿತವಾಗಿರುತ್ತವೆ. ಯಾವುದೇ ಅಂಶದಲ್ಲಿ ವ್ಯತ್ಯಯವಾದಾಗ ಅವುಗಳ ಕಾರ್ಯಕ್ಷಮತೆ ಕ್ಷೀಣಿಸುತ್ತದೆ. ಇಂತಹ ಸಂದರ್ಭಗಳಲ್ಲಿ ಸ್ನಾಯುಗಳು ಮೊದಲಿನ ಕಾರ್ಯಕ್ಷಮತೆಯನ್ನು ಪಡೆಯುವಲ್ಲಿ ಫಿಸಿಯೋಥೆರಪಿಯ ಪಾತ್ರ ಮಹತ್ವದ್ದು.



ಯಾವ ಸಮಸ್ಯೆಯಲ್ಲಿ?

- ಮೂಳೆಗಳು ಮುರಿತಕ್ಕೊಳಗಾದಾಗ ಎಲುಬು ಮತ್ತು ಕೀಲು ತಜ್ಞರು ಸೂಕ್ತ ಶಸ್ತ್ರಚಿಕಿತ್ಸೆ ಅಥವಾ ಇತರ ವಿಧಾನಗಳಿಂದ ಮೂಳೆಗಳನ್ನು ಮೊದಲಿನಂತೆ ಕೂಡಿಸುತ್ತಾರೆ. ಆದರೆ ಮೂಳೆ ಗಟ್ಟಿಯಾದ ಅಂಗಾಂಶವಾಗಿರುವುದರಿಂದ, ಮುರಿದ ಭಾಗಗಳು ಕೂಡಿಕೊಳ್ಳಲು ಕನಿಷ್ಠ ಮೂರರಿಂದ ಹನ್ನೆರಡು ವಾರಗಳೇ ಬೇಕಾಗಬಹುದು. ಅಲ್ಲಿಯವರೆಗೆ ಅದಕ್ಕೆ ಹೊಂದಿಕೊಂಡಂತಹ ಸ್ನಾಯುಗಳ ಚಲನೆಯನ್ನು ನಿರ್ಬಂಧಿಸಲಾಗಿರುತ್ತದೆ. ಬಹು ದಿನಗಳವರೆಗೆ ಚಲನೆಯಿಲ್ಲದ ಸ್ನಾಯುಗಳು ಸಂಪೂರ್ಣ ಬಿಗಿತಕ್ಕೊಳಗಾಗುವುದು ಸಹಜ. ಈ ಸ್ನಾಯುಗಳನ್ನು ಒಮ್ಮೆಲೇ ಚಲನೆಗೆ ಕೊಂಡೊಯ್ಯುವುದು ಕಠಿಣ. ಇಂತಹ ಸಂದರ್ಭಗಳಲ್ಲಿ ಫಿಸಿಯೋಥೆರಪಿತಜ್ಞರು ನಿಧಾನವಾಗಿ ಮತ್ತು ಹಂತ ಹಂತವಾಗಿ ಆ ಸ್ನಾಯುಗಳನ್ನು ಚಲನೆಗೆ ಅಣಿ ಮಾಡುತ್ತಾರೆ. ತಮ್ಮ ಕೈಗಳಿಂದ ಅಥವಾ ಸರಳ ಉಪಕರಣಗಳ ನೆರವಿನಿಂದ ಇದನ್ನು ಸಾಧಿಸುತ್ತಾರೆ. ಈ ಪ್ರಕ್ರಿಯೆಯು ಸ್ನಾಯುಗಳು ಮೊದಲಿನಂತಾಗಿ ವ್ಯಕ್ತಿ ಸ್ವತಂತ್ರವಾಗಿ ನಡೆದಾಡಲು ಬಹಳ ಮುಖ್ಯ.
- ಮಂಡಿಯ ಮರುಜೋಡಣೆ ಮತ್ತು ಚಪ್ಪೆಮೂಳೆ ಮರುಜೋಡಣೆಯ ನಂತರವೂ ಆ ಭಾಗದ ಸ್ನಾಯುಗಳಿಗೆ ಮೊದಲಿನ ಚಲನೆಯನ್ನು ತರಲು ಫಿಸಿಯೋಥೆರಪಿ ಬಹಳ ಮುಖ್ಯ. ತಜ್ಞರ ಸಲಹೆಯ ಮೇರೆಗೆ ಆಸ್ಪತ್ರೆಯಿಂದ ಮನೆಗೆ ತೆರಳಿದಮೇಲೆಯೂ ಸರಳ ವ್ಯಾಯಾಮಗಳನ್ನು ಮುದುವರೆಸುವುದು ಉತ್ತಮ.
- ವ್ಯಕ್ತಿ ಪಾರ್ಶ್ವವಾಯುವಿಗೆ ತುತ್ತಾದಾಗ ಶರೀರದ ಕೆಲವು ಭಾಗದ ಸ್ನಾಯುಗಳು ಸಂಪೂರ್ಣ ನಿಷ್ಕ್ರಿಯಗೊಳ್ಳಬಹುದು. ಮಿದುಳಿನ ಯಾವ ಭಾಗದಲ್ಲಿ ಮತ್ತು ಎಷ್ಟು ತೀವ್ರವಾಗಿ ರಕ್ತಪರಿಚಲನೆಯಲ್ಲಿ ವ್ಯತ್ಯಯವಾಗಿದೆ ಎನ್ನುವ ಅಂಶದ ಮೇಲೆ ಸ್ನಾಯುಗಳ ಶಕ್ತಿ ಕುಂಠಿತವಾಗಿರುತ್ತದೆ. ಆದರೆ ತಕ್ಷಣವೇ ಆರಂಭಿಸುವ ಫಿಸಿಯೋಥೆರಪಿ ಚಿಕಿತ್ಸೆಯು ಸ್ವಲ್ಪ ಮಟ್ಟಿನ ಸ್ನಾಯುಗಳ ಬಲವನ್ನು ಹೆಚ್ಚಿಸಿ ವ್ಯಕ್ತಿ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ನೆರವಾಗಬಹುದು.
- ದೊಡ್ಡ ಮಟ್ಟದ ಶಸ್ತ್ರಚಿಕಿತ್ಸೆಗಳಿಗೊಳಗಾಗಿ ಅಥವಾ ಇತರ ಕಾರಣಗಳಿಗಾಗಿ ತುರ್ತುಚಿಕಿತ್ಸಾ ಘಟಕದಲ್ಲಿ ಚಿಕಿತ್ಸೆ ಪಡೆಯುವಾಗ ವ್ಯಕ್ತಿ ಬಹು ದಿನಗಳವರೆಗೆ ಹಾಸಿಗೆಯಿಂದ ಎದ್ದು ನಡೆದಾಡಲು ಸಾಧ್ಯವಾಗದಿರಬಹುದು. ಈ ರೀತಿ ಚಲನೆಯಿಲ್ಲದ ಸ್ನಾಯುಗಳ ರಕ್ತನಾಳಗಳಲ್ಲಿ ರಕ್ತಹೆಪ್ಪುಗಟ್ಟುವಿಕೆ ಸರ್ವೇಸಾಮಾನ್ಯ. ಇದು ಬಹಳ ಅಪಾಯ. ಇಲ್ಲಿಯೂ ಫಿಸಿಯೋಥೆರಪಿ ತಜ್ಞರು ಕಾಲುಗಳ ಸ್ನಾಯುಗಳಿಗೆ ಕನಿಷ್ಠ ಚಲನೆಯನ್ನು ಮಾಡಿಸುತ್ತಾ ಮುಂಬರುವ ಅಪಾಯವನ್ನು ತಡೆಯಬಲ್ಲರು.
- ಸುಟ್ಟಗಾಯಗಳಿಂದ ಗುಣಮುಖರಾಗುವಾಗ ಸ್ನಾಯು ಬಿಗಿತಕ್ಕೊಳಗಾಗದಂತೆಯೂ ಸರಳ ವ್ಯಾಯಮಗಳನ್ನು ಮಾಡಿಸುವಲ್ಲಿ ಈ ಚಿಕಿತ್ಸೆ ಮುಖ್ಯ.
- ಆಸ್ತಮಾ ಮತ್ತು ಶ್ವಾಸಕೋಶದ ಸಮಸ್ಯೆಯಿಂದ ಬಳಲುವವರಲ್ಲಿ ಎದೆಯ ಭಾಗದ ಸ್ನಾಯುಗಳಿಗೆ ನಿಯಮಿತ ಚಲನೆಯನ್ನು ಕೊಡುವ ಮತ್ತು ದೀರ್ಘ ಉಸಿರಾಟವನ್ನು ಮಾಡಿಸುವ ವ್ಯಾಯಾಮಗಳು ವ್ಯಕ್ತಿ ಶೀಘ್ರ ಗುಣಮುಖವಾಗುವಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತವೆ.
- ಗರ್ಭಿಣಿಯರಲ್ಲಿ ಸರಳ ವ್ಯಾಯಾಮಗಳ ಅಭ್ಯಾಸದಿಂದ ಪ್ರಸವ ಸುಲಭವಾಗುತ್ತದೆ. ಪ್ರಸವದ ಬಳಿಕ ಮಾಡುವ ವ್ಯಾಯಾಮಗಳು ಗರ್ಭಕೋಶ ಮತ್ತಿತರ ಅಂಗಾಂಗಗಳು ಮೊದಲಿನ ಸುಸ್ಥಿತಿ ತಲುಪಲು ಫಿಸಿಯೋಥೆರಪಿ ನೆರವಾಗುತ್ತದೆ.
- ಆಟಗಾರರಲ್ಲಿ ಸ್ನಾಯುಗಳು ಶಕ್ತಿಯುತವಾಗಿರಲು ಮತ್ತು ಸುಲಭವಾಗಿ ಮತ್ತೆ ಮತ್ತೆ ಪೆಟ್ಟಿಗೆ ಒಳಗಾಗದಿರಲು ಫಿಸಿಯೋಥೆರಪಿ ತಜ್ಞರು ತರಬೇತಿ ನೀಡಬಲ್ಲರು. ಅಷ್ಟೇ ಅಲ್ಲದೆ, ಆಟಕ್ಕೆ ಮೊದಲು ಮತ್ತು ನಂತರ ಸ್ನಾಯುಗಳಿಗೆ ಆಯಾಸವಾಗದಂತೆ ಮಾಂಸಖಂಡಗಳನ್ನು ಹಿಗ್ಗಿಸುವ ನಿರ್ದಿಷ್ಟ ವ್ಯಾಯಾಮಗಳನ್ನೂ ಅವರು ತಿಳಿಸಿಕೊಡಬಲ್ಲರು.
- ದೇಹದ ಯಾವುದೇ ಭಾಗದಲ್ಲಿನ ನೋವಿನ ತೀವ್ರತೆಯನ್ನು ಕಡಿಮೆ ಮಾಡುವ ವಿಶೇಷ ವಿಭಾಗ ಫಿಸಿಯೋಥೆರಪಿ. ಬೆನ್ನು, ಕುತ್ತಿಗೆ, ಭುಜ, ಪಾದ, ಹಿಮ್ಮಡಿ, ಕೈಕಾಲುಗಳ ನೋವಿಗೆ ಸೂಕ್ತ ವಿಧಾನವನ್ನು ಬಳಸಿ ಹಿತಕರ ಅನುಭವವನ್ನು ನೀಡುವ ಶಕ್ತಿ ಈ ಚಿಕಿತ್ಸೆಗೆ ಇದೆ. ಇದಕ್ಕಾಗಿ ತಜ್ಞರು ಶಾಖ ಮತ್ತು ಶಬ್ದತರಂಗಗಳನ್ನು ಬಳಸುತ್ತಾರೆ. ಕೆಲವೊಮ್ಮೆ ಮೇಣ ಮತ್ತು ಜಲಚಿಕಿತ್ಸೆಯೂ ಬೇಕಾಗಬಹುದು. ಸೂಕ್ತ ಮುಲಾಮು ಅಥವಾ ಎಣ್ಣೆಯನ್ನು ಬಳಸಿ ದೇಹದ ಭಾಗವನ್ನು ಕೈಗಳಿಂದ ಅಥವಾ ಉಪಕರಣಗಳ ನೆರವಿನಿಂದ ತಿಕ್ಕುವುದು ಅಥವಾ ಉಜ್ಜುವುದು ಸಹ ಹಲವು ಬಗೆಯ ನೋವುಗಳನ್ನು ಕಡಿಮೆ ಮಾಡಬಲ್ಲದು.



- ಕೆಲವು ನರರೋಗಗಳಲ್ಲಿ ತೀವ್ರತರವಾದ ಸ್ನಾಯುಗಳ ಬಿಗಿತ/ ಪೆಡಸುತನವನ್ನು ಕಡಿಮೆ ಮಾಡಲು ವಿದ್ಯುತ್ ಪ್ರಚೋದನೆಯನ್ನು ಕೊಡುವಂತಹ ಚಿಕಿತ್ಸಾ ಕ್ರಮಗಳೂ ಫಿಸಿಯೋಥೆರಪಿಯಲ್ಲಿ ಲಭ್ಯವಿವೆ.
- ಅನೇಕ ಸಂದರ್ಭಗಳಲ್ಲಿ ಚಿಕಿತ್ಸಕರು ಮೂಲ ಸಮಸ್ಯೆಯನ್ನು ಅರಿತು ಅಲ್ಲಿ ತಿದ್ದುಪಡಿ ಮಾಡುವುದು ಮತ್ತು ಸ್ನಾಯುಗಳನ್ನು ಶಕ್ತಿಯುತಗೊಳಿಸುವ ಸರಳ ವ್ಯಾಯಾಮಗಳ ಬಗ್ಗೆ ಅರಿವು ಮೂಡಿಸುವುದೇ ಸಮಸ್ಯೆಯನ್ನು ಸರಿಪಡಿಸಲು ಹಾಗೂ ನೋವು ಮರುಕಳಿಸದಿರಲು ನೆರವಾಗುತ್ತವೆ. ❖


ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

15) DB = 3 CD ಆಗುವಂತೆ ΔABCಯಲ್ಲಿ Aನಿಂದ BCಗೆ ಎಳೆದ ಲಂಬವು BC ಯನ್ನು Dನಲ್ಲಿ ಛೇದಿಸುತ್ತದೆ (ಚಿತ್ರ ನೋಡಿ)

$2AB^2 = 2AC^2 + BC^2$ ಎಂದು ಸಾಧಿಸಿ.



ಪರಿಹಾರ:– CD ಆಗುವಂತೆ ΔABCಯಲ್ಲಿ Aನಿಂದ BCಗೆ ಎಳೆದ ಲಂಬವು BCಯನ್ನು Dನಲ್ಲಿ ಛೇದಿಸುತ್ತದೆ

DB = 3 (ದತ್ತ)

Δ ABCದಲ್ಲಿ,

$AD \perp BC$ ಮತ್ತು $BD = 3CD$

ಲಂಬಕೋನ ತ್ರಿಭುಜಗಳಾದ, ADB ಮತ್ತು ADC ದಲ್ಲಿ ಪೈಥಾಗೋರಸ್ ಪ್ರಮೇಯದಂತೆ

$AB^2 = AD^2 + BD^2$ ....(i)

$AC^2 = AD^2 + DC^2$ ....(ii)

ಸಮೀಕರಣ (i) ರಿಂದ ಸಮೀಕರಣ (ii) ನ್ನು ಕಳೆದಾಗ

$AB^2 – AC^2 = BD^2 – DC^2$

$= 9CD^2 – CD^2$ [ಯಾಕೆಂದರೆ BD = 3CD]

$= 8CD^2$

$= 8(BC/4)^2$ [ಯಾಕೆಂದರೆ BC=DB+CD=3CD+CD=4CD]

ಆದ್ದರಿಂದ $AB^2 – AC^2 = BC^2/2$

$\Rightarrow 2(AB^2 – AC^2) = BC^2$

$\Rightarrow 2AB^2 – 2AC^2 = BC^2$

$\therefore 2AB^2 = 2AC^2 + BC^2$.

16) ಶಾಲೆಯೊಂದರ 8, 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳ ಸಂಖ್ಯೆ ಕ್ರಮವಾಗಿ 48, 42 ಮತ್ತು 60 ಇದೆ. 8, 9 ಮತ್ತು 10ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೂ ವಿತರಿಸಲು ಅಗತ್ಯವಾದ ಪುಸ್ತಕಗಳ ಕನಿಷ್ಠ ಸಂಖ್ಯೆಯನ್ನು ಕಂಡುಹಿಡಿಯಿರಿ.

ಪರಿಹಾರ:- $48 = 6 \times 2^3$


$42 = 6 \times 7$

$60 = 6 \times 2 \times 5$

ಲ.ಸಾ.ಅ. $(48, 42, 60) = 6 \times 2^3 \times 7 \times 5 = 1680$

8, 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ ಸಮವಾಗಿ ಹಂಚಬೇಕಾದ ಪುಸ್ತಕಗಳ ಸಂಖ್ಯೆಯು 1680 ಆಗಿದೆ.

17) ಚಿತ್ರದಲ್ಲಿರುವಂತೆ ಕೇಂದ್ರ ಇರುವ ಎರಡು ಏಕಕೇಂದ್ರೀಯ ವೃತ್ತಗಳ ತ್ರಿಜ್ಯಗಳು ಕ್ರಮವಾಗಿ 7ಸೆಂ.ಮೀ ಮತ್ತು 14 ಸೆಂ.ಮೀ ಇವೆ. ಮತ್ತು $\angle AOC = 40^0$ ಆದರೆ ಚಿತ್ರದಲ್ಲಿ ಛಾಯಾಕೃತ ಭಾಗದ ವಿಸ್ತೀರ್ಣವನ್ನು ಕಂಡುಹಿಡಿಯಿರಿ ದತ್ತ



OB=OD=7cm ದತ್ತ

OA=OC=14cm ದತ್ತ

$\angle AOC = 40^0$ ದತ್ತ

ಒಳಗಿನ ವೃತ್ತದ ತ್ರಿಜ್ಯ = r = 7 cm ಮತ್ತು

ಹೊರಗಿನ ವೃತ್ತದ ತ್ರಿಜ್ಯ = R = 14 cm

ವಿಸ್ತೀರ್ಣ (Area of the sector) $= (\theta/360°) \times \pi r^2$

OAC ವಿಸ್ತೀರ್ಣ $= (40°/360°) \times \pi r^2$ cm²

$= 68.44$ cm²

OBDವಿಸ್ತೀರ್ಣ $= (40°/360°) \times \pi r^2$ cm²

$= (1/9) \times (22/7) \times 7^2 = 17.11$ cm²

ಛಾಯಾಕೃತ ಭಾಗದ ವಿಸ್ತೀರ್ಣ ABDC =

= OACವಿಸ್ತೀರ್ಣ –OBD ವಿಸ್ತೀರ್ಣ

= 68.44 cm² – 17.11 cm²

= 51.33 cm²

18) ಮೊತ್ತ 636 ಸಿಗಬೇಕಾದರೆ 9, 17, 25 ... ಈ ಸಮಾಂತರ ಶ್ರೇಢಿಯ ಎಷ್ಟು ಪದಗಳನ್ನು ತೆಗೆದುಕೊಳ್ಳಬೇಕಾಗುತ್ತದೆ?

ಪರಿಹಾರ: ಸಮಾಂತರ ಶ್ರೇಢಿಯ 9, 17, 25, . . .

ಇಲ್ಲಿ $a = 9$ $d = 17 - 9 = 8$ $S_n = 636$

$$\frac{n}{2}[2a+(n-1)d] = 636$$

$$\frac{n}{2}[2(9)+(n-1)8] = 636$$

$$n[9+(n-1)4] = 636$$

$$n[9+4n-4] = 636$$

$$n[4n+5] = 636$$

$$4n^2+5n = 636$$

$$4n^2+5n-636 = 0$$

$$4n^2+53n-48n-636 = 0$$

$$n(4n+53)-12(4n+53) = 0$$

$$(4n+53)(n-12) = 0$$

$$(4n+53) = 0$$

or

$$(n-12) = 0$$

$$n = -\frac{53}{4}$$

$n = -\frac{53}{4}$ ಸಮಾಂತರ ಶ್ರೇಢಿಯ n ಪದವಾಗಿ ಸ್ವೀಕರಿಸಲು ಬರುವುದಿಲ್ಲ ಹೀಗಾಗಿ $\therefore n = 12$

ಸಮಾಂತರ ಶ್ರೇಢಿಯ 9, 17, 25, . . . ಮೊತ್ತ 636 ಸಿಗಬೇಕಾದರೆ 12 ಪದಗಳನ್ನು ತೆಗೆದುಕೊಳ್ಳಬೇಕಾಗುತ್ತದೆ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ


II PUC CHEMISTRY

REVISION and MODEL QUESTIONS

26. Using VBT account for the geometry and magnetic property of $[Ni(CN)_4]_2$.

Given: outer electronic configuration of Ni^{2+} ; $3d^8, 4s^0$.

Ans:- Given: outer electronic configuration of Ni^{2+}; $3d^8, 4s^0$.



Geometry: square planar


Magnetic property: diamagnetic

27. Give the IUPAC name of $[Co\ Cl_2\ (NH_3)_4]Cl$.

Draw cis and trans isomers of $[Co\ Cl_2\ (NH_3)4]+$ ion.

Ans:-. a) The IUPAC name of $[Co\ Cl_2\ (NH_3)_4]Cl$ is tetraamminedichloridocobalt (III)

b) cis and trans isomers of $[Co\ Cl_2\ (NH_3)4]^+$ ion



28. a) Vapour pressure of liquids A and B at 298K is 300 mm of Hg and 450 mm of Hg respectively. If the total vapour pressure of a mixture of A and B is 405 mm of Hg, calculate the mole fraction of A in the mixture.

b) What happens to the solubility of a gas in a liquid with increase in temperature? Give reason.

Ans:- a) Given that, Vapour pressure of liquids A and B at 298K is 300mm of Hg and 450 mm of Hg respectively.

To calculate - the mole fraction of A in the mixture if the total vapour pressure of a mixture of A and B is 405 mm of Hg.

Let the mole fraction of A be x_A;

And the mole fraction of B be x_B; $\Rightarrow x_B = (1 - x_A)$

From Raoult's law

$$p_A^0\ x_A + p_B^0\ x_B = P_{total}$$

$$\Rightarrow p_A^0\ x_A + p_B^0(1 - x_A) = P_{total}$$

$$\Rightarrow 300x_A + 450(1 - x_A) = 405$$

$$\therefore x_A = 0.3$$

b) The solubility of a gas in a liquid decreases with increase in temperature. Because the dissolution of a gas in a liquid is an exothermic process.

29. a) Calculate the equilibrium constant of the reaction at 298 K.

$Mg(s) + 2Ag^+(aq) \rightarrow Mg^{+2}(aq) + 2Ag(s)$; $E^0_{cell} = +3.16$ V

b) How is molar conductivity related to the conductivity of a solution? Which one of these has higher molar conductivity:0.1 M KCl or 0.01 M KCl?

Ans:-. a) To Calculate the equilibrium constant of the reaction at 298 K -

$Mg(s) + 2Ag^+(aq) \rightarrow Mg^{+2}(aq) + 2Ag(s)$; $E^0_{cell} = +3.16$ V

$$E^0_{cell} = \frac{0.059}{n}\log Kc$$

$$\Rightarrow 3.16 = \frac{0.059}{n}\log Kc$$

$$\therefore Kc = 1.314 \times 10^{107}$$

b) The relation of Molar conductivity to the conductivity of a solution is given by -

$$\Lambda_m = \frac{\kappa}{C}$$

0.01 M KCl has higher molar conductivity.

30. a) The rate of a reaction increases by 4 times when the temperature of the reaction is raised from 340 K to 360K. Calculate the energy of activation of the reaction. Given R = 8.314 J/K/mol.

b) Draw a graph of potential energy versus reaction coordinate to show the effect of catalyst on activation energy.

Ans:- a) Given that – (1) the rate of a reaction increases by 4 times when the temperature of the reaction is raised from 340 K to 360 K.

(2) R = 8.314 J/K/mol.

To Calculate - the energy of activation of the reaction


$$\log\frac{k_2}{k_1} = \frac{Ea}{2.303\ R}\left[\frac{T_2 - T_1}{T_1T_2}\right]$$

$$\Rightarrow \log 4 = \frac{Ea}{2.303 \times 8.314}\left[\frac{360 - 340}{360 \times 340}\right]$$

$$\Rightarrow Ea = 70554\ J\ (or)$$

$$Ea = 70.554\ kJ$$

b) A graph of potential energy versus reaction coordinate to show the effect of catalyst on activation energy –



5.37 ಕೋಟಿ ದಾಟಿದ ಮತದಾರರ ಸಂಖ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸದ್ಯವೇ ನಡೆಯಲಿರುವ ಲೋಕಸಭಾ ಚುನಾವಣೆಗೆ ಮತದಾನ ಮಾಡಲು 5.37 ಕೋಟಿ ಮತದಾರರು ಅರ್ಹರಾಗಿದ್ದು, ಮಹಿಳಾ ಮತದಾರರ ಸಂಖ್ಯೆಯೂ ಗಣನೀಯವಾಗಿ ಏರಿಕೆಯಾಗಿದೆ.

ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್‌ಕುಮಾರ್ ಮೀನಾ ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಈ ವಿವರ ನೀಡಿದರು.

18 ವರ್ಷ ಪೂರ್ಣಗೊಳಿಸಿದ 19ರ ಒಳಗಿನ 10,34,018 ಮತದಾರರು ಹೆಸರು ನೋಂದಾಯಿಸಿಕೊಂಡಿದ್ದಾರೆ. ಕರಡು ಪಟ್ಟಿಯಲ್ಲಿ 6,45,491 ಮತದಾರರು ಇದ್ದರು. ಮತ್ತೆ ನಾಲ್ಕು ತಿಂಗಳಲ್ಲಿ ಮತದಾನದ ಅರ್ಹತೆ ಪಡೆದ 3,88,527 ಯುವಕರು ಸೇರ್ಪಡೆ ಆಗಿದ್ದಾರೆ ಎಂದು ಅವರು ಹೇಳಿದರು.

ಆಯೋಗವು ಕಳೆದ ಅಕ್ಟೋಬರ್‌ನಲ್ಲಿ ಪ್ರಕಟಿಸಿದ್ದ ಮತದಾರರ ಕರಡು ಪಟ್ಟಿಗೆ ಹೋಲಿಸಿದರೆ ಮತದಾರರ ಸಂಖ್ಯೆಯಲ್ಲಿ 4.08 ಲಕ್ಷ ಹೆಚ್ಚಳವಾಗಿದೆ. ಹೆಚ್ಚಳದಲ್ಲಿ ಮಹಿಳಾ ಮತದಾರರ ಸಂಖ್ಯೆ 2.77 ಲಕ್ಷ ಇದೆ. ಕರಡು ಪಟ್ಟಿಯಲ್ಲಿ ಪ್ರತಿ ನೂರು ಪುರುಷರಿಗೆ ಮಹಿಳೆಯರ ಪ್ರಮಾಣ 91 ಇತ್ತು. ಅದು ಈಗ 97ಕ್ಕೆ ಏರಿಕೆಯಾಗಿದೆ. ಒಟ್ಟು ಮತದಾರರಲ್ಲಿ 2,69,33,750 ಪುರುಷರು, 2,68,47,145 ಮಹಿಳೆಯರು ಇದ್ದಾರೆ. ಮಹಿಳಾ ಮತದಾರರ ಸಂಖ್ಯೆಯಲ್ಲಿ ಏರಿಕೆ ಆಗಿದ್ದರೂ ಪುರುಷ ಮತದಾರರಿಗಿಂತ 86,605 ಕಡಿಮೆ ಇದ್ದಾರೆ.

ಅಂಕಿ ಅಂಶಗಳು

5.37 ಕೋಟಿ ಒಟ್ಟು ಮತದಾರರು

2.69 ಕೋಟಿ ಪುರುಷ ಮತದಾರರು

2.68 ಕೋಟಿ ಮಹಿಳಾ ಮತದಾರರು

4,920 ಇತರೆ ಮತದಾರರು

	2019	2024
ಮತಗಟ್ಟೆ	56,696	58,834
ಮತದಾರರು	5.03 ಕೋಟಿ	5.37 ಕೋಟಿ

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ

7ನೇ ಮಹಡಿ, 1ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು–560001
ದೂರವಾಣಿ ಸಂಖ್ಯೆ: 080–22353849 ಇ–ಮೇಲ್: desadmkar@gmail.com

ಟೆಂಡರ್ ಪ್ರಕಟಣೆ ಸಂಖ್ಯೆ: ಆಸಾಂನಿ/13/ಲೆಕ್ಕ–ವಾಹನ/2023–24
ವಾರ್ಷಿಕ ದರ ಒಪ್ಪಂದದ ಮೂಲಕ ಮಾಸಿಕ ಬಾಡಿಗೆ ಆಧಾರದ ಮೇಲೆ ಹವಾನಿಯಂತ್ರಿತ ವಾಹನವನ್ನು ಒದಗಿಸಲು ಕರೆಯಲಾದ ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ)

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕೇಂದ್ರ ಕಛೇರಿ, ಬೆಂಗಳೂರು ಇಲ್ಲಿಗೆ **ವಾರ್ಷಿಕ ದರ ಒಪ್ಪಂದದ ಮೂಲಕ ಮಾಸಿಕ ಬಾಡಿಗೆ ಆಧಾರದ ಮೇಲೆ 07 ಸಂಖ್ಯೆ ಹವಾನಿಯಂತ್ರಿತ ವಾಹನವನ್ನು ಒದಗಿಸಲು** ಹೆಸರಾಂತ ಮತ್ತು ನೊಂದಾಯಿತ ಪ್ರಯಾಣ ಏಜೆನ್ಸಿಗಳಿಂದ ಅಥವಾ ಸರಬರಾಜುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ. ಟೆಂಡರ್ ವಿವರಗಳು ಕೆ.ಪಿ.ಪಿ.ಪಿ ಪೋರ್ಟಲ್ **https://kppp.karnataka.gov.in** ನಲ್ಲಿ ಲಭ್ಯವಿದ್ದು, ಟೆಂಡರ್‌ಗಳನ್ನು ವಿದ್ಯುನ್ಮಾನವಾಗಿ **https://kppp.karnataka.gov.in** ಇಲ್ಲಿ **ದಿನಾಂಕ: 02.02.2024 ರಂದು ಸಂಜೆ 5.30 ಗೊಳಗಾಗಿ ಸಲ್ಲಿಸಬಹುದು.**

DIPR/CP/RO3184/AAPL/2023-24 ಸಹಿ/- ನಿರ್ದೇಶಕರು

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
CIN : U41000KA2016SGC097260
ನೋ.ಕ:ನಂ.148, ಎಂಬೆಸಿ ಸ್ಕ್ವೇರ್, ಇನ್‌ಫೆಂಟರಿ ರಸ್ತೆ, ಬೆಂಗಳೂರು–560001.
ದೂರವಾಣಿ:080–22289966 / 22256688 ಫ್ಯಾಕ್ಸ್: 080–22264477
ವೆಬ್‌ಸೈಟ್: https://vjnl.karnataka.gov.in. ಇ–ಮೇಲ್: vjnlfinance@gmail.com

ಸಂ:ವಿಜನಿನಿ/2023–24/ಎಸ್‌ಇ 0029/CALL–2 ದಿನಾಂಕ:23.01.2024

ಟೆಂಡರ್ ಅಧಿಸೂಚನೆಗೆ ತಿದ್ದುಪಡಿ

ಆರ್ಥಿಕ ವರ್ಷ 2023–24 ಮತ್ತು 2024–25 ಸಾಲುಗಳಿಗೆ ಆಂತರಿಕ ಲೆಕ್ಕ ಪರಿಶೋಧಕರ ನೇಮಕಾತಿಗಾಗಿ ಸ್ಪರ್ಧಾತ್ಮಕ ಕೊಟೇಷನ್‌ಗಳ ಆಹ್ವಾನಕ್ಕೆ ಸಂಬಂಧಿಸಿದಂತೆ ಟೆಂಡರ್ ಅಧಿಸೂಚನೆ ಸಂ. ಎಸ್‌ಇ 0029, ದಿ. 01.01.2024ಕ್ಕೆ ತಿದ್ದುಪಡಿ.

ಆರ್‌ಎಫ್‌ಕ್ಯೂರ ಅಧ್ಯಾಯ–4ರ ಕಂಡಿಕೆ 4.1.2ರಲ್ಲಿ ಬಿಡ್ದುಗಳ ಸಲ್ಲಿಕೆ ಪ್ರಕ್ರಿಯೆ ಅಡಿಯಲ್ಲಿ "ಪ್ರಯೋಜಕರು (ಬಿಡ್ದುದಾರರು) **ರೂ.50,000/–** ಗಳ ಇಎಂಡಿ ಭದ್ರತಾ ಠೇವಣಿ ಮೊತ್ತವನ್ನು ಪಾವತಿಸಬೇಕು" ಎಂದು ನಿಗದಿಪಡಿಸಲಾಗಿರುತ್ತದೆ. ಆದರೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್)ಇಎಂಡಿ ಮೊತ್ತವನ್ನು **ರೂ.25,000/–** ಎಂದು ನಮೂದಿಸಲಾಗಿರುತ್ತದೆ. ಆದ್ದರಿಂದ ಇಎಂಡಿ ಮೊತ್ತವನ್ನು **ರೂ.50,000/–** ಎಂದು ಓದಲು ಈ ತಿದ್ದುಪಡಿಯನ್ನು ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಕೊಟೇಷನ್‌ಗಳನ್ನು ಸಲ್ಲಿಸುವ ವೇಳಾ ಪಟ್ಟಿಯಲ್ಲಿ ಬದಲಾವಣೆಗಳಾಗಿದ್ದು, ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು **https://kppp.karnataka.gov.in** ಮತ್ತು **https://vjnl.karnataka.gov.in** ವೆಬ್‌ಸೈಟುಗಳನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು

THE RAICHUR AND KOPPAL DISTRICT CENTRAL COOPERATIVE BANK LTD., RAICHUR

Ref : RDCC/HO/Manvibd/ /2023-24/ Date :22.01.2024

E-Procurement Tender Notice

The Raichur And Koppal District Central Co-Operative Bank Ltd., Raichur invites **e-Tender reference No: RDCCB/2023-24/BD/WORK_INDENT4 for Construction of Branch Banking Building for RDCC Bank in Plot No.11-4-390 Situated at Manvi Dist - Raichur** Tender Schedule and details can be obtained from KPPPortal https://kppp.karnataka.gov.in

Sd/-
(I S GIRADDI)
Chief Executive Officer
R K D C C BANK Ltd., Raichur.

ಕರ್ನಾಟಕ ಸರ್ಕಾರ
ಉಪನಿರ್ದೇಶಕರ ಕಚೇರಿ, ಶಾಲಾ ಶಿಕ್ಷಣ ಇಲಾಖೆ ಚಾಮರಾಜನಗರ ಜಿಲ್ಲೆ
Office of the Deputy Director of School Education Department, Chamarajanagar District

Email Id : ddpi.edu.karcmn@nic.in Tel. No.: 082226-222406

ಸಂಖ್ಯೆ : ಬಿ5/02/ಶಾ.ಪಿ.ಸ/13/2023–24 ದಿನಾಂಕ : 17–01–2024

ಟೆಂಡರ್ ಪ್ರಕಟಣೆ

2022–23ನೇ ಸಾಲಿನ ಚಾಮರಾಜನಗರ ಜಿಲ್ಲೆಯ 85 ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ರೂ. 99,71,247/– ಗಳಿಗೆ 1497 ರಿವರ್ಸಬಲ್ ಡೆಸ್ಕ್‌ಗಳನ್ನು ಖರೀದಿ ಮಾಡಲು ಅರ್ಹ ಏಜೆನ್ಸಿಯವರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಅರ್ಜಿಯನ್ನು ದಿನಾಂಕ : 18–01–2024 ರಿಂದ 31–01–2024 ವರೆಗೆ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಇಲಾಖೆ ಚಾಮರಾಜನಗರ ಜಿಲ್ಲೆ ಇಲ್ಲಿ ಕಚೇರಿ ಅವಧಿಯಲ್ಲಿ ವಿಚಾರಿಸಬಹುದಾಗಿರುತ್ತದೆ ಹಾಗೂ ದೂರವಾಣಿ ಸಂಖ್ಯೆ : 08226–222406 ಗೆ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಂ:ವಾನಿಂಸಂಇ:ಚಾನಗರ:349:2023–24

ಸಹಿ/–
ಉಪನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ, ಚಾಮರಾಜನಗರ ಜಿಲ್ಲೆ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

ಅಲ್ಪಾವಧಿ ಟೆಂಡರ್ ಪ್ರಕಟಣೆ – ಕೆ.ಪಿ.ಪಿ. ಪೋರ್ಟಲ್ ಮುಖಾಂತರ

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂ:ಕಾಸಮಂ/ತಾ.ಶಾ./ಸ.ಇ/ಟೆಂಡರ್–09/2024/173 ದಿ: 20.01.2024

ಉಲ್ಲೇಖಿತ ಪತ್ರದನ್ವಯ ಆಹ್ವಾನಿಸಲಾದಂತೆ ಕೊಡಗು ಜಿಲ್ಲೆಗೆ ಸಂಬಂಧಿಸಿದ ಕಾಮಗಾರಿಗಳಿಗೆ ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮದನ್ವಯ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯೂನಲ್ಲಿರುವ ಕಲಂನನ್ವಯ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟಂತೆ ಐಟಂವಾರು ಟೆಂಡರುಗಳನ್ನು ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಅರ್ಹ ಗುತ್ತಿಗೆದಾರರಿಂದ **ದಿ: 30.01.2024 ಸಂಜೆ 4.00 ಗಂಟೆಯವರೆಗೆ** ಸ್ವೀಕರಿಸಲಾಗುವುದು. ಟೆಂಡರ್‌ದಾರರು ಕರ್ನಾಟಕ ಸರಕಾರದ ಕೆ.ಪಿ.ಪಿ. ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ ಮುಖಾಂತರ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಪಡೆಯಬಹುದಾಗಿದೆ. (Download) ಹೆಚ್ಚಿನ ವಿವರವನ್ನು ಕಛೇರಿ ಸಮಯದಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಮಂಗಳೂರು

DIPR/ADM/KSMCA/1146/23-24 dt.22.01.2024

Mob No: 9448496026 E-Mail : dmkarwarkfcsc@yahoo.com Office : Ph: 08382-226243

ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ,

ಕೊಠಡಿ ಸಂಖ್ಯೆ. 08, ಡಿಸಿ ಕಛೇರಿ ಸಂಕೀರ್ಣ, ಎಂ.ಜಿ.ರಸ್ತೆ, ಕಾರವಾರ–581301

ನಂ.ಕಆನಾಸನಿನಿ/ಎಂಎಸ್‌ಪಿ/ಹ.ಸಾ/ಟೆಂಡರ್/2023–24 ದಿನಾಂಕ: 22.01.2024

ಟೆಂಡರ್ ಪ್ರಕಟಣೆ

2023–24ನೇ ಸಾಲಿನ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಖರೀದಿಸುವ ಭತ್ತದ ಸಾಗಾಣಿಕೆ ಮತ್ತು ಹಸ್ತಾಂತರಕ್ಕೆ ಸಂಬಂಧಿಸಿದಂತೆ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ, ಕಾರವಾರ ರವರು ಸಾಗಾಣಿಕೆ ಗುತ್ತಿಗೆದಾರರಿಂದ ಉತ್ತರಕನ್ನಡ ಜಿಲ್ಲೆಗೆ ದ್ವಿ–ಲಕೋಟೆ ಪದ್ಧತಿಯಲ್ಲಿ E–procurement portal ಮೂಲಕ ಟೆಂಡರನ್ನು ಆಹ್ವಾನಿಸಿದ್ದಾರೆ. ಟೆಂಡರ್ ದಸ್ತಾವೇಜುಗಳನ್ನು ಸರ್ಕಾರದ ವೆಬ್‌ಸೈಟ್ http://kppp.karnataka.gov.in ಮೂಲಕ ಮಾಹಿತಿ ಪಡೆದುಕೊಂಡು Online ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 31.01.2024ರ ಸಂಜೆ 5:30 ಗಂಟೆಯವರೆಗೆ ಇರುತ್ತದೆ. ಇತರೆ ಹೆಚ್ಚಿನ ವಿವರಗಳನ್ನು ಟೆಂಡರ್ ಡಾಕ್ಯೂಮೆಂಟ್ ಮೂಲಕ ಪಡೆಯಬಹುದಾಗಿದೆ.

ಟೆಂಡರ್ ಸಂಖ್ಯೆ: KFCSCL/2023-24/SE0055 Dated:22.01.2024

ಸಹಿ/– ಜಿಲ್ಲಾ ವ್ಯವಸ್ಥಾಪಕರು
ಕಆನಾಸನಿನಿ., ಕಾರವಾರ

ಕೃಷಿ ಇಲಾಖೆ

ಕೃಷಿ ಆಯುಕ್ತರ ಕಾರ್ಯಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು–01

ಸಂ.: ಉಕೃನಿ (ಕೃಯಾಂ&ಸೂನೀ)/FM RFP/kisan Drone/2023–24 ದಿನಾಂಕ: 18.01.2024

ಅಲ್ಪಾವಧಿ Request for Proposal ಪ್ರಕಟಣೆ

ಕೃಷಿ ಇಲಾಖೆಯ ಸಹಾಯಧನ ಕಾರ್ಯಕ್ರಮಗಳಡಿ ಕಿಸಾನ್ ಡ್ರೋನ್‌ಗಳನ್ನು ಸರಬರಾಜು ಮಾಡಲು ಯಂತ್ರೋಪಕರಣಗಳ ಮೂಲ ಉಪಕರಣ ತಯಾರಕರು / ತಯಾರಕರು ಸಂಸ್ಥೆಗಳನ್ನು ಎಂಪ್ಯಾನಲ್ ಮಾಡಲು ಅಲ್ಪಾವಧಿ Request for Proposal (RfP) ಯನ್ನು ಕರೆಯಲಾಗಿರುತ್ತದೆ. ಸದರಿ ಅಲ್ಪಾವಧಿ Request for Proposal ನಡಿ ಭಾಗವಹಿಸಲು ಇಚ್ಛಿಸುವ ಮೂಲ ಉಪಕರಣ ತಯಾರಕರು / ತಯಾರಕ ಸಂಸ್ಥೆಗಳು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ **https://kppp.karnataka.gov.in** ದಾಖಲಾತಿಗಳನ್ನು ಸಲ್ಲಿಸಬಹುದಾಗಿದೆ.

ಆಸಕ್ತ ಡ್ರೋನ್ ಮೂಲ ತಯಾರಕ / ತಯಾರಕ ಸಂಸ್ಥೆಗಳು RfP ಡಾಕ್ಯೂಮೆಂಟನ್ನು **https://kppp.karnataka.gov.in** ನಿಂದ, ಇ–ಪ್ರೊಕ್ಯೂರ್‌ಮೆಂಟ್ ಪ್ರೊಸೆಸಿಂಗ್ ಶುಲ್ಕ ಮತ್ತು ಇಲಾಖೆಯು ನಿಗದಿಪಡಿಸಿರುವ ಇ.ಎಂ.ಡಿ ಮೊತ್ತವನ್ನು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪಾವತಿಸಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಖಾಲಿ ಅರ್ಜಿಗಳನ್ನು ದಿ. **23.01.2024** ರಿಂದ ದಿ. **06.02.2024** ವರೆಗೆ **https://kppp.karnataka.gov.in** ವೆಬ್‌ಸೈಟ್‌ನಿಂದ ಪಡೆಯಬಹುದು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ **06.02.2024, ಅಪರಾಹ್ನ 4:30** ಗಂಟೆ.

RFP ಷರತ್ತುಗಳನ್ವಯ ತಾಂತ್ರಿಕ ಮತ್ತು ಆರ್ಥಿಕ ಪ್ರಸ್ತಾವನೆಗಳ ದಾಖಲಾತಿಗಳನ್ನು (Hard Copy / Physical deposition) ಉಪ ಕೃಷಿ ನಿರ್ದೇಶಕರ ಕಛೇರಿ, ಕೃಷಿ ಯಾಂತ್ರೀಕರಣ ಮತ್ತು ಸೂಕ್ಷ್ಮ ನೀರಾವರಿ ವಿಭಾಗ, ಕೃಷಿ ಆಯುಕ್ತರ ಕಾರ್ಯಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು–560001 ಇಲ್ಲಿ ದಿನಾಂಕ **07.02.2024**ರಂದು **ಅಪರಾಹ್ನ 4:30**ರ ವರೆಗೆ ಸ್ವೀಕರಿಸಲಾಗುವುದು.

ತಾಂತ್ರಿಕ ಪ್ರಸ್ತಾವನೆಗಳನ್ನು ದಿನಾಂಕ **08.02.2024** ರಂದು ಪೂರ್ವಾಹ್ನ **11:00** ಗಂಟೆಗೆ ಸಮೃದ್ಧಿ ಸಭಾಂಗಣ, ಕೃಷಿ ಆಯುಕ್ತರ ಕಾರ್ಯಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು–01 ಇಲ್ಲಿ ತೆರೆಯಲಾಗುವುದು.

ಈ ಪ್ರಕ್ರಿಯೆಯಲ್ಲಿ ಭಾಗವಹಿಸಲು DSC Key / e-Token ಗಳನ್ನು ಪರಿಗಣಿಸಿರುವ ಏಜನ್ಸಿಗಳ ಮುಖಾಂತರ ಪಡೆಯಬಹುದಾಗಿದೆ. ಈ ಕುರಿತು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾಗದ ವಿಳಾಸ ಇ–ಪ್ರೊಕ್ಯೂರ್‌ಮೆಂಟ್ ಸೆಲ್, ಇ–ಆಡಳಿತ ಕೇಂದ್ರ, 4ನೇ ಮಹಡಿ, ಶ್ರೀ ಅರವಿಂದ ಭವನ, ಮಿಥಿಕ್ ಸೊಸೈಟಿ ಕಾಂಪೌಂಡ್, ನೃಪತುಂಗ ರಸ್ತೆ, ಬೆಂಗಳೂರು–560001 **(Helpdesk: +91 80 46010000, +91 80 68948777).**

ಸೂಚನೆ: e-procurement ಸೇವಾ ಶುಲ್ಕವನ್ನು ವಾಪಸ್ಸು ಮಾಡಲಾಗುವುದಿಲ್ಲ ಹಾಗೂ RFP ದಾಖಲೆಗಳನ್ನು ಬೇರೆಯವರಿಗೆ ವರ್ಗಾಯಿಸಲು ಅವಕಾಶವಿರುವುದಿಲ್ಲ.

ಸಹಿ/–, ಕೃಷಿ ನಿರ್ದೇಶಕರು
ಮತ್ತು ಟೆಂಡರ್ ಆಹ್ವಾನ ಅಧಿಕಾರಿಗಳು

ವಾಸಾಸಂಇ/ವಾಪ್ರ/ಎಲ್‌ಸಿ/3168/2023–24

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ)
ಓ&ಎಂ ವಿಭಾಗ, ಬೈಯಪ್ಪನಹಳ್ಳಿ ಮೆಟ್ರೋ ರೈಲು ಡಿಪೋ, ಹಳೇ ಮದ್ರಾಸ್ ರಸ್ತೆ, ಎನ್‌ಜಿಇಎಫ್ ಬಸ್ ಸ್ಟಾಪ್ ಹತ್ತಿರ, ಬೆಂಗಳೂರು - 560 038. ದೂರವಾಣಿ: 080-25191039.
ಇ-ಮೇಲ್ : contactus@bmrc.co.in ವೆಬ್‌ಸೈಟ್ : www.bmrc.co.in

ಸಂ.: ಬಿಎಂಆರ್‌ಸಿಎಲ್/ಓಮತ್ತುಎಂ/ಐಟಿ/19/2023 ದಿನಾಂಕ: 23.01.2024

ಟೆಂಡರ್ ಪ್ರಕಟಣೆ

ಬಿಎಂಆರ್‌ಸಿಎಲ್, ಇವರು **"ಫೇಸ್–1 ಮತ್ತು ಫೇಸ್–1 ವಿಸ್ತರಣೆಯ ನಿಲ್ದಾಣಗಳು ಮತ್ತು ಡಿಪೋಗಳಲ್ಲಿ (68 ನಿಲ್ದಾಣಗಳು ಮತ್ತು 04 ಡಿಪೋಗಳು) ಫೇಸ್–ರಿಕಗ್ನಿಷನ್ ಆಧಾರಿತ ಅಕ್ಸೆಸ್ ಕಂಟ್ರೋಲ್ ಸಿಸ್ಟಮ್ (ಎಫ್‌ಬಿಎಸಿಎಸ್)ನ ಸರಬರಾಜು, ಅಳವಡಿಕೆ, ಪರೀಕ್ಷೆ ಮತ್ತು ಕಾರ್ಯಾಚರಣೆ (ಎಸ್‌ಐಟಿಸಿ)ಗಾಗಿ"** ಅರ್ಹ ದೇಶೀಯ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್ ಭದ್ರತಾ ಠೇವಣಿ : **ರೂ.32,29,319/-**. ಆನ್‌ಲೈನ್ ಮೂಲಕ ಟೆಂಡರ್ ದಸ್ತಾವೇಜುಗಳ ಮಾರಾಟದ ಅವಧಿ: **23.01.2024 ರಿಂದ 20.02.2024ರ ಮಧ್ಯರಾತ್ರಿಯವರೆಗೆ.** ಪ್ರೀ ಬಿಡ್ ಸಭೆ ದಿನಾಂಕ: **15.02.2024, ಬೆಳಿಗ್ಗೆ 11.30 ಗಂಟೆಗೆ.** ಟೆಂಡರ್ ಸಲ್ಲಿಸುವ ದಿನಾಂಕ ಮತ್ತು ಸಮಯ: **24.02.2024, ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 3.00 ಗಂಟೆವರೆಗೆ.** ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **24.02.2024, ಮಧ್ಯಾಹ್ನ 3.30 ಗಂಟೆಗೆ.** ಟೆಂಡರ್ ದಸ್ತಾವೇಜು ಬೆಲೆ: **ರೂ.1,18,000/-**. ಕಾಲಾವಧಿ: **04 ತಿಂಗಳು.** ಟೆಂಡರ್ ದಸ್ತಾವೇಜುಗಳನ್ನು ಬಿಎಂಆರ್‌ಸಿಎಲ್ ವೆಬ್‌ಸೈಟ್‌ನಿಂದಲೂ ಸಹ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: **http://tenderb.bmrc.co.in**

ಸಹಿ/- ಕಾರ್ಯನಿರ್ವಾಹಕ ನಿರ್ದೇಶಕರು (ಓ ಮತ್ತು ಎಂ)

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ. ಎಂ. ಹೆಚ್. ಮರೀಗೌಡ ರಸ್ತೆ, ಬೆಂಗಳೂರು–560 029.
ಫೋನ್: 26096832/26096910 E-mail: purchase@kmf.coop

ಅಧಿಸೂಚನೆ ಸಂಖ್ಯೆ: ಕಹಾಮ/ಖರೀದಿ/ಟೆಂಡರ್–614/2023–24 ದಿನಾಂಕ: 23.01.2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ಈ ಕೆಳಕಂಡ ವಿವರಗಳನ್ವಯ ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ http://kppp.karnataka.gov.inಗೆ ಬೇಟಿ ನೀಡಿ ಪಡೆಯಬಹುದಾಗಿದೆ.

Sl. No.	Item Description	Qty. (Nos.)	EMD (Rs.)
1	Supply of various type capacity Glass top & Hard top Deep Freezers for Ice Cream Storage	1000	As per tender document

ಟೆಂಡರ್ ಪ್ರಾರಂಭವಾಗುವ ದಿನಾಂಕ	24.01.2024ರಿಂದ
ಟೆಂಡರ್ ಪೂರ್ವಭಾವಿ ಸಭೆ ದಿನಾಂಕ	31.01.2024 ರಂದು ಬೆಳಿಗ್ಗೆ 11.00 ಗಂಟೆಗೆ
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	07.02.2024ರ ಸಂಜೆ 5.00 ಗಂಟೆ ಒಳಗಾಗಿ
ತಾಂತ್ರಿಕ ಟೆಂಡರ್ ತೆರಯುವ ದಿನಾಂಕ	09.02.2024 ರಂದು ಬೆಳಿಗ್ಗೆ 11.00 ಗಂಟೆಗೆ
ವಾಣಿಜ್ಯ ಟೆಂಡರ್ ತೆರಯುವ ದಿನಾಂಕ	ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ

ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ. 39, 2ನೇ ಮಹಡಿ, ಯುನೈಟೆಡ್ ಮ್ಯಾನ್ಷನ್, ಎಂ.ಜಿ. ರಸ್ತೆ, ಬೆಂಗಳೂರು–560 001. ಫೋನ್ : 080–25582656 / 71204445/ 71204446 , ಇ–ಮೇಲ್: **jddekshdc@gmail.com**
ವೆಬ್‌ಸೈಟ್: **http://www.cauverycrafts.com**

ಕರ್ನಾಟಕ ರಾಜ್ಯ ಕರಕುಶಲಕರ್ಮಿಗಳ ರಾಜ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನಿಸುವ ಕುರಿತು

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು 2023–24ನೇ ಸಾಲಿಗೆ ಈ ಕೆಳಗಿನ ಕರಕುಶಲ ಕಲೆಯಲ್ಲಿ ಪರಿಣಿತ ಕರಕುಶಲಕರ್ಮಿಗಳಿಗೆ **"ಕುಶಲಕಲಾ"** ರಾಜ್ಯ ಪ್ರಶಸ್ತಿ ಹಾಗೂ **"ಪ್ರಶಂಸನಾ ಪತ್ರ"** ಪ್ರದಾನ ಮಾಡಲು ಅರ್ಜಿ ಆಹ್ವಾನಿಸಲಾಗಿದೆ. ಕರ್ನಾಟಕ ರಾಜ್ಯದ ಪ್ರಮುಖ ಕರಕುಶಲ ಕಲೆಗಳಾದ ಬೀಟೆ, ಶ್ರೀಗಂಧ ಇತರೆ ಮರದ ಕೆತ್ತನೆ, ಕುಂದಣ ಕಲೆ, ಲೋಹ, ಬಿದರಿ, ಅರಗು ಬಣ್ಣದ ತಯಾರಿಕೆ, ಶಿಲ್ಪ ಕಲೆ, ಜವಳಿ ಆಧಾರಿತ ಕಲೆ (ಕಸೂತಿ ಜಮಖಾನ ಎಂಬ್ರಾಯಿಡ್ರಿ, ಬಾಟಿಕ್ ಮತ್ತು ಇತರೆ ವಸ್ತುಗಳು) ಮತ್ತು ಟ್ರೆಡಿಷನಲ್ ಪೈಂಟಿಂಗ್ ಹಾಗೂ ಇನ್ನಿತರೆ ಕಲೆಗಳಲ್ಲಿ ನಿರತರಾಗಿರುವ ಕರಕುಶಲಕರ್ಮಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಅರ್ಜಿ ಸಲ್ಲಿಸುವ ಕರಕುಶಲಕರ್ಮಿಗಳು ಕರ್ನಾಟಕದಲ್ಲಿಯೇ ಹುಟ್ಟಿದವರಾಗಿರಬೇಕು ಅಥವಾ 15 ವರ್ಷಗಳಿಂದ ಕರ್ನಾಟಕ ರಾಜ್ಯದಲ್ಲಿಯೇ ನೆಲೆಸಿದವರಾಗಿರಬೇಕು. ಹಿಂದಿನ ಸಾಲಿನ ಡಿಸೆಂಬರ್–2023ಕ್ಕೆ ಕನಿಷ್ಠ 30 ವರ್ಷಗಳನ್ನು ಪೂರೈಸಿ ಕರಕುಶಲ ಕಲೆಯಲ್ಲಿ ಕನಿಷ್ಠ 10 ವರ್ಷಗಳ ಅನುಭವವನ್ನು ಹೊಂದಿರಬೇಕು. ಕಲಾಕೃತಿಗಳನ್ನು ಪ್ರತ್ಯಕ್ಷವಾಗಿ ಮಾಡಿ ತೋರಿಸಲು ತಯಾರಿರಬೇಕು. ಅರ್ಜಿದಾರರು ಅರ್ಜಿಯನ್ನು ಕೆಳಕಂಡ ಪ್ರಾಂತೀಯ ಕಛೇರಿಗಳಲ್ಲಿ ಅಥವಾ ಎಲ್ಲಾ ಜಿಲ್ಲೆಗಳ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ರವರಿಂದ ಪಡೆಯಬಹುದಾಗಿದೆ. ಅಂಚೆಯ ಮೂಲಕ ಪಡೆಯಲು ಇಚ್ಛಿಸುವವರು **ರೂ.25.00**ರ ಸ್ಟ್ಯಾಂಪ್ ಹಚ್ಚಿದ ಸ್ವ–ವಿಳಾಸವುಳ್ಳ ಲಕೋಟೆಯೊಂದಿಗೆ ಪ್ರಾಂತೀಯ ಕಛೇರಿಗಳಿಗೆ ಕಳುಹಿಸಿ ಅಥವಾ ಖುದ್ದಾಗಿ ಪಡೆಯಬಹುದಾಗಿದೆ ಹಾಗೂ ಅರ್ಜಿಯನ್ನು ನಿಗಮದ ವೆಬ್‌ಸೈಟ್: **http//www.cauverycrafts.com** ಮೂಲಕ ಪಡೆಯಬಹುದು.

(1) ಬಹು ಕಲಾ ಸಂಕೀರ್ಣ: ಕೇಂದ್ರ ಕಛೇರಿ, ನಂ.39, ಯುನೈಟೆಡ್ ಮ್ಯಾನ್‌ಶನ್, 2ನೇ ಮಹಡಿ, ಎಂ.ಜಿ. ರಸ್ತೆ, ಬೆಂಗಳೂರು–560 001. ಮೊಬೈಲ್: 9844271975. **(2) ಶ್ರೀಗಂಧದ ಕಲಾ ಸಂಕೀರ್ಣ:** ಕೆಳದಿ ರಸ್ತೆ, ಸಾಗರ ತಾಲ್ಲೂಕು, ಸಾಗರ, ಶಿವಮೊಗ್ಗ ಜಿಲ್ಲೆ–577 401. ಮೊಬೈಲ್: 9945458941. **(3) ಬಹು ಕಲಾ ಸಂಕೀರ್ಣ:** ಮೇಟಗಳ್ಳಿ, ಮೈಸೂರು–570 016, ಮೊಬೈಲ್: 8197728284. **(4) ಶ್ರೀಗಂಧದ ಕಲಾ ಸಂಕೀರ್ಣ:** ಕೋರ್ಲಕಟ್ಟಾ ರಸ್ತೆ, ಚಿಪಗಿ ಅಂಚೆ, ಶಿರಸಿ, ಉತ್ತರ ಕನ್ನಡ ಜಿಲ್ಲೆ–581 401. ಮೊಬೈಲ್: 9945458941. **(5) ಬಿದರಿ ಕಲಾ ಸಂಕೀರ್ಣ:** ಮೈಲೂರು ರಸ್ತೆ, ಬೀದರ್. ದೂರವಾಣಿ: 08482–226347, ಮೊಬೈಲ್: 9440088687. **(6) ಅರಗು ಬಣ್ಣದ ಕಲಾ ಸಂಕೀರ್ಣ:** ಕಲಾ ನಗರ, ತಟ್ಟೆ ಕೆರೆ ರಸ್ತೆ, ಚನ್ನಪಟ್ಟಣ–571 501, ಮೊಬೈಲ್: 9945214618. **(7) ಗ್ರಾಮೀಣ ಮಾರುಕಟ್ಟೆ ಮತ್ತು ಸೇವಾ ವಿಸ್ತರಣಾ ಕೇಂದ್ರ:** ಗವಿಮಠ ಹತ್ತಿರ, ನವಲಗುಂದ, ಧಾರವಾಡ ಜಿಲ್ಲೆ–582 208. ಮೊಬೈಲ್: 9845689142. **(8) ಶ್ರೀಗಂಧದ ಕಲಾ ಸಂಕೀರ್ಣ:** ಸಿದ್ದನಭಾವಿ, ಮರೂರು ರಸ್ತೆ, ಕುಮಟಾ–581 343. ಮೊಬೈಲ್: 9945458941. **(9) ಶ್ರೀಗಂಧದ ಕಲಾ ಸಂಕೀರ್ಣ:** ಶ್ರೀಗಂಧ ನಗರ, ಮರೂರು ರಸ್ತೆ, ಸೊರಬ–577 429. ಮೊಬೈಲ್: 9945458941.

ಭರ್ತಿ ಮಾಡಿದ ಅರ್ಜಿ ಪ್ರಶಸ್ತಿಗೆ ಇಡಲಾಗುವ ಶ್ರೇಷ್ಠ ಕಲಾಕೃತಿ, ಫೋಟೋ ಹಾಗೂ ದಾಖಲಾತಿಗಳೊಂದಿಗೆ ಮೇಲ್ಕಂಡ ಕಛೇರಿಗಳಲ್ಲಿ **ದಿನಾಂಕ:15.03.2024 ರೊಳಗಾಗಿ** ಸಲ್ಲಿಸುವುದು.

ಸಹಿ/- ವ್ಯವಸ್ಥಾಪಕ ನಿರ್ದೇಶಕರು

ಕಲಬುರಗಿ ಮಹಾನಗರ ಪಾಲಿಕೆ

Fax No.08472/260776, Phone: 08472/ 278675, Email Id: itstaff_ulb_gulbarga@yahoo.com

ಸಂಖ್ಯೆ: ಕಮಪಾ/ಕಾ.ಅ./ತಾಶಾ–01/ಪಾ.ಅ/2023–24 ದಿನಾಂಕ: 16.01.2024

ಇ–ಪ್ರೊಕ್ಯೂರಮೆಂಟ್ ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ

1) ಕಾಮಗಾರಿಯ ವಿವರ: 2023–24ನೇ ಸಾಲಿನ ಪಾಲಿಕೆಯ ಸಾಮಾನ್ಯ ನಿಧಿ ಅನುದಾನದಲ್ಲಿ 3 ಕಾಮಗಾರಿಗಳು ಮತ್ತು NCAP 2023–24 ನೇ ಸಾಲಿನ ಅನುದಾನದಲ್ಲಿ 2 ಕಾಮಗಾರಿಗಳು, 2) ಲೆಕ್ಕ ಶೀರ್ಷಿಕೆ: 2023–24ನೇ ಸಾಲಿನ ಪಾಲಿಕೆಯ ಸಾಮಾನ್ಯ ನಿಧಿ ಅನುದಾನ ಹಾಗೂ NCAP 2023–24 ನೇ ಸಾಲಿನ ಅನುದಾನ, 3) ಟೆಂಡರಿಗಿಟ್ಟ ಮೊತ್ತ: ಗರಿಷ್ಠ ಮೊತ್ತ **ರೂ. 78,00,000.00 ಕನಿಷ್ಠ ಮೊತ್ತ ರೂ. 20,00,000.00,** 4) ಇ.ಎಮ್.ಡಿ ಮೊತ್ತ: As per KPPP portal And gem portal, 5) ಗುತ್ತಿಗೆದಾರರ ಅರ್ಹತೆ: As per KPPP portal And gem portal 6) ಟೆಂಡರ ಸಲ್ಲಿಸಲು ಅಂತಿಮ ದಿನಾಂಕ: 3 ಕಾಮಗಾರಿಗಳಿಗೆ 29.01.2024 ಸಾಯಂಕಾಲ 04:00 ಗಂಟೆಯವರೆಗೆ ಹಾಗೂ 2 ಕಾಮಗಾರಿಗಳಿಗೆ 05.02.2024 ಸಾಯಂಕಾಲ 04:00 ಗಂಟೆಯವರೆಗೆ, 7) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 3 ಕಾಮಗಾರಿಗಳಿಗೆ 30.01.2024 ಸಾಯಂಕಾಲ 04:30 ಗಂಟೆಯವರೆಗೆ ಹಾಗೂ 2 ಕಾಮಗಾರಿಗಳಿಗೆ 06.02.2024 ಸಾಯಂಕಾಲ 04:30 ಗಂಟೆಯವರೆಗೆ, 8) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿನಾಂಕ: 3 ಕಾಮಗಾರಿಗಳಿಗೆ 01.02.2024 ಬೆಳಿಗ್ಗೆ 11:00 ಗಂಟೆಗೆ ಹಾಗೂ 2 ಕಾಮಗಾರಿಗಳಿಗೆ 08.02.2024 ಬೆಳಿಗ್ಗೆ 11:00 ಗಂಟೆಗೆ, 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಮತ್ತು ಮೋ. ನಂ : ಕಾರ್ಯನಿರ್ವಾಹಕ ಅಭಿಯಂತರರು ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ. 9972263001, 10) ಅಂತರಜಾಲ ತಾಣದ ವಿಳಾಸ: https://kppp.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/706/ಕೆ.ಎಸ್.ಎಂ.ಸಿ.&ಎ/2023–24

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ

ಸಂ.ಕಾನಿಅ/ಲೋಇ/ಕವಿ/ತಾಶಾ–3/.ಟೆಂಡರ್.ಅಧಿಸೂಚನೆ/2023–24/7169 ದಿನಾಂಕ: 19.01.2024

ಅಲ್ಪಾವಧಿ ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಾರ್ಯಲಯದಿಂದ ಲೆಕ್ಕ ಶೀರ್ಷಿಕೆ ಅಪೆಂಡಿಕ್ಸ–ಇ, 2059, ಅಪೆಂಡಿಕ್ಸ್–ಇ ಹಾಗೂ 8443 ಯೋಜನೆಯಡಿಯಲ್ಲಿ (03) ಕಾಮಗಾರಿಗಳಿಗೆ KPPP Portal ಮುಖಾಂತರ ಟೆಂಡರ ಕರೆಯಲಾಗಿದೆ. ವರ್ಕ ಇಂಡೆಂಟ್ 7007, 6527 & 6371/ CALL-4 (work reserved for SC category). 2) ಕಾಮಗಾರಿ ಅಂದಾಜು ಮೊತ್ತ : ಕನಿಷ್ಠ **ರೂ. 16.87 ಲಕ್ಷಗಳು ಗರಿಷ್ಠ ರೂ. 254.17 ಲಕ್ಷಗಳು.** 3) ಗುತ್ತಿಗೆದಾರರ ಅರ್ಹತೆ ವಿವರ : ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ನಾಲ್ಕನೇ ದರ್ಜೆ ಮತ್ತು ಮೇಲ್ಪಟ್ಟ ನೊಂದಾಯಿತ ಸಿವಿಲ್ & ವಿದ್ಯುತ್ ಗುತ್ತಿಗೆದಾರರಾಗಿರಬೇಕು. 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ : ಅರ್ಜಿ ಬೆಲೆ KPPP Portal ನಂತೆ, ಇ.ಎಮ್.ಡಿ. ಕನಿಷ್ಟ ಮೊತ್ತ ರೂ: 43,000.00 ಮತ್ತು ಗರಿಷ್ಠ ಮೊತ್ತ ರೂ. 3,82,000.00. 5) ಪ್ರೀ ಬಿಡ್ ಸಭೆ ದಿನಾಂಕ : 24/01/2024 (11.00 ಗಂಟೆ). 6) ಟೆಂಡರ ಬಗ್ಗೆ ಮಾಹಿತಿ ಹಾಗು ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ : 25/01/2024 (17.30 ಗಂಟೆ). 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : 29/01/2024 (16.00 ಗಂಟೆ). 8) ತಾಂತ್ರಿಕ ಬಿಡ್ ತೆರೆವುಗೊಳಿಸುವ ದಿನಾಂಕ : 30/01/2024 (16.30 ಗಂಟೆ). 9) ಆರ್ಥಿಕ ಬಿಡ್ ತೆರೆವುಗೊಳಿಸುವ ದಿನಾಂಕ : 31/01/2024 (16.30 ಗಂಟೆ). 10) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಲಬುರಗಿ ಕಚೇರಿ. 11) ಅಂತರ್ಜಾಲ ತಾಣದ ವಿಳಾಸ : https://kppp.karnataka.gov.in

ಸಹಿ/–ಕಾರ್ಯನಿರ್ವಾಹಕ ಇಂಜಿನಿಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/699/ಕೆ.ಎಸ್.ಎಂ.ಸಿ.&ಎ/2023–24

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು
Raichur Institute of Medical Sciences, Raichur

(ಸರ್ಕಾರದ ಸ್ವಾಯತ್ತ ಸಂಸ್ಥೆ) (ಹೈದ್ರಾಬಾದ್ ರೋಡ್, ರಾಯಚೂರು –584102)
Phone /Fax-08532-238488/89
Web.www.rims-raichur.gov.in Email info@rims-raichur.com

ಸಂ. ರಿಮ್ಸ್ /ಸರಬರಾಜು/ಟೆಂಡರ್/2023–24 ದಿನಾಂಕ: 20.01.2024

ಇ–ಟೆಂಡರ್ ಪ್ರಕಟಣೆ

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಗೆ ಹಾಗೂ ರೋಗನಿರ್ಧಾರಕ ಶಾಸ್ತ್ರ & ಮಿಣಜೀವಶಾಸ್ತ್ರ ವಿಭಾಗಕ್ಕೆ ಅವಶ್ಯವಿರುವ ವಿವಿಧ ರಸಾಯನಿಕಗಳು, ರಿಏಜೆಂಟ್ಸ್‌ಗಳು ಮತ್ತು ಇತರೆ ಐಟಂಗಳನ್ನು ಖರೀದಿಸಿ ಪೂರೈಸಲು ಅರ್ಹ ಟೆಂಡರ್‌ದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ	ಟೆಂಡರ್‌ನ ವಿವರ	ಟೆಂಡರ್‌ನ ಸಂಖ್ಯೆ	ಅಂದಾಜು ವೆಚ್ಚ (ಲಕ್ಷಗಳಲ್ಲಿ)
1	ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ವಿವಿಧ ರಸಾಯನಿಕಗಳು, ರಿಏಜೆಂಟ್ಸ್‌ಗಳು ಮತ್ತು ಇತರೆ ಐಟಂಗಳನ್ನು ಖರೀದಿಸಿ ಪೂರೈಸುವ ಕುರಿತು	ರಿಮ್ಸ್/ಸರಬರಾಜು/ಟೆಂಡರ್/ ಲ್ಯಾಬ್/112/2023–24	106.34
2	ರಿಮ್ಸ್ ಸಂಸ್ಥೆಯ ರೋಗನಿರ್ಧಾರಕ ಶಾಸ್ತ್ರ ಮತ್ತು ಮಿಣಜೀವಶಾಸ್ತ್ರ ವಿಭಾಗಕ್ಕೆ ಅವಶ್ಯವಿರುವ ರಸಾಯನಿಕಗಳು ಮತ್ತು ರಿಏಜೆಂಟ್ಸ್‌ಗಳನ್ನು ಖರೀದಿಸಿ ಪೂರೈಸುವ ಕುರಿತು	ರಿಮ್ಸ್/ಸರಬರಾಜು/ಟೆಂಡರ್/ ಕೆಮ್/113/2023–24	99.77

1) ಟೆಂಡರ್‌ಗಳನ್ನು ದಿನಾಂಕ: 22.01.2024 ರಿಂದ ಕೆಪಿಪಿಪಿ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು, 2) ಪ್ರಶ್ನೆಗಳಿಗೆ ಕೊನೆಯ ದಿನಾಂಕ 30.01.2024 ರ ಸಾಯಂಕಾಲ 5.00ಗಂಟೆಯವರೆಗೆ, 3) ಪೂರ್ವಭಾವಿ ಸಭೆಯ ದಿನಾಂಕ 31.01.2024 ಬೆಳಿಗ್ಗೆ 11.30ಗಂಟೆಗೆ 4) ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 05.02.2024 ರ ಸಾಯಂಕಾಲ 5.00ಗಂಟೆವರೆಗೆ, 4) ತಾಂತ್ರಿಕ ಲಕೋಟೆ (ಮೊದಲನೇಯ ಕವರ್) ತೆರೆಯುವ ದಿನಾಂಕ : 07.02.2024 ಬೆಳಿಗ್ಗೆ 11.30ಗಂಟೆಗೆ.

ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರು ಯಾವುದೆ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ / ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಸದರಿ ಟೆಂಡರ್‌ಗಳ ಯಾವುದೆ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸುಲಾಗುವುದಿಲ್ಲ, ಬದಲಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಆಸಕ್ತಿವುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ ವೆಬ್‌ಸೈಟ್ http://kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ರಾಯಚೂರು

DIP/RCR/406/KSMC&A/Job No.409/2023-24

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79
ಫ್ಯಾಕ್ಸ್: 080–22268667, ಇ–ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ: ಕವಿನಿಆ/ಬಿ/01/2024/1224 ದಿನಾಂಕ: 22–01–2024

ಸಾರ್ವಜನಿಕ ವಿಚಾರಣೆಯ ಪ್ರಕಟಣೆ

ವಿಷಯ: 2024–25 ನೇ ಸಾಲಿಗೆ ವಿದ್ಯುತ್ ಸರಬರಾಜು ಕಂಪನಿಗಳು ಸಲ್ಲಿಸಿರುವ ದರ ಪರಿಷ್ಕರಣೆ ಅರ್ಜಿಯ ಬಗ್ಗೆ ಸಾರ್ವಜನಿಕ ವಿಚಾರಣೆಯ ಕುರಿತು.

ಕರ್ನಾಟಕ ರಾಜ್ಯದಲ್ಲಿನ ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳು (ಬೆಸ್ಕಾಂ, ಮೆಸ್ಕಾಂ, ಸೆಸ್ಕ್, ಹೆಸ್ಕಾಂ, ಜೆಸ್ಕಾಂ ಮತ್ತು ಹುಕ್ಕೇರಿ ಆರ್.ಇ.ಸಿ.ಎಸ್.) ಆರ್ಥಿಕ ವರ್ಷ 2022–23 ನೇ ಸಾಲಿನ ವಾರ್ಷಿಕ ಕಾರ್ಯನಿರ್ವಹಣಾ ಪರಿಶೀಲನೆ (ಎ.ಪಿ.ಆರ್) ಹಾಗೂ ಆರ್ಥಿಕ ವರ್ಷ 2024–25 ನೇ ಸಾಲಿನ ವಾರ್ಷಿಕ ಕಂದಾಯ ಅಗತ್ಯತೆ (ಎ.ಆರ್.ಆರ್.) ಮತ್ತು ಆರ್ಥಿಕ ವರ್ಷ 2024–25 ನೇ ಸಾಲಿಗೆ ವಿದ್ಯುತ್ ದರ ನಿಗದಿಗಾಗಿ ಅನುಮೋದನೆ ಪಡೆಯಲು ಅರ್ಜಿಗಳನ್ನು ಆಯೋಗಕ್ಕೆ ಸಲ್ಲಿಸಿವೆ. ಇದಲ್ಲದೆ, ಮಂಗಳೂರು ಎಸ್‌ಇಝಡ್ ಮತ್ತು ಎಇಕ್ಯೂಯುಎಸ್ ಎಸ್‌ಇಝಡ್ ಆರ್ಥಿಕ ವರ್ಷ 2022–23 ರ ವಾರ್ಷಿಕ ಕಾರ್ಯ ಪರಿಶೀಲನೆ ಹಾಗೂ ಆರ್ಥಿಕ ವರ್ಷ 2024–25 ನೇ ಸಾಲಿನ ವಾರ್ಷಿಕ ಕಂದಾಯ ಅಗತ್ಯತೆ ಹಾಗೂ 2024–25 ನೇ ಸಾಲಿನ ವಿದ್ಯುತ್ ದರ ನಿಗದಿಗಾಗಿ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿವೆ. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವೂ ಕೂಡ ಆರ್ಥಿಕ ವರ್ಷ 2022–23 ನೇ ವಾರ್ಷಿಕ ಕಾರ್ಯನಿರ್ವಹಣಾ ಪರಿಶೀಲನೆ (ಎ.ಪಿ.ಆರ್) ಮತ್ತು ಆರ್ಥಿಕ ವರ್ಷ 2024–25 ನೇ ವರ್ಷಕ್ಕೆ ವಿದ್ಯುತ್ ಪ್ರಸರಣ ದರ ನಿಗಧಿಪಡಿಸಲು ಪ್ರಸ್ತಾವನೆಯನ್ನು ಸಲ್ಲಿಸಿವೆ. ಸದರಿ ವಿದ್ಯುತ್ ಪ್ರಸರಣ ಮತ್ತು ಸರಬರಾಜು ಪರವಾನಿಗೆದಾರರು ತಮ್ಮ ಪ್ರಸ್ತಾವನೆಗಳ ಸಂಕ್ಷಿಪ್ತ ವಿವರಗಳನ್ನು ಈಗಾಗಲೇ ಪತ್ರಿಕೆಗಳಲ್ಲಿ ಪ್ರಕಟಿಸಿ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿವೆ. ಈ ಪ್ರಸ್ತಾವನೆಗಳ ವಿವರಗಳು ಸದರಿ ಕಂಪನಿಗಳ ವೆಬ್‌ಸೈಟ್ ಮತ್ತು ಆಯೋಗದ ವೆಬ್‌ಸೈಟ್: **https://kerc.karnataka.gov.in** ನಲ್ಲಿ ಲಭ್ಯ ಇರುತ್ತದೆ.

ಈ ಬಗ್ಗೆ ಸಲಹೆ / ಆಕ್ಷೇಪಣೆ / ಪ್ರತಿಕ್ರಿಯೆಗಳನ್ನು ಆಲಿಸಲು ಆಯೋಗವು ಈ ಕೆಳಗೆ ಸೂಚಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ **"ಸಾರ್ವಜನಿಕ ವಿಚಾರಣೆ"** ಯನ್ನು ಏರ್ಪಡಿಸಿದೆ.

ಕ್ರ. ಸಂ.	ಕಂಪನಿಯ ಹೆಸರು	ದಿನಾಂಕ	ಸಮಯ	ಸ್ಥಳ
1	ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಮಂಗಳೂರು.	12–02–2024 ಸೋಮವಾರ	ಬೆಳಿಗ್ಗೆ 10.00 ಗಂಟೆ	ಸಭಾಂಗಣ, ಮೆಸ್ಕಾಂ ಕಾರ್ಪೋರೇಟ್ ಕಛೇರಿ, ಮೆಸ್ಕಾಂ, ದಕ್ಷಿಣ ಕನ್ನಡ, ಮಂಗಳೂರು.
2	ಮಂಗಳೂರು ವಿಶೇಷ ಆರ್ಥಿಕ ವಲಯ (ಎಂ.ಎಸ್.ಇ.ಝಡ್)			
3	ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು.	13–02–2024 ಮಂಗಳವಾರ	ಮಧ್ಯಾಹ್ನ 2.00 ಗಂಟೆ	ನ್ಯಾಯಾಂಗಣ ಸಭಾಂಗಣ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಸಂಖ್ಯೆ.16 ಸಿ–1, ಮೊದಲನೇ ಮಹಡಿ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052.
4	ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ, ಮೈಸೂರು.	14–02–2024 ಬುಧವಾರ	ಬೆಳಿಗ್ಗೆ 10.00 ಗಂಟೆ	ಜಿಲ್ಲಾ ಪಂಚಾಯತ್ ಸಭಾಂಗಣ, ಮೈಸೂರು
5	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಬೆಂಗಳೂರು.	15–02–2024 ಗುರುವಾರ	ಬೆಳಿಗ್ಗೆ 10.00 ಗಂಟೆ	ನ್ಯಾಯಾಂಗಣ ಸಭಾಂಗಣ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಸಂಖ್ಯೆ.16 ಸಿ–1, ಮೊದಲನೇ ಮಹಡಿ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052.
6	ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಕಲಬುರಗಿ.	20–02–2024 ಮಂಗಳವಾರ	ಬೆಳಿಗ್ಗೆ 10.00 ಗಂಟೆ	ನ್ಯಾಯಾಂಗಣ ಸಭಾಂಗಣ, ಜಿಲ್ಲಾಧಿಕಾರಿಗಳ ಕಛೇರಿ, ಕಲಬುರಗಿ.
7	ಹುಕ್ಕೇರಿ ಗ್ರಾಮೀಣ ವಿದ್ಯುತ್ ಕೋ–ಆಪರೇಟೀವ್ ಸೊಸೈಟಿ (HRECS); AEQUS ವಿಶೇಷ ಆರ್ಥಿಕ ವಲಯ (ಎಇಕ್ಯೂಯುಎಸ್ ಎಸ್‌ಇಝಡ್)	20–02–2024 ಮಂಗಳವಾರ	ಮಧ್ಯಾಹ್ನ 2.30 ಗಂಟೆ	ಜೆಸ್ಕಾಂ ಕಾರ್ಪೋರೇಟ್ ಕಛೇರಿಯಿಂದ ವಿಡಿಯೋ ಸಂವಾದ (ಆನ್‌ಲೈನ್) ಮೂಲಕ, ಕಲಬುರಗಿ.
8	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿ.	21–02–2024 ಬುಧವಾರ	ಬೆಳಿಗ್ಗೆ 10.00 ಗಂಟೆ	ನೂತನ ಸಭಾಂಗಣ, ಹೆಸ್ಕಾಂ ಕಾರ್ಪೋರೇಟ್ ಕಛೇರಿ, ನವನಗರ, ಹುಬ್ಬಳ್ಳಿ.

ತಾವು **"ಸಾರ್ವಜನಿಕ ವಿಚಾರಣೆ"** ಯಲ್ಲಿ ಭಾಗವಹಿಸಿ, ತಮ್ಮ ಸಲಹೆಗಳನ್ನು ಮೌಖಿಕ / ಲಿಖಿತ ರೂಪದಲ್ಲಿ ಆಯೋಗಕ್ಕೆ ಸಲ್ಲಿಸಬಹುದಾಗಿದೆ ಎಂದು ತಿಳಿಸಲು ಆಯೋಗದಿಂದ ನಿರ್ದೇಶಿಸಲ್ಪಟ್ಟಿರುತ್ತೇನೆ.

ಸಹಿ/–
ಕಾರ್ಯದರ್ಶಿ

ವಾಸಾಸಂಇ/ವಾ.ಪ್ರ/3182/2023–24

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜೀನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಚಿಕ್ಕೋಡಿ.

ನಂ.ಲೋ.ಇ./ಚಿ.ವಿ./ಸ.ಇಂ.–1/ಟೆಂಡರ/2023–24/4995 ದಿನಾಂಕ:20/01/2024

ಅಲ್ಪಾವಧಿ ಇ–ಟೆಂಡರ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ ಲೆಕ್ಕ ಶೀರ್ಷಿಕೆ 5054–ರಾಹೆ ಸೇತುವೆ ಸುಧಾರಣೆ ಅಡಿ 2 ಕಾಮಗಾರಿಗಳು ಹಾಗೂ 5054–ರಾಹೆ ಸುಧಾರಣೆ ಅಡಿ 3 ಕಾಮಗಾರಿಗಳು, ಹೀಗೆ ಒಟ್ಟು 5 ಕಾಮಗಾರಿಗಳು ಇದ್ದು, ಗುತ್ತಿಗೆ ಇಟ್ಟ ಕನಿಷ್ಠ ಮೊತ್ತ ರೂ. 80.00 ಲಕ್ಷ ಹಾಗೂ ಗರಿಷ್ಟ ಮೊತ್ತ ರೂ. 458.33 ಲಕ್ಷ ಇರುವ ಕಾಮಗಾರಿಗೆ ಗುತ್ತಿಗೆ ಆಹ್ವಾನಿಸಲಾಗಿದೆ.

ಕ್ರ.ಸಂ. 1 ರಿಂದ 3 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು.

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:25–01–2024 ರಂದು (11.00 ಗಂಟೆಗೆ), 2)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:29–01–2024 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:31–01–2024 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):02–02–2024 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕ್ರ.ಸಂ. 4 & 5 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು.

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:02–02–2024 ರಂದು (11.00 ಗಂಟೆಗೆ), 2)ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:03–02–2024 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:05–02–2024 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):07–02–2024 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಯ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜೀನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-983/KSMCA/2023-24



ರಾಮ ಸೀತಾ ಲಕ್ಷ್ಮಣ ದೇವಾಲಯ ಉದ್ಘಾಟನೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

‘ನಾನು ನಾಸ್ತಿಕನಲ್ಲ; ಮಂದಿರ ಕಟ್ಟಿಸಿರುವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾನು ನಾಸ್ತಿಕನಲ್ಲ. ನಮ್ಮೂರಲ್ಲೂ ರಾಮನ ಗುಡಿ ಕಟ್ಟಿಸಿದ್ದೇನೆ. ಪ್ರತಿ ಯೊಬ್ಬರೂ ಅವರವರ ನಂಬಿಕೆಯಂತೆ ರಾಮನನ್ನು ಪೂಜಿಸುತ್ತಾರೆ. ಜಾತಿ- ಧರ್ಮಗಳ ಆಧಾರದಲ್ಲಿ ಮನುಷ್ಯರನ್ನು ದ್ವೇಷಿಸಲು ಯಾವ ಧರ್ಮವೂ ಹೇಳುವುದಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬಿದರಹಳ್ಳಿ ಹೋಬಳಿಯ, ಹಿರಂಡ ಹಳ್ಳಿ ಶ್ರೀರಾಮ ಟೆಂಪಲ್ ಟ್ರಸ್ಟ್ ನಿರ್ಮಿಸಿರುವ ರಾಮ ಸೀತಾ ಲಕ್ಷ್ಮಣ ದೇವಾಲಯ ಹಾಗೂ 33 ಅಡಿ ಎತ್ತರದ ಏಕಶಿಲಾ ಆಂಜನೇಯ ಸ್ವಾಮಿ ವಿಗ್ರಹದ ಶಿಲಾ ಪ್ರತಿಷ್ಠಾಪನಾ ಕಾರ್ಯಕ್ರಮವನ್ನು ಸೋಮವಾರ ಉದ್ಘಾಟಿಸಿ ಅವರು ಮಾತನಾಡಿದರು.

ಸಕಲ ಜೀವಗಳೂ ಸಮಾನತೆ, ಪ್ರೀತಿಯಿಂದ ಬಾಳಬೇಕು ಎನ್ನುವುದು ಶ್ರೀರಾಮನ ಆದರ್ಶ ಆಶಯ. ಅಧರ್ಮ, ಅಮಾನವೀಯ ಕೆಲಸ ಮಾಡಿ ನಾಟಕೀಯವಾಗಿ ಪೂಜೆ ಮಾಡಿದರೆ ಆ ಪೂಜೆಯನ್ನು ದೇವರು ಒಪ್ಪಿಕೊಳ್ಳುವು-ದಿಲ್ಲ’ ಎಂದು ತಿಳಿಸಿದರು..

ಶ್ರೀರಾಮ ಸಮಾಜಮುಖಿ ಆಗಿದ್ದ. ಮಡಿವಾಳನ ಮಾತಿಗೂ ಬೆಲೆ ಕೊಟ್ಟಿದ್ದ. ಪಿತೃವಾಕ್ಯ ಪರಿಪಾಲನೆಗೆ ವನವಾಸಕ್ಕೆ ಹೋಗಿದ್ದ ಎಂದು ಹೇಳಿದರು.



ದೇವಾಲಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಲ್ಲು ಬಾಣವನ್ನು ಬಿಜೆಪಿ ಮುಖಂಡ ಅರವಿಂದ ಲಿಂಬಾವಳಿಯೆಡೆಗೆ ಗುರಿ ಇಟ್ಟು ತಮಾಷೆ ಮಾಡಿದರು. ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ, ಸಚಿವ ಬೈರತಿ ಸುರೇಶ್, ಸಂತೋಷ್ ಗುರೂಜಿ ಭಾಗವಹಿಸಿದ್ದರು

‘ಮಹಾತ್ಮ ಗಾಂಧಿಯ ರಾಮ ನಮ್ಮ ರಾಮ’

‘ಬಿಜೆಪಿಯವರು ಹೇಳುತ್ತಾರಲ್ಲ, ಆ ರಾಮ ನಮ್ಮ ರಾಮ ಅಲ್ಲ. ಮಹಾತ್ಮ ಗಾಂಧಿಯ ರಾಮ, ರಾಮಾಯಣದ ರಾಮ ನಮ್ಮ ರಾಮ. ಶ್ರೀರಾಮಚಂದ್ರ ಎಲ್ಲರ ದೇವರು. ಆತನನ್ನೇ ನಾವು ಪೂಜಿಸುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ಅಯೋಧ್ಯೆ ಇರುವುದು ಉತ್ತರ ಪ್ರದೇಶದಲ್ಲಿ. ಹಾಗಾಗಿ ಬೇರೆ ರಾಜ್ಯಗಳಲ್ಲಿ ರಜೆ ನೀಡಿಲ್ಲ. ನಮ್ಮ ರಾಜ್ಯದಲ್ಲಿಯೂ ರಜೆ ನೀಡಿಲ್ಲ. ಅದಕ್ಕೆ ಕಾಂಗ್ರೆಸ್ಸಿಗರು ರಾಮನ ವಿರೋಧಿ ಎಂದು ಬಿಜೆಪಿಯವರು ಬಿಂಬಿಸುತ್ತಿರುವುದು ತಪ್ಪು. ರಾಜಕೀಯಕ್ಕೆ ಬಳಸುವುದು ತಪ್ಪು’ ಎಂದು ಸುದ್ದಿಗಾರರಿಗೆ ತಿಳಿಸಿದರು.

‘ಇವತ್ತು ಶ್ರೀರಾಮ ದೇವಸ್ಥಾನವನ್ನು, ಆಂಜನೇಯ ವಿಗ್ರಹವನ್ನೂ ಉದ್ಘಾಟಿಸಿದ್ದೇನೆ. ಇದನ್ನು ರಾಜಕಾರಣಕ್ಕಾಗಿ ಮಾಡಿರುವುದಲ್ಲ. ಸಮಯ ದೊರೆತಾಗ ಅಯೋಧ್ಯೆಗೆ ಹೋಗುತ್ತೇನೆ’ ಎಂದು ಉತ್ತರಿಸಿದರು.

‘ಬಿಜೆಪಿಯವರು ಅಯೋಧ್ಯೆಯಲ್ಲಿ. ರಾಮನನ್ನು ಮಾತ್ರ ಪ್ರತಿಷ್ಠಾಪಿಸಿದ್ದಾರೆ. ರಾಮನೊಂದಿಗೆ ಸೀತಾದೇವಿ, ಲಕ್ಷ್ಮಣ, ಆಂಜನೇಯ ಇದ್ದಾಗ ಮಾತ್ರ ಪರಿಪೂರ್ಣ. ಇವರು ಶ್ರೀರಾಮಚಂದ್ರನನ್ನೇ ಬೇರ್ಪಡಿಸುವ ಪ್ರಯತ್ನ ಮಾಡುತ್ತಿದ್ದಾರೆ’ ಎಂದು ಟೀಕಿಸಿದರು.

‘ನೀವು ಯಾವ ಸೀಮೆ ರಾಮಭಕ್ತರು?’

ಬೆಂಗಳೂರು: ‘ನೀವು ನಿಜವಾದ ರಾಮಭಕ್ತ ಆಗಿದ್ದರೆ, ಚುನಾವಣೆ ವೇಳೆ ನಿಮ್ಮ ಪ್ರಣಾಳಿಕೆ ಮೂಲಕ ಜನತೆಗೆ ನೀಡಿದ್ದ ವಾಗ್ದಾನದಲ್ಲಿ ಎಷ್ಟನ್ನು ಈಡೇರಿಸಿದ್ದೀರಿ? ಎಷ್ಟನ್ನು ಈಡೇರಿಸಬೇಕಿದೆ ಎನ್ನುವುದನ್ನು ಅಯೋಧ್ಯೆಯಲ್ಲಿ ಉದ್ಘಾಟಿಸಿದ ರಾಮಮಂದಿರದಲ್ಲಿ ನಿಂತು ಪ್ರಮಾಣ ಮಾಡಬೇಕಿತ್ತು’ ಎಂದು ಪ್ರಧಾನಿ ನರೇಂದ್ರ ಮೋದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

‘ನಿಮಗೆ ಆ ಧೈರ್ಯವಿಲ್ಲ. ಅದು ಬರುವುದೂ ಇಲ್ಲ. ಏಕೆಂದರೆ ರಾಮ, ನಿಮಗೆ ಚುನಾವಣಾ ಅಸ್ತ್ರ ಮಾತ್ರ’ ಎಂದೂ ಅವರು ತಮ್ಮ ಜಾಲತಾಣದ ಖಾತೆಯಲ್ಲಿ ಬರೆದಿದ್ದಾರೆ.

‘ವಚನ ಪರಿಪಾಲನೆ ಎಂದರೇನು ಎಂಬುದೇ ತಿಳಿಯದ ನೀವು ಯಾವ ಸೀಮೆಯ ರಾಮಭಕ್ತ’ ಎಂದು ಪ್ರಶ್ನಿಸಿರುವ ಅವರು, ‘ಅಧಿಕಾರದಲ್ಲಿ ಇರುವವರಿಂದ ರಾಮ ನಿರೀಕ್ಷಿಸುವುದು ಶಾಂತಿ, ನೆಮ್ಮದಿ, ಸಹಬಾಳ್ವೆಯ ರಾಮರಾಜ್ಯದ ನಿರ್ಮಾಣವನ್ನು ಮಾತ್ರ’ ಎಂದಿದ್ದಾರೆ.

‘ರೈತರ ಆದಾಯವನ್ನು ದ್ವಿಗುಣಗೊಳಿಸುವ ಭರವಸೆಯನ್ನು ನಿಮ್ಮ ಪ್ರಣಾಳಿಕೆಯಲ್ಲಿ ನೀಡಿದ್ದಿರಿ. ರೈತರ ಆದಾಯ ದ್ವಿಗುಣಗೊಳಿಸುವುದು ಇರಲಿ, ಬರಗಾಲದಿಂದ ಕಂಗೆಟ್ಟಿರುವ ರೈತರಿಗೆ ಬಿಡಿಗಾಸು ಬರ ಪರಿಹಾರವನ್ನೂ ನೀಡಿಲ್ಲ. ಒಕ್ಕೂಟ ವ್ಯವಸ್ಥೆಯಲ್ಲಿರುವ ಎಲ್ಲ ರಾಜ್ಯಗಳ ಸಶಕ್ತೀಕರಣಕ್ಕಾಗಿ ಸಹಕಾರಿ ಒಕ್ಕೂಟ ವ್ಯವಸ್ಥೆಯ ನಿರ್ಮಾಣದ ಬಗ್ಗೆ ಭರವಸೆ ನೀಡಿರುವ ನೀವು, ರಾಜ್ಯಗಳಿಗೆ ದಕ್ಕಬೇಕಾದ ನ್ಯಾಯಯುತ ಪಾಲನ್ನೂ ಕಸಿದುಕೊಂಡಿದ್ದೀರಿ. ಕುತಂತ್ರದಿಂದ ಸೆಸ್, ಸರ್‌ಚಾರ್ಜ್‌ಗಳನ್ನು ಹೆಚ್ಚಿಸಿದ್ದೀರಿ’ ಎಂದಿದ್ದಾರೆ.

‘ಹೆಸರಲ್ಲೇ ರಾಮನಿರುವ ಸಿದ್ದರಾಮಯ್ಯ’

‘ಹೆಸರಲ್ಲೇ ರಾಮನನ್ನು ಹೊಂದಿರುವ ಸಿದ್ದರಾಮಯ್ಯ ಅವರಿಂದ ರಾಮನ ಗುಡಿ ಉದ್ಘಾಟನೆ ಆಗಿರುವುದು ಖುಷಿಯ ವಿಷಯ’ ಎಂದು ಮಹದೇವಪುರ ಶಾಸಕಿ ಮಂಜುಳಾ ಲಿಂಬಾವಳಿ ಶ್ಲಾಘಿಸಿದರು.

ಸುದ್ದಿ 2 ನಿಮಿಷ

ಪ್ರತಿ ಮಗುವಿಗೆ ₹5 ಸಾವಿರ ಠೇವಣಿ

ಗುಳೇದಗುಡ್ಡ (ಬಾಗಲಕೋಟೆ ಜಿಲ್ಲೆ): ಪಟ್ಟಣದ ಲಾಲ್‌ಬಹಾದ್ದೂರ ಶಾಸ್ತ್ರಿ ಪತ್ತಿನ ಸೌಹಾರ್ದ ಸಹಕಾರಿ ಸಂಘದ ದಶಮಾನೋತ್ಸವ ಮತ್ತು ಅಯೋಧ್ಯೆಯ ಬಾಲರಾಮ ಪ್ರಾಣ ಪ್ರತಿಷ್ಠಾಪನೆ ಪ್ರಯುಕ್ತ ಸೋಮವಾರ (ಜನವರಿ 22) ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಜನಿಸುವ ಪ್ರತಿ ಮಗುವಿಗೆ ₹5 ಸಾವಿರ ಠೇವಣಿ ವಾಗ್ದಾನ ಮಾಡಲಾಗಿತ್ತು. ಅದರಂತೆ ಜನಿಸಿದ ಆರು ಮಕ್ಕಳ ಹೆಸರಿನಲ್ಲಿ ಠೇವಣಿ ಇಡಲಾಯಿತು.

‘ಮಗುವಿಗೆ ₹5 ಸಾವಿರ ಹಣ ಕೊಟ್ಟರೆ, ಅದು ಉಳಿಯದು. ಅದನ್ನೇ ಠೇವಣಿ ಇಟ್ಟರೆ, 18 ವರ್ಷದ ಬಳಿಕ ₹25 ಸಾವಿರ ಸಿಗುತ್ತದೆ. ಮಗುವಿನ ಶಿಕ್ಷಣಕ್ಕೆ ಅನುಕೂಲವಾಗುತ್ತದೆ’ ಎಂದು ಸಂಘದ ಅಧ್ಯಕ್ಷ ರಾಜು ತಾಪಡಿಯಾ ಹೇಳಿದರು.

‘ಸೋಮವಾರ ಸರ್ಕಾರಿ ಆಸ್ಪತ್ರೆಯಲ್ಲಿ ಒಟ್ಟು 6 ಮಕ್ಕಳು ಜನಿಸಿವೆ’ ಎಂದು ಸರ್ಕಾರಿ ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿ ಡಾ.ನಾಗರಾಜ ಕುರಿ ಅವರು ತಿಳಿಸಿದರು.

ಅರುಣ್ ಮನೆಯಲ್ಲಿ ಸಂಭ್ರಮ



ಮೈಸೂರು: ಇಲ್ಲಿನ ಬಸವೇಶ್ವರ ವೃತ್ತದಲ್ಲಿರುವ ಶಿಲ್ಪಿ ಅರುಣ್ ಯೋಗಿರಾಜ್ ಅವರ ನಿವಾಸ ‘ಕಶ್ಯಪ ಕಲಾನಿಕೇತನ’ದಲ್ಲಿ ಸೋಮವಾರ ಸಂಭ್ರಮ ಗರಿಗೆದರಿತ್ತು.

ಅರುಣ್ ಅವರ ತಾಯಿ ಸರಸ್ವತಿ, ಪತ್ನಿ ವಿಜೇತಾ, ಮಕ್ಕಳಾದ ಸಾನ್ವಿ, ವೇದಾಂತ್, ಸಹೋದರ ಸೂರ್ಯಪ್ರಕಾಶ್ ಸೇರಿದಂತೆ ಸಂಬಂಧಿಗಳು ರಾಮನ ಪೂಜೆಯಲ್ಲಿ ಪಾಲ್ಗೊಂಡರು. ಮನೆಯ ಎದುರು ಸ್ಥಾಪಿ-ಸಲಾಗಿದ್ದ ಶ್ರೀರಾಮನ ವಿಗ್ರಹಕ್ಕೆ ಸೂರ್ಯಪ್ರಕಾಶ್ ಪೂಜೆ ಸಲ್ಲಿಸಿ, ಮಂಗಳಾರತಿ ಬೆಳಗಿದರು.

ತಾಯಿ ಸರಸ್ವತಿ ಅವರು ಎಲ್ಲರಿಗೂ ಸಿಹಿ ಹಂಚಿದರು. ಮನೆಯಲ್ಲಿ ಅಯೋಧ್ಯೆ ಕಾರ್ಯಕ್ರಮದ ನೇರಪ್ರಸಾರವನ್ನು ಟಿ.ವಿ ವಾಹಿನಿಯಲ್ಲಿ ಎಲ್ಲರೂ ವೀಕ್ಷಿಸಿದರು. ನಂತರ ಮಾತನಾಡಿದ ಸೂರ್ಯಪ್ರಕಾಶ್, ‘ಸೋದರ ಅರುಣ್ ಕೆತ್ತಿದ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆಯಾಗಿದೆ. ತಾತ ಬಸವಣ್ಣ ಶಿಲ್ಪಿ, ಅಜ್ಜಿ ಪುಟ್ಟಮ್ಮ, ತಂದೆ ಯೋಗಿರಾಜ್ ಶಿಲ್ಪಿ, ತಾಯಿ ಸರಸ್ವತಿ ಅವರ ಕೃಪಾಶೀರ್ವಾದದ ಫಲವಿದು’ ಎಂದು ಸಂತಸ ವ್ಯಕ್ತಪಡಿಸಿದರು.

ಶಿವಮೊಗ್ಗ: ‘ಅಲ್ಲಾಹು ಅಕ್ಬರ್’ ಘೋಷಣೆ- ಮಹಿಳೆ ಪೊಲೀಸ್ ವಶಕ್ಕೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಅಯೋಧ್ಯೆಯಲ್ಲಿ ಬಾಲರಾಮನ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ನಡೆದ ಹಿನ್ನೆಲೆಯಲ್ಲಿ ಇಲ್ಲಿನ ಶಿವಪ್ಪ ನಾಯಕ ವೃತ್ತದಲ್ಲಿ ಸೋಮವಾರ ಬಿಜೆಪಿ ಜಿಲ್ಲಾ ಘಟಕ ಹಮ್ಮಿಕೊಂಡಿದ್ದ ಸಂಭ್ರಮಾಚರಣೆ ವೇಳೆ ಬಿಜೆಪಿ ಕಾರ್ಯಕರ್ತರ ‘ಜೈ ಶ್ರೀರಾಮ್’ ಘೋಷಣೆಗೆ ಪ್ರತಿಯಾಗಿ ಮುಸ್ಲಿಂ ಮಹಿಳೆಯೊಬ್ಬರು ‘ಅಲ್ಲಾಹು ಅಕ್ಬರ್’ ಘೋಷಣೆ ಕೂಗಿದ್ದರಿಂದ ಕೆಲಕಾಲ ಗೊಂದಲದ ವಾತಾವರಣ ಸೃಷ್ಟಿಯಾಗಿತ್ತು.

ಮಗುವಿನೊಂದಿಗೆ ಸ್ಕೂಟರ್‌ನಲ್ಲಿ ಹೊರಟಿದ್ದ ಅಂಜುಮ್ ಅನಾ (25) ಶಿವಪ್ಪ ನಾಯಕ ವೃತ್ತದ ಬಳಿ ನಿಂತು ಬಿಜೆಪಿ ಕಾರ್ಯಕರ್ತರ ಸಂಭ್ರಮಾಚರಣೆ ದೃಶ್ಯವನ್ನು ಮೊಬೈಲ್‌ನಲ್ಲಿ ಚಿತ್ರೀ-ಕರಿಸುತ್ತಿದ್ದರು. ಸಂಚಾರ ದಟ್ಟಣೆ ನಿಯಂತ್ರಿಸು-ತ್ತಿದ್ದ ಪೊಲೀಸರು ಅವರನ್ನು ಅಲ್ಲಿಂದ ಕಳಿಸಲು ಮುಂದಾದರು. ಅದಕ್ಕೆ ಅವರು ವಿರೋಧ ವ್ಯಕ್ತಪ-ಡಿಸಿದರು. ಆಗ ಸಂಭ್ರಮಾಚರಣೆಯಲ್ಲಿ ನಿರತರಾಗಿ-ದ್ದವರಿಂದ ಕೇಳಿಬಂದ ‘ಜೈ ಶ್ರೀರಾಮ್’ ಘೋಷಣೆಗೆ ಪ್ರತಿಯಾಗಿ ಅಂಜುಮ್ ‘ಅಲ್ಲಾಹು ಅಕ್ಬರ್’ ಎಂದು ಕೂಗಿದರು. ಇದರಿಂದ ಪೊಲೀಸರು ತಬ್ಬಿಬ್ಬಾದರು.

ಅಲ್ಲಿಂದ ಮುಂದೆ ಹೋಗುವಂತೆ ಪೊಲೀಸರು ತಿಳಿಸಿದರೂ ಅಂಜುಮ್ ಅವರು ಘೋಷಣೆ ಕೂಗುವುದನ್ನು ಮುಂದುವರಿಸಿದ್ದರು. ಅದಕ್ಕೆ ಪ್ರತಿಯಾಗಿ ಗುಂಪು ಕೂಡ ‘ಜೈಶ್ರೀರಾಮ್’ ಘೋಷಣೆ ಮೊಳಗಿಸಿತು. ಅಂಜುಮ್ ಅವರನ್ನು ವಶಕ್ಕೆ ಪಡೆದ ಪೊಲೀಸರು ಠಾಣೆಗೆ ಕರೆದೊಯ್ದು ವಿಚಾರಣೆ ನಡೆಸಿ, ಬಳಿಕ ಬಿಡುಗಡೆ ಮಾಡಿದರು.

ಮಾನಸಿಕ ಸ್ಥಿಮಿತತೆ ಇರಲಿಲ್ಲ- ಎಸ್ಪಿ: ‘ಅಂಜುಮ್ ಅನಾ ಅವರಿಗೆ ಮಾನಸಿಕ ಸ್ಥಿಮಿತತೆ ಇಲ್ಲ ಎಂದು ಅವರ ತಂದೆ ಸಯ್ಯದ್ ಅಬ್ಬಾಸ್ ವಿಚಾರಣೆ ವೇಳೆ ಹೇಳಿದ್ದಾರೆ. ಚಿಕಿತ್ಸೆಗೆ ಸಂಬಂಧಿಸಿದ ವೈದ್ಯಕೀಯ ದಾಖಲೆಗಳನ್ನೂ ನೀಡಿದ್ದಾರೆ. ಅವುಗಳನ್ನು ಪರಿಶೀಲಿಸುತ್ತಿದ್ದೇವೆ’ ಎಂದು ಎಸ್‌ಪಿ ತಿಳಿಸಿದರು.

ಬಿಜೆಪಿ ನಾಯಕರ ರಾಮನಾಮ ಜಪ

ಇನ್ನು ಆಂಜನೇಯ ಜನ್ಮಸ್ಥಾನ ಅಭಿವೃದ್ಧಿ–ಬೊಮ್ಮಾಯಿ • ಹಿಂದೂಗಳ ಒಗ್ಗೂಡಿಕೆಯ ಕ್ಷಣ–ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಯೋಧ್ಯೆಯಲ್ಲಿ ರಾಮ ವಿಗ್ರಹದ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದ ನಿಮಿತ್ತ ಬಿಜೆಪಿ ನಾಯಕರು ಬೆಂಗಳೂರು ಸೇರಿ ರಾಜ್ಯದ ಹಲವು ದೇವಸ್ಥಾನಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಭಕ್ತಿ ಭಾವ ಪ್ರದರ್ಶಿಸಿದರು. ಸಂಜೆ ಬಿಜೆಪಿ ಕಚೇರಿಯೂ ಸೇರಿದಂತೆ ಎಲ್ಲಡೆ ದೀಪಗಳನ್ನು ಬೆಳಗಿ ಸಂಭ್ರಮಿಸಿದರು.

ಬಿಜೆಪಿಯ ರಾಜ್ಯ ಘಟಕದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪಕ್ಷದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು, ‘ಕೋಟಿ, ಕೋಟಿ ರಾಮ ಭಕ್ತರ ಆಸೆ ಇಂದು ಈಡೇರಿದೆ. ಪ್ರತಿಯೊಬ್ಬ ಹಿಂದುವನ್ನೂ ಮಂದಿರ ಒಗ್ಗೂಡಿಸಲಿದೆ. ಅಯೋಧ್ಯೆ ಮತ್ತು ಕನ್ನಡಿಗರಿಗೂ ಅವಿನಾಭಾವ ಸಂಬಂಧವಿದೆ. ಶ್ರೀರಾಮನ ಪರಮ ಭಕ್ತ ಹನುಮಂತನ ಜನ್ಮಸ್ಥಳ ಕಿಷ್ಕಿಂಧೆ ಇರುವುದೂ ಕರ್ನಾಟಕದಲ್ಲಿ’ ಎಂದು ಹೇಳಿದರು.

‘ರಾಮನ ವಿಗ್ರಹಕ್ಕೆ ಶಿಲೆ ಕೂಡ ಕರ್ನಾಟಕದಿಂದ ಲಭಿಸಿದೆ. ಅದರ ಶಿಲ್ಪಿಗಳು ಕನ್ನಡ ನಾಡಿನವರು. ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಪ್ರಾಣ ಪ್ರತಿಷ್ಠೆ ನಡೆದಿರುವುದು ನಮ್ಮೆಲ್ಲರ ಭಾಗ್ಯ’ ಎಂದೂ ವಿಜಯೇಂದ್ರ ತಿಳಿಸಿದರು.

‘ಪ್ರಧಾನಿ ನರೇಂದ್ರ ಮೋದಿಯವರ ರಾಮರಾಜ್ಯದ ಕನಸು ಮುಂದಿನ ದಿನಗಳಲ್ಲಿ ನನಸಾಗಲಿದೆ. ದೇಶದ ಪ್ರತಿಯೊಂದು ರಾಜ್ಯವನ್ನೂ ಪ್ರಗತಿ ಪಥದಲ್ಲಿ ಒಯ್ಯುವ ಹಾಗೂ 2047 ನೇ ಇಸವಿಗೆ ಅಭಿವೃದ್ಧಿ ಹೊಂದಿದ ‘ವಿಕಸಿತ ಭಾರತ’ದ ನಿರ್ಮಾಣಕ್ಕೆ ಅವರು ಸಂಕಲ್ಪ ತೊಟ್ಟಿದ್ದಾರೆ. ಅದು ನನಸಾಗಲಿದೆ’ ಎಂದೂ ಹೇಳಿದರು.

ಕರ್ನಾಟಕದ ಪಾತ್ರ ದೊಡ್ಡದು: ‘ರಾಮ ಜನ್ಮಭೂಮಿ ಹೋರಾಟದಲ್ಲಿ ಕರ್ನಾಟಕ ಪಾತ್ರ ದೊಡ್ಡದು. ರಾಮನಿಗೂ ಕರ್ನಾಟಕಕ್ಕೂ ದೊಡ್ಡ ನಂಟಿದೆ. ಆಂಜನೇಯನ ಜನ್ಮಭೂಮಿ ಅಭಿವೃದ್ಧಿಪಡಿಸುವುದು ನಮ್ಮ ಮುಂದಿನ ಗುರಿ’ ಎಂದು ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.



ಬೆಂಗಳೂರಿನ ಮಹಾಲಕ್ಷ್ಮೀ ಲೇಔಟ್‌ನ ರಾಣಿ ಅಬ್ಬಕ್ಕ ಮೈದಾನದಲ್ಲಿ ಅಯೋಧ್ಯೆ ಶ್ರೀರಾಮ ಪ್ರಾಣ ಪ್ರತಿಷ್ಠಾಪನಾ ಪ್ರಯುಕ್ತ ನಡೆದ ‘ಶ್ರೀರಾಮತಾರಕ ಮಹಾಯಾಗ ಕಲಶಾಭಿಷೇಕ’ ಕಾರ್ಯಕ್ರಮದಲ್ಲಿ ಬಿಜೆಪಿ ನಾಯಕರು ಪಾಲ್ಗೊಂಡಿದ್ದರು

ಬಾಲಬ್ರೂಯಿ ಅತಿಥಿ ಗೃಹದ ಬಳಿ ಇರುವ ಮಾರುತಿ ಮಂದಿರಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ ಬಳಿಕ ಸುದ್ದಿಗಾರರ ಜತೆ ಮಾತನಾಡಿದರು. ‘ರಾಮನ ಪ್ರಾಣಪ್ರತಿಷ್ಠೆಯ ದಿನವಾದ ಇಂದು ಐತಿಹಾಸಿಕ’ ದಿನ ಎಂದು ಹೇಳಿದರು.

‘ಆಂಜನೇಯ ಇದ್ದರೆ ರಾಮಪರಿಪೂರ್ಣ. ನಮ್ಮ ಮುಂದಿನ ಗುರಿ ಆಂಜನೇಯ ಜನ್ಮಭೂಮಿ ಅಭಿವೃದ್ಧಿ. ಇದಕ್ಕಾಗಿ ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತೇವೆ. ಅಂತಿಮವಾಗಿ ರಾಮರಾಜ್ಯ ಸ್ಥಾಪನೆ ನಮ್ಮ ಗುರಿ. ಇಂತಹ ಪವಿತ್ರ ದಿನದಲ್ಲಿ ರಾಜಕೀಯ ಬೆರೆಸಿ ಮಾತನಾಡುವುದಿಲ್ಲ’ ಎಂದೂ ಬೊಮ್ಮಾಯಿ ಹೇಳಿದರು.

ಬಿಜೆಪಿ ಬೆಂಗಳೂರು ಮಹಾನಗರ ವತಿಯಿಂದ ಬಾಣಸವಾಡಿಯ ಆಂಜನೇಯ ದೇವಸ್ಥಾನದಲ್ಲಿ ನಡೆದ ವಿಶೇಷ ಪೂಜೆಯಲ್ಲಿ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಭಾಗವಹಿಸಿದ್ದರು.

ರಾಮ ದ್ವೇಷಿಗಳಿಗೆ ತಕ್ಕ ಪಾಠ: ಅಶೋಕ

‘ತ್ರೇತಾಯುಗದಲ್ಲಿ ರಾವಣನಿಗೆ, ದ್ವಾಪರಯುಗದಲ್ಲಿ ದುರ್ಯೋಧನನಿಗೆ ಆದ ಗತಿಯೇ ಕಲಿಯುಗದ ರಾಮದ್ವೇಷಿಗಳಿಗೂ ಆಗಲಿದೆ’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಹೇಳಿದರು.

‘ಇಡೀ ಭಾರತ ದೇಶ ರಾಮಮಯವಾಗಿದೆ. ಜನರೆಲ್ಲರೂ ಸ್ವಯಂ ಪ್ರೇರಿತರಾಗಿ ಸಂಭ್ರಮಾಚರಣೆಯಲ್ಲಿ ತೊಡಗಿದ್ದಾರೆ. ಈ ಹಬ್ಬದ ವಾತಾವರಣ-ವನ್ನು ಸಹಿಸದ ಕಾರಣ ಸರ್ಕಾರ ರಾಜ್ಯದಲ್ಲಿ ರಜೆ ಕೊಡಲಿಲ್ಲ’ ಎಂದು ಅವರು ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

‘ಕೈಹಿಡಿದ ಮಡದಿ ಮಂಡೋದರಿ, ಒಡಹುಟ್ಟಿದ ತಮ್ಮ ವಿಭೀಷಣನು ರಾಮದ್ವೇಷ ಬೇಡ ಎಂದು ಎಷ್ಟು ಹೇಳಿದರೂ ಕೇಳದ ರಾವಣನ ಗತಿ ಕಡೆಗೆ ಏನಾಯಿತು? ಅಧರ್ಮದ ಹಾದಿ ಹಿಡಿದು, ಸ್ವಂತ ದಾಯಾದಿಗಳ ಮೇಲೆ ಯುದ್ಧ ಸಾರಿ ಕೃಷ್ಣನನ್ನು ಎದುರು ಹಾಕಿಕೊಂಡ ದುರ್ಯೋಧನನ ಕಥೆ ಕಡೆಗೆ ಏನಾಯಿತು’ ಎಂದು ಅಶೋಕ ಪ್ರಶ್ನಿಸಿದರು.

‘ಸಿದ್ದರಾಮಯ್ಯಗೆ ನೈತಿಕತೆ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು :‘ಮುಖ್ಯಮಂತ್ರಿ ಕುರ್ಚಿ ಉಳಿಸಿಕೊಳ್ಳಲು ರಾಹುಲ್‌ಗಾಂಧಿ-ಯಂತಹ ಅಪ್ರಬುದ್ಧ ನಾಯಕನಿಗೆ ಉಘೇ... ಉಘೇ ಎನ್ನುವ ನಿಮಗೆ ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ಮಾತನಾಡುವ ನೈತಿಕತೆ ಎಲ್ಲಿದೆ’ ಎಂದು ಸಿದ್ದರಾಮಯ್ಯ ಅವರನ್ನು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಪ್ರಶ್ನಿಸಿದ್ದಾರೆ.

‘ಪ್ರಧಾನಿ ನರೇಂದ್ರ ಮೋದಿ ಅವರು ನಿಜವಾದ ರಾಮಭಕ್ತರಾಗಿ-ದ್ದರೆ ಅಯೋಧ್ಯೆ ರಾಮ ಮಂದಿರದಲ್ಲಿ ನಿಂತು ಪ್ರಮಾಣ ಮಾಡಲಿ’ ಎಂದು ಸಿದ್ದರಾಮಯ್ಯ ‘ಎಕ್ಸ್’ ಮಾಡಿದ್ದು, ಇದಕ್ಕೆ ಜೋಶಿ ಕಿಡಿಕಾರಿದ್ದಾರೆ.

‘ಕರ್ನಾಟಕದಲ್ಲಿ ಗೆದ್ದ ಮಾತ್ರಕ್ಕೆ ಇಡೀ ದೇಶವನ್ನೇ ಗೆಲ್ಲುತ್ತೇವೆ ಎನ್ನುವ ಭ್ರಾಂತಿಯಿಂದ ಹೊರಬನ್ನಿ. ಸುಳ್ಳೇ ನಿಮ್ಮ ಮನೆ ದೇವರಾಗಿದ್ದು, ಸುಳ್ಳಿನ ಮೇಲೆ ರಾಜಕಾರಣ ಮಾಡುವುದು ಕಾಂಗ್ರೆಸ್ ಇತಿಹಾಸವಾಗಿದೆ’ ಎಂದು ಹರಿಹಾಯ್ದಿದ್ದಾರೆ.

ರಾಮ ಮಂದಿರದಲ್ಲಿ ಮುಸ್ಲಿಮರ ಪೂಜೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಅಯೋಧ್ಯೆಯಲ್ಲಿ ಬಾಲರಾಮ ಪ್ರಾಣ ಪ್ರತಿಷ್ಠಾಪನೆ ನಡೆದ ಹಿನ್ನೆಲೆಯಲ್ಲಿ ಇಲ್ಲಿನ ಭಾಗ್ಯನಗರದ ಮುಸ್ಲಿಂ ಸಮುದಾಯದವರು ಪೂಜೆ ಸಲ್ಲಿಸಿ ಭಾವೈಕ್ಯ ಮೆರೆದರು.

ರಾಮಮಂದಿರ ಹಾಗೂ ಆಂಜನೇಯ ದೇವಾಲಯಗಳಲ್ಲಿ ಪಂಚ ಕಮಿಟಿ ಅಧ್ಯಕ್ಷ ಇಬ್ರಾಹಿಂ ಸಾಬ್ ಬಿಸರಳ್ಳಿ, ಸಮಾಜದ ಪ್ರಮುಖರಾದ ಹೊನ್ನೂರ ಸಾಬ್ ಬೈರಾಪುರ, ಕಬೀರಸಾಬ್, ಮೌಲಾಹುಸೇನ್ ಹಣಗಿ, ಭಾಷಾ ಹಣಗಿ, ನೂರ್ ಪಾಷಾ ಅವರು ದೇವರಿಗೆ ಪೂಜೆ ಸಲ್ಲಿಸಿದರು. ಬಳಿಕ ಒಂದೂವರೆ ಸಾವಿರ ಹಿಂದೂ ಭಕ್ತರಿಗೆ ಅನ್ನ, ಸಾರು, ಬದನೇಕಾಯಿ ಪಲ್ಲೆ, ಗೋಧಿ ಹುಗ್ಗಿ ಊಟದ ವ್ಯವಸ್ಥೆ ಮಾಡಿದರು.

ಮುಸ್ಲಿಂ ಸಮಾಜದವರು ಟೋಪಿ ಧರಿಸಿದರೆ, ಹಿಂದೂ ಯುವಕರು ಕೊರಳಲ್ಲಿ ಕೇಸರಿಶಾಲು ಹಾಕಿಕೊಂಡು ಒಟ್ಟಿಗೆ ಪೂಜೆ ಸಲ್ಲಿಸಿ ಸೌಹಾರ್ದ ಮೆರೆದರು. ಬಳಿಕ ಮುಸ್ಲಿಮರು ಹಿಂದೂ ಸಮುದಾಯದವರಿಗೆ ಶುಭಾಶಯ ಕೋರಿದರು.

ಪೂಜೆ: ಅಯೋಧ್ಯೆಯಲ್ಲಿ ಬಾಲರಾಮನ ಮೂರ್ತಿ ತಯಾರಿಕೆಗೆ ಬಳಸಲಾಗಿರುವ ಶಿಲೆಯನ್ನು ಮೈಸೂರು ಸಮೀಪದ ಎಚ್‌.ಡಿ. ಕೋಟೆಯಿಂದ ಇಲ್ಲಿಗೆ ತರಲಾಗಿದ್ದು, ಅದೇ ಶಿಲೆಯಿಂದ ನಗರದಲ್ಲಿ ಸಹಸ್ರಾಂಜನೇಯ ದೇವಸ್ಥಾನದಲ್ಲಿ ಹನುಮನ ಮೂರ್ತಿ ಪ್ರತಿಷ್ಠಾಪನೆಗೆ ಮೂರ್ತಿ ಕೆತ್ತನೆ ಕಾರ್ಯ ಆರಂಭವಾಯಿತು. ಅನೇಕ ಜನಪ್ರತಿನಿಧಿಗಳು ಪೂಜೆ ಸಲ್ಲಿಸಿದರು. ಗಂಗಾವತಿಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮುಸ್ಲಿಮರು ಸೇರಿದಂತೆ ವಿವಿಧ ಸಮಾಜಗಳ ಜನ ಬಂದು ಪ್ರಸಾದ ಸ್ವೀಕರಿಸಿದರು.



ಕೊಪ್ಪಳದ ಭಾಗ್ಯನಗರದಲ್ಲಿ ಮುಸ್ಲಿಂ ಹಾಗೂ ಹಿಂದೂ ಸಮಾಜದ ಯುವಕರು ರಾಮಮಂದಿರದಲ್ಲಿ ಒಟ್ಟಿಗೆ ಪೂಜೆ ಸಲ್ಲಿಸಿದರು

ಮಸೀದಿಯಲ್ಲಿ ರಾಮಜಪ

ನರಗುಂದ (ಗದಗ ಜಿಲ್ಲೆ): ಅಯೋಧ್ಯೆಯಲ್ಲಿ ಬಾಲರಾಮನ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ಪ್ರಯುಕ್ತ ತಾಲ್ಲೂಕಿನ ಹುಣಸಿಕಟ್ಟಿಯ ಮಸೀದಿಯಲ್ಲಿ ಹಿಂದೂ-ಮುಸ್ಲಿಂ ಯುವಕರು ಸೋಮವಾರ ರಾಮನ ಜಪ ಮಾಡಿದರು.

ಭಜನೆಗಳನ್ನೂ ಹಾಡಿದ ಯುವಕರು ಮಸೀದಿ ಎದುರು ‘ಜೈ ಶ್ರೀರಾಮ’ ಎಂದು ಬರೆದರು. ನಂತರ ಆವರಣದಲ್ಲಿ ವೇದೋಕ್ತ ಮಂತ್ರಪುಷ್ಪಾಂಜಲಿ ಮೂಲಕ ಧಾರ್ಮಿಕ ವಿಧಿವಿಧಾನ ಅನುಸರಿಸಿ ಭಾರತಮಾತೆಯನ್ನು ಪೂಜಿಸಿದರು. ಮಂತ್ರಘೋಷದ ಮೂಲಕ ಅಭಿಷೇಕವನ್ನೂ ನೆರವೇರಿಸಿದರು.

ಯಕ್ಷಗಾನ ಪ್ರಸಂಗಗಳೂ ರಾಮಮಯ

ಪ್ರಜಾವಾಣಿ

ಮಂಗಳೂರು: ಯಕ್ಷಗಾನದ ಬಹುತೇಕ ಮೇಳಗಳು ಅಯೋಧ್ಯೆಯ ಶ್ರೀರಾಮ ಮಂದಿರದಲ್ಲಿ ಬಾಲರಾಮ ವಿಗ್ರಹ ಪ್ರತಿಷ್ಠಾಪನೆಯ ಪ್ರಯುಕ್ತ ಸೋಮವಾರ ಶ್ರೀರಾಮನಿಗೆ ಸಂಬಂಧಿಸಿದ ಪ್ರಸಂಗಗಳನ್ನೇ ಪ್ರದರ್ಶಿಸಿದವು.

ಧರ್ಮಸ್ಥಳ ಮಂಜುನಾಥೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಳಿಯು ಉಳ್ಳೂರಿನಲ್ಲಿ ‘ರಾಮ ರಾಮ ಶ್ರೀ ರಾಮ’ ಪ್ರಸಂಗವನ್ನು ಆಯೋಜಿಸಿತ್ತು.

ಪೆರ್ಡೂರು ಶ್ರೀ ಅನಂತ ಪದ್ಮನಾಭ ದಶಾವತಾರ ಮೇಳವು ಗೋಕರ್ಣದಲ್ಲಿ ‘ಶ್ರೀರಾಮ ಪಟ್ಟಾಭಿಷೇಕ’, ‘ಲವ ಕುಶ’ ಪ್ರಸಂಗಗಳ ಪ್ರದರ್ಶನ ಆಯೋಜಿಸಿತ್ತು. ಮಂಗಳವಾರವೂ ಈ ಮೇಳವು ಪೆರ್ಡೂರು ಜೋಗಿಬೆಟ್ಟುವಿನಲ್ಲಿ ಶ್ರೀರಾಮದರ್ಶನ ಪ್ರಸಂಗವನ್ನು ಪ್ರದರ್ಶಿಸಲಿದೆ.

ಸಾಲಿಗ್ರಾಮ ಮೇಳವು ಭಟ್ಕಳ ವಡೇರ ಮಠ ವಿ.ವಿ ರೋಡ್‌ನಲ್ಲಿ ಶ್ರೀರಾಮ ಪಟ್ಟಾಭಿಷೇಕ ಪ್ರಸಂಗದ ಪ್ರದರ್ಶನ ಏರ್ಪಡಿಸಿತ್ತು.

ಕಟೀಲು ಶ್ರೀ ದುರ್ಗಾಪರಮೇಶ್ವರಿ ದಶಾವತಾರ ಯಕ್ಷಗಾನ ಮೇಳವು (ಒಂದನೇ ಮೇಳ) ಕಟೀಲಿನಲ್ಲಿ ಶ್ರೀರಾಮ ಲೀಲಾಮೃತ ಪ್ರಸಂಗವನ್ನು, ಎರಡನೇ ಮೇಳವು ಮುಚ್ಚೂರು ವಿವೇಕನಗರದಲ್ಲಿ ಜೈಶ್ರೀರಾಮ್ (ಪಂಚವಟಿ: ಅತಿಕಾಯ, ಕುಶಲವ) ಪ್ರಸಂಗವನ್ನು ಪ್ರದರ್ಶಿಸಿದೆ.

ಪಾವಂಜೆ ನಾಗವೃಜ ಕ್ಷೇತ್ರದ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯಸ್ವಾಮಿ ಕೃಪಾಪೋಷಿತ ಯಕ್ಷಗಾನ ಮಂಡಳಿ ಮೇಳವು ಕರ್ನಿರೆಯಲ್ಲಿ ‘ಅಯೋಧ್ಯಾ ದೀಪ’ ಪ್ರಸಂಗವನ್ನು, ಮೆಕ್ಕೆಕಟ್ಟು ಮೇಳವು ಬಿದ್ಕಲ್‌ಕಟ್ಟೆಯಲ್ಲಿ ‘ರಾಮಾಶ್ವಮೇಧ’ ಪ್ರಸಂಗವನ್ನು, ಸೂಡಾ ಮೇಳವು ಕೊಟ್ಟಾರ ಚೌಕಿಯಲ್ಲಿ ‘ಶ್ರೀರಾಮಚರಿತಾಮೃತಂ’ ಪ್ರಸಂಗವನ್ನು, ಕಳವಾರು ಬೆಂಕಿನಾಥೇಶ್ವರ ಮೇಳವು ಕಡಂಬು ಕಟ್ಟೆಯಲ್ಲಿ ‘ಶ್ರೀರಾಮ ದರ್ಶನ’ ಪ್ರಸಂಗವನ್ನು, ಬಜಪೆ ಸುಂಕದಕಟ್ಟೆ ಮೇಳವು ಫಜೀರುವಿನಲ್ಲಿ ‘ಅಯೋಧ್ಯೆ ಶ್ರೀರಾಮ’ ಪ್ರಸಂಗವನ್ನು, ಶ್ರೀಕ್ಷೇತ್ರ ಹಿರಿಯಡಕ ಮೇಳವು ಹಿರಿಯಡಕದಲ್ಲಿ ‘ಶ್ರೀರಾಮಚರಿತಂ’ ಪ್ರಸಂಗವನ್ನು, ಹಟ್ಟಿಯಂಗಡಿ ಮೇಳವು ಫಿಲ್ಕಳದಲ್ಲಿ ‘ರಾಮಾಶ್ವಮೇಧ’, ಗೆಜ್ಜೆಗಿರಿ ಮೇಳವು ಬೆಳ್ತಂಗಡಿಯಲ್ಲಿ ‘ಅಯೋಧ್ಯಾಧಿಪ ಪಟ್ಟಾಭಿರಾಮ’ ಪ್ರಸಂಗವನ್ನು, ಹನುಮಗಿರಿ ಮೇಳವು ವಿಟ್ಲದಲ್ಲಿ ‘ನಮೋ ರಘುವಂಶದೀಪ’ ಪ್ರಸಂಗವನ್ನು, ಮಡಾಮಕ್ಕಿ ಮೇಳವು ಬಂಟಕಲ್ಲಿನಲ್ಲಿ ‘ಶ್ರೀರಾಮದರ್ಶನ’ ಪ್ರಸಂಗದ ಪ್ರದರ್ಶನವನ್ನು ಏರ್ಪಡಿಸಿತ್ತು.







1. ಉತ್ತರಪ್ರದೇಶದ ಅಯೋಧ್ಯೆಯಲ್ಲಿ ಸೋಮವಾರ ಲೋಕಾರ್ಪಣೆಗೊಂಡ ಭವ್ಯ ರಾಮ ಮಂದಿರ ಕಣ್ತುಂಬಿಕೊಳ್ಳಲು ಸೇರಿದ್ದ ಸಾಧುಸಂತರು ಮತ್ತು ವಿವಿಧ ಕ್ಷೇತ್ರಗಳ ಗಣ್ಯರು 2. ಸಮಾರಂಭದಲ್ಲಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತ್ತು ನಿರಂಜನಾನಂದ ಪುರಿ ಸ್ವಾಮೀಜಿ ಉಪಸ್ಥಿತರಿದ್ದರು 3. ಮಂದಿರ ಲೋಕಾರ್ಪಣೆ ಸಮಾರಂಭದಲ್ಲಿ ಬಾಲಿವುಡ್ ತಾರೆಯರು ಪಾಲ್ಗೊಂಡಿದ್ದರು – ಪಿಟಿಐ/ ಎಎಫ್‌ಪಿ ಚಿತ್ರ

ಭಕ್ತಿ, ಭಾವ, ಸಂಭ್ರಮದಲ್ಲಿ ವಾದ್ಯ ಸಂಗೀತದೊಡನೆ ಮಿಂದೆದ್ದ ‘ಧಾರ್ಮಿಕ ನಗರ’ದ ನಿವಾಸಿಗಳು

‘ಇದು ನವ್ಯ, ಭವ್ಯ, ದಿವ್ಯ ಅಯೋಧ್ಯೆ...’

ಪ್ರಜಾವಾಣಿ ವಾರ್ತೆ/ ಪಿಟಿಐ

ಅಯೋಧ್ಯೆ: ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಸಮಾರಂಭವು ‘ಧಾರ್ಮಿಕ ನಗರ’ ಅಯೋಧ್ಯೆಯ ನಿವಾಸಿಗಳಲ್ಲಿ ಪುಳಕ ಉಂಟುಮಾಡಿದೆ. ಇಡೀ ನಗರವು ಭಕ್ತಿಯ ಸಂಭ್ರಮದಲ್ಲಿ ಮಿಂದೆದ್ದಿದೆ. ನಿವಾಸಿಗಳು ಭಾವಪರವಶರಾಗಿದ್ದಾರೆ.

‘ನಾವೀಗ ದಿವ್ಯ ಅಯೋಧ್ಯೆ, ನವ್ಯ ಅಯೋಧ್ಯೆ, ಭವ್ಯ ಅಯೋಧ್ಯೆಯ ನಿವಾಸಿಗಳು. ಭಕ್ತಿಯ ಅನುಭವ, ಸಂಭ್ರಮ ನಮ್ಮನ್ನು ಆವರಿಸಿಕೊಂಡಿದೆ’ ಎಂದು ಸ್ಥಳೀಯ ನಿವಾಸಿಗಳು ತಮ್ಮ ಸಂಭ್ರಮವನ್ನು ಹಂಚಿಕೊಂಡಿದ್ದಾರೆ.

ಶಾಲಾ ಶಿಕ್ಷಕ, ರಾಮಮಂದಿರ ಆವರಣ ದಲ್ಲಿಯೇ ನಿತ್ಯ ಬೆಳಗಿನ ವಾಯುವಿಹಾರ ನಡೆಸುತ್ತಿದ್ದ ಕೃಷ್ಣನಾಥ ಸಿಂಗ್ ಅವರು, ‘ನಮ್ಮ ಅಯೋಧ್ಯೆ ಈಗ ನವ್ಯ ಮತ್ತು ಭವ್ಯ ಅಯೋಧ್ಯೆ ಯಾಗಿದೆ’ ಎಂದು ಸಂತಸ ವ್ಯಕ್ತಪಡಿಸಿದರು.

ಭಕ್ತಿಯ ಭಾವನೆಗಳನ್ನು ನಿಯಂತ್ರಿಸುತ್ತಲೇ, ‘ಈ ನಗರದ ಪ್ರತಿ ನಿವಾಸಿಗೂ ಇಂದು ಚರಿತ್ರಾರ್ಹ ದಿನ. ಬಾಲರಾಮ ತನ್ನ ಹಕ್ಕಿನ ಸ್ಥಾನದಲ್ಲಿ ಪ್ರತಿಷ್ಠಾಪನೆಗೊಂಡಿದ್ದಾನೆ. ಕರಸೇವಕರ ಸಂಘರ್ಷವನ್ನು ಹತ್ತಿರದಿಂದ ಕಂಡಿದ್ದ ನನಗೆ ಇದು ವಿಶೇಷವಾದ ದಿನ’ ಎಂದು ಹೇಳಿದರು.

‘ಆಂಧ್ರಪ್ರದೇಶ ಮತ್ತು ನಾಗ್ಪುರದ ಕರಸೇವಕರು ಅಯೋಧ್ಯೆಯಿಂದ ಮಿರ್ಜಾಪುರ್‌ಗೆ ನಮ್ಮ ಗ್ರಾಮದ ಮೂಲಕವೇ ಹೋಗುತ್ತಿದ್ದರು. ಯಾವ ಕರಸೇವಕನೂ ಹಸಿವಿನಿಂದ ಹೋಗಬಾರದು ಎಂದು ನೋಡಿಕೊಳ್ಳುವುದು ನಮ್ಮ ಕರ್ತವ್ಯವಾಗಿತ್ತು. ನನಗೆ 1990ರ ದಶಕದ ದಿನಗಳು ನೆನಪಿವೆ. ಈ ದಿನಕ್ಕೆ ಸಾಕ್ಷಿಯಾಗಿದ್ದೇನೆ. ಎಲ್ಲ ಶ್ರಮ, ಸಂಘರ್ಷ ಇಂದು ಫಲಿತಾಂಶ ನೀಡಿದಂತಿದೆ’ ಎಂದೂ ಸ್ಮರಿಸಿದರು.

ಅಯೋಧ್ಯೆಯ ಖಜುರ್ಹಾಟ್‌ನ ನಿವಾಸಿ ಯಶವೇಂದ್ರ ಪ್ರತಾಪ್ ಸಿಂಗ್ ಅವರು, ‘ನಗರದ ಎಲ್ಲ ನಿವಾಸಿಗಳಲ್ಲಿ ಅಮಿತಾನಂದ ಕಾಣಿಸುತ್ತಿದೆ. ಇದು, ಒಂದು ರೀತಿಯಲ್ಲಿ ತಪಸ್ಸು ಈಡೇರಿದ ದಿನ’ ಎಂದು ಅಭಿಪ್ರಾಯ ಪಟ್ಟರು.



ಬಾಲರಾಮ ಪ್ರಾಣ ಪ್ರತಿಷ್ಠಾಪನೆ ಬಳಿಕ ನವದೆಹಲಿಗೆ ತೆರಳಿದ ಪ್ರಧಾನಿ ನರೇಂದ್ರ ಮೋದಿ ಸೋಮವಾರ ತಮ್ಮ ನಿವಾಸದಲ್ಲಿ ದೀಪ ಬೆಳಗಿದರು – ಪಿಟಿಐ ಚಿತ್ರ

ಬಾಲಪಕೌಲಿಯ ನಿವಾಸಿ ಶೈಲೇಶ್ ಸಿಂಗ್ ಅವರು, ‘ಇಂದು ನಮ್ಮೆಲ್ಲರಿಗೂ ಹೆಮ್ಮೆಯ ದಿನ. ರಾಮಮಂದಿರ ನಿರ್ಮಾಣವಾಗಬೇಕು ಎಂದು ಸುದೀರ್ಘ ಕಾಲದಿಂದ ಬಯಸಿದ್ದೆವು. ನಾವು ಈಗ ಅದರ ಭಾಗವೂ ಆಗಿದ್ದೇವೆ. ನಗರದ ನಿವಾಸಿಯಾಗಿ, ಅತಿಥಿಗಳನ್ನು ಬರಮಾಡಿಕೊಳ್ಳಲು ಖುಷಿಯಾಗಲಿದೆ. ನಮ್ಮ ನಗರ ಈಗ ಹೊಸ ರೂಪದಲ್ಲಿ ವಿಶ್ವಮಾನ್ಯವಾಗಿದೆ’ ಎಂದು ಹೇಳಿದರು.

ಇಂತಹದೇ ಭಾವನೆಯನ್ನು ವ್ಯಕ್ತಪಡಿಸಿದ ಕೌಶಲಪುರಿ ಕಾಲೊನಿಯ ನಿವಾಸಿ ಲವಕುಶ ಶ್ರೀವಾತ್ಸವ ಅವರು, ‘ನಾವೀಗ ಭಕ್ತಿಭಾವದ, ನೂತನ ಮತ್ತು ಅದ್ಭುತವಾದ ಅಯೋಧ್ಯೆಯನ್ನು ಕಾಣುತ್ತಿದ್ದೇವೆ’ ಎಂದರು. ‘ಇದು, ಬೆಲೆ ಕಟ್ಟಲಾಗದಂತ ಕ್ಷಣ’ ಎಂದು ಅನಿಲ್‌ಸಿಂಗ್ ಪ್ರತಿಕ್ರಿಯಿಸಿದರು.

ಟ್ರಸ್ಟ್‌ನಿಂದ ಆಹ್ವಾನಿತ ಅತಿಥಿಗಳು ಮತ್ತು ಗಣ್ಯರಿಗೆ ಮಾತ್ರ ಸೋಮವಾರ ರಾಮ ಮಂದಿರದ ಆವರಣ ಪ್ರವೇಶಿಸಲು ಅನುಮತಿಯಿತ್ತು. ಇದರಿಂದ ಅಯೋಧ್ಯೆಯ ನಿವಾಸಿಗಳು ತಮ್ಮ ತಮ್ಮ ಮನೆ ಹಾಗೂ ವಿವಿಧೆಡೆ ಸ್ಥಾಪಿಸಿದ್ದ ಬೃಹತ್ ಎಲ್‌ಇಡಿ ಪರದೆಗಳಲ್ಲಿ ಕಾರ್ಯಕ್ರಮ ವೀಕ್ಷಿಸಿದರು. ಪ್ರಧಾನಿ ನರೇಂದ್ರ ಮೋದಿ ಅವರು ಪ್ರಾಣ ಪ್ರತಿಷ್ಠಾಪನಾ ಪ್ರಕ್ರಿಯೆ ಕೊನೆಗೊಳಿಸು-ತ್ತಿದ್ದಂತೆಯೇ ಎಲ್ಲೆಡೆ ಜೈ ಶ್ರೀರಾಮ್ ಘೋಷಣೆ ಮೊಳಗಿದವು. ತಮ್ಮ ಮನೆಗಳ ಮುಂದೆ ದೀಪ ಬೆಳಗಿದ ಸ್ಥಳೀಯ ನಿವಾಸಿಗಳು ಪರಸ್ಪರರಿಗೆ ಶುಭಾಶಯ ಕೋರಿದರು.

ಸಂಜೆಯಾಗುತ್ತಿದ್ದಂತೆಯೇ ಸರಯೂ ನದಿ ದಡದ ಬಳಿಗೆ ಬಂದು ದೀಪ ಬೆಳಗಿದರು.

ಅನುರಣಿಸಿದ ಐವತ್ತು ವಾದ್ಯಗಳ ಧ್ವನಿ

ಅಯೋಧ್ಯೆ (ಪಿಟಿಐ): ರಾಮ ಮಂದಿರದಲ್ಲಿ ನಡೆದ ಪ್ರಾಣ ಪ್ರತಿಷ್ಠಾಪನೆ ವೇಳೆ ಆಯೋಜಿಸಿದ್ದ ‘ಮಂಗಲ ಧ್ವನಿ’ ಕಾರ್ಯಕ್ರಮದಲ್ಲಿ ಐವತ್ತು ಬಗೆಯ ಸಾಂಪ್ರದಾಯಿಕ ಸಂಗೀತ ವಾದ್ಯಗಳ ಮಾಧುರ್ಯವು ಅನುರಣಿಸಿತು. ಅಯೋಧ್ಯೆಯ ಕವಿ ಯತೀಂದ್ರ ಮಿಶ್ರಾ ಅವರು ಕಾರ್ಯಕ್ರಮವನ್ನು ಸಂಯೋಜಿಸಿದ್ದರು. ಇದಕ್ಕೆ ದೆಹಲಿಯ ಸಂಗೀತ ನಾಟಕ ಅಕಾಡೆಮಿಯ ನೆರವು ಇತ್ತು.

ಉತ್ತರ ಪ್ರದೇಶದ ಪಖಾವಾಜ್, ಕೊಳಲು ಮತ್ತು ಢೋಲಕ್; ಕರ್ನಾಟಕದ ವೀಣೆ; ಪಂಜಾಬ್‌ನ ಅಲ್ಗೋಜಾ; ಮಹಾರಾಷ್ಟ್ರದ ಸುಂದರಿ; ಒಡಿಶಾದ ಮರ್ದಲ; ಮಧ್ಯಪ್ರದೇಶದ ಸಂತೂರ್; ಮಣಿಪುರದ ಪುಂಗ್; ಅಸ್ಸಾಂನ ನಗಾಡಾ ಮತ್ತು ಕಾಲಿ; ಛತ್ತೀಸಗಢದ ತಂಬೂರ; ದೆಹಲಿಯ ಶೆಹನಾಯಿ; ರಾಜಸ್ಥಾನದ ರಾವಣಹತ; ಪಶ್ಚಿಮ ಬಂಗಾಳದ ಶ್ರಿಖೋಲ್ ಮತ್ತು ಸರೋದ್; ಆಂಧ್ರಪ್ರದೇಶದ ಘಟಂ; ಜಾರ್ಖಂಡ್‌ನ ಸಿತಾರ್; ಗುಜರಾತ್‌ನ ಸಂತರ್; ಬಿಹಾರದ ಪಖಾವಾಜ್, ಉತ್ತರಾಖಂಡದ ಹುಡ್ಕಾ; ತಮಿಳುನಾಡಿನ ನಾಗಸ್ವರ, ತವಿಲ್ ಮತ್ತು ಮೃದಂಗದ ಧ್ವನಿ ಕೇಳುಗರ ಮನವನ್ನು ತುಂಬಿತು.


‘ಮಂಗಲ ಧ್ವನಿ’ ಕಾರ್ಯಕ್ರಮಕ್ಕೂ ಮೊದಲು ಸೋನು ನಿಗಂ, ಅನುರಾಧಾ ಪೌಡ್ವಾಲ್ ಮತ್ತು ಶಂಕರ್ ಮಹದೇವನ್ ಅವರು ರಾಮನಿಗೆ ಸಂಬಂಧಿಸಿದ ಹಾಡುಗಳನ್ನು ಹಾಡಿದರು. ‘ಈ ಸಂಗೀತ ಕಾರ್ಯಕ್ರಮವು ಪ್ರತಿ ಭಾರತೀಯನ ಪಾಲಿಗೆ ಮಹತ್ವಪೂರ್ಣವಾದ ಸಂದರ್ಭ. ರಾಮನಿಗೆ ಗೌರವ ಸೂಚಿಸಲು ಈ ಕಾರ್ಯಕ್ರಮವು ವಿಭಿನ್ನ ಪರಂಪರೆಗಳನ್ನು ಒಟ್ಟುಗೂಡಿಸಿದೆ’ ಎಂದು ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಸದಸ್ಯರೊಬ್ಬರು ಹೇಳಿದ್ದಾರೆ.

ಅತಿಥಿಗಳಿಗೆ ವಿಶೇಷ ಉಡುಗೊರೆ

ಪ್ರಾಣ ಪ್ರತಿಷ್ಠಾಪನೆ ಸಮಾರಂಭಕ್ಕೆ ಆಗಮಿಸಿದ್ದ ಅತಿಥಿಗಳಿಗೆ ಅಯೋಧ್ಯೆ ಕುರಿತ ಒಂದು ಪುಸ್ತಕ, ಲೋಹದ ದೀಪ, ವಿಶೇಷ ತುಳಸಿ ಮಾಲೆ ಮತ್ತು ‘ಶ್ರೀರಾಮ’ ಎಂದು ಬರೆಯಲಾಗಿರುವ ಸ್ಕಾರ್ಫ್ ಅನ್ನು ಉಡುಗೊರೆಯಾಗಿ ನೀಡಲಾಯಿತು.

ಇದರ ಜೊತೆ ನಾಲ್ಕು ಲಾಡುಗಳಿರುವ ಒಂದು ಪೊಟ್ಟಣ, ಚಿಪ್ಸ್, ರೇವ್ಡಿ (ಎಳ್ಳುಂಡೆ), ಗೋಡಂಬಿ, ದ್ರಾಕ್ಷಿ ನೀಡಲಾಯಿತು. ಪುಸ್ತಕಕ್ಕೆ ‘ಅಯೋಧ್ಯೆ ಧಾಮ’ ಎಂಬ ಶೀರ್ಷಿಕೆ ನೀಡಲಾಗಿದೆ. ಈ ಹಿಂದೆ ಇದ್ದ ರಾಮಲಲ್ಲಾ ವಿಗ್ರಹದ ಚಿತ್ರಗಳು ಈ ಪುಸ್ತಕದಲ್ಲಿವೆ.

ವಿವಾದಗಳಿಂದ ದೂರವಿರಿ: ಭಾಗವತ್



ಅಯೋಧ್ಯೆ (ಪಿಟಿಐ): ‘ದೇಶದಲ್ಲಿ ರಾಮರಾಜ್ಯ ನಿರ್ಮಾಣವಾಗು-ತ್ತಿದೆ. ಎಲ್ಲರೂ ವಿವಾದಗಳಿಂದ ದೂರವಿರಬೇಕು’ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಸೋಮವಾರ ಹೇಳಿದರು.

ಬಾಲರಾಮ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದ ಬಳಿಕ ಸಾವಿರಾರು ಜನರನ್ನು ಉದ್ದೇಶಿಸಿ ಮಾತನಾಡಿದ ಅವರು, ಬಾಲರಾಮ ಮೂರ್ತಿ ಪ್ರತಿಷ್ಠಾಪಿಸುವ ಮೂಲಕ ದೇಶವು ತನ್ನ ಪ್ರತಿಷ್ಠೆಯನ್ನು ಮರಳಿ ಪಡೆದಿದೆ. ಸೋಮವಾರದ ಕಾರ್ಯಕ್ರಮವು, ಇಡೀ ಜಗತ್ತಿಗೇ ದುರಂತಗಳಿಂದ ಬಿಡುಗಡೆ ದೊರಕಿಸಿಕೊಡುವ ನೂತನ ಭಾರತದ ಹೆಗ್ಗುರುತಾಯಿತು ಎಂದರು.

‘ತ್ರೇತಾಯುಗಕ್ಕೆ ಕಾಲಿಟ್ಟಂತೆ ಅನಿಸಿದೆ’

ಅಯೋಧ್ಯೆ (ಪಿಟಿಐ): ಐನೂರು ವರ್ಷಗಳ ಕಾಯುವಿಕೆಯ ನಂತರ ಬಾಲರಾಮನ ಪ್ರಾಣಪ್ರತಿಷ್ಠಾಪನೆ ಅಯೋಧ್ಯೆಯಲ್ಲಿ ನಡೆದಿದೆ, ಇಡೀ ದೇಶವು ರಾಮಮಯ ಆಗಿದೆ, ತ್ರೇತಾಯುಗಕ್ಕೆ ಮತ್ತೆ ಕಾಲಿಟ್ಟಂತೆ ಅನಿಸುತ್ತಿದೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಸೋಮವಾರ ಹೇಳಿದರು.

ಬಾಲರಾಮನ ವಿಗ್ರಹಕ್ಕೆ ಪ್ರಾಣ ಪ್ರತಿಷ್ಠಾಪನೆಯ ನಂತರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದರು. ಬಾಲರಾಮನ ಪ್ರಾಣ ಪ್ರತಿಷ್ಠಾಪನೆ-ಯಿಂದ ರಾಮ ರಾಜ್ಯದ ಘೋಷಣೆ ಆದಂತಾಗಿದೆ. ಇನ್ನು ಮುಂದೆ ಅಯೋಧ್ಯೆಯ ಬೀದಿಗಳಲ್ಲಿ ಗುಂಡಿನ ಸದ್ದು ಕೇಳುವುದಿಲ್ಲ ಎಂದರು.

ಬಹುಸಂಖ್ಯಾತರು ತಮ್ಮದೇ ದೇಶದಲ್ಲಿ, ತಮ್ಮ ದೇವರ ಜನ್ಮಸ್ಥಳದಲ್ಲಿ ಮಂದಿರಕ್ಕಾಗಿ 500 ವರ್ಷ ಕಾಯ್ದ ನಿದರ್ಶನ ವಿಶ್ವದಲ್ಲಿ ಇದೊಂದೇ ಇರಬೇಕು ಎಂದು ಯೋಗಿ ಹೇಳಿದರು.

ಸರ್ವಧರ್ಮ ಸಾಮರಸ್ಯ ರ‍್ಯಾಲಿ



ಪ್ರಜಾವಾಣಿ ವಾರ್ತೆ

ಕೋಲ್ಕತ್ತಾ: ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸೋಮವಾರ ಇಲ್ಲಿ ಸರ್ವಧರ್ಮ ಸಾಮರಸ್ಯ ರ‍್ಯಾಲಿ ನಡೆಸಿದರು.

ಹಜ್ರಾ ಮೋರ್‌ನಿಂದ ಆರಂಭವಾದ ರ‍್ಯಾಲಿಯು ಪಾರ್ಕ್ ಸರ್ಕಸ್ ಮೈದಾನದಲ್ಲಿ ಕೊನೆಗೊಂಡಿತು. ಧಾರ್ಮಿಕ ಮತ್ತು ರಾಜಕೀಯ ಮುಖಂಡರು ಪಾಲ್ಗೊಂಡಿದ್ದರು.

ರ‍್ಯಾಲಿಗೂ ಮುನ್ನ ಮಮತಾ ಅವರು, ಕಾಳಿಘಾಟ್ ದೇವಾಲಯದಲ್ಲಿ ಪೂಜೆ ಸಲ್ಲಿಸಿದರು. ರಾಮ ಮಂದಿರ ವಿಚಾರವಾಗಿ ಈ ಹಿಂದೆ ಬಿಜೆಪಿಯನ್ನು ಟೀಕಿಸಿದ್ದ ಮಮತಾ ಅವರು, ‘ಇದು ಲೋಕಸಭೆ ಚುನಾವಣೆಗೂ ಮುನ್ನ ನಡೆಸುತ್ತಿರುವ ಗಿಮಿಕ್’ ಎಂದಿದ್ದರು.



ರಾಮ ಮಂದಿರ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ.ದೇವೇಗೌಡ ಅವರನ್ನು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಭೇಟಿಯಾದರು. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ, ಯುವಘಟಕದ ಅಧ್ಯಕ್ಷ ನಿಖಿಲ್ ಕುಮಾರ್ ಹಾಗೂ ಚನ್ನಮ್ಮ ಹಾಜರಿದ್ದರು

ಅಯೋಧ್ಯೆಯಲ್ಲಿ ನೆಲೆಸಿದ ಬಾಲರಾಮ

ಒಂದನೇ ಪುಟದಿಂದ

ಇದಕ್ಕೂ ಮೊದಲು ಶಾಸ್ತ್ರಿ ಅವರು ಮೋದಿ ಹಾಗೂ ಅಲ್ಲಿದ್ದ ಇತರ ಪ್ರಮುಖರ ಮೇಲೆ ಪವಿತ್ರ ನದಿಗಳ ನೀರನ್ನು ಪ್ರೋಕ್ಷಿಸಿದರು.

ಮಂದಿರ ಸಂಕೀರ್ಣದ ಪ್ರವೇಶ ದ್ವಾರದಿಂದ ಗರ್ಭಗುಡಿಯವರೆಗೆ ಪ್ರಧಾನಿ ನಡೆದು ಬರುತ್ತಿದ್ದಾಗ, ಅಲ್ಲಿನ ತಡೆಬೇಲಿಗಳ ಹಿಂದೆ ಇದ್ದ ಸಾಧುಗಳು ಮತ್ತು ಸ್ವಾಮೀಜಿಗಳು ಮೋದಿ ಅವರ ಭಾವಚಿತ್ರ ಸೆರೆಹಿಡಿದರು. ಗರ್ಭಗೃಹ ಪ್ರವೇಶಿಸುವ ಮೊದಲು ಮೋದಿ ಅವರು ಐದು ಮಂಟಪಗಳನ್ನು ದಾಟಿ ಬಂದರು.

ಮೋದಿ ಅವರು ಕೆನೆಬಣ್ಣದ ಧೋತಿ, ಬಂಗಾರದ ಬಣ್ಣದ ಕುರ್ತಾ ಧರಿಸಿದ್ದರು ಮತ್ತು ಉತ್ತರೀಯ ಹೊದ್ದಿದ್ದರು. ಗರ್ಭಗೃಹದ ಕಡೆ ಸಾಗುವಾಗ ಬೆಳ್ಳಿಯ ಛತ್ರಿಯನ್ನು ಎರಡೂ ಕೈಗಳಲ್ಲಿ ಹಿಡಿದಿದ್ದರು.

ಪುರೋಹಿತರು ನೀಡಿದ ಸೂಚನೆಗಳಿಗೆ ಅನುಗುಣವಾಗಿ ಪ್ರಧಾನಿಯವರು ಧಾರ್ಮಿಕ ವಿಧಿಗಳನ್ನು ಕೈಗೊಂಡರು. ಅಲ್ಲದೆ, ಪುರೋಹಿತರು ಹೇಳಿದ ಮಂತ್ರಗಳನ್ನು ತಾವೂ ಉಚ್ಚರಿಸಿದರು. ದೇವ–ದೇವತೆಗಳನ್ನು ಆವಾಹಿಸಲು ಪುರೋಹಿತರು 16 ಮಂತ್ರಗಳನ್ನು ಪಠಿಸಿದರು. 16ನೆಯ ಮಂತ್ರದ ಪಠಣದ ನಂತರ ವಿಗ್ರಹದ ಪ್ರಾಣ ಪ್ರತಿಷ್ಠಾಪನೆ ಆಯಿತು.



ಮಂದಿರ ಉದ್ಘಾಟನೆ ವೇಳೆ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ

ನಂತರದಲ್ಲಿ ಮೋದಿ ಅವರು ಬಾಲರಾಮನಿಗೆ ಆರತಿ ಬೆಳಗಿದರು. ವಿಗ್ರಹವನ್ನು ಮರೆಮಾಚಿದ್ದ ಬಟ್ಟೆಯನ್ನು ತೆಗೆದ ಮೋದಿ ಅವರು, ವಿಗ್ರಹದ ಕಣ್ಣಿಗೆ ಕಾಡಿಗೆ ಹಚ್ಚಿದರು. ಪ್ರಾಣಪ್ರತಿಷ್ಠಾಪನೆಯ ಕೊನೆಯಲ್ಲಿ ಮೋದಿ ಅವರು ಬಾಲರಾಮನಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಕಾರ್ಯಕ್ರಮದುದ್ದಕ್ಕೂ ಮಂಗಳ-ವಾದ್ಯಗಳನ್ನು ಮೊಳಗಿಸಲಾಯಿತು.

ಗರ್ಭಗುಡಿಯಲ್ಲಿ ಕಾರ್ಯಕ್ರಮ ನಡೆಯುತ್ತಿದ್ದ ಸಂದರ್ಭದಲ್ಲಿ ಭಾರತೀಯ ಸೇನೆಯ ಹೆಲಿಕಾಪ್ಟರ್ ಮೂಲಕ ಮಂದಿರ ಸಂಕೀರ್ಣದ ಮೇಲೆ ಹಲವು ಬಾರಿ ಹೂವಿನ ಮಳೆ ಸುರಿಸಲಾಯಿತು. ಅತಿಥಿಗಳಿಗೆ ಚಿಕ್ಕ ಗಂಟೆಯನ್ನು ನೀಡಲಾಗಿತ್ತು, ಕಾರ್ಯಕ್ರಮದುದ್ದ-ಕ್ಕೂ ಗಂಟೆಯ ಸದ್ದು ಕೇಳಿಬರುತ್ತಿತ್ತು.

ಪ್ರಾಣಪ್ರತಿಷ್ಠಾಪನೆ ನಂತರ, ಮಂದಿರದ ಹೊರಗೆ ಹಾಕಲಾಗಿದ್ದ ವೇದಿಕೆಗೆ ಪ್ರಧಾನಿ ಬಂದಾಗ ಅವರಿಗೆ ಸಾಧು, ಸಂತರು ಶುಭ ಕೋರಿದರು. ಪ್ರಧಾನಿಯವರು ಮಹಂತ ಗೋವಿಂದ ಗಿರಿ ಅವರಿಂದ ಚರಣಾಮೃತ (ಅಭಿಷೇಕದ ತೀರ್ಥ) ಸ್ವೀಕರಿಸುವ ಮೂಲಕ 11 ದಿನಗಳ ವ್ರತ ಕೊನೆಗೊಳಿಸಿದರು.

(ಪೂರಕ ಮಾಹಿತಿ: ಪಿಟಿಐ)

ರಾಮನಲ್ಲಿ ಕ್ಷಮೆಯಾಚಿಸಿದ ಮೋದಿ

ಒಂದನೇ ಪುಟದಿಂದ...

ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ನೆರವೇರಿಸಿದ ನಂತರ ಅವರು ಅತಿಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಶ್ರೀರಾಮನಲ್ಲಿ ಕ್ಷಮೆ ಯಾಚಿಸುವ ಮಾತು ಕಾಂಗ್ರೆಸ್ಸಿನ ಕೈಕಟ್ಟಿಹಾಕುವ ಯತ್ನದಂತೆ ಇದೆ ಎಂದು ವಿಶ್ಲೇಷಿಸಲಾಗಿದೆ. ರಾಮ ಮಂದಿರದ ನಿರ್ಮಾಣ ಕಾರ್ಯಕ್ಕೆ ಕಾಂಗ್ರೆಸ್ ಪಕ್ಷವು ಅಡ್ಡಿಗಳನ್ನು ಸೃಷ್ಟಿಸಲು ಯತ್ನಿಸಿತು ಎಂದು ಪರೋಕ್ಷವಾಗಿ ಹೇಳುವ ಯತ್ನ ಇದು ಎನ್ನಲಾಗಿದೆ.

‘ಪ್ರಭು ಶ್ರೀರಾಮನಲ್ಲಿ ನಾನು ಕ್ಷಮೆ ಕೋರುತ್ತಿದ್ದೇನೆ... ನಮ್ಮ ಪ್ರಯತ್ನಗಳಲ್ಲಿ, ತ್ಯಾಗದಲ್ಲಿ ಒಂದಿಷ್ಟು ಕೊರತೆಗಳು ಇದ್ದಿರಬೇಕು, ನಮಗೆ ರಾಮ ಮಂದಿರ ನಿರ್ಮಿಸಲು ಬಹುಕಾಲ ಆಗಲಿಲ್ಲ’ ಎಂದು ಪ್ರಧಾನಿ ಹೇಳಿದರು. ಮಾತನಾಡುವಾಗ ತಾವು ಭಾವುಕವಾಗುತ್ತಿರುವುದಾಗಿ, ಕೊರಳು ಉಬ್ಬಿದಂತೆ ಅನಿಸುತ್ತಿರುವುದಾಗಿ, ಮೈ ನಡುಗಿದ ಅನುಭವ ಆಗುತ್ತಿರುವುದಾಗಿ ಅವರು ಹೇಳಿದರು.

‘ಸಂವಿಧಾನದ ಮೊದಲ ಪ್ರತಿಯಲ್ಲಿ ರಾಮನ ಚಿತ್ರ ಇತ್ತಾದರೂ, ರಾಮ ತನ್ನ ಸ್ಥಾನಕ್ಕಾಗಿ ದೀರ್ಘ ಹೋರಾಟ ನಡೆಸಬೇಕಾಯಿತು’ ಎಂದು ಮೋದಿ ಹೇಳಿದರು.

‘ಜನವರಿ 22ರಂದು ಸೂರ್ಯನು ಹೊಸ ಬೆಳಕನ್ನು ಹೊತ್ತು ತಂದಿದ್ದಾನೆ... ಇದು ಕೇವಲ ಒಂದು ದಿನಾಂಕ ಅಲ್ಲ. ಇದು ಹೊಸ ಯುಗದ ಆರಂಭ... ಬಹುಕಾಲದ ತಾಳ್ಮೆಯ ಪ್ರತೀಕವಾದ ಪರಂಪರೆಯೊಂದು ನಮಗೆ ಸಿಕ್ಕಿದೆ... ಗುಲಾಮಗಿರಿಯ ಸಂಕೋಲೆಗಳನ್ನು ಕಳಚಿ ದೇಶವು ಈ ರೀತಿಯಲ್ಲಿ ಹೊಸ ಇತಿಹಾಸ ಸೃಷ್ಟಿಸಿದೆ’ ಎಂದು ಪ್ರಧಾನಿ ಹೇಳಿದರು. ಈ ಸಂದರ್ಭದ ಬಗ್ಗೆ ಒಂದು ಸಾವಿರ ವರ್ಷಗಳ ನಂತರವೂ ಜನ ಮಾತನಾಡುತ್ತಾರೆ ಎಂದರು.

‘ಇದು ಒಂದು ಮಂದಿರ ಮಾತ್ರವೇ ಅಲ್ಲ... ಇದು ಭಾರತದ ದರ್ಶನ ಮತ್ತು ತಾತ್ವಿಕತೆಯ ಮಂದಿರ... ಇದು ಮಂದಿರಗಳ ದೇಶವು ರಾಮನ ರೂಪದಲ್ಲಿ ಎಚ್ಚೆತ್ತಿರುವುದರ ಸೂಚಕ’ ಎಂದು ಬಣ್ಣಿಸಿದರು.

‘ರಾಮ ಭಾರತದ ನಂಬಿಕೆ... ರಾಮನು ಭಾರತದ, ನಮ್ಮ ಆಲೋಚನೆಗಳ, ಘನತೆಯ ಮೂಲ ನೆಲೆ... ರಾಮ ಎಲ್ಲವೂ ಹೌದು... ಅವನು ಎಲ್ಲವನ್ನೂ ಒಳಗೊಂಡಿದ್ದಾನೆ... ಅವನೇ ಜಗತ್ತು... ರಾಮನಿಗೆ ತಕ್ಕುದಾದ ಸ್ಥಾನವನ್ನು ಕಲ್ಪಿಸಿದಾಗ ಅದರ ಪರಿಣಾಮವು ಶತಮಾನಗಳ ಕಾಲ ಉಳಿಯಲಿದೆ... ರಾಮ ಮಂದಿರ ನಿರ್ಮಾಣ ಆಗಿದೆ... ಇನ್ನು ಮುಂದೆ ಏನು ಎಂಬುದನ್ನು ತಿಳಿಯಲು ಅಯೋಧ್ಯೆಯು ಬಯಸುತ್ತಿದೆ’ ಎಂದು ಅವರು ಹೇಳಿದರು. ಮಂದಿರ ನಿರ್ಮಾಣದಲ್ಲಿ ತೊಡಗಿಸಿಕೊಂಡಿದ್ದ ಕಾರ್ಮಿಕರ ಮೇಲೆ ಮೋದಿ ಹೂವು ಎರಚಿದರು. ನಂತರ ಕುಬೇರ ತಿಲದಲ್ಲಿ ಇರುವ ಶಿವ ಮಂದಿರಕ್ಕೆ ಭೇಟಿ ನೀಡಿದರು.

ಮಂದಿರ ಲೋಕಾರ್ಪಣೆಯಲ್ಲಿ ಕಂಡಿದ್ದು...

- ನಟರಾದ ಅಮಿತಾಭ್ ಬಚ್ಚನ್, ರಜನಿಕಾಂತ್, ಹೇಮಾ ಮಾಲಿನಿ, ಪವನ್ ಕಲ್ಯಾಣ್, ರಣದೀಪ್ ಹೂಡ, ಕಂಗನಾ ರನೌತ್, ರಿಷಬ್ ಶೆಟ್ಟಿ, ಉದ್ಯಮಿಗಳಾದ ಮುಕೇಶ್ ಅಂಬಾನಿ, ಲಕ್ಷ್ಮೀನಿವಾಸ್ ಮಿತ್ತಲ್, ಸುನಿಲ್ ಭಾರ್ತಿ ಮಿತ್ತಲ್, ಅನಿಲ್ ಅಂಬಾನಿ, ಕುಮಾರಮಂಗಲಂ ಬಿರ್ಲಾ, ಕ್ರಿಕೆಟಿಗರಾದ ಸಚಿನ್ ತೆಂಡೂಲ್ಕರ್, ವೆಂಕಟೇಶ ಪ್ರಸಾದ್, ಯೋಗ ಗುರು ಬಾಬಾ ರಾಮದೇವ, ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ, ಮಾಜಿ ಪ್ರಧಾನಿ ಎಚ್‌.ಡಿ. ದೇವೇಗೌಡ ಭಾಗಿ
- ಕಾಶ್ಮೀರದಾದ್ಯಂತ ದೇವಾಲಯಗಳಲ್ಲಿ ವಿಶೇಷ ಪೂಜೆ
- ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಠಾಣೆಯ ಕೋಪಿನೇಶ್ವರ ದೇಗುಲದ ಸಮೀಪದಲ್ಲಿ ಪಕ್ಷದ ಕಾರ್ಯಕರ್ತರೊಂದಿಗೆ ‘ಡೋಲು’ ಬಾರಿಸಿ ಸಂಭ್ರಮಿಸಿದರು
- ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಲೋಕಸಭಾ ಕ್ಷೇತ್ರವಾದ ವಯನಾಡುವಿನಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವು ಸಂಭ್ರಮಿಸಿತು.
- ‘ಬಾಲ ರಾಮನ ಪ್ರತಿಷ್ಠಾಪನೆಯು ಸರ್ವರಲ್ಲಿಯೂ ಶಾಂತಿ ಹಾಗೂ ಸೌಹಾರ್ದ ಮೂಡಿಸಲಿ’ ಎಂದು ದಕ್ಷಿಣ ಆಫ್ರಿಕಾದ ಕ್ರಿಕೆಟಿಗ, ಉತ್ತರ ಪ್ರದೇಶ ಮೂಲದವರಾದ ಕೇಶವ್ ಮಹಾರಾಜ್ ಆಶಿಸಿ, ಜಾಲತಾಣದಲ್ಲಿ ವಿಡಿಯೊ ಹಂಚಿಕೊಂಡಿದ್ದಾರೆ.
- ‘ಪ್ರತಿಷ್ಠಾಪನೆ ಮುಹೂರ್ತದಲ್ಲಿ ದೇಶದಲ್ಲಿ ಜನಿಸಿದ ಹಲವಾರು ನವಜಾತ ಶಿಶುಗಳಿಗೆ ‘ರಾಮ’ ಅಥವಾ ‘ಸೀತಾ’ ಎಂದು ನಾಮಕರಣ. ಉತ್ತರ ಪ್ರದೇಶದ ಫಿರೋಜಾಬಾದ್‌ನ ಜಿಲ್ಲಾ ಆಸ್ಪತ್ರೆಯಲ್ಲಿ ಮುಸ್ಲಿಂ ಕುಟುಂಬದಲ್ಲಿ ಜನಸಿದ ಗಂಡು ಮಗುವಿಗೆ ‘ರಾಮ್ ರಹೀಮ್’ ಎಂದು ನಾಮಕರಣ
- ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮ-ದಲ್ಲಿ ಪಾಲ್ಗೊಂಡಿದ್ದ ಭಕ್ತರೊಬ್ಬರಿಗೆ ಹೃದಯಾಘಾತವಾ-ಗಿದ್ದು, ಭಾರತೀಯ ವಾಯುಪಡೆಯ ತಂಡವು ತಕ್ಷಣವೇ ಸ್ಪಂದಿಸಿ ಅವರ ಪ್ರಾಣ ಉಳಿಸಿದೆ ಎಂದು ಮೂಲಗಳು ತಿಳಿಸಿವೆ.
- ಗುಜರಾತ್‌ನ ವಡೋದರದಲ್ಲಿ ಹಮ್ಮಿಕೊಂಡಿದ್ದ ‘ಶೋಭಾಯಾತ್ರೆ’ ವೇಳೆ ಕಲ್ಲು ಎಸೆತ, ವ್ಯಕ್ತಿಗೆ ಗಾಯ

ಮಂದಿರ ಉದ್ಘಾಟನೆ ಸಂಭ್ರಮಾಚರಣೆಗೆ ನಿರ್ಬಂಧ ಆರೋಪ

ರಾಜ್ಯಪಾಲರು, ಕೇಂದ್ರ ಸಚಿವೆ ಟೀಕೆ

ಚೆನ್ನೈ (ಪಿಟಿಐ): ಬಾಲರಾಮ ಪ್ರಾಣ ಪ್ರತಿಷ್ಠಾಪನೆ ಸಮಾರಂಭದ ನೇರ ಪ್ರಸಾರ ಮತ್ತು ಸಂಭ್ರಮಾಚರಣೆಗೆ ತಮಿಳುನಾಡು ಸರ್ಕಾರ ನಿರ್ಬಂಧ ಹೇರಿತ್ತು ಎಂದು ರಾಜ್ಯಪಾಲ ಆರ್‌.ಎನ್‌. ರವಿ ಮತ್ತು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಟೀಕಿಸಿದ್ದಾರೆ.

ಆದರೆ, ಅಯೋಧ್ಯೆ ಸಮಾರಂಭದ ಹಿನ್ನೆಲೆಯಲ್ಲಿ ಸಂಭ್ರಮಾಚರಣೆಗೆ ಹಿಂದೂ ಧಾರ್ಮಿಕ ಮತ್ತು ದತ್ತಿ ಇಲಾಖೆಯು ಅನುಮತಿ ನಿರಾಕರಿಸಿದೆ ಎಂಬ ಬಿಜೆಪಿಯ ಆರೋಪವನ್ನು ತಮಿಳುನಾಡು ಸರ್ಕಾರವು ಸ್ಪಷ್ಟವಾಗಿ ತಳ್ಳಿಹಾಕಿದೆ.

‘ದೇಶದಾದ್ಯಂತ ಬಾಲರಾಮ ಪ್ರಾಣ ಪ್ರತಿಷ್ಠಾಪನೆ ಸಂಭ್ರಮವಿದ್ದರೆ, ತಮಿಳುನಾಡಿನಲ್ಲಿ ಸರ್ಕಾರದ ಸುಪ-ರ್ದಿಯಲ್ಲಿರುವ ಶ್ರೀರಾಮ ದೇವಸ್ಥಾನದ ಅರ್ಚಕರು ಮತ್ತು ಸಿಬ್ಬಂದಿ ‘ದಬ್ಬಾಳಿಕೆ’ಗೆ ಒಳಗಾಗಿದ್ದರು’ ಎಂದು ರಾಜ್ಯಪಾಲರು ಆರೋಪಿಸಿದ್ದಾರೆ.

ರಾಜ್ಯಪಾಲ ರವಿ ಅವರು, ‘ನಾನು, ಚೆನ್ನೈನ ಪಶ್ಚಿಮ ಮಾಂಬಳಂನಲ್ಲಿ-ರುವ ಶ್ರೀ ಕೊದಂಡರಾಮಸ್ವಾಮಿ ದೇಗುಲಕ್ಕೆ ಭೇಟಿ ನೀಡಿ ಸರ್ವರಿಗೂ ಒಳಿತನ್ನು ಬಯಸಿ ಶ್ರೀರಾಮನಿಗೆ ಪೂಜೆ ಸಲ್ಲಿಸಿದೆ’ ಎಂದು ‘ಎಕ್ಸ್’ನಲ್ಲಿ ಸಂದೇಶ ಹಂಚಿಕೊಂಡಿದ್ದಾರೆ.

‘ದೇಶದಾದ್ಯಂತ ಹಬ್ಬದ ವಾತಾವರಣ ಇದ್ದರೆ, ಈ ದೇಗುಲದ ಸಿಬ್ಬಂದಿ ಹಾಗೂ ಅರ್ಚಕರಲ್ಲಿ ಅವ್ಯಕ್ತ ಭಯ ಆವರಿಸಿದ್ದನ್ನು ನಾನು ಗಮನಿಸಿದೆ. ಒಂದು ರೀತಿ ದಬ್ಬಾಳಿಕೆಯ ವಾತಾವರಣ ಇತ್ತು’ ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ದೇವಸ್ಥಾನ ಧಾರ್ಮಿಕ ದತ್ತಿ ಇಲಾಖೆಯ ಸುಪರ್ದಿಯಲ್ಲಿದೆ.

ಪ್ರಾಣ ಪ್ರತಿಷ್ಠಾಪನೆ ಸಮಾರಂಭದ ನೇರ ಪ್ರಸಾರ ಮತ್ತು ಸಂಭ್ರಮಾಚರಣೆಯನ್ನು ತಡೆಯಲು ‘ಹಿಂದೂ ವಿರೋಧಿ’ ಡಿಎಂಕೆ ನೇತೃತ್ವದ ಸರ್ಕಾರವು ಪೊಲೀಸರನ್ನು ದುರ್ಬಳಕೆ ಮಾಡಿಕೊಂಡಿದೆ ಎಂದು ನಿರ್ಮಲಾ ಸೀತಾರಾಮನ್ ಟೀಕಿಸಿದ್ದಾರೆ.

ಕಾಂಚೀಪುರಂನಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ಈ ಮೂಲಕ ಪ್ರಧಾನಿ ನರೇಂದ್ರ ಮೋದಿ ವಿರುದ್ಧದ ವೈಯಕ್ತಿಕ ದ್ವೇಷವನ್ನು ಡಿಎಂಕೆ ಪಕ್ಷ ಬಹಿರಂಗಪಡಿಸಿದೆ. ಜನರು ಪ್ರಧಾನಿ ಅವರ ಭಾಷಣ ಆಲಿಸುವುದನ್ನು ನಿರಾಕರಿಸಲು ಸಾಧ್ಯವೇ? ಪೂಜೆ ಮಾಡುವ ನನ್ನ ಹಕ್ಕು ಕಸಿಯಲು ಡಿಎಂಕೆ ಪಕ್ಷಕ್ಕೆ ಏನು ಹಕ್ಕಿದೆ? ಕಾರ್ಯಕ್ರಮ ವೀಕ್ಷಿಸುವ ನನ್ನ ಹಕ್ಕನ್ನೂ ಕಸಿಯುತ್ತಿದೆ ಎಂದು ಆರೋಪಿಸಿದರು.

ನಿಯಮ ಪಾಲಿಸಿ, ಮೌಖಿಕ ಆದೇಶವನ್ನಲ್ಲ – ‘ಸುಪ್ರಿಂ’

ನವದೆಹಲಿ (ಪಿಟಿಐ): ‘ದೇಗುಲಗಳಲ್ಲಿ ವಿಶೇಷ ಪ್ರಾರ್ಥನೆ, ಬಾಲರಾಮ ಪ್ರಾಣ ಪ್ರತಿಷ್ಠಾಪನೆಯ ನೇರ ಪ್ರಸಾರ ಕುರಿತಂತೆ ನಿಯಮಾನುಸಾರ ಕ್ರಮಜರುಗಿಸಬೇಕು, ಯಾವುದೇ ಮೌಖಿಕ ಸೂಚನೆಗಳನ್ನು ಅಲ್ಲ’ ಎಂದು ಸುಪ್ರೀಂ ಕೋರ್ಟ್ ತಮಿಳುನಾಡು ಆಡಳಿತಕ್ಕೆ ಸೂಚಿಸಿದೆ.

ನೇರ ಪ್ರಸಾರ ನಿರ್ಬಂಧ ಕುರಿತು ‘ಮೌಖಿಕ ಆದೇಶ’ವನ್ನು ರದ್ದುಪಡಿಸಬೇಕು ಎಂದು ಕೋರಿ ಸಲ್ಲಿಸಲಾ-ಗಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಂಕರ್ ದತ್ತಾ ಅವರಿದ್ದ ಪೀಠವು ಈ ಸೂಚನೆಯನ್ನು ನೀಡಿತು.

‘ಯಾರೂ ಮೌಖಿಕ ಆದೇಶಕ್ಕೆ ಬದ್ಧರಾಗಿರುವ ಅಗತ್ಯವಿಲ್ಲ‘ ಎಂದೂ ತಿಳಿಸಿತು. ‘ಪೂಜೆ, ಅರ್ಚನೆ ಅಥವಾ ಕಾರ್ಯಕ್ರಮದ ನೇರಪ್ರಸಾರಕ್ಕೆ ಯಾವುದೇ ನಿಯಂತ್ರಣ ಇಲ್ಲ‘ ಎಂಬ ತಮಿಳುನಾಡು ಸರ್ಕಾರ ಪ್ರತಿನಿಧಿಸಿದ್ದ ಹಿರಿಯ ವಕೀಲ ಅಮಿತ್ ಆನಂದ್ ಹೇಳಿಕೆಯನ್ನು ಪರಿಗಣಿಸಿತು.

ಈ ಅರ್ಜಿಯು ರಾಜಕೀಯ ಉದ್ದೇಶದ್ದಾಗಿದೆ ಎಂದು ವಕೀಲರು ಹೇಳಿದರು.

ನಿರ್ಬಂಧವಿದೆ ಎಂಬುದನ್ನು ಪರೋಕ್ಷವಾಗಿ ಉಲ್ಲೇಖಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ‘ಇಂಥ ಸ್ಥಿತಿ ಇದೆ ಎಂಬುದೇ ದಿಗ್ಭ್ರಮೆ ಮೂಡಿಸುತ್ತಿದೆ. ದೇಶದಲ್ಲಿ ಇನ್ನೂ ಸಂವಿಧಾನದತ್ತ ಆಡಳಿತ ಇದೆ, ಅದು ತಮಿಳುನಾಡಿಗೂ ಅನ್ವಯವಾಗಲಿದೆ ಎಂಬ ಸಂದೇಶವನ್ನು ರಾಜ್ಯಗಳಿಗೆ ರವಾನಿಸಬೇಕು‘ ಎಂದು ಪೀಠಕ್ಕೆ ಮನವಿ ಮಾಡಿದರು.

ರಮ್ಜಾನ್ ಬಳಿಕ ಮಸೀದಿ ಕಾಮಗಾರಿ

ನವದೆಹಲಿ (ರಾಯಿಟರ್ಸ್): ಅಯೋಧ್ಯೆಯ ರಾಮಮಂದಿರದಲ್ಲಿ ಬಾಲರಾಮ ಪ್ರತಿಷ್ಠಾಪನೆಯಾಗಿರುವ ಬೆನ್ನಲ್ಲೇ, ರಾಮ ಮಂದಿರದಿಂದ ಸುಮಾರು 25 ಕಿ.ಮೀ ದೂರದಲ್ಲಿರುವ ಇದೇ ನಗರದ ಇನ್ನೊಂದು ಸ್ಥಳದಲ್ಲಿ ಮಸೀದಿ ನಿರ್ಮಾಣಕ್ಕೆ ಮುಸ್ಲಿಂ ಸಮುದಾಯದವರು ಸಿದ್ಧತೆ ನಡೆಸಿದ್ದಾರೆ.

ಮಸೀದಿ ನಿರ್ಮಾಣ ಮೇಲುಸ್ತುವಾರಿ ವಹಿಸಿರುವ ಇಂಡೊ–ಇಸ್ಲಾಮಿಕ್ ಕಲ್ಚರಲ್ ಫೌಂಡೇಷನ್‌ನ (ಐಐಸಿಎಫ್) ಅಭಿವೃದ್ಧಿ ಸಮಿತಿಯ ಮುಖ್ಯಸ್ಥ ಹಾಜಿ ಅರ್ಫಾತ್ ಶೇಖ್ ಮಾತನಾಡಿ, ‘ಪವಿತ್ರ ರಮ್ಜಾನ್ ತಿಂಗಳು ಮುಕ್ತಾಯವಾದ ಬಳಿಕ ಮೇ ತಿಂಗಳಿನಲ್ಲಿ ಮಸೀದಿ ನಿರ್ಮಾಣ ಕಾಮಗಾರಿ ಆರಂಭಿಸಲಾಗುವುದು. ಮೂರರಿಂದ ನಾಲ್ಕು ವರ್ಷಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ’ ಎಂದಿದ್ದಾರೆ. ದೇಣಿಗೆ ಸಂಗ್ರಹಕ್ಕಾಗಿ ಮುಂದಿನ ವಾರಗಳಲ್ಲಿ ವೆಬ್‌ಸೈಟ್ ಆರಂಭಿಸಲಾ-ಗುವುದು ಎಂದು ಶೇಖ್ ತಿಳಿಸಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ನಾಳೆ ಎಂಬುದು ನಿಮಗೆ ಏನನ್ನು ಹೊತ್ತು ತರಲಿದೆ ಎಂಬುದನ್ನು ತಿಳಿದುಕೊಳ್ಳಬೇಕೆಂದರೆ, ನಾಳೆಯವರೆಗೂ ನೀವು ಕಾಯಲೇಬೇಕು.

–ಹರುಕಿ ಮುರಕಮಿ

ಮಂದಿರ ಸೌಹಾರ್ದದ ಸಂಕೇತವಾಗಲಿ ರಾಮನ ಆದರ್ಶಗಳು ಮೈಗೂಡಲಿ

ದೇಶದೆಲ್ಲೆಡೆ ಸಂಭ್ರಮ, ಉತ್ಸಾಹ ಹಾಗೂ ಕುತೂಹಲ ಮೂಡಿಸಿದ್ದ ಅಯೋಧ್ಯೆಯಲ್ಲಿನ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಪ್ರಕ್ರಿಯೆ ಅದ್ದೂರಿಯಾಗಿ ನಡೆದಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲೇ ಬಾಲರಾಮನ ಪ್ರಾಣ ಪ್ರತಿಷ್ಠಾಪನೆಯ ಪೂಜಾ ವಿಧಿಗಳು ನಡೆದಿವೆ. ಬಹುಸಂಖ್ಯಾತರ ಭಾವನೆಗಳ ಅಭಿವ್ಯಕ್ತಿ, ಹಿಂದೂ ಧರ್ಮದ ಪುನರುತ್ಥಾನ ಹಾಗೂ ಭಾರತದ ಅಸ್ಮಿತೆ ಎನ್ನುವ ಬಣ್ಣನೆಗಳು ಸೇರಿದಂತೆ ಹಲವು ರೂಪಗಳಲ್ಲಿ ಮಂದಿರವನ್ನು ವ್ಯಾಖ್ಯಾನಿಸಲಾಗುತ್ತಿದೆ. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಬಹುಜನ ಒಪ್ಪುವ ವ್ಯಾಖ್ಯಾನಗಳನ್ನು ನಿರಾಕರಿಸಲು ಸಾಧ್ಯವಿಲ್ಲ. ಆದರೆ, ಈ ಭಕ್ತಿ–ಭಾವ ಪರವಶತೆಯ ವ್ಯಾಖ್ಯಾನಗಳ ಜೊತೆಜೊತೆಯಲ್ಲೇ ಮಂದಿರ ನಿರ್ಮಾಣದ ಹಿನ್ನೆಲೆಯಲ್ಲಿ ನಡೆದ ಕಹಿ ವಿದ್ಯಮಾನಗಳು ನಮಗೆ ಪಾಠವಾಗಬೇಕು. ಸಂಘರ್ಷಗಳ ದಾರಿಯಲ್ಲಿ ಮೈದಳೆದಿರುವ ಮಂದಿರವು ಸೌಹಾರ್ದದ ಸಂಕೇತವಾಗಬೇಕಾಗಿದೆ. ಮಂದಿರವನ್ನು ಸಾಮರಸ್ಯದ ಕೇಂದ್ರವನ್ನಾಗಿ ರೂಪಿಸುವುದು ದೇಶದ ಮುಂದೆ ಈಗ ಉಳಿದಿರುವ ಸವಾಲು ಹಾಗೂ ಸಾಧ್ಯತೆ. ಬಾಲರಾಮನ ಅನಾವರಣದೊಂದಿಗೆ ಕಹಿ ಘಟನೆಗಳನ್ನು ಮರೆಯುವುದು ಹಾಗೂ ಸೌಹಾರ್ದದ ಹಂಬಲದೊಂದಿಗೆ ಮುನ್ನಡೆಯುವುದು ದೇಶದ ಹಿತಾಸಕ್ತಿಯ ದೃಷ್ಟಿಯಿಂದ ಭಾರತೀಯರೆಲ್ಲರಿಗೂ ಅನಿವಾರ್ಯವಾಗಿದೆ. ಸುಪ್ರೀಂ ಕೋರ್ಟ್ ತೀರ್ಪು ಹಾಗೂ ಕೇಂದ್ರ ಸರ್ಕಾರದ ಒತ್ತಾಸೆಯ ಮೇರೆಗೆ ರೂಪುಗೊಂಡಿರುವ ಮಂದಿರ ಇನ್ನುಮುಂದೆ ದೇಶದ ಏಕತೆ ಹಾಗೂ ಬಹುತ್ವವನ್ನು ಎತ್ತಿಹಿಡಿಯುವುದಕ್ಕೆ ಪ್ರೇರಣೆ ನೀಡುವಂತಾಗಬೇಕು ಎನ್ನುವುದು ಈ ದೇಶದ ಆರೋಗ್ಯವನ್ನು ಹಂಬಲಿಸುವವರ ಅಪೇಕ್ಷೆ.



ರಾಮ ಮಂದಿರವನ್ನು ಸಾಮರಸ್ಯದ ಕೇಂದ್ರವನ್ನಾಗಿ ರೂಪಿಸುವುದು ದೇಶದ ಮುಂದೆ ಈಗ ಉಳಿದಿರುವ ಸವಾಲು ಹಾಗೂ ಸಾಧ್ಯತೆ

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಧಾರ್ಮಿಕ ಸಂಭ್ರಮವೊಂದು ಇಷ್ಟು ವ್ಯಾಪಕವಾಗಿ ಪ್ರಕಟಗೊಂಡಿದ್ದು ಇದೇ ಮೊದಲು. ಈ ಸಂದರ್ಭವು ಸಂಭ್ರಮಕ್ಕಷ್ಟೇ ಸೀಮಿತಗೊಳ್ಳದೆ ಜವಾಬ್ದಾರಿಯ ರೂಪದಲ್ಲಿ ಬದಲಾಗಬೇಕಾಗಿದೆ. ಅಯೋಧ್ಯೆಯ ಮಂದಿರ ದೇಶದ ಸಮಗ್ರತೆಯನ್ನು ಬಿಂಬಿಸುವ ಕೇಂದ್ರವಾಗುವುದು ಸಾಧ್ಯವಾಗಬಹುದು. ಮಂದಿರದಲ್ಲಿ ರಾಮನನ್ನು ಪ್ರತಿಷ್ಠಾಪಿಸುವ ಸಡಗರ ಮುಗಿದು, ರಾಮನ ಆದರ್ಶಗಳನ್ನು ಪ್ರಾಯೋಗಿಕವಾಗಿ ಅನುಷ್ಠಾನಕ್ಕೆ ತರುವ ಸವಾಲು ಉಳಿದಿದೆ. ಮಂದಿರ ನಿರ್ಮಾಣವು ಭಕ್ತಿ ಹಾಗೂ ಬದ್ಧತೆಯ ಬಾಹ್ಯ ಪ್ರದರ್ಶನವಾದರೆ, ರಾಮನ ಆದರ್ಶಗಳನ್ನು ಕಾರ್ಯರೂಪಕ್ಕೆ ತಂದಾಗಷ್ಟೇ ವಾಲ್ಮೀಕಿ ಕಾವ್ಯದ ನಾಯಕನಿಗೆ ನಿಜವಾದ ಗೌರವ ಸಲ್ಲಿಸಿದಂತಾಗುತ್ತದೆ. ರಾಮನ ಆದರ್ಶ ಪ್ರಜಾಪ್ರಭುತ್ವದ ಮೌಲ್ಯ ವ್ಯವಸ್ಥೆಯನ್ನು ಪ್ರತಿನಿಧಿಸುವಂತಹದು; ಸಮಾಜದ ಕಟ್ಟಕಡೆಯ ವ್ಯಕ್ತಿಯ ಅಭಿಪ್ರಾಯವನ್ನೂ ಸಮಾಧಾನದಿಂದ ಆಲಿಸುವಂತಹದ್ದು ಹಾಗೂ ಗೌರವಿಸುವಂತಹದ್ದು. ರಾಮ ಪಾಲಿಸಿದ್ದ ವಚನ ಪರಿಪಾಲನೆಯ ಮೌಲ್ಯವು ಸಮಕಾಲೀನ ರಾಜಕಾರಣದಲ್ಲಿ ಪ್ರತಿಫಲಿಸಬೇಕಾದ ಮಾದರಿಯಾಗಬೇಕು. ಸಂವಿಧಾನದ ಹೆಸರಿನಲ್ಲಿ ಅಧಿಕಾರ ಸ್ವೀಕರಿಸಿದವರು ತಮ್ಮ ಪ್ರತಿಜ್ಞಾವಿಧಿಗೆ ಬದ್ಧರಾಗಿರಲು ಶ್ರೀರಾಮ ಆಕಾಂಕ್ಷಿಯಾಗಿ ಪರಿಣಮಿಸಬೇಕು. ಚುನಾವಣೆ ಸಂದರ್ಭದಲ್ಲಿ ಜನರಿಗೆ ನೀಡಿದ್ದ ಭರವಸೆಗಳನ್ನು ಈಡೇರಿಸುವ ಇಚ್ಛಾಶಕ್ತಿಯನ್ನು ಪ್ರಜಾಪ್ರತಿನಿಧಿಗಳು ರಾಮನಿಂದ ಪಡೆಯುವಂತಾಗಬೇಕು. ಇವೆಲ್ಲದರ ಜೊತೆಗೆ, ಎಲ್ಲ ವರ್ಗದ ಜನರ ಸಂಕಷ್ಟಗಳಿಗೆ ಮಿಡಿಯುವ ಹಾಗೂ ಸಂವಿಧಾನದ ನಿಶ್ಚಿತಗಳಂತೆ ನಿರ್ವಹಿಸುವ ರಾಜಕಾರಣಿಗಳ ಮನಸ್ಥಿತಿ ರೂಪುಗೊಳ್ಳಬೇಕು. ಅಧಿಕಾರ ಸ್ಥಾನದಲ್ಲಿರುವವರು ತ್ಯಾಗವನ್ನು ಮೈಗೂಡಿಸಿಕೊಳ್ಳಬೇಕೆ ಹೊರತು, ಭೋಗದ ಪ್ರತಿರೂಪಗಳಾಗಬಾರದು ಎನ್ನುವುದು ರಾಮನ ಆದರ್ಶ. ನಂಜಿಲ್ಲದ, ರಾಮನಿಷ್ಠೆಯ ಜನರ ರಾಜಕಾರಣವನ್ನು ಕಾರ್ಯರೂಪಕ್ಕೆ ತರುವ ಹೊಣೆಗಾರಿಕೆಯು ಮಂದಿರ ನಿರ್ಮಾಣಕ್ಕೆ ಹೆಗಲು ಕೊಟ್ಟಿರುವ ಸರ್ಕಾರದ್ದೇ ಆಗಿದೆ.

ಮಂದಿರ ನಿರ್ಮಾಣ ಸಂಪೂರ್ಣಗೊಳ್ಳುವ ಮೊದಲೇ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ವಿಧಿ ನಡೆದಿರುವುದನ್ನು ರಾಜಕೀಯ ತಂತ್ರಗಾರಿಕೆಯ ರೂಪದಲ್ಲಿ ನೋಡಲಾಗುತ್ತಿದೆ. ಧಾರ್ಮಿಕ ಸಂಭ್ರಮವನ್ನು ಮಂದಿರ ನಿರ್ಮಾಣವು ರಾಜಕೀಯ ದಾಳವಾಗಿ ಬಳಕೆಯಾಗುತ್ತಿರುವುದು ಧರ್ಮ ಹಾಗೂ ರಾಜಕಾರಣದ ನಡುವಿನ ಗೆರೆ ಅಳಿಸಿಹೋಗುತ್ತಿರುವುದಕ್ಕೆ ನಿದರ್ಶನವಾಗಿದೆ. ಇನ್ನುಮುಂದಾದರೂ, ಅಯೋಧ್ಯೆಯ ಮಂದಿರವು ರಾಮಭಕ್ತರ ಶ್ರದ್ಧಾಕೇಂದ್ರವಾಗುವುದಕ್ಕಷ್ಟೇ ಮುಂದುವರಿಯಬೇಕು. ರಾಜಕೀಯ ಆಟಗಳ ಕೇಂದ್ರವಾಗಬಾರದು. ಮಂದಿರವನ್ನು ಬಳಸಿಕೊಳ್ಳುವ ಉಮೇದಿನಿಂದ ರಾಜಕಾರಣಿಗಳು ಹೊರಬರಬೇಕು. ರಾಜಕೀಯ ಅಸ್ತಿತ್ವಕ್ಕಾಗಿ ಧರ್ಮ–ದೇವರುಗಳನ್ನು ಬಳಸಿಕೊಳ್ಳುವ ಚಾಳಿ ಕೊನೆಗೊಳ್ಳಬೇಕು. ಜನಸಾಮಾನ್ಯರಿಗೆ ಸಂಬಂಧಿಸಿದ ಧಾರ್ಮಿಕ ವಿಷಯಗಳಲ್ಲಿ ರಾಜಕಾರಣಿಗಳ ಹಸ್ತಕ್ಷೇಪ ಸಲ್ಲದು. ಜನಪ್ರತಿನಿಧಿಗಳು ತೊಡಗಿಸಿಕೊಳ್ಳಬೇಕಾದುದು ದೇಶದ ಅಭಿವೃದ್ಧಿಗೆ ಬೇಕಾದ ಶಾಲೆ, ಆಸ್ಪತ್ರೆ, ಕಾರ್ಖಾನೆಗಳಂಥ 'ಮಂದಿರ'ಗಳನ್ನು ರೂಪಿಸುವುದರಲ್ಲೇ ಹೊರತು ಧಾರ್ಮಿಕ ಸ್ಥಾವರಗಳ ನಿರ್ಮಾಣದಲ್ಲಿ ಅಲ್ಲ. ಧರ್ಮನಿರಪೇಕ್ಷ ದೇಶದಲ್ಲಿ ಸಾಂವಿಧಾನಿಕ ಸ್ಥಾನ ಹೊಂದಿರುವವರು ಶುದ್ಧ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಮುಂಚೂಣಿಯಲ್ಲಿ ನಿಲ್ಲುವುದು ಸರಿಯಲ್ಲ. ಎರಡು– ಮೂರು ತಿಂಗಳುಗಳಿಂದ ದೇಶದ ತುಂಬೆಲ್ಲ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಸುದ್ದಿಯೇ ಆವರಿಸಿಕೊಂಡಿತ್ತು; ಆಡಳಿತಯಂತ್ರ ಕೂಡ ಭಕ್ತಿಯ ಭಾವೋದ್ವೇಗದಲ್ಲಿ ಮೈಮರೆತಂತಿತ್ತು. ಇನ್ನು ಮುಂದಾದರೂ ಅಭಿವೃದ್ಧಿ ಚಟುವಟಿಕೆಗಳತ್ತ ಪ್ರಜಾಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಗಮನಹರಿಸಬೇಕು. ಉತ್ಸವದ ಕಾಲ ಮುಗಿದ ಮೇಲೆ, ಜನರ ಸಮಸ್ಯೆಗಳತ್ತ ಗಮನಹರಿಸುವುದು ಅನಿವಾರ್ಯ.

ದಿನದ ಟ್ವೀಟ್


ಆತ್ಮಾವಲೋಕನದ ಸಮಯ



ಹಿಂದೂ ಮತ್ತು ಮುಸ್ಲಿಂ ಎರಡೂ ಸಮುದಾಯಗಳು ಇಂದು ಪ್ರಾಮಾಣಿಕವಾಗಿ ಆತ್ಮಾವಲೋಕನ ಮಾಡಿಕೊಳ್ಳಬೇಕು: ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣವು ನಮ್ಮ ಭಕ್ತಿಯನ್ನು ಗಾಢವಾಗಿಸುವ ಕ್ರಮವೇ ವಿನಾ ನಮ್ಮ ಶಕ್ತಿಯ ಪ್ರದರ್ಶನವಲ್ಲ. ವಿಜಯೋತ್ಸವದಿಂದ ದೂರವಿರೋಣ. ಬೆಳೆಯುತ್ತಿರುವ ಅಸಹಿಷ್ಣುತೆ, ಮತಾಂಧತೆ ಮತ್ತು ಧರ್ಮಾಂಧತೆಯನ್ನು ನಮ್ಮ ಮನಸ್ಸಿನಿಂದ ತ್ಯಜಿಸೋಣ. ಇವು ಮೂಲಭೂತವಾಗಿ ಹಿಂದೂವಿರೋಧಿ ಮತ್ತು ಭಾರತವಿರೋಧಿ ಲಕ್ಷಣಗಳಾಗಿವೆ...

ಸುಧೀಂದ್ರ ಕುಲಕರ್ಣಿ, ಲೇಖಕ, ರಾಜಕೀಯ ವಿಶ್ಲೇಷಕ

ಕಿಡಿನುಡಿ



ಅಧಿಕ ಜಿಎಸ್‌ಟಿ ತೆರಿಗೆಗಳು ಮತ್ತು ಬಿಸಿನೆಸ್ ಮಾಡುವುದರಲ್ಲಿನ ಅಧಿಕ ತೊಡಕುಗಳು– ಈಗ ಇವೆರಡೂ ವಿಭಜನೆಗೊಂಡಿವೆ. ಹೆಚ್ಚಿನ ಲಾಭವು ಉನ್ನತ ಸ್ಥಾನದಲ್ಲಿರುವ ಶೇ 10ರಷ್ಟು ಮಂದಿಯ ಬಳಿ ಸೇರುತ್ತದೆ. ಸಣ್ಣ ಮತ್ತು ಮಧ್ಯಮ ಹಂತದ ವ್ಯಾಪಾರ– ವಹಿವಾಟುಗಳು ನಿಯಮ ಹಾಗೂ ನಿಬಂಧನೆಗಳ ಅಡಿಯಲ್ಲಿ ಸಿಲುಕಿ ಹೆಣಗಾಡುತ್ತಿವೆ. ಅಸಂಘಟಿತ ವಲಯವು ದುಬಾರಿ ಬಡ್ಡಿಯ ಜಾಲದಲ್ಲಿ ಸಿಲುಕಿದ್ದು, ಇನ್ನೂ ನಗದಿನ ಮೂಲಕವೇ ಕಾರ್ಯಾಚರಿಸುತ್ತಿದೆ. ಇನ್‌ಸ್ಪೆಕ್ಷನ್ ರಾಜ್ ಮುಂದುವರಿದಿದೆ.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

25 ವರ್ಷಗಳ ಹಿಂದೆ

ಶನಿವಾರ, 23-1-1999

● **356ನೇ ವಿಧಿ ಬಳಕೆ: ಒಮ್ಮತ ಅಭಿಪ್ರಾಯಕ್ಕೆ ಪ್ರಧಾನಿ ಕರೆ**

ನವದೆಹಲಿ, ಜ. 22 (ಪಿಟಿಐ, ಯುಎನ್‌ಐ)– ರಾಜ್ಯ ಸರ್ಕಾರಗಳನ್ನು ವಜಾ ಮಾಡಲು ಅಧಿಕಾರ ನೀಡುವ ಸಂವಿಧಾನದ 356ನೇ ವಿಧಿಯ ಬಗ್ಗೆ ಒಮ್ಮತದ ಅಭಿಪ್ರಾಯವನ್ನು ಮೂಡಿಸಲು ವ್ಯಾಪಕವಾದ ಚರ್ಚೆ ನಡೆಯಬೇಕೆಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಇಂದು ಸೂಚಿಸಿದರು.

'ರಕ್ಷಣಾ ಸಚಿವ ಜಾರ್ಜ್ ಫರ್ನಾಂಡೀಸ್ ಅವರ ಅಧ್ಯಕ್ಷತೆಯಲ್ಲಿ ಈ ಸಂಬಂಧ ರಚಿಸಿರುವ ಸಮಿತಿಯ ಸಭೆಯಲ್ಲಿ ಒಮ್ಮತ ಮೂಡದಿರುವುದರಿಂದ ವ್ಯಾಪಕ ಚರ್ಚೆಯ ಅಗತ್ಯವಿದೆ' ಎಂದು ಅಂತರರಾಜ್ಯ ಮಂಡಳಿಯ ಐದನೇ ಸಭೆಗೆ ಅವರು ತಿಳಿಸಿದರು.

● **ನೆರವು ನಿಲ್ಲಿಸಲು ಇವರಾರು: ಪಟೇಲ್**

ನವದೆಹಲಿ, ಜ. 22– 'ಗ್ರಾಮ ಪಂಚಾಯಿತಿಗಳಿಗೆ ಚುನಾವಣೆ ನಡೆಸುವುದು ವಿಳಂಬವಾದರೆ, ಅದನ್ನು ಆಧಾರವಾಗಿ ಇಟ್ಟುಕೊಂಡು ಕೇಂದ್ರದಿಂದ ಬರಬೇಕಾದ ಹಣವನ್ನು ನಿಲ್ಲಿಸಲು ಇವರಾರು?'

ಕೇಂದ್ರ ಗ್ರಾಮೀಣಾಭಿವೃದ್ಧಿ ಮತ್ತು ಉದ್ಯೋಗಾವಕಾಶಗಳ ಖಾತೆ ಸಚಿವ ಬಾಬಾಗೌಡ ಪಾಟೀಲ ಅವರಿಗೆ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರ ನೇರ ಪ್ರಶ್ನೆ ಇದು.

ಕರ್ನಾಟಕ ಸರ್ಕಾರವು ಗ್ರಾಮ ಪಂಚಾಯಿತಿಗಳ ಚುನಾವಣೆಯನ್ನು ನಡೆಸದೆ ಮುಂದೂಡಿರುವುದರಿಂದ ಕೇಂದ್ರದ ಹಣವನ್ನು ನಿಲ್ಲಿಸುವುದಾಗಿ ಪಾಟೀಲ ಅವರು ನೀಡಿರುವ ಎಚ್ಚರಿಕೆ ಬಗೆಗೆ ಕೇಳಿದ ಪ್ರಶ್ನೆಗೆ ಪಟೇಲ್ ಸಿಡುಕಿನಿಂದಲೇ ಉತ್ತರಿಸಿದರು.

50 ವರ್ಷಗಳ ಹಿಂದೆ

ಬುಧವಾರ, 23-1-1974

● **ಸರ್ಕಾರಿ ಉಗ್ರಾಣದಲ್ಲಿ ಅಘೋಷಿತ ಧಾನ್ಯ ವಶಕ್ಕೆ ಪಡೆದ ಅಧಿಕಾರಿಗಳು**

ಕೊಪ್ಪಳ, ಜ. 22– ಅಸಿಸ್ಟೆಂಟ್ ಕಮಿಷನರ್ ಜೆ.ಎನ್. ಚೌಬೆ, ಡಿವೈಎಸ್‌ಪಿ ಬಸವಂತರಾವ್ ಪಾಟೀಲ್, ತಹಶೀಲ್ದಾರ್ ಎನ್. ಬಸವರಾಜ್, ಸರ್ಕಲ್ ಇನ್‌ಸ್ಪೆಕ್ಟರ್ ಭೀಮನಗೌಡ ಅವರು ಪೊಲೀಸ್ ಸಿಬ್ಬಂದಿಯೊಂದಿಗೆ ನಿನ್ನೆ ಇಲ್ಲಿಯ ಸರ್ಕಾರಿ ಉಗ್ರಾಣ ಮತ್ತು ನಾಲ್ಕು ದಾಸ್ತಾನು ಮಳಿಗೆಗಳ ಮೇಲೆ ದಾಳಿ ನಡೆಸಿ, ಅಘೋಷಿತವಾದ 846 ಚೀಲ ಜೋಳ, 562 ಚೀಲ ಮುಸುಕಿನ ಜೋಳ, 171 ಚೀಲ ಭತ್ತ, 45 ಚೀಲ ಸಜ್ಜೆ ಮತ್ತು 6 ಚೀಲ ಅಕ್ಕಿ ದಾಸ್ತಾನನ್ನು ವಶಪಡಿಸಿಕೊಂಡಿದ್ದಾರೆ.

ಈ ಆಹಾರಧಾನ್ಯಗಳನ್ನು ಕೆಲವು ಖಾಸಗಿ ವ್ಯಾಪಾರಿಗಳು ದಾಸ್ತಾನು ಮಾಡಿದ್ದರೆಂದು ವರದಿಯಾಗಿದೆ.

ಜಿ.ಐ ಮಾನ್ಯತೆಗಾಗಿ ನಡೆಯುವ ಪೈಪೋಟಿ, ಈ ಪರಿಕಲ್ಪನೆಯನ್ನು ಅರ್ಥಪೂರ್ಣವಾಗಿಸುವತ್ತಲೂ ಇರಲಿ

ಭೌಗೋಳಿಕ ಮಾನ್ಯತೆ: ಪ್ರತಿಷ್ಠೆಯ ಪ್ರಶ್ನೆ?



ವಿಶ್ಲೇಷಣೆ

ಎಚ್.ಆರ್. ಕೃಷ್ಣಮೂರ್ತಿ

ಹೊಸ ವರ್ಷದ ಪ್ರಾರಂಭದಲ್ಲೇ ಪಶ್ಚಿಮ ಬಂಗಾಳದ ಐದು ಉತ್ಪನ್ನಗಳಿಗೆ ಭಾರತ ಸರ್ಕಾರದ 'ಪ್ರಮೋಷನ್ ಆಫ್ ಇಂಡಸ್ಟ್ರಿ ಆ್ಯಂಡ್ ಇಂಟರ್ನಲ್ ಟ್ರೇಡ್' ಇಲಾಖೆಯು ಭೌಗೋಳಿಕ ಪ್ರದೇಶ ಸೂಚಿಯ (ಜಿಯೊಗ್ರಾಫಿಕಲ್ ಇಂಡಿಕೇಷನ್ ಟ್ಯಾಗ್- ಜಿ.ಐ) ಮನ್ನಣೆಯನ್ನು ಘೋಷಿಸಿದೆ. ಸುಂದರಬನದ ಜೇನುತುಪ್ಪ; ಜಲಪಾಯ್‌ಗುರಿಯ 'ಕಾಲೋನ್ಯೂನಿಯ' ಬಾಸ್ಮತಿ ಅಕ್ಕಿ; ನಾಡಿಯಾ, ಪೂರ್ವ-ಬರ್ಧಮಾನ್, ಮುರ್ಷಿದಾಬಾದ್ ಮತ್ತು ಬೀರ್‌ಭೂಮ್ ಜಿಲ್ಲೆಗಳಲ್ಲಿ ತಯಾರಾಗುವ ಟ್ಯಾಂಗೈಲ್, ಕೋರಿಯಲ್ ಮತ್ತು ಗರಾಡ್ ಸೀರೆಗಳಿಗೆ ಈ ಗೌರವ ಸಂದಿದೆ. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಈ ಬೆಳವಣಿಗೆಯನ್ನು ಮೆಚ್ಚುಗೆಯಿಂದ ಸ್ವಾಗತಿಸಿದ್ದರೆ, ಈ ಕ್ಷೇತ್ರದಲ್ಲಿನ ಅನೇಕ ಪರಿಣತರು, ಈಗಾಗಲೇ ನಮ್ಮ ದೇಶದಲ್ಲಿರುವ 500 ಉತ್ಪನ್ನಗಳ, ಬಹುತೇಕ ನಿರರ್ಥಕ ಭೌಗೋಳಿಕ ಪ್ರದೇಶ ಸೂಚಿಗಳ ಉದ್ದನೆಯ ಪಟ್ಟಿಗೆ ಮತ್ತೆ ಐದು ವಸ್ತುಗಳ ಸೇರ್ಪಡೆ ಎಂದಿದ್ದಾರೆ.

ಉತ್ಪನ್ನವೊಂದರ ಗುಣಮಟ್ಟ ಮತ್ತು ಖ್ಯಾತಿ, ಅದು ಉತ್ಪಾದನೆಯಾಗುವ ಭೌಗೋಳಿಕ ಸ್ಥಾನದ ಮಹತ್ವದಿಂದ ಬಂದಂತಹ ಸಂದರ್ಭಗಳಲ್ಲಿ ಅದಕ್ಕೆ ಭೌಗೋಳಿಕ ಪ್ರದೇಶ ಸೂಚಿಯ ಪಟ್ಟ ನೀಡುವುದು ಜಾಗತಿಕವಾಗಿ, ವಿಶ್ವ ವ್ಯಾಪಾರ ಸಂಘಟನೆಯ ಎಲ್ಲ ಸದಸ್ಯ ರಾಷ್ಟ್ರಗಳಲ್ಲಿರುವ ಪರಿಪಾಟ. ಭಾರತದಲ್ಲಿ ಮೊದಲ ಜಿ.ಐ ದೊರೆತದ್ದು ಡಾರ್ಜಿಲಿಂಗ್ ಟೀಗೆ, 2004ರಲ್ಲಿ. ಡಾರ್ಜಿಲಿಂಗ್ ಟೀಗೆ ವಿಶಿಷ್ಟ ಪರಿಮಳ, ಅಸಾಮಾನ್ಯ ಸ್ವಾದ, ವಿಶೇಷವಾದ ಹೊಂಬಣ್ಣ, ನಾಲಗೆಯ ಮೇಲೆ ಬಹಳಷ್ಟು ಕಾಲ ಉಳಿಯುವ ಹದವಾದ ರುಚಿಯಂತಹ ಗುಣಗಳಿವೆ. ವಾರ್ಷಿಕ 250ರಿಂದ 300 ಸೆ.ಮೀ. ಮಳೆ, ಪ್ರತಿದಿನ 2-3 ಗಂಟೆಗಳ ಬಿಸಿಲು, ಹಗುರವಾದ ಕಾವಳ, ಇಬ್ಬನಿ, ಮೋಡ, ವರ್ಷವಿಡೀ ಬೀಸುವ ಕುಳಿರ್ಗಾಳಿ, ಫಲವತ್ತಾದ ಸಾವಯವ ಪದಾರ್ಥಗಳಿಂದ ತುಂಬಿದ ಮಣ್ಣಿನಿಂದ ಕೂಡಿದ, ಡಾರ್ಜಿಲಿಂಗ್ ಜಿಲ್ಲೆಯ 200ರಿಂದ 2000 ಮೀಟರ್ ಎತ್ತರದ ಏಳು ಕಣಿವೆಗಳ, 87 ಟೀ ತೋಟಗಳಲ್ಲಿ ಬೆಳೆಯುವ ಟೀಗೆ ಮಾತ್ರ ಮೇಲಿನ ವಿಶಿಷ್ಟ ಗುಣಗಳಿವೆ. ಡಾರ್ಜಿಲಿಂಗ್ ಟೀಗೆ ಜಿ.ಐ ದೊರೆತದ್ದು ಈ ಕಾರಣಗಳಿಂದ.

ಭೌಗೋಳಿಕ ಪ್ರದೇಶ ಸೂಚಿ ಮೂಲಭೂತವಾಗಿ ವಿಶೇಷ ಅನುಕೂಲಗಳಿರುವ 'ಟ್ರೇಡ್ ಮಾರ್ಕ್' ಇದ್ದಂತೆ. ಅದು ವಿಶಿಷ್ಟ ಪದಾರ್ಥವನ್ನು ಉತ್ಪಾದಿಸುವ, ಅಲ್ಲಿನ ಸಮುದಾಯಕ್ಕೆ ನೀಡುವ ಸಾಮೂಹಿಕ ಹಕ್ಕು. ಪ್ರಸ್ತುತ ಸುಮಾರು 66,000 ಉತ್ಪನ್ನಗಳಿಗೆ ಜಾಗತಿಕವಾಗಿ ಜಿ.ಐ ದೊರೆತಿದೆ. ಅದರಲ್ಲಿ ಶೇ 51ರಷ್ಟು ಭಾಗ ದ್ರಾಕ್ಷಾರಸ ಮತ್ತು ಮದ್ಯಗಳಿಗೆ ದೊರೆತಿದ್ದರೆ, ಕೃಷಿ ಮತ್ತು ಆಹಾರ ಉತ್ಪನ್ನಗಳಿಗೆ ಶೇ 43.6, ಕರಕುಶಲ ವಸ್ತುಗಳಿಗೆ ಶೇ 3.9, ಇತರ ಪದಾರ್ಥ ಮತ್ತು ಸೇವೆಗಳಿಗೆ ಶೇ 1.5ರಷ್ಟು ಜಿ.ಐಗಳು ಲಭಿಸಿವೆ. ಭೌಗೋಳಿಕ ಪ್ರದೇಶ ಸೂಚಿ ಪರಿಕಲ್ಪನೆಯ ಮುಖ್ಯ ಉದ್ದೇಶ ಅಂತಹ ವಿಶಿಷ್ಟ ಉತ್ಪನ್ನಗಳಿಗೆ ರಾಷ್ಟ್ರ ಮತ್ತು ಜಾಗತಿಕ ಮಟ್ಟದಲ್ಲಿ ಮಾರುಕಟ್ಟೆಯನ್ನು ಕಲ್ಪಿಸಿ, ಅದರಿಂದ ದೊರೆಯುವ ಆರ್ಥಿಕ ಪ್ರಯೋಜನವನ್ನು ಸ್ಥಳೀಯ ಸಮುದಾಯಕ್ಕೆ ದೊರೆಯುವಂತೆ ಮಾಡುವುದು. ಉತ್ಪನ್ನದ ಗುಣಮಟ್ಟವನ್ನು ರಕ್ಷಿಸಿ, ಅದೇ ವಸ್ತುವನ್ನು ಬೇರೆ ಪ್ರದೇಶದ ಜನ ಉತ್ಪಾದಿಸದಂತೆ, ನಕಲಿ ಮಾಲುಗಳ ಹಾವಳಿಯನ್ನು ತಡೆಯುವುದು ಇತ್ಯಾದಿ.

ಜಾಗತಿಕ ಮಾರುಕಟ್ಟೆಯಲ್ಲಿ ಕೋಟ್ಯಂತರ ಡಾಲರ್‌ಗಳ ವ್ಯವಹಾರವಿರುವ ದುಬಾರಿ ಉತ್ಪನ್ನಗಳಾದ ಸ್ಕಾಚ್, ಶಾಂಪೇನ್, ಬ್ಲೂಚೀಸ್‌ನಂತಹವುಗಳ ಗುಣಮಟ್ಟವನ್ನು ಕಾಪಾಡಲು ಯುರೋಪಿಯನ್ ಒಕ್ಕೂಟವು ಜಿ.ಐ ಮಾನ್ಯತೆಯ ಪದ್ಧತಿಯನ್ನು ಬಳಕೆಗೆ ತಂದುದರಲ್ಲಿ ಅರ್ಥವಿದೆ. ಆದರೆ, ಭಾರತದಲ್ಲಿ ಯಾವುದೇ ರೀತಿಯ ಮಾರುಕಟ್ಟೆಯ ಸ್ಪರ್ಧೆಯಿಲ್ಲದ ವಸ್ತುಗಳಿಗೂ ಈ ಮಾನ್ಯತೆ ದೊರೆಯುತ್ತಿದ್ದು, ಇಂದು ಸುಮಾರು 500 ಉತ್ಪನ್ನಗಳಿಗೆ ಜಿ.ಐ ದೊರೆತಿದೆ. ಇವುಗಳಲ್ಲಿ ಅನೇಕ ಉತ್ಪನ್ನಗಳಿಗೆ ಯಾವುದೇ ತರ್ಕ, ನಿಯಮ, ಆರ್ಥಿಕ ವಿವೇಚನೆಯಿಲ್ಲದೇ ಜಿ.ಐ ಪಟ್ಟವನ್ನು ನೀಡಲಾಗಿದೆ ಎಂಬ ಟೀಕೆಯಿದೆ.

2015ರಲ್ಲಿ ದೋಸೆ, ಇಡ್ಲಿ, ಅಪ್ಪಂನಂತಹವುಗಳಿಗೆ ಹಿಟ್ಟು ಕಲಸುವ 'ಕೊಯಂಬತ್ತೂರ್ ವೆಟ್ ಗ್ರೈಂಡರ್'ಗೆ ಜಿ.ಐ ದೊರೆತರೆ, ದೇಶದ ಮೂಲೆಮೂಲೆಗಳಲ್ಲೂ ಸಿದ್ಧವಾಗುವ ರಸಗುಲ್ಲಾಗೆ 2017ರಲ್ಲಿ ಪಶ್ಚಿಮ ಬಂಗಾಳಕ್ಕೆ ಜಿ.ಐ ದೊರೆತಿದೆ! ಇದನ್ನು ವಿರೋಧಿಸಿದ ಒಡಿಶಾ ರಾಜ್ಯಕ್ಕೆ, 'ಒಡಿಶಾ ರೂಪಾಂತರದ ರಸಗುಲ್ಲಾ'ಗೆ 2019ರಲ್ಲಿ ಜಿ.ಐ ದೊರೆತಿದೆ. ಎರಡೂ ಸಿಹಿ ಪದಾರ್ಥಗಳಾದರೂ, ಚೆನ್ನೈನಲ್ಲಿರುವ ಜಿ.ಐ ರಿಜಿಸ್ಟ್ರಿ ಕಚೇರಿ ಮೂಲದ ಮಾಹಿತಿಯಂತೆ, ಒಡಿಶಾದ ರಸಗುಲ್ಲಾಗೆ ಜಿ.ಐ ಮಾನ್ಯತೆ ದೊರೆತಿರುವುದು 'ಹಲ್ಲಿನಿಂದ ಒತ್ತಡ ಹೇರಿ, ಕಚ್ಚದಂತೆ ನೇರವಾಗಿ ನುಂಗಬಹುದಾದ ಅದರ ವಿಶಿಷ್ಟ ಗುಣಕ್ಕೆ'! ಮಧ್ಯಪ್ರದೇಶದ ಅರಣ್ಯ ಇಲಾಖೆ ಐತಿಹಾಸಿಕ ಮಾಡು ಪ್ರದೇಶದಲ್ಲಿನ ಆನೆಹುಣಿಸೆ (ಬಾವೋಬ್ಯಾಬ್) ಮರಗಳಿಗೆ ಜಿ.ಐ ಪಡೆಯುವ ಪ್ರಯತ್ನದಲ್ಲಿದೆ! ನಮ್ಮ ದೇಶದಲ್ಲಿ ಅನೇಕ ಬಾರಿ ಜಿ.ಐ ಮಾನ್ಯತೆ ದೊರೆತಿರುವುದು ಸರ್ಕಾರಿ ಸಂಸ್ಥೆಗಳಿಗೇ ವಿನಾ ಅಂತಹ ವಸ್ತುಗಳನ್ನು ಉತ್ಪಾದಿಸುವ ಸಮುದಾಯಗಳಿಗಲ್ಲ!

ಉತ್ಪನ್ನವೊಂದಕ್ಕೆ ಜಿ.ಐ ಮಾನ್ಯತೆ ದೊರೆತ ಕೂಡಲೇ ಮಾರುಕಟ್ಟೆಯಲ್ಲಿ ಅದಕ್ಕೆ ಉತ್ತಮ ಬೆಲೆ ದೊರೆತು, ಅದನ್ನು ಉತ್ಪಾದಿಸುವ ಸಮುದಾಯದ ಆರ್ಥಿಕ ಪರಿಸ್ಥಿತಿ ತಾನೇತಾನಾಗಿ ಸುಧಾರಿಸುವುದಿಲ್ಲ. ಅದು ಸಾಧ್ಯವಾಗಬೇಕಾದರೆ ಸರ್ಕಾರದ ಸಕ್ರಿಯ ಮಧ್ಯಪ್ರವೇಶ, ಸಮುದಾಯದ ಸಂಘಟನೆ, ತಂತ್ರಜ್ಞಾನದ ಬೆಂಬಲ, ಮಧ್ಯವರ್ತಿಗಳಿಂದ ಮುಕ್ತವಾದ ಮಾರುಕಟ್ಟೆ ವ್ಯವಸ್ಥೆಯಂತಹವುಗಳು ಅಗತ್ಯ. ಆದರೆ ನಮ್ಮ ದೇಶದ ಬಹುತೇಕ ರಾಜ್ಯಗಳಿಗೆ, ಸ್ಥಳೀಯ ಉತ್ಪನ್ನಗಳಿಗೆ ಭೌಗೋಳಿಕ ಪ್ರದೇಶ ಸೂಚಿ ಮಾನ್ಯತೆಯನ್ನು ಪಡೆದುಕೊಳ್ಳುವುದು ಪ್ರತಿಷ್ಠೆಯ ಪ್ರಶ್ನೆಯಾಗಿದೆಯೇ ವಿನಾ, ಮಾನ್ಯತೆ ದೊರೆತ ನಂತರದ ಕ್ರಮಗಳ ಬಗ್ಗೆ ಅಂತಹ ಆಸಕ್ತಿಯಿಲ್ಲ. ಚನ್ನಪಟ್ಟಣದ ಆಟದ ಸಾಮಾನು, ಕಿನ್ನಾಳ ಗೊಂಬೆ, ಮೈಸೂರು ಸಿಲ್ಕ್, ಇಳಕಲ್ ಸೀರೆ, ನಂಜನಗೂಡಿನ ರಸಬಾಳೆ, ಕೊಡಗಿನ ಕಿತ್ತಳೆ, ಧಾರವಾಡದ ಪೇಢದಂತಹ 42 ಉತ್ಪನ್ನಗಳಿಗೆ ಜಿ.ಐ ಮಾನ್ಯತೆ ಪಡೆದು ದೇಶದಲ್ಲಿಯೇ ಮೊದಲನೆಯ ಸ್ಥಾನದಲ್ಲಿ ಇರುವ ಕರ್ನಾಟಕದಲ್ಲೂ, ಅವುಗಳನ್ನು ಉತ್ಪಾದಿಸುವ ಸ್ಥಳೀಯ ಸಮುದಾಯಗಳ ಆರ್ಥಿಕ ಪರಿಸ್ಥಿತಿ ಎದ್ದು ಕಾಣುವಂತೆ ಬದಲಾಗಿಲ್ಲ ಎಂಬುದು ಪರಿಣತರ ಅಭಿಪ್ರಾಯ.

2019ರಲ್ಲಿ ಕರ್ನಾಟಕ ಸರ್ಕಾರ ತನ್ನ ಭೌಗೋಳಿಕ ಪ್ರದೇಶ ಸೂಚಿ ನೀತಿಯನ್ನು ಪ್ರಕಟಿಸಿತು. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಭಾಗವಾಗಿರುವ ವಿಶ್ವೇಶ್ವರಯ್ಯ ಟ್ರೇಡ್ ಪ್ರಮೋಷನ್ ಸೆಂಟರ್ (ವಿ.ಟಿ.ಪಿ.ಸಿ) ಈ ನೀತಿಯನ್ನು ಅನುಷ್ಠಾನಗೊಳಿಸಬೇಕಿದೆ. ಜಿ.ಐ ಮಾನ್ಯತೆ ಪಡೆದಿರುವ ಉಡುಪಿ ಮಲ್ಲಿಗೆ, ಉಡುಪಿ ಸೀರೆ, ಉಡುಪಿ ಮಟ್ಟು ಗುಳ್ಳ ಬದನೆ, ಬಿದರಿ ಕಲೆ, ಗಂಜೀಫಾ ಮತ್ತು ಮೈಸೂರಿನ ಸಾಂಪ್ರದಾಯಿಕ ಚಿತ್ರಕಲೆಗಳಿಗೆ ಸಂಬಂಧಿಸಿದಂತೆ, ಮಾನ್ಯತೆ ಪಡೆದ ನಂತರ ಆಗಬೇಕಾದ ಕೆಲಸಗಳ ಬಗ್ಗೆ ವಿ.ಟಿ.ಪಿ.ಸಿ ವಿವರವಾದ ವರದಿಗಳನ್ನು ಸಿದ್ಧಪಡಿಸಿದೆ. ಉಡುಪಿ ಮಲ್ಲಿಗೆಗೆ ಸಂಬಂಧಿಸಿದ ವರದಿಯನ್ನು ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸಿದ್ಧಪಡಿಸಿದ್ದರೆ, ಬಿದರಿ ಕಲೆಗೆ ಸಂಬಂಧಿಸಿದ ವರದಿಯನ್ನು ಎಂ.ಎಸ್.ರಾಮಯ್ಯ ಕಾನೂನು ಕಾಲೇಜು ಸಿದ್ಧಪಡಿಸಿದೆ. ಈ ಆರೂ ವರದಿಗಳು ಆಯಾ ಉತ್ಪನ್ನಗಳಿಗೆ ಸಂಬಂಧಿಸಿದ ಸಮಸ್ತ ವಿಷಯಗಳನ್ನೂ ಕೂಲಂಕಷವಾಗಿ ಅಧ್ಯಯನ ಮಾಡಿ, ಅವುಗಳಿಗೆ ದೊರೆತಿರುವ ಜಿ.ಐ ಮಾನ್ಯತೆಯನ್ನು ಸಾರ್ಥಕಗೊಳಿಸುವ ದಿಸೆಯಲ್ಲಿ ಆಗಬೇಕಾದ ಕೆಲಸಗಳ ಬಗ್ಗೆ ಅನೇಕ ಉಪಯುಕ್ತ ಸಲಹೆಗಳನ್ನು ನೀಡಿವೆ. ಈ ವಿಷಯದಲ್ಲಿ ಕೇರಳ ನಮಗಿಂತ ಮುಂದಿದೆ. ಕೇರಳ ವಿಶ್ವವಿದ್ಯಾಲಯವು ಜಿ.ಐ ಮಾನ್ಯತೆ ಪಡೆದ ಏಳು ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ಸ್ಥಳೀಯ ಸಮುದಾಯದ ಜೊತೆಗೆ ಕೈಜೋಡಿಸಿದೆ. ಸೆಂಟ್ರಲ್ ಕಾಯರ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಜಿ.ಐ ದೊರೆತಿರುವ ಅಲೆಪ್ಪಿ ತೆಂಗಿನ ನಾರಿನ ಕರಕುಶಲ ವಸ್ತುಗಳಲ್ಲಿ ನಾವೀನ್ಯ ತರುವ ಕೆಲಸದಲ್ಲಿ ಸ್ಥಳೀಯ ಸಮುದಾಯಕ್ಕೆ ನೆರವು ನೀಡುತ್ತಿದೆ.

ರಾಜಸ್ಥಾನದ ಕೋಟಾ ದೊರಿಯಾ ಮತ್ತು ಮಧ್ಯಪ್ರದೇಶದ ಚಾಂದೇರಿ ರೇಷ್ಮೆಗಳಲ್ಲಿ ಹೊಸ ವಿನ್ಯಾಸಗಳನ್ನು ತರಲು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿಯ ವಿದ್ಯಾರ್ಥಿಗಳು ಶ್ರಮಿಸುತ್ತಿದ್ದಾರೆ. ಈ ಎಲ್ಲವೂ ಸ್ವಾಗತಾರ್ಹ ಕ್ರಮಗಳೇ. ಆದರೆ ಇಂತಹ ನಿದರ್ಶನಗಳು ಬೆರಳೆಣಿಕೆಯಷ್ಟು ಮಾತ್ರ.

ಭೌಗೋಳಿಕ ಪ್ರದೇಶ ಸೂಚಿಯ ಮಾನ್ಯತೆಯನ್ನು ಪಡೆಯಲು ವಿವಿಧ ರಾಜ್ಯಗಳ ನಡುವೆ ಇಂದು ತೀವ್ರ ಪೈಪೋಟಿ ನಡೆಯುತ್ತಿದೆ. ಅದನ್ನು ಪ್ರೋತ್ಸಾಹಿಸುತ್ತಿರುವ ಕೇಂದ್ರ ವಾಣಿಜ್ಯ ಸಚಿವಾಲಯದ ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯು ತನ್ನ ಗಮನವನ್ನು ಅಷ್ಟಕ್ಕೆ ಮಾತ್ರ ಸೀಮಿತಗೊಳಿಸಿಕೊಳ್ಳದೆ, ಜಿ.ಐ ಪರಿಕಲ್ಪನೆಯನ್ನು ಅರ್ಥಪೂರ್ಣವಾಗಿಸುವತ್ತ ಹರಿಸುವ ಅಗತ್ಯವಿದೆ. ರಾಜ್ಯ ಸರ್ಕಾರಗಳೂ ಈ ದಿಕ್ಕಿನಲ್ಲಿ ತಮ್ಮ ಪ್ರಯತ್ನವನ್ನು ತ್ವರಿತಗೊಳಿಸಬೇಕಿದೆ.



ಚುರುಮುರಿ



ಸಾಲ ಕೊಡ್ರಿ ಸಾ...!

● ಲಿಂಗರಾಜು ಡಿ.ಎಸ್.

'ಸಯಾಬ್ರಿಗೆ ನಮಸ್ಕಾರ ಸಾ!'

'ನಮಸ್ಕಾರ ಕನಾ. ಬಲ್ರಿ, ಏನಾಗ್ಬೇಕಾಗಿತ್ತು?'

'ನವ್ಯೋದ್ಯಮ ಸ್ಥಾಪನೆಗೆ ರಾಜ್ಯದಲ್ಲಿ ಭಾರಿ ಉತ್ತೇಜನ ಅದಂತೆ. ನಾವು ಯುವ ಪ್ರತಿಭೆಗಳನ್ನೇ ಆಯ್ಕೆ ಮಾಡಿಕ್ಯಂದು ಹೊಸ ಉದ್ಯಮ ಸುರು ಮಾಡ್ತಿದೀವಿ. ನಮಗೆ ಯಾರ್ದೂ ಸಪೋರ್ಟಿಲ್ಲ. ನಮಗೆ ಸಾಲ ಕೊಡ್ರಿ ಸಾ'.

'ಸುಪರ್ ಕಣ್ರೆ, ನಿಮ್ಮ ಥರ ಬ್ರಾಡ್ ಮೈಂಡ್ ಇರೋ ನವ್ಯೋದ್ಯಮ ಪರಿಚಾರಕ ಎಲ್ಲೂ ಸಿಕ್ಕಕುಲ್ಲ'.

'ಸಾ, ಹೋದೊರ್ಸ ಬಜೆಟ್ಟಲ್ಲಿ ಸಿಎಂ 'ಇಮಾನ ನಿಲ್ದಾಣದ ತಾವು ಸ್ಟಾರ್ಟಪ್ ಪಾರ್ಕ್ ಮಾಡ್ತೀವಿ, ಸಾಂಕ್ರಾಮಿಕ ರೋಗ ಸಂಶೋಧನೆ ಮಾಡ್ತೀವಿ. ಅದುನ್ನೂ ಮಾಡ್ತೀವಿ, ಇದುನ್ನೂ ಮಾಡ್ತೀವಿ' ಅಂದಿದ್ರಲ್ಲ, ಏನಾಯ್ತು ಸಾ?'

'ಹೇಳಿದೋರೆಲ್ಲಾ ಮನೆಗೋದ್ರು. ಪುಗಸಟ್ಟೆ ಸಾಲ ಕೊಡಕ್ಕೆ ನೀವೇನು ರಾಜಕಾರಣಿ ಮಗನೇನ್ರಿ? ಕಾಸು ಕೊಟ್ರೇ ಕೈಸಾಲ ಸಿಗೋದು ಕನಪ್ಪಾ. ನಿಮ್ಮಾಫೀಸು ಎಲ್ಲದೆ? ಎಷ್ಟು ಜನ ಕೆಲಸ ಮಾಡ್ತೀರಿ? ಎಷ್ಟು ಸಾಲ ಬೇಕಾಗ್ಯದೆ? ಯಂಗೆ ತೀರಿಸ್ತೀರಿ?'

'ಸಾ, ಸಾಲ ತಕಂದು ದೇಸ ಬುಟ್ಟೋಗೋ ಐನಾತಿಗಳಿಗೆ, ಬ್ಯಾಂಕಲ್ಲಿದ್ದ ಕಾಸೆಲ್ಲಾ ಎಪ್ಪೆಸ್ ಮಾಡೋರಿಗೆ, ಬ್ಯಾಂಕಿನೋರ ಥರ ಓಟಿಪಿ ಕೇಳಿ ಅಕೌಂಟಿಗೆ ದುಡ್ಡು ಟ್ರಾನ್ಸ್‌ಫರ್ ಮಾಡಿಕ್ಯಳೋರಿಗೆ, ಬಿಟ್‌ಕಾಯಿನ್ ಯಾಪಾರ ಮಾಡೋರಿಗೆ, ಹೈಜಾಕರುಗಳಿಗೆ ಕರೆದು ಸಾಲ ಕೊಡ್ತೀರ, ನಾವೇನು ಮಾಡಿದ್ದೋ?'

'ರೀ ಸ್ವಾಮಿ, ಮೊದಲು ಬದುಕೋ ದಾರಿ ನೋಡ್ರೀ. ನೀವೆನನ್ನಾ ಸಂಪಾದನೆ ಮಾಡಬೇಕು ಅಂದ್ರೆ ಸರ್ಕಾರಿ ಉದ್ಯಮಗಳಿಗೆ ಬೋಗಸ್ ಸಪ್ಲೈ ಮಾಡಿ, ಡುಪ್ಲಿಕೇಟ್ ಔಸದಿ ಮಾಡಿ, ತಲೆ ಒಡೆದು ಕಾಸು ಮಾಡಿ, ಫಿಶಿಂಗ್ ಮಾಡಿ, ಇಲ್ಲವಾ ರಾಜಕೀಯಕ್ಕೆ ಸೇರಿಕ್ಯಳಿ'.

'ಥಾಂಕ್ಯೂ ಸಾ. ನೀವು ಯುವಜನದ ನವ್ಯೋದ್ಯಮಕ್ಕೆ ಸಹಾಯ ಮಾಡ್ತೀರ ಅಂದ್ಕಂದಿದ್ದೋ! ರೈತರಿಗೆ ಶೂನ್ಯ ಬಡ್ಡಿ ದರದೇಲಿ ಸಾಲ ಕೊಡ್ತೀವಿ ಅಂದಿದ್ರಿ. ಯಾವುದೂ ಕಾಣೆನಲ್ಲಾ ಸಾ?'

'ನಿಮ್ಮಂತೋರಿಗೆಲ್ಲಾ ಸಾಲ ಸಿಕ್ಕಕುಲ್ಲ, ಸಾಲಾ ಚಲ್ ಬಾಹರ್!'.

ಸಂಗತ

ಮಹಾನಗರದ ಬೆಳಕಿಲ್ಲದ ಬೀದಿಗಳಲ್ಲಿ...

ಬೆಂಗಳೂರಿನಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯದ ಪ್ರಮಾಣ ಏರಿಕೆ ಆಗಿರುವುದಕ್ಕೆ ಬೀದಿದೀಪಗಳ ಅಸಮರ್ಪಕ ನಿರ್ವಹಣೆ ಪ್ರಮುಖ ಕಾರಣ

● ಡಾ. ಕೆ.ಎಸ್.ಚೈತ್ರಾ


ಇತ್ತೀಚಿನ ಪೊಲೀಸ್ ವರದಿಗಳ ಪ್ರಕಾರ, ಬೆಂಗಳೂರಿನಲ್ಲಿ ಹಿಂದಿನ ವರ್ಷ ಮಹಿಳೆಯರ ಮೇಲಿನ ದೌರ್ಜನ್ಯ, ಲೈಂಗಿಕ ಕಿರುಕುಳ, ಅಪರಾಧದ ಪ್ರಮಾಣದಲ್ಲಿ ಏರಿಕೆಯಾಗಿದೆ. ಮಾತ್ರವಲ್ಲ ಸರಗಳ್ಳತನ, ದರೋಡೆ ಮತ್ತು ರಸ್ತೆ ಅಪಘಾತಗಳ ಸಂಖ್ಯೆಯೂ ಹೆಚ್ಚಿದೆ. ಇದಕ್ಕೆ ಅನೇಕ ಕಾರಣಗಳಿದ್ದರೂ ಬೆಳಕಿಲ್ಲದ ಬೆಂಗಳೂರಿನ ಬೀದಿಗಳು ಸುರಕ್ಷತೆಯ ದೃಷ್ಟಿಯಿಂದ ಅತ್ಯಂತ ದೊಡ್ಡ ಸವಾಲಾಗಿವೆ. ಇದರೊಂದಿಗೆ, ಬಸ್ ನಿಲ್ದಾಣ, ಉದ್ಯಾನ, ಸಾರ್ವಜನಿಕ ಶೌಚಾಲಯಗಳಲ್ಲಿಯೂ ಬೆಳಕಿನ ವ್ಯವಸ್ಥೆ ಸಮರ್ಪಕವಾಗಿಲ್ಲ.

ನಗರದ ಮುಖ್ಯ ಸ್ಥಳಗಳಾದ, ಜನರು ಹೆಚ್ಚು ಸಂಚರಿಸುವ ಅನೇಕ ರಸ್ತೆಗಳಲ್ಲಿ ಬೀದಿ ದೀಪಗಳಿಲ್ಲ ಅಥವಾ ಇದ್ದರೂ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಈ ರಸ್ತೆಗಳಲ್ಲಿನ ಕಚೇರಿಗಳಲ್ಲಿ ಕೆಲಸ ಮಾಡುವ ಅನೇಕ ಮಹಿಳೆಯರು 'ಬೆಳಕಿಲ್ಲದ ಕಡೆ ಬೀದಿಕಾಮಣ್ಣರ ಸಂಖ್ಯೆ ಹೆಚ್ಚು. ತಮ್ಮನ್ನು ಗುರುತಿಸಲು ಸಾಧ್ಯವಾಗುವುದಿಲ್ಲ ಎನ್ನುವ ಧೈರ್ಯ ಅವರಿಗಿರುತ್ತದೆ. ಕೆಲಸಕ್ಕಾಗಿ ಇಲ್ಲಿಗೆ ಬಂದಿರುತ್ತೇವೆ. ಮರಳುವಾಗ ಸಂಜೆ ಆರರಿಂದ ಏಳು ಗಂಟೆ ಆಗುತ್ತದೆ. ಪ್ರತಿದಿನ ಮನೆಗೆ ಹೋಗುವಾಗಲೂ ಅಂತಹ ಜಾಗ ಬಂದಾಗ ಹೆದರಿಕೆಯಾಗುತ್ತದೆ. ಆಗೆಲ್ಲಾ ಮೈಯೆಲ್ಲಾ ಕಣ್ಣಾಗಿಸಿ ಸರಸರ ಹೆಜ್ಜೆ ಹಾಕಿ ಅಥವಾ ಓಡುತ್ತಲೇ ದಾಟುವುದು ರೂಢಿಯಾಗಿದೆ. ಹೆಸರಿಗಷ್ಟೇ ದೀಪವಿದೆ, ಕೆಟ್ಟು ನಿಂತಿದೆ. ಆಶ್ಚರ್ಯವೆಂದರೆ, ಬೇರೆ ಕಡೆ ಬೆಳಿಗ್ಗೆ ಎಂಟರಲ್ಲೂ ಪ್ರಖರವಾಗಿ ಉರಿಯುವ ಬೀದಿದೀಪಗಳಿವೆ. ನಾವಷ್ಟೇ ಅಲ್ಲ, ಶಾಪಿಂಗ್‌ಗೆ ಬರುವ ಕಾಲೇಜಿನ ಹುಡುಗಿಯರಿಗೂ ಇಲ್ಲೆಲ್ಲಾ ತೊಂದರೆ' ಎಂದು ಬೇಸರಿಸುತ್ತಾರೆ.

ಹೆಚ್ಚುತ್ತಿರುವ ರಸ್ತೆ ಅಪಘಾತಗಳಲ್ಲಿಯೂ ಈ ಬೀದಿದೀಪಗಳ ಪಾತ್ರ ಮಹತ್ವದ್ದು. ಪಾದಚಾರಿಗಳು ರಸ್ತೆ ದಾಟುವಾಗ ಸರಿಯಾಗಿ ಬೆಳಕಿರದೇ ಇದ್ದಲ್ಲಿ, ಬರುತ್ತಿರುವ ವಾಹನಗಳು ಸರಿಯಾಗಿ ಕಾಣುವುದಿಲ್ಲ. ಹಾಗೆಯೇ ರಸ್ತೆ ದಾಟುತ್ತಿರುವವರು ವಾಹನದಲ್ಲಿರುವ ಚಾಲಕರಿಗೆ ಕಾಣುವುದಿಲ್ಲ. ಹೀಗಾಗಿಯೇ ರಾತ್ರಿ ವೇಳೆ ತಿರುವುಗಳಲ್ಲಿ ವೇಗವಾಗಿ ಚಲಿಸುವ ವಾಹನಗಳು ಡಿಕ್ಕಿ ಹೊಡೆದು ನಾಯಿ, ಬೆಕ್ಕಿನಂತಹ ಪ್ರಾಣಿಗಳು ಮಾತ್ರವಲ್ಲ ಜನರಿಗೂ ಅಪಘಾತವಾಗುವ ಸಾಧ್ಯತೆ ಅತಿ ಹೆಚ್ಚು. ಹಲವಾರು ಬಾರಿ ಕತ್ತಲಲ್ಲಿ ಕಾಣಿಸದೇ ಅಡ್ಡ ಬಂದದ್ದನ್ನು ತಪ್ಪಿಸಲು ಇದ್ದಕ್ಕಿದ್ದಂತೆ ಬ್ರೇಕ್ ಹಾಕಿ, ಸಮತೋಲನ ತಪ್ಪಿ ವಾಹನ ಸವಾರರಿಗೆ ಗಂಭೀರ ಗಾಯಗಳೂ ಆಗುತ್ತವೆ.

ಬಸ್ ನಿಲ್ದಾಣಗಳ ಬಳಿ ಬೆಳಕಿನ ವ್ಯವಸ್ಥೆ ಇಲ್ಲದಿರುವುದು ಅಪಾಯಕ್ಕೆ ದೊಡ್ಡ ಕಾರಣ. ರಾತ್ರಿಯ ವೇಳೆ ಬಸ್‌ಗಳ ಸಂಚಾರ ಕಡಿಮೆ ಇರುವ ಕಾರಣ ಬಸ್ ನಿಲ್ದಾಣಗಳಲ್ಲಿ ಕಾಯಲೇಬೇಕು. ಪುಂಡು ಪೋಕರಿಗಳಿಗೆ ಹೆಣ್ಣುಮಕ್ಕಳು ಕಾಯುವ ಇಂಥ ಕತ್ತಲು, ಮಂದ ಬೆಳಕಿನ ತಾಣ ಪ್ರಶಸ್ತವಾದುದು. ಕೆಟ್ಟ ನೋಟ, ಅಸಭ್ಯ ಮಾತು, ಮೈ ಸವರುವುದು, ಪಿಕ್ ಪಾಕೆಟಿಂಗ್ ಎಲ್ಲವೂ ನಡೆಯುತ್ತವೆ. ದೀಪದ ವ್ಯವಸ್ಥೆ ಸರಿ ಇದ್ದರೆ ಕೆಲಮಟ್ಟಿಗೆ ಇದನ್ನು ತಡೆಗಟ್ಟಬಹುದು.

ಇದರೊಂದಿಗೆ, ಮಹಾನಗರಿಯಾದ, ಬೃಹತ್ತಾಗಿ ಬೆಳೆದಿರುವ ಬೆಂಗಳೂರಿನಲ್ಲಿ ಉದ್ಯೋಗ, ಶಿಕ್ಷಣಕ್ಕಾಗಿ ಒಂದೆಡೆಯಿಂದ ಇನ್ನೊಂದೆಡೆಗೆ ಪಯಣಿಸುವುದು ಸಾಮಾನ್ಯ. ನಿಸರ್ಗದ ಕರೆಗೆ ಸಾರ್ವಜನಿಕ ಶೌಚಾಲಯ ಉಪಯೋಗಿಸುವುದು ಅನಿವಾರ್ಯ. ಆದರೆ ಬಹುತೇಕ ಸಾರ್ವಜನಿಕ ಶೌಚಾಲಯಗಳಿಗೆ ಭದ್ರವಾದ ಬಾಗಿಲು- ಬೀಗ ಇಲ್ಲ, ಜೊತೆಗೆ ಶೇಕಡ 66ರಷ್ಟು ಶೌಚಾಲಯಗಳಲ್ಲಿ ದೀಪಗಳು ಉರಿಯುತ್ತಿಲ್ಲ ಎಂದು ಇತ್ತೀಚಿನ ಸಮೀಕ್ಷೆಯೊಂದು ತಿಳಿಸಿದೆ. ಹಾಗಾಗಿಯೇ ಬಹಳಷ್ಟು ಮಹಿಳೆಯರು 'ಹಗಲೇನೋ ಪರವಾಗಿಲ್ಲ. ವಾಸನೆ, ಗಲೀಜು ಹೇಗೋ ಸಹಿಸಬಹುದು. ಆದರೆ ಸಂಜೆಯಾಯಿತು ಎಂದರೆ ಚಿಂತೆಯಾಗುತ್ತದೆ. ಹಾಗಾಗಿ ಎಷ್ಟೋ ಬಾರಿ ನೀರು ಕುಡಿಯುವುದನ್ನೇ ಕಡಿಮೆ ಮಾಡುತ್ತೇವೆ. ಒಟ್ಟಾಗಿದ್ದರೆ ಒಬ್ಬರಿಗೊಬ್ಬರು ಕಾವಲು ನಿಂತು ಸರದಿ ಮೇಲೆ ಹೋಗುತ್ತೇವೆ. ಒಬ್ಬರೇ ಇದ್ದರೆ ಶೌಚಾಲಯಕ್ಕೆ ಹೋಗುವುದನ್ನೇ ಮುಂದೂಡುತ್ತೇವೆ' ಎಂದು ಹೇಳುತ್ತಾರೆ.



ಬಡಾವಣೆಗಳಲ್ಲಿಯೂ ಬೀದಿದೀಪ ಇಲ್ಲದಿರುವುದು ಅಥವಾ ಕೆಟ್ಟಿರುವುದು ದೊಡ್ಡ ಸಮಸ್ಯೆ ಎನ್ನುವುದು ನಿವಾಸಿಗಳ ಕೊರಗು. 'ಬಹುತೇಕ ಕಡೆ ಕಸದ ನಿರ್ವಹಣೆ ವ್ಯವಸ್ಥಿತವಾಗಿ ನಡೆಯುತ್ತಿದ್ದರೂ ಅದನ್ನು ಪಾಲಿಸದೇ ಜನರು ರಾತ್ರಿ ವೇಳೆ ಮೂಟೆಗಟ್ಟಲೆ ಕಸವನ್ನು ತಂದು ಬಿಸಾಡುವುದು ಬೀದಿದೀಪ ಇಲ್ಲದ ರಸ್ತೆಯ ಬದಿಯಲ್ಲಿ! ಕಸ ಬಿದ್ದಂತೆಲ್ಲಾ ಇಲಿ, ಜಿರಲೆ, ಸೊಳ್ಳೆಗಳ ಕಾಟ ಹೆಚ್ಚುತ್ತದೆ. ಕಸದಲ್ಲಿರುವ ಆಹಾರವನ್ನು ತಿನ್ನಲು ಬೀದಿನಾಯಿಗಳು ಬಂದು ಸೇರುತ್ತವೆ. ರಾತ್ರಿ ಓಡಾಡುವವರಿಗೆ ಸರಿಯಾಗಿ ಕಾಣದೆ ಅಲ್ಲಲ್ಲೇ ಅಡಗಿದ್ದ ನಾಯಿಗಳು ಅಟ್ಟಿಸಿಕೊಂಡು ಬಂದ ಅನೇಕ ಉದಾಹರಣೆಗಳಿವೆ.

ಇಂತಹ ದೂರುಗಳಿಗೆ ಪಾಲಿಕೆ ಹಾಗೂ ವಿದ್ಯುತ್ ಮಂಡಳಿಯವರು ಪರಸ್ಪರರನ್ನು ದೂರುವುದರಿಂದ ಪ್ರಯೋಜನ ಇಲ್ಲದಂತಾಗಿದೆ. ಸಹಾಯವಾಣಿಗೆ ಕರೆ ಮಾಡಿದರೆ, ದೂರು ಸಲ್ಲಿಕೆಯಾಗಿರುವ ಬಗ್ಗೆ ಸಂದೇಶ ಬರುವುದೇನೋ ಸರಿ. ಆದರೆ ಕ್ರಮ ಕೈಗೊಂಡ ಉದಾಹರಣೆ ಇಲ್ಲ. ಸ್ಮಾರ್ಟ್‌ಸಿಟಿ ಆಗಬೇಕಾದರೆ, ಹೆಚ್ಚು ಬೀದಿ ದೀಪಗಳನ್ನು ಹಾಕುವುದರ ಜತೆಗೆ ಕೆಟ್ಟು ನಿಂತಿರುವ ಬೀದಿದೀಪಗಳನ್ನು ಸರಿಪಡಿಸಬೇಕು ಎಂಬುದು ಬಹುತೇಕರ ಅಭಿಪ್ರಾಯ.

ಮೂಲಭೂತ ಸೌಲಭ್ಯವಾಗಿ ಮತ್ತು ಸುರಕ್ಷತೆಯ ದೃಷ್ಟಿಯಿಂದ ಬೀದಿದೀಪಗಳ ಸಂಖ್ಯೆ ಹೆಚ್ಚಬೇಕು, ಕೆಟ್ಟಿರುವಂತಹವು ದುರಸ್ತಿಯಾಗಬೇಕು. ಇಲ್ಲದಿದ್ದಲ್ಲಿ ಅಪರಾಧ, ಅಪಘಾತಗಳ ಸಂಖ್ಯೆಯನ್ನು ತಗ್ಗಿಸುವುದು ಕಷ್ಟವಾಗುತ್ತದೆ.

ವಾಚಕರ ವಾಣಿ

ನಡೆ-ನುಡಿಯ ಪ್ರಧಾನ ಸಂಸ್ಕೃತಿ ಆದ್ಯತೆಯಾಗಲಿ

ಸಮಾಜದ ಶ್ರೇಣೀಕೃತ ವ್ಯವಸ್ಥೆಯಲ್ಲಿನ ನ್ಯೂನತೆಯನ್ನು ಕಂಡು ಬೇಸರಗೊಂಡವರು ಬಸವಣ್ಣ. ಇಂತಹ ವ್ಯವಸ್ಥೆಯ ವಿರುದ್ಧ ಹೋರಾಟ ನಡೆಸುವ ದಿಸೆಯಲ್ಲಿ ಅನುಭವ ಮಂಟಪದ ಮೂಲಕ ನೂರಾರು ಶರಣ ಶರಣೆಯರ ನೇತೃತ್ವದಲ್ಲಿ ಸಮಾಜ ಸುಧಾರಣೆಗಾಗಿ ಅವಿರತವಾಗಿ ಶ್ರಮಿಸಿದರು. ಅವರ ಸಮಾಜ ಸುಧಾರಣೆಯ ನೆನಪಿಗಾಗಿ 'ಕರ್ನಾಟಕದ ಸಾಂಸ್ಕೃತಿಕ ನಾಯಕ' ಎಂದು ರಾಜ್ಯ ಸರ್ಕಾರ ಅವರನ್ನು ಘೋಷಣೆ ಮಾಡಿದೆ. ನಡೆ-ನುಡಿಯ ಪ್ರಧಾನ ಸಂಸ್ಕೃತಿಯನ್ನು ಅಂತರಂಗ, ಬಹಿರಂಗಗಳೆರಡರಲ್ಲಿಯೂ ಅನುಸರಿಸಬೇಕಾದ ತುರ್ತು ಇಂದು ಇದೆ. ನುಡಿದಂತೆ ನಡೆಯುವುದನ್ನು ರೂಢಿಸಿಕೊಳ್ಳುವುದು ಎಲ್ಲರ ಜವಾಬ್ದಾರಿಯೂ ಆಗಿದೆ.

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

ಉದ್ದೀಪಿಸಲಿ ಭಕ್ತಿಯ ಪ್ರಜ್ಞೆ

ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಆಗಿದ್ದು ಸಂತಸದ ಸಂಗತಿ. ಈ ಭಕ್ತಿಯ ಪರಾಕಾಷ್ಠೆಯಲ್ಲಿ ರಾಷ್ಟ್ರದ ಕೋಟ್ಯಂತರ ಜನ ಜಾತಿ, ಮತಗಳ ಭೇದವಿಲ್ಲದೆ ಮಿಂದೆದ್ದಿದ್ದಾರೆ. ಆದರೆ ಇದೆಲ್ಲ ಒಂದು ದಿನದ ವಿಜೃಂಭಣೆ ಆಗಬಾರದು. ಶ್ರೀರಾಮನ ಆದರ್ಶಗಳನ್ನು ನಿತ್ಯವೂ ಅಳವಡಿಸಿಕೊಂಡು ಬದುಕಲು ಸಾಧ್ಯವೇ ಎಂಬುದನ್ನು ನೋಡಬೇಕು. ಹೇಗೆಂದರೆ, ವಾರದಲ್ಲಿ ಒಂದು ದಿನ ಶ್ರೀರಾಮನ ಹೆಸರಿನಲ್ಲಿ ಪರಿಸರ ಸ್ವಚ್ಛತೆ, ಕಷ್ಟದಲ್ಲಿ ಇರುವವರಿಗೆ ಸಹಾಯ, ಪಕ್ಕದ ದೇವಸ್ಥಾನ, ಸ್ಮಶಾನ ಅಥವಾ ಕೆರೆಯನ್ನು ಸ್ವಚ್ಛಗೊಳಿಸುವುದು, ಮಳೆಗಾಲದಲ್ಲಿ ಒಟ್ಟಾಗಿ ಗಿಡ ನೆಡಲೆಂದು ಬೀಜ ಸಂಗ್ರಹ, ಪ್ಲಾಸ್ಟಿಕ್‌ರಹಿತ ಪರಿಸರ ನಿರ್ಮಾಣ, ದೈಹಿಕ ಶ್ರಮದಂತಹ ಕೆಲಸಗಳಲ್ಲಿ ತೊಡಗಬೇಕು.

ಈ ಹೊಸ ಯುಗದಲ್ಲೂ ಭಕ್ತಿಯ ಪ್ರಜ್ಞೆ ಸದಾಕಾಲ ಉದ್ದೀಪನವಾಗುವಂತೆ ಎಲ್ಲ ಪ್ರಭಾವಿ ನೇತಾರರೂ ಪ್ರಜೆಗಳನ್ನು ಸತ್ಕಾರ್ಯಗಳಲ್ಲಿ ತೊಡಗುವಂತೆ ಕ್ರಿಯಾಶೀಲರನ್ನಾಗಿಸಬೇಕು. ಈ ಮೂಲಕ ಭಾರತವನ್ನು ಬದಲಾವಣೆಯ ಪಥದತ್ತ ಕೊಂಡೊಯ್ಯಬೇಕು.

ಸುರೇಂದ್ರ ಪೈ, ಹೊಸದುರ್ಗ

ದೇವರ ಮೌಲ್ಯಮಾಪನ: ರಂಗಕ್ಕಿಳಿಯಲಿ ಕಥನ

'ಮೊಳಗಲಿ ನ್ಯಾಯದ ಗಂಟೆ' ಎಂಬ ದೇವನೂರ ಮಹಾದೇವ ಅವರ ಲೇಖನ (ಪ್ರ.ವಾ., ಜ. 20) ವರ್ತಮಾನ ಭಾರತದ ಸನ್ನಿವೇಶಕ್ಕೆ ತೀವ್ರವಾಗಿ ಪ್ರತಿಸ್ಪಂದಿಸಿದೆ. ಆದಿವಾಸಿ ಜನಪದರ ಮೌಲ್ಯಪ್ರಜ್ಞೆಯ ಔಚಿತ್ಯವನ್ನು ಎತ್ತಿಹಿಡಿಯುತ್ತಾ, ಸಮಕಾಲೀನ ರಾಜಕೀಯವನ್ನೂ ಹಾಗೆಯೇ ಮೌಲ್ಯಮಾಪನ ಮಾಡಬೇಕಾದ ಜರೂರನ್ನು ಲೇಖನ ಮಂಡಿಸುತ್ತದೆ. ಆದರೆ ದೇವನೂರ ಅವರ ಶಕ್ತಿ ಅಥವಾ ವೈಶಿಷ್ಟ್ಯ ಎಂದರೆ, ರೂಪಕಾತ್ಮಕವಾದ ಕಥನ ಪ್ರತಿಭೆ. ಈ ಲೇಖನದಲ್ಲಿಯೂ ಆದಿವಾಸಿಗಳ ದೇವರ ಮೌಲ್ಯಮಾಪನದ ಕತೆಯನ್ನು ವರ್ತಮಾನದ ವಿವೇಕದ ಬೆಳಕೆಂಬ ನಂಬಿಕೆಯ ಹಿನ್ನೆಲೆಯಲ್ಲಿ ಅದನ್ನು ರೂಪಕ ಮಾಡಿ ಅವರು ಹೇಳಿದ್ದಾರೆ. ದೇವರ ಹೆಸರಿನಲ್ಲಿ ರಾಜಕಾರಣ ವಿಜೃಂಭಿಸುತ್ತಿರುವ ಸಂದರ್ಭದಲ್ಲಿ ದೇವನೂರ ಅವರು ದೇವರ ಮೌಲ್ಯಮಾಪನದ ಕತೆ ಹೇಳುವುದು ಅತ್ಯಂತ ಮಾರ್ಮಿಕವಾಗಿದೆ. ಆದರೆ ಹೀಗೆ ರೂಪಕದಲ್ಲಿ ಹೇಳುವ ದೇವರ ಮೌಲ್ಯಮಾಪನದ ಕತೆಯು ಸಾಮಾನ್ಯರು ಗ್ರಹಿಸುವುದಕ್ಕೆ ಸುಲಭವಾಗಿದೆಯೇ? ರೂಪಕದ ಭಾಷೆಯು ಸಂವೇದನಾಶೀಲ ಓದುಗರಿಗೆ ಅರ್ಥವಾಗುತ್ತದೆಯೇ ಹೊರತು, ಶ್ರೀಸಾಮಾನ್ಯರಿಗೆ ಈ ಗ್ರಹಿಕೆ ಕಷ್ಟಸಾಧ್ಯ ಎನಿಸುತ್ತದೆ. ಜೊತೆಗೆ 'ದೇವರ ಮೌಲ್ಯಮಾಪನ ಪ್ರಜ್ಞೆ'ಯ ಕತೆಯನ್ನು ಸಾಮಾನ್ಯರು ರೂಪಕವಾಗಿ ಪರಿಭಾವಿಸುವ ಬದಲು, ವಾಚ್ಯವಾಗಿಯೇ ಗ್ರಹಿಸಬಹುದು. ಅದರಿಂದ ಉಲ್ಟಾ ಪರಿಣಾಮವಾದರೂ ಅಚ್ಚರಿಪಡಬೇಕಿಲ್ಲ. ಯಾಕೆಂದರೆ, ಕೊರೊನಾ ಸಂದರ್ಭದಲ್ಲಿ ಆಳುವ ನಾಯಕರು ಗಂಟೆ, ಜಾಗಟೆ ಬಾರಿಸಿ, ಧೂಪ, ದೀಪ ಉರಿಸಿ ಎಂದರೆ, ಅದನ್ನು ಚಾಚೂ ತಪ್ಪದೆ ಅನುಕರಿಸಿದವರಲ್ಲಿ, ಹಾಗೆ ಮಾಡಿದರೆ ರೋಗ ಗುಣವಾಗುತ್ತದೆಯೇ ಎಂಬ ಸಣ್ಣ ವೈಚಾರಿಕ ಪ್ರಶ್ನೆಯೂ ಹುಟ್ಟಿರಲಿಲ್ಲ.

ಆದ್ದರಿಂದ ದೇವನೂರ ಅವರ ಈ ದೇವರ ಮೌಲ್ಯಮಾಪನ ರೂಪಕದ ಕತೆಯನ್ನು, ಸಾಂಸ್ಕೃತಿಕವಾಗಿ ಎಚ್ಚರವಿರುವ, ಸಮಕಾಲೀನ ತಲ್ಲಣಕ್ಕೆ ತೀವ್ರವಾಗಿ ಮಿಡಿಯುವ, ಸೃಜನಶೀಲ ಮನಸ್ಸುಳ್ಳ ಯಾರಾದರೂ ನಾಟಕವಾಗಿಸಿದರೆ ಉಪಯುಕ್ತವಾಗುತ್ತದೆ. ಈ ನಾಟಕವು ದೇವರ ಮೌಲ್ಯಮಾಪನ ಮಾಡುವ ಆದಿವಾಸಿ ಜನರ ಕಥನವನ್ನು ಹಾಗೂ ಆ ವಿವೇಕವನ್ನು ವರ್ತಮಾನದ ರಾಜಕೀಯ ಮೌಲ್ಯಮಾಪನಕ್ಕೆ ಅನ್ವಯಿಸುವ ರೀತಿಯನ್ನು ದೃಶ್ಯೀಕರಿಸಬೇಕಾಗುತ್ತದೆ. ಇಂತಹ ನಾಟಕವನ್ನು ಜನರಿಗೆ ಬೀದಿನಾಟಕದಂತೆ ಪ್ರದರ್ಶನ ಮಾಡಿದರೆ, ಕೊಂಚ ಜನಜಾಗೃತಿಯಾದರೂ ಉಂಟಾಗಬಹುದು ಎನಿಸುತ್ತದೆ.

ದೊಡ್ಡಿಶೇಖರ, ಮದ್ದೂರು

ಇನ್ನೆಷ್ಟು ದಿನ ಟೋಲ್ ಸಂಗ್ರಹ?

ಕೆಆರ್‌ಎಸ್ ಅಣೆಕಟ್ಟಿನ ಕೆಳಭಾಗದಲ್ಲಿ ಸಾರ್ವಜನಿಕರು ಮತ್ತು ವಾಹನಗಳ ಓಡಾಟಕ್ಕೆ ಅನುಕೂಲ ಕಲ್ಪಿಸುವ ಉದ್ದೇಶದಿಂದ 20 ವರ್ಷಗಳ ಹಿಂದೆ ಸುಮಾರು ಒಂದು ಫರ್ಲಾಂಗ್ ದೂರದ ಸೇತುವೆಯನ್ನು ನಿರ್ಮಾಣ ಮಾಡಲಾಗಿದೆ. ಅಣೆಕಟ್ಟನ್ನು ವೀಕ್ಷಿಸಲು ಬರುವವರು ಮತ್ತು ಕೆಆರ್‌ಎಸ್‌ನಿಂದ ಉತ್ತರ ಭಾಗಕ್ಕೆ ಕಾರು, ಬಸ್ಸು, ಟೆಂಪೊಗಳಲ್ಲಿ ಪ್ರಯಾಣ ಮಾಡುವ ಎಲ್ಲರೂ ಈ ಸೇತುವೆ ಮೇಲೆ ಸಂಚರಿಸಲು ಟೋಲ್ ಕೊಡಬೇಕು. 20 ವರ್ಷಗಳ ಹಿಂದೆ ಈ ಸೇತುವೆ ನಿರ್ಮಾಣ ಕಾರ್ಯಕ್ಕೆ ಸುಮಾರು ₹ 10 ಕೋಟಿ ಖರ್ಚು ಮಾಡಿರಬಹುದು. ಆದರೆ ಪ್ರತಿವರ್ಷ ಟೋಲ್ ಸಂಗ್ರಹದಿಂದ ಕನಿಷ್ಠ ₹ 4 ಕೋಟಿಯಿಂದ 5 ಕೋಟಿ ಸಂಗ್ರಹವಾಗುತ್ತಿದೆ, ಅಂದರೆ, ಸುಮಾರು 20 ವರ್ಷಗಳಿಂದ ಸರಿಸುಮಾರು ₹ 100 ಕೋಟಿ ಟೋಲ್ ಸಂಗ್ರಹಿಸಿದಂತಾಗಿದೆ. ಸಂಪರ್ಕ ಸೇತುವೆಗಳನ್ನು ನಿರ್ಮಾಣ ಮಾಡುವುದು ಸರ್ಕಾರ ಲಾಭ ಗಳಿಸಲೋ ಅಥವಾ ಸಾರ್ವಜನಿಕರ ಅನುಕೂಲಕ್ಕಾಗಿಯೋ ಎಂಬ ಪ್ರಶ್ನೆ ಮೂಡುತ್ತದೆ.

ಹತ್ತು ವರ್ಷಗಳಿಂದೀಚೆಗಂತೂ ಕೆಆರ್‌ಎಸ್ ಹಿನ್ನೀರಿನ ಭಾಗದಲ್ಲಿ ಇರುವ ದೇವಸ್ಥಾನಗಳಿಗೆ ಸಾವಿರಾರು ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡುತ್ತಾರೆ. ಇವರುಗಳಿಂದಲೇ ಬಹಳಷ್ಟು ಟೋಲ್ ಸಂಗ್ರಹವಾಗುತ್ತಿದೆ. ಈ ಸೇತುವೆಯ ಮೇಲೆ ಓಡಾಡುವ ಎಲ್ಲ ರೀತಿಯ ವಾಹನಗಳಿಗೂ ಟೋಲ್ ಅನ್ನು ಸರ್ಕಾರ ರದ್ದು ಮಾಡಲಿ. ಇನ್ನು ಒಂದು ವರ್ಷ ಮಾತ್ರ ಟೋಲ್ ಸಂಗ್ರಹಿಸುವುದಾಗಿ ಅಧಿಕಾರಿಗಳು ಇತ್ತೀಚೆಗೆ ಹೇಳಿದ್ದಾರೆ. ಇವರು ಐದು ವರ್ಷಗಳಿಂದಲೂ ಹೀಗೇ ಹೇಳಿಕೊಂಡು ಬರುತ್ತಿದ್ದಾರೆ. ಈ ಬಾರಿಯಾದರೂ ಅದು ಕಾರ್ಯರೂಪಕ್ಕೆ ಬರಲಿ.

ಬೂಕನಕೆರೆ ವಿಜೇಂದ್ರ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಬಗೆ ಬಗೆ ಕತೆ ಹೇಳುವ ರಾಮಾಯಣಗಳು

ಪ್ರಜಾವಾಣಿ ವಾರ್ತೆ

ರಾಮಾಯಣ ಮತ್ತು ಮಹಾಭಾರತ ಮಹಾಕಾವ್ಯಗಳು ಭಾರತದ ಸಾಹಿತ್ಯವನ್ನು ಪ್ರಭಾವಿಸಿದಷ್ಟು ಬೇರಾವ ಕಾವ್ಯಗಳೂ ಪ್ರಭಾವಿಸದೇ ಇರಬಹುದು. ಸಂಸ್ಕೃತದಲ್ಲಿರುವ ರಾಮಾಯಣಗಳು ಒಂದೆಡೆಯಾದರೆ ಬಂಗಾಳ, ಕನ್ನಡ, ಅವಧ್, ಮಲಯಾಳ, ತಮಿಳು, ತೆಲುಗು ಭಾಷೆಗಳಲ್ಲಿ ರಚನೆಯಾದ ರಾಮಾಯಣಗಳು ಹಲವಿವೆ. ರಾಮಾಯಣದ ಕತೆಯನ್ನೇ ಹೇಳಿದರೂ ಪಾತ್ರ ಪೋಷಣೆಯಲ್ಲಿ ಇವು ಭಿನ್ನವಾಗಿ ನಿಲ್ಲುತ್ತವೆ. ಅಂತಹ ನೂರಾರು ರಾಮಾಯಣಗಳು ಭಾರತದಲ್ಲಿವೆ. ಇವುಗಳಲ್ಲಿ ಮೂಲ ರಾಮಾಯಣ ಯಾವುದು ಎಂಬುದರ ಬಗ್ಗೆ ಈ ಹಿಂದೆಯೇ ಹಲವು ಚರ್ಚೆಗಳು ನಡೆದು ಹೋಗಿವೆ.

ಸಾಮಾನ್ಯವಾಗಿ ವಾಲ್ಮೀಕಿ ರಾಮಾಯಣವನ್ನೇ ಮೂಲ ರಾಮಾಯಣ ಎಂದು ಪರಿಗಣಿಸಲಾಗುತ್ತದೆ. ಆದರೆ ಮೂಲ ರಾಮಾಯಣ ಎಂಬುದೇ ಇಲ್ಲ ಎಂಬ ವಾದವೂ ವಿದ್ವಾಂಸರ ವಲಯದಲ್ಲಿದೆ. ಎ.ಕೆ. ರಾಮಾನುಜನ್ ಅವರ 'ಥ್ರೀ ಹಂಡ್ರೆಡ್ ರಾಮಾಯಣಾಸ್' ಪ್ರಬಂಧದಲ್ಲಿ ಇದನ್ನೇ ಪ್ರತಿಪಾದಿಸುತ್ತಾರೆ. ಆ ಪ್ರಬಂಧದಲ್ಲಿ ಅವರು ಬೇರೆ-ಬೇರೆ ರಾಮಾಯಣಗಳನ್ನು 'ವರ್ಷನ್-ಆವೃತ್ತಿ' ಎಂದು ಕರೆಯುವುದಿಲ್ಲ. ಬದಲಿಗೆ 'ಟೆಲ್ಲಿಂಗ್ಸ್' ಎಂದು ಕರೆದಿದ್ದಾರೆ. ಅವರು ಹಾಗೆ ಕರೆಯುವುದಕ್ಕೆ ಆ ಪ್ರಬಂಧದಲ್ಲೇ ವಿವರಣೆಯನ್ನೂ ನೀಡಿದ್ದಾರೆ. 'ಆವೃತ್ತಿ ಎಂದು ಕರೆದ ತಕ್ಷಣ, ಅದಕ್ಕೆ ಮೂಲಕೃತಿಯೊಂದು ಇರಬೇಕಾಗುತ್ತದೆ. ಸಾಮಾನ್ಯವಾಗಿ ಸಂಸ್ಕೃತದ ವಾಲ್ಮೀಕಿ ರಾಮಾಯಣವನ್ನೇ ಮೂಲ ಎಂದು ಪರಿಗಣಿಸಲಾಗುತ್ತದೆ. ಆದರೆ, ಬೇರೆ-ಬೇರೆ ಭಾಷೆಗಳಲ್ಲಿ ಇರುವ ರಾಮಾಯಣಗಳು ವಾಲ್ಮೀಕಿ ರಾಮಾಯಣವನ್ನು ಆಧರಿಸಿಲ್ಲ. ಹೀಗಾಗಿ ಈ ರಾಮಾಯಣಗಳನ್ನು ಆವೃತ್ತಿ ಎಂದು ಕರೆಯುವ ಬದಲಿಗೆ 'ಟೆಲ್ಲಿಂಗ್ಸ್' ಎಂದೇ ಕರೆಯುತ್ತೇನೆ' ಎಂದು ಅವರು ಪ್ರತಿಪಾದಿಸಿದ್ದಾರೆ.

ವಾಲ್ಮೀಕಿ ರಾಮಾಯಣಕ್ಕೂ, ಸಂಸ್ಕೃತದ ಇತರ ರಾಮಾಯಣಗಳಿಗೂ ವ್ಯತ್ಯಾಸವಿರುವುದನ್ನು ಅವರು ಗುರುತಿಸುತ್ತಾರೆ. ಸಂಸ್ಕೃತದ ಇತರ ಹಲವು ಕೃತಿಗಳಲ್ಲಿ ರಾಮಾಯಣವು, ರಾಮ ಮತ್ತು ಸೀತೆ ಅಯೋಧ್ಯೆಗೆ ಹಿಂದಿರುಗಿದಾಗ ಹಾಗೂ ರಾಮನ ಪಟ್ಟಾಭಿಷೇಕದ ನಂತರ ಕೊನೆಯಾಗುತ್ತವೆ. ಆದರೆ ವಾಲ್ಮೀಕಿ ರಾಮಾಯಣವು ಮತ್ತೂ ಮುಂದುವರಿಯುತ್ತದೆ. ಸೀತೆಯ ಅಗ್ನಿಪರೀಕ್ಷೆ, ಆಕೆಯನ್ನು ಲಕ್ಷ್ಮಣ ಕಾಡಿನಲ್ಲಿ ಬಿಟ್ಟುಬರುವುದು, ವಾಲ್ಮೀಕಿ ಆಶ್ರಮದಲ್ಲಿ ಆಕೆ ಲವ-ಕುಶರನ್ನು ಹೆರುವುದು, ರಾಮಾಶ್ವಮೇಧ ಯಾಗ... ಈ ಪ್ರಸಂಗಗಳೆಲ್ಲವೂ ಸಂಸ್ಕೃತದ ಇತರ ರಾಮಾಯಣಗಳಲ್ಲಿ ಇಲ್ಲ ಎಂಬುದನ್ನು ರಾಮಾನುಜನ್ ಅವರು ತಮ್ಮ ಪ್ರಬಂಧದಲ್ಲಿ ಉಲ್ಲೇಖಿಸುತ್ತಾರೆ.

ದೇಶದ ಬೇರೆ-ಬೇರೆ ರಾಮಾಯಣ ಕೃತಿಗಳಲ್ಲಿ ಮಹತ್ವದ ಸ್ಥಾನ ಪಡೆದುದರಲ್ಲಿ 'ಕಂಬ ರಾಮಾಯಣ'ವೂ ಒಂದು. ತಮಿಳಿನ ಕಂಬ ಕವಿಯ 'ರಾಮಾವತಾರಮ್', ವಾಲ್ಮೀಕಿ ರಾಮಾಯಣದ ಕಥಾಹಂದರದಲ್ಲೇ ಸಾಗಿದರೂ ಪಾತ್ರಗಳನ್ನು ಬಹಳ ಭಿನ್ನವಾಗಿ ಪೋಷಿಸುತ್ತದೆ. 'ಎರಡೂ ಕೃತಿಗಳಲ್ಲಿ ಅಹಿಲ್ಯಾ ಪಾತ್ರವನ್ನು ಭಿನ್ನವಾಗಿ ಚಿತ್ರಿಸಲಾಗಿದೆ' ಎಂಬುದನ್ನು ರಾಮಾನುಜನ್ ಉದಾಹರಿಸುತ್ತಾರೆ. ಕನ್ನಡದ ಹಲವು ಜನಪದ ರಾಮಾಯಣಗಳಲ್ಲಿನ ಪ್ರತಿಮೆಗಳಿಗೂ, ಕಂಬ ರಾಮಾಯಣದಲ್ಲಿನ ಪ್ರತಿಮೆಗಳಿಗೂ ಹೋಲಿಕೆ ಇರುವುದನ್ನು ಅವರು ಉದಾಹರಿಸುತ್ತಾರೆ.


ಸಂಸ್ಕೃತದ ರಾಮಾಯಣಗಳಲ್ಲಿ ಸೀತೆಯನ್ನು ಜನಕನ ಮಗಳು, ಜನಕನಿಗೆ ಭೂಮಿಯಲ್ಲಿ ದೊರೆತವಳು ಎಂದು ಚಿತ್ರಿಸಲಾಗಿದೆ. ಆದರೆ ಕನ್ನಡದ ಜನಪದ ರಾಮಾಯಣಗಳು ಸೀತೆಯು ರಾವಣನ ಮಗಳು ಎಂದೇ ಪ್ರತಿಪಾದಿಸುತ್ತವೆ. ಸಂಸ್ಕೃತದ ರಾಮಾಯಣಗಳಲ್ಲಿ ಕತೆಯು ರಾಮನಿಂದ ಆರಂಭವಾಗಿ, ರಾಮನಿಂದಲೇ ಅಂತ್ಯವಾಗುತ್ತದೆ. ಆದರೆ ಕನ್ನಡದ ಜನಪದ ರಾಮಾಯಣಗಳು ಸೀತೆಯನ್ನೇ ಕತೆಯ ಕೇಂದ್ರವನ್ನಾಗಿ ರೂಪಿಸುತ್ತವೆ. ಸೀತೆಯ ಜನನ ಪ್ರಸಂಗದಿಂದ ಆರಂಭವಾಗುವ ರಾಮಾಯಣವು, ಆಕೆಯು ಭೂಮಿಯ ಒಡಲೊಳಗೆ ಹೋಗುವಲ್ಲಿಗೆ ಅಂತ್ಯವಾಗುತ್ತವೆ. ಈ ಮಧ್ಯೆ ನಡೆಯುವ ಎಲ್ಲಾ ಪ್ರಸಂಗಗಳಲ್ಲೂ ಸೀತೆಯದ್ದೇ ಪ್ರಧಾನ ಪಾತ್ರ. ಈ ಜನಪದ ರಾಮಾಯಣಗಳಲ್ಲಿ ಸೀತೆಯ ಜನನದ ನಂತರವೇ ರಾಮ-ಲಕ್ಷ್ಮಣರ ಹುಟ್ಟಿನ ಪ್ರಸಂಗ ಬರುವುದು. ಇವು ರಾಮಾಯಣವನ್ನು ಸೀತೆಯ ಜನನ, ಸೀತೆಯ ಬಾಲ್ಯ, ಸೀತೆಯ ಮದುವೆ, ಸೀತೆಯ ಅಪಹರಣ, ಸೀತೆಯ ಅಗ್ನಿಪರೀಕ್ಷೆ, ಸೀತೆಯನ್ನು ಕಾಡಿಗಟ್ಟಿದ್ದು, ಸೀತೆ ಲವ-ಕುಶರನ್ನು ಹೆತ್ತು ಸಲಹಿದ್ದು, ರಾಮನ ಮೇಲೆ ಸಿಟ್ಟಾಗಿ ಸೀತೆ ಭೂತಾಯಿಯ ಒಡಲು ಸೇರಿದ್ದನ್ನೇ ಪ್ರಮುಖ ಘಟ್ಟಗಳಾಗಿ ವಿವರಿಸುತ್ತಾ ಹೋಗುತ್ತವೆ. ಕನ್ನಡದ ಜನಪದ ರಾಮಾಯಣಗಳ ಕುರಿತ ಅಧ್ಯಯನಗಳೂ ಈ ಅಂಶಗಳನ್ನೇ ಗುರುತಿಸುತ್ತವೆ.

ಜನಪದ ರಾಮಾಯಣಗಳಿಗೆ ಹೆಣ್ಣೇ ಪ್ರಮುಖ ಪಾತ್ರ ಎಂಬುದಕ್ಕೆ ಚಿತ್ರಪಟ ರಾಮಾಯಣವೂ ಒಂದು ಸ್ಪಷ್ಟ ನಿದರ್ಶನ. ಈ ಪ್ರಸಂಗವನ್ನೂ ಬೇರೆ-ಬೇರೆ ಭಾಷೆ-ಪ್ರದೇಶದ ಜನಪದರು ಭಿನ್ನವಾಗೇ ಚಿತ್ರಿಸಿದ್ದಾರೆ. ತಮಿಳಿನ ಕೆಲವು ರಾಮಾಯಣಗಳಲ್ಲಿ ರಾವಣನ ಚಿತ್ರ ಬರೆಯುವುದು ಸೀತೆಯಲ್ಲ. ಬದಲಿಗೆ ಶೂರ್ಪನಖಿಯ ಮಗಳು. ತನ್ನ ತಾಯಿಗಾದ ಅವಮಾನಕ್ಕೆ ಸೇಡು ತೀರಿಸಿಕೊಳ್ಳುವ ಸಲುವಾಗಿ ಶೂರ್ಪನಖಿಯ ಮಗಳು, ಸೀತೆಯ ಅಂತಃಪುರದಲ್ಲಿ ರಾವಣನ ಚಿತ್ರ ಬರೆಯುತ್ತಾಳೆ. ಆ ಮೂಲಕ ಸೀತೆಯನ್ನು ಕಾಡಿಗಟ್ಟುವಲ್ಲಿ ಯಶಸ್ವಿಯಾಗುತ್ತಾಳೆ. ಇಂಥದ್ದೇ ಕಥಾಬಿತ್ತಿ ಬಂಗಾಳಿ ಜನಪದ ರಾಮಾಯಣಗಳಲ್ಲೂ ಇದೆ.

ಜನಪದ ಮಾತ್ರವಲ್ಲ, ಶಿಷ್ಟ ಸಾಹಿತ್ಯವೂ ರಾಮಾಯಣಕ್ಕೆ ಭಿನ್ನ ನೆಲೆಯಲ್ಲೇ ಸ್ಪಂದಿಸುತ್ತಾ ಬಂದಿವೆ. ವಿಮಲಸೂರಿಯ 'ಪವುಮಚರಿಯ'ದಲ್ಲಿ ರಾಮ, ರಾವಣನನ್ನು ಕೊಲ್ಲುವುದೇ ಇಲ್ಲ. ಕನ್ನಡದ ಶಿಷ್ಟ ಸಾಹಿತ್ಯದ ಒಂದು ಸಹಸ್ರಮಾನಕ್ಕೂ ಮಿಗಿಲಾದ ಅವಧಿಯಲ್ಲಿ ಹಲವು ರಾಮಾಯಣಗಳು ರಚನೆಯಾಗಿವೆ. ಕವಿರಾಜಮಾರ್ಗಕ್ಕೆ ಮೊದಲು ಕನ್ನಡದ ಕೃತಿಗಳು ಲಭ್ಯವಿಲ್ಲವಾದರೂ, ಅದರಲ್ಲಿನ ಕೆಲವು ಲಕ್ಷಣ ಪದ್ಯಗಳು ಹನುಮಂತನ ಪ್ರಸಂಗವನ್ನು ಉಲ್ಲೇಖಿಸುತ್ತವೆ. ಅಲ್ಲಿಂದ ಆರಂಭವಾಗಿ ನಾಗಚಂದ್ರನ ರಾಮಚಂದ್ರ ಚರಿತ ಪುರಾಣ, ಲಕ್ಷ್ಮೀಶನ ಜೈಮಿನಿ ಭಾರತ, ನರಹರಿಯ ತೊರವೆ ರಾಮಾಯಣ, ಮುದ್ದಣನ ಅಭ್ಧುತ ರಾಮಾಯಣ, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತೀರಾ ಇತ್ತೀಚಿನ ಎನ್ನಬಹುದಾದ ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ರಾಮಾಯಣದ ಕತೆ-ಪಾತ್ರಗಳನ್ನು ಪರಸ್ಪರ ಭಿನ್ನವಾಗಿಯೇ ಪೋಷಿಸುತ್ತಾ ಬಂದಿವೆ. ವೀರಪ್ಪ ಮೊಯಿಲಿ ಅವರ 'ರಾಮಾಯಣ ಮಹಾನ್ವೇಷಣಂ' ಅಂಥದ್ದೇ ಒಂದು ಯತ್ನ.

ಮತ್ತೆ ಮೊದಲಿನ ಮಾತಿಗೆ ಬರುವುದಾದರೆ, ಭಾರತ ಮಾತ್ರವಲ್ಲ ಭಾರತದ ನೆರೆಯ ದೇಶಗಳಲ್ಲೂ ರಾಮಾಯಣವು ಅವುಗಳದ್ದೇ ವಿಶಿಷ್ಟ ರೂಪದಲ್ಲಿ ಚಾಲ್ತಿಯಲ್ಲಿವೆ. ಅವು ಕೂಡ ರಾಮಾಯಣದ ಕತೆ ಮತ್ತು ಪಾತ್ರಗಳನ್ನು ಬೇರೆಯದ್ದೇ ರೀತಿಯಲ್ಲಿ ಕಟ್ಟಿಕೊಡುತ್ತವೆ.

ಆಧಾರ: ಎ.ಕೆ.ರಾಮಾನುಜನ್ ಅವರ 'ಥ್ರೀ ಹಂಡ್ರೆಡ್ ರಾಮಾಯಣಾಸ್' ಪ್ರಬಂಧ, ವಾಷಿಂಗ್ಟನ್ ವಿಶ್ವವಿದ್ಯಾಲಯದ ಸೆಂಟರ್ ಫಾರ್ ಸೌತ್‌ಈಸ್ಟ್ ಏಷ್ಯಾ ಸಂಸ್ಥೆಯ 'ದಿ ರಾಮಾಯಣಾಸ್ ಆಫ್ ಸೌತ್‌ಈಸ್ಟ್ ಏಷ್ಯಾ' ಪ್ರಬಂಧ, 'ಕನ್ನಡ ಸಾಹಿತ್ಯ ಚರಿತ್ರೆ' ಗ್ರಂಥ





ಭಾರತದ ಇತರ ಕೆಲವು ರಾಮಾಯಣಗಳು

ತುಳಸಿ ರಾಮಾಯಣ

ತುಳಸೀದಾಸ ಅವರು ಅವಧ್ ಭಾಷೆಯಲ್ಲಿ ರಚಿಸಿದ ಈ ರಾಮಾಯಣವು, ದೇಶದ ಪ್ರಮುಖ ರಾಮಾಯಣಗಳಲ್ಲಿ ಒಂದು. ವಾಲ್ಮೀಕಿ ರಾಮಾಯಣದ ಕಥಾಹಂದರದಲ್ಲೇ ಸಾಗಿದರೂ ಜನಪದದ ರೀತಿಯಲ್ಲೇ ಪಾತ್ರಪೋಷಣೆ ಇರುವ ಇದನ್ನು ಜನರ ರಾಮಾಯಣ ಎಂದೇ ಕರೆಯಲಾಗುತ್ತದೆ.

ರಂಗನಾಥ ರಾಮಾಯಣ

ತೆಲುಗು ಕವಿ ರಂಗನಾಥ ಅವರು 14ನೇ ಶತಮಾನದ ವೇಳೆಗೆ ರಚಿಸಿದ್ದು ಎನ್ನಲಾದ ಈ ರಾಮಾಯಣವು, ಹಲವು ಕಾರಣಗಳಿಂದ ಮಹತ್ವ ಪಡೆದುಕೊಂಡಿವೆ. ಲಂಕೆಗೆ ಸೇತುವೆ ಕಟ್ಟುವಲ್ಲಿ ಅಳಿಲು ನೆರವಾಯಿತು. ಅದನ್ನು ಮೆಚ್ಚಿ, ರಾಮ ಅದರ ಬೆನ್ನ ಮೇಲೆ ಮೂರು ಗೆರೆ ಎಳೆದ ಎಂಬ ಪ್ರಸಂಗದ ಮೊದಲ ಲಿಖಿತ ಉಲ್ಲೇಖ ಸಿಗುವುದೇ ಈ ರಾಮಾಯಣದಲ್ಲಿ. ದಕ್ಷಿಣ ಭಾರತದ ಹಲವು ಜನಪದ ರಾಮಾಯಣಗಳಲ್ಲೂ ಇಂತಹ ಉಲ್ಲೇಖವಿದೆ.

ವಿಶ್ವದ ಇತರ ಕೆಲವು ರಾಮಾಯಣಗಳು

ಕಾಂಬೋಡಿಯಾದ ರೀಮ್ಕರ್: ಬೌದ್ಧ ಧರ್ಮ ಪ್ರಭಾವಿತವಾದ ರಾಮಾಯಣದ ಕತೆ ಇದರಲ್ಲಿದೆ. ಭಾರತದ ರಾಮಾಯಣಗಳಲ್ಲಿ ಇಲ್ಲದ ಹಲವು ಪ್ರಸಂಗಗಳೂ ರೀಮ್ಕರ್‌ನಲ್ಲಿ ಇವೆ. ಸಮುದ್ರೋಲ್ಲಂಘನದ ಸಂದರ್ಭದಲ್ಲಿ ಹನುಮಂತ ಮತ್ತು ಮತ್ಸಕನ್ಯೆ ನಡುವಣ ಜಟಾಪಟಿಯ ಪ್ರಸಂಗ ರೀಮ್ಕರ್‌ಗೆ ವಿಶಿಷ್ಟವಾದುದು. ರೀಮ್ಕರ್‌ನಲ್ಲಿ ಹನುಮಂತನೇ ವಾನರರ ರಾಜ, ವಾಲಿ-ಸುಗ್ರೀವರಲ್ಲ.

ರಾಮಾಯಣ ಜಾವಾ: ಜಾವಾದಲ್ಲೂ ರಾಮಾಯಣ ಪ್ರಚಲಿತದಲ್ಲಿದೆ. ಸಂಸ್ಕೃತ ರಾಮಾಯಣಕ್ಕೆ ಹತ್ತಿರವೇ ಇದ್ದರೂ, ಶಿಷ್ಟ ಸಾಹಿತ್ಯದ ರೂಪದಲ್ಲಿಲ್ಲ. ಬದಲಿಗೆ ಬೊಂಬೆಯಾಟ, ತೊಗಲು ಬೊಂಬೆಯಾಟ, ಚಿತ್ರಕಲೆಗಳ ರೂಪದಲ್ಲಿ ಪ್ರಚಲಿತದಲ್ಲಿದೆ. ಇಲ್ಲಿ ಅಯೋಧ್ಯೆಯನ್ನು ಯೋಗ್ಯಕರ್ತ ಎಂದು ಕರೆಯಲಾಗುತ್ತದೆ. ರಾಮಾಯಣದೊಟ್ಟಿಗೆ ಜಾವಾ ಸಂಸ್ಕೃತಿಯ ಕೆಲವು ದೇವತೆಗಳೂ ಸೇರಿಕೊಂಡಿರುವುದು 'ರಾಮಾಯಣ ಜಾವಾ'ದ ವೈಶಿಷ್ಟ್ಯ.

ಹಿಕಾಯತ್ ಸೆರಿ ರಾಮಾ: ಮಲಯಾದಲ್ಲಿನ ರಾಮಾಯಣದ ಹೆಸರಿದು. ಸೆರಿ ರಾಮಾ ಎಂಬುದು ಸೀತಾ ರಾಮ ಎಂಬುದಾದರೆ, ಹಿಕಾಯತ್ (ಕತೆಗಳು) ಎಂಬುದು ಅರೇಬಿಕ್ ಪದ. ಸೆರಿ ರಾಮ ಕತೆಯಲ್ಲಿ ರಾವಣನ ನಿಷ್ಠೆಯೇ ಶ್ರೇಷ್ಠ ಎಂಬ ಚಿತ್ರಣವಿದೆ. ಮ್ಯಾನ್ಮಾರ್ ರಾಮಾಯಣಗಳಲ್ಲೂ ಇಂಥದ್ದೇ ಚಿತ್ರಣವಿದೆ. ಆದರೆ ಅಲ್ಲಿ ಬೌದ್ಧ ಧರ್ಮದ ಪ್ರಭಾವವಿದೆ. ಬುದ್ಧನನ್ನು ರಾಮನಿಗೆ ಸಮೀಕರಿಸುವ ಕಾವ್ಯಗಳು, ಜನಪದ ಕಾವ್ಯಗಳು, ಬೊಂಬೆಯಾಟಗಳು ಪ್ರಚಲಿತದಲ್ಲಿವೆ.



ಥಾಯ್ಲೆಂಡ್‌ನ ರಾಮಾಕೀನ್‌ನಲ್ಲಿ ರಾವಣ

ರಾಮಾಕೀನ್: ಥಾಯ್ಲೆಂಡ್‌ನ ರಾಮಾಯಣವೇ ರಾಮಾಕೀನ್. ಇಲ್ಲಿ ಅಯೋಧ್ಯೆಯನ್ನು ಅಯುದ್ಧಯ ಎಂದು ಕರೆಯಲಾಗಿದೆ. ರಾಮಾಕೀನ್ ಅನ್ನು ಥಾಯ್ಲೆಂಡ್‌ನ ರಾಷ್ಟ್ರೀಯ ಕಾವ್ಯ ಎಂದೂ ಪರಿಗಣಿಸಲಾಗಿದೆ. ರಾಮಾಯಣವನ್ನು ಆಧರಿಸಿದ ಹಲವು ಪ್ರದರ್ಶನ ಕಲೆಗಳೂ ಇಲ್ಲಿ ಪ್ರಚಲಿತದಲ್ಲಿವೆ.

ಸಿನಿ ಬಿಟ್ಸ್

ಉತ್ತರ ಕರ್ನಾಟಕ ಸೊಗಡಿನ 'ದೇಸಾಯಿ'



ಪ್ರವೀಣ್, ರಾಧ್ಯ

'ಲವ್ 360' ಖ್ಯಾತಿಯ ನಟ ಪ್ರವೀಣ್ ಕುಮಾರ್ ನಾಯಕನಾಗಿ ನಟಿಸುತ್ತಿರುವ 'ದೇಸಾಯಿ' ಚಿತ್ರದ ಚಿತ್ರೀಕರಣ ಭರದಿಂದ ಸಾಗಿದೆ. ಇತ್ತೀಚೆಗಷ್ಟೇ ಚಿತ್ರದ ಹಾಡೊಂದರ ಶೂಟಿಂಗ್ ಬೆಂಗಳೂರಿನ ಹೊರವಲಯದಲ್ಲಿ ನಡೆಯಿತು.

ನಾಗರೆಡ್ಡಿ ಭಡ ನಿರ್ದೇಶಿಸಿರುವ ಈ ಚಿತ್ರವು ಉತ್ತರ ಕರ್ನಾಟಕ ಶೈಲಿಯ ಸಿನಿಮಾವಾಗಿದ್ದು, ಸಂಭಾಷಣೆಯೂ ಅದೇ ಸೊಗಡಿನಲ್ಲಿದೆ. ಶಿವು ಬೇರ್ಗಿ ಅವರು ಬರೆದಿರುವ, ಸಾಯಿಕಾರ್ತಿಕ್ ಸಂಗೀತ ನೀಡಿರುವ ಸಿನಿಮಾದ ಹಾಡೊಂದಕ್ಕೆ ಮೋಹನ್ ಮಾಸ್ಟರ್ ನೃತ್ಯ ನಿರ್ದೇಶನದಲ್ಲಿ ಪ್ರವೀಣ್ ಹಾಗೂ ನಾಯಕಿ ರಾಧ್ಯ ಹೆಜ್ಜೆ ಹಾಕಿದರು. 'ದೇಸಾಯಿ' ಒಂದು ಕೌಟುಂಬಿಕ ಕಥಾಹಂದರದ ಚಿತ್ರವಾಗಿದ್ದು, ಇದು ನನ್ನ ನಿರ್ದೇಶನದ ಮೊದಲ ಸಿನಿಮಾ. ತಾತ, ತಂದೆ ಹಾಗೂ ಮಗ ಹೀಗೆ ಮೂರು ತಲೆಮಾರಿನ ಕಥೆ ಇದರಲ್ಲಿದೆ. ಇನ್ನೊಂದು ಹಾಡಿನ ಚಿತ್ರೀಕರಣ ಪೂರ್ಣಗೊಂಡರೆ ಚಿತ್ರೀಕರಣ ಪೂರ್ಣಗೊಳ್ಳಲಿದೆ' ಎಂದು ನಾಗರೆಡ್ಡಿ ಮಾಹಿತಿ ನೀಡಿದರು.

ಪ್ರವೀಣ್ ಈ ಚಿತ್ರದಲ್ಲಿ ಅಥ್ಲೆಟಿಕ್ ಆಗಿ ಕಾಣಿಸಿಕೊಂಡಿದ್ದು, ಚಿತ್ರಕ್ಕಾಗಿ ಸಾಕಷ್ಟು ತಯಾರಿ ಮಾಡಿಕೊಂಡಿದ್ದರು. ರಾಧ್ಯ ಈ ಚಿತ್ರದಲ್ಲಿ ಬೋಲ್ಡ್ ಹುಡುಗಿಯಾಗಿ ಕಾಣಿಸಿಕೊಳ್ಳಲಿದ್ದಾರೆ. ಪಿ.ಕೆ.ಎಚ್. ದಾಸ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಮಹಂತೇಶ್ ವಿ.ಚೋಳಚಗುಡ್ಡ ಈ ಸಿನಿಮಾ ನಿರ್ಮಾಣ ಮಾಡಿದ್ದು, ಚಿತ್ರದ ಹೆಚ್ಚಿನ ಚಿತ್ರೀಕರಣ ಬಾದಾಮಿ, ಬಾಗಲಕೋಟೆಯಲ್ಲಿ ನಡೆದಿದೆ. ❖



ಮಲ್ಲಿಕಾ, ವಿನಯ್ ಹಾಗೂ ಸ್ವತಿಷ್ಠ

ಪ್ರೇಮಕಥೆ ಗುನುಗಿದ ವಿನಯ್

'ಸಿಂಪಲ್' ಸುನಿ ನಿರ್ದೇಶಿಸಿರುವ 'ಒಂದು ಸರಳ ಪ್ರೇಮಕಥೆ' ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದೆ. ಸಿನಿಮಾ ಫೆ.8ರಂದು ರಿಲೀಸ್ ಆಗುತ್ತಿದ್ದು, ಚಿತ್ರದ ಮೊದಲ ಹಾಡು 'ಗುನು ಗುನುಗು' ಬಿಡುಗಡೆಯಾಗಿದೆ.

ವಿನಯ್ ರಾಜ್‌ಕುಮಾರ್ ಮುಖ್ಯಭೂಮಿಕೆಯಲ್ಲಿ ಇರುವ ಈ ಚಿತ್ರದ ಹಾಡನ್ನು ಗೋಲ್ಡನ್ ಸ್ಟಾರ್ ಗಣೇಶ್ ಬಿಡುಗಡೆ ಮಾಡಿದ್ದು ವಿಶೇಷವಾಗಿತ್ತು. 'ಇವರು 'ಸಿಂಪಲ್' ಸುನಿ ಅಲ್ಲ. ಕಾಂಪ್ಲಿಕೇಟೆಡ್(ಕ್ಲಿಷ್ಟಕರ) ಸುನಿ' ಎಂದು ಕಾಲೆಳೆದ ಗಣೇಶ್, 'ಕಥೆ ಮಾಡುವ ವಿಚಾರದಲ್ಲಿ ಇವರ ಬರವಣಿಗೆಯೇ ಭಿನ್ನ. ಸುನಿ ಜೊತೆ ನನ್ನ ಪಯಣ ಬಹಳ ವರ್ಷದ್ದು. 'ಚಮಕ್' ಸಿನಿಮಾ ಆದಮೇಲೆ ಹಲವು ಬಾರಿ ಜೊತೆಯಾಗಿ ಕುಳಿತು ಕಥೆಗಳನ್ನು ಚರ್ಚಿಸಿದ್ದೇವೆ. ಒಂದೊಂದು ಬಾರಿಯೂ ಒಂದೊಂದು ಐಡಿಯಾ ತರುತ್ತಾರೆ. ಅದೇ ರೀತಿ 'ಒಂದು ಸರಳ' ಪ್ರೇಮಕಥೆ'ಯೂ ವಿಭಿನ್ನವಾಗಿ ಇರುತ್ತದೆ ಅಂದುಕೊಂಡಿದ್ದೇನೆ. ಸುನಿಯ ಡೈಲಾಗ್ಸ್, ಬರವಣಿಗೆ ಶೈಲಿಗೆ ನಾನು ದೊಡ್ಡ ಅಭಿಮಾನಿ. ನಮ್ಮ ಭಾಷೆ, ವ್ಯಾಕರಣದ ಮೇಲೆ ಹಿಡಿತ ಇರುವ ನಿರ್ದೇಶಕರಲ್ಲಿ ಒಬ್ಬರು ಸುನಿ' ಎಂದರು ಗಣೇಶ್.

ಚಿತ್ರದಲ್ಲಿ ವಿನಯ್‌ಗೆ ಸ್ವತಿಷ್ಠ ಕೃಷ್ಣನ್ ಹಾಗೂ ಮಲ್ಲಿಕಾ ಸಿಂಗ್ ಜೋಡಿಯಾಗಿದ್ದಾರೆ. 'ಗುನು ಗುನುಗು' ಹಾಡಿಗೆ ಸಚಿನ್ ಸಂಪ್ಯೆ ಸಾಹಿತ್ಯ ಬರೆದಿದ್ದು, ವೀರ್ ಸಮರ್ಥ್ ಸಂಗೀತ ನಿರ್ದೇಶನವಿದೆ. ಹಾಡಿಗೆ ಕೇಶವ್ ಆನಂದ್ ಧ್ವನಿಯಾಗಿದ್ದಾರೆ. ಚಿತ್ರದಲ್ಲಿ ರಾಘವೇಂದ್ರ ರಾಜ್‌ಕುಮಾರ್ ವಿಶೇಷ ಪಾತ್ರದಲ್ಲಿ ನಟಿಸಿದ್ದಾರೆ. ರಾಜೇಶ್ ನಟರಂಗ, ಅರುಣಾ ಬಾಲರಾಜ್, ಸಾಧುಕೋಕಿಲ ಮುಂತಾದವರು ತಾರಾಬಳಗದಲ್ಲಿದ್ದಾರೆ. ಚಿತ್ರಕ್ಕೆ ರಾಮ್ ಮೂವೀಸ್ ಬ್ಯಾನರ್‌ನಡಿ ಮೈಸೂರು ರಮೇಶ್ ಬಂಡವಾಳ ಹೂಡಿದ್ದಾರೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ದೇವಸ್ಥಾನವೊಂದನ್ನು ಜೆಸಿಬಿಯಿಂದ ಕೆಡವುತ್ತಿರುವ ದೃಶ್ಯಗಳಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ಕಾಂಚಿಪುರದ ನಿಮಾಂತಕರಾರ ಬೀದಿಯಲ್ಲಿರುವ ಸಾವಿರ ವರ್ಷ ಹಳೆಯದಾದ ಶ್ರೀನಲ್ಲಗಂಬ ವಿನಾಯಗರ್ (ವಿನಾಯಕ) ದೇವಸ್ಥಾನವನ್ನು ನೆಲಸಮ ಮಾಡಲಾಗಿದೆ' ಎಂಬ ಬರಹವೂ ಈ ವಿಡಿಯೊದಲ್ಲಿ ಇದೆ. 'ತತ್ವಂ-ಅಸಿ' ಎನ್ನುವ 'ಎಕ್ಸ್' ಖಾತೆಯ ಈ ವಿಡಿಯೊವನ್ನು ಹಂಚಿಕೊಂಡು, 'ಹಿಂದೂ ದೇವಾಲಯಗಳ ಮೇಲೆ ನಡೆಸಿರುವ ಅಪರಾಧಕ್ಕಾಗಿ ಎಂ.ಕೆ. ಸ್ಟಾಲಿನ್ ಹಾಗೂ ಉದಯನಿಧಿ ಸ್ಟಾಲಿನ್ ಅವರು ಯಾವ ರೀತಿಯ ಪರಿಣಾಮವನ್ನು ಎದುರಿಸಬೇಕಾಗಬಹುದು ಎಂಬುದನ್ನು ನೋಡುವುದಕ್ಕೆ ಕಾಯುತ್ತಿದ್ದೇನೆ. ಯಾವೆಲ್ಲಾ ಹಿಂದೂ ಮತದಾರರು ಇವರಿಗೆ ಮತ ನೀಡಿದ್ದಾರೆ ಅವರಿಗೆ ನಾಚಿಕೆಯಾಗಬೇಕು' ಎಂದು ಬರೆದುಕೊಂಡಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.




ಶ್ರೀನಲ್ಲಗಂಬ ವಿನಾಯಗರ್ ದೇವಸ್ಥಾನವು ತಮಿಳುನಾಡು ಸರ್ಕಾರಕ್ಕೆ ಸೇರಿದ ದೇವಾಲಯವಲ್ಲ. ಅದು ಖಾಸಗಿಯವರಿಗೆ ಸೇರಿದ ದೇವಾಲಯ. ಇದರ ಟ್ರಸ್ಟಿ ಕೆ. ಸೆಂಥಿಲ್ ಕುಮಾರ್ ಅವರ ಮಗ ರಂಜಿತ್ ಕುಮಾರ್ ಅವರು ಈ ಬಗ್ಗೆ ಸ್ಪಷ್ಟನೆ ನೀಡಿದ್ದಾರೆ. 'ಇದು ನಮ್ಮದೇ ಆಸ್ತಿ. ಈ ದೇವಾಲಯವು 140 ವರ್ಷಗಳಷ್ಟು ಹಳೆಯದು. ದೇವಸ್ಥಾನವು ಶಿಥಿಲಾವಸ್ಥೆಯಲ್ಲಿತ್ತು. ಆದಕಾರಣ ದೇವಾಲಯವನ್ನು ಹೊಸದಾಗಿ ನಿರ್ಮಿಸುವ ಸಲುವಾಗಿ 2024ರ ಜನವರಿ 2ರಂದು ನೆಲಸಮಗೊಳಿಸಲಾಗಿತ್ತು' ಎಂದಿದ್ದಾರೆ. ಈ ಬಗ್ಗೆ ತಮಿಳುನಾಡು ಸರ್ಕಾರದ ಫ್ಯಾಕ್ಟ್‌ಚೆಕ್ ಘಟಕ ಕೂಡ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಆದ್ದರಿಂದ ತಮಿಳುನಾಡಿನ ಸರ್ಕಾರವು ದೇವಾಲಯವನ್ನು ನೆಲಸಮ ಮಾಡಿದೆ ಎನ್ನುವುದು ಸುಳ್ಳು ಸುದ್ದಿ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ನುಡಿ ಬೆಳಗು

ಸಮಸ್ಯೆ ಆಗಬೇಡ ಪರಿಹಾರವಾಗು





ಪಿ. ಚಂದ್ರಿಕಾ

ಮರವೊಂದು ಸಿಡಿಲಿನ ಹೊಡೆತಕ್ಕೆ ಸಿಕ್ಕು ನೆಲಕ್ಕುರುಳಿತ್ತು. ಅದು ಜನ ಓಡಾಡುವ ದಾರಿಯೇ ಆದರೂ ಕಾಡಿನ ಮಧ್ಯೆ ಇತ್ತು. ಉದ್ದಕ್ಕೆ ವಾಹನಗಳು ನಿಂತಿದ್ದವು. ಒಬ್ಬ, 'ಈ ಅಕಾಲದಲ್ಲಿ ಯಾಕೆ ಮಳೆ ಬಂತು?' ಎಂದು ಚರ್ಚಿಸುತ್ತಿದ್ದ, ಇನ್ನೊಬ್ಬ ತನ್ನ ವಿಧಿಯನ್ನು ಹಳಿಯುತ್ತಿದ್ದ. ಮತ್ತೊಬ್ಬ ತನಗೆ ಕೆಲಸಕ್ಕೆ ಹೊತ್ತಾಗುತ್ತಿದೆ ಎಂದು ಚಡಪಡಿಸುತ್ತಿದ್ದ. ಮತ್ತೊಬ್ಬ ಸಿಗದ ಫೋನ್ ಲೈನನ್ನು ಹಳಿಯುತ್ತಿದ್ದರೆ, ಮಗದೊಬ್ಬ ರಸ್ತೆಯ ಬದಿ ಮರವನ್ನು ಹಾಕುವಾಗ ಸ್ವಲ್ಪ ಹಿಂದೆ ಹಾಕದೆ ಈ ಸ್ಥಿತಿಯನ್ನು ತಂದಿಟ್ಟವನನ್ನು ಬಯ್ಯುತ್ತಿದ್ದ. ಮರ ಮಾತ್ರ ರಸ್ತೆಯ ಮಧ್ಯದಲ್ಲೆ ಬಿದ್ದಿತ್ತು. ವಾಹನಗಳ ಸಂಖ್ಯೆ ಜಾಸ್ತಿ ಆಗುತ್ತಲೇ ಇತ್ತು.

ಒಬ್ಬ ಬಂದು, 'ನೀವೆಲ್ಲಾ ಹೀಗೆ ಬಯ್ಯುವುದರ ಬದಲಿಗೆ ಒಂದು ಕೈ ಜೋಡಿಸಿ ಸಣ್ಣ ಕೊಂಬೆಗಳನ್ನಾದರೂ ಕತ್ತರಿಸಿ, ಒಂದು ವಾಹನವಾದರೂ ಓಡಾಡುವಷ್ಟು ದಾರಿ ಮಾಡಿಕೊಳ್ಳುವ' ಎಂದ.

'ಅದೆಲ್ಲಾ ಆಗುವ ಕೆಲಸ ಅಲ್ಲ' ಎಂದು ಕೆಲವರು ಗೊಣಗಿದರು. ಇನ್ನು ಕೆಲವರು, 'ಇದು ನಮ್ಮ ಕೆಲಸ ಅಲ್ಲ. ಸಂಬಂಧ ಪಟ್ಟ ಇಲಾಖೆಯವರು ಮಾಡಬೇಕು' ಎಂದರು. ಮತ್ತೆ ಕೆಲವರು, 'ನಮ್ಮ ಬಳಿ ಯಾವ ಹತಾರಗಳು ಇಲ್ಲ' ಎಂದರು.

ಪ್ರಯತ್ನ ಪಡದೆ ಏನೂ ಆಗುವುದಿಲ್ಲ ಎಂದು ಹುರಿದುಂಬಿಸಿದ್ದಕ್ಕೆ ಕೆಲ ಯುವಕರು ಮುಂದಾದರು. ಅರ್ಧ ಗಂಟೆ ಎನ್ನುವುದರೊಳಗೆ ಸ್ವಲ್ಪ ಜಾಗ ತೆರವಾಗಿ, ವಾಹನಗಳು ಓಡಾಡಲಿಕ್ಕೆ ಆರಂಭವಾಯಿತು.

ಇದನ್ನೆಲ್ಲಾ ಗಮನಿಸಿದ ಯುವಕ ಆ ವ್ಯಕ್ತಿಯ ಬಳಿಗೆ ಬಂದು, 'ನೀವು ಇಲ್ಲ ಅಂದಿದ್ದರೆ ನಾವು ಇನ್ನೆಷ್ಟು ಕಾಲ ಹೀಗೆ ನಿಲ್ಲ ಬೇಕಾಗುತ್ತಿತ್ತೋ ಥ್ಯಾಂಕ್ಸ್ ಸರ್' ಎಂದ. ಆಗ ಆ ವ್ಯಕ್ತಿ, 'ನಾವೆಲ್ಲಾ ಸಮಸ್ಯೆಯ ಕಡೆಗೆ ನೋಡುತ್ತಾ ನಾವೇ ಸಮಸ್ಯೆ ಆಗಬಯಸುತ್ತೇವೆ. ಮತ್ತು ಸಮಸ್ಯೆಯೊಂದು ಅಲ್ಲಿದ್ದರೆ ಚಡಪಡಿಸುತ್ತೇವೆ. ಆದರೆ ಪರಿಹಾರ ಆಗಬೇಕು ಎಂದು ಅಂದುಕೊಂಡುಬಿಟ್ಟರೆ ದಾರಿಗಳು ತಾವಾಗೇ ತೆರೆದುಕೊಳ್ಳುತ್ತವೆ' ಎನ್ನುತ್ತಾನೆ.

ಈ ಮಾತನ್ನು ಕೇಳಿದ ಯುವಕ, 'ನಿಜ ಸರ್ ನಿಮ್ಮ ಈ ಮಾತು ಯಾವ ಕಾಲಕ್ಕೂ ನೆನಪಿಟ್ಟುಕೊಳ್ಳಬೇಕು' ಎಂದು ಕೃತಜ್ಞತೆಯನ್ನು ಸೂಚಿಸುತ್ತಾನೆ. ಸಮಸ್ಯೆ ನಮ್ಮ ಕಾರಣಕ್ಕೆ ಆಗದಿದ್ದರೂ ಪರಿಹಾರವನ್ನು ಕಂಡುಕೊಳ್ಳಬೇಕಾದವರು ನಾವೇ. ❖

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಜನವರಿ 23, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪುಷ್ಯ ಶುಕ್ಲ ತ್ರಯೋದಶಿ ಗಂ. 20-40 ನಕ್ಷತ್ರ: ಆರ್ದ್ರಾ ಗಂ. 30-27 ಯೋಗ: ಐಂದ್ರ ಗಂ. 08-04 ಕರಣ: ಕೌಲವ ಗಂ. 08-13, ಮಕರ ಮಾಸದ 08 ನೇ ದಿನ, ಮಳೆನಕ್ಷತ್ರ: ಉತ್ತರಾಷಾಢ 4.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 07-01 ಸೂರ್ಯಾಸ್ತ : 06-23
ಮುಸ್ಲಿಂ ದಿನಾಂಕ : 11 ರಜಬ್
ಅದೃಷ್ಟ ಸಂಖ್ಯೆ : 1, 6

ಮೇಷ: ಇನ್ನೊಬ್ಬರಿಗೆ ಮಾರ್ಗದರ್ಶನ ಮಾಡುವ ಸಮಯದಲ್ಲಿ ಸ್ವಾರ್ಥವನ್ನು ಯೋಚಿಸಬೇಡಿ. ವೈವಾಹಿಕ ಜೀವನವು ಸಿಹಿಯ ಅನುಭವ ನೀಡುತ್ತದೆ. ಇನ್ನೊಬ್ಬರನ್ನು ನಿಂದಿಸುವುದು ಸರಿಯಲ್ಲ.

ವೃಷಭ: ವೃತ್ತಿ ಪರವಾಗಿ ನಡೆಯುವ ಎಲ್ಲ ವಿಷಯಗಳನ್ನೂ ಗಂಭೀರವಾಗಿಯೇ ಪರಿಗಣಿಸ ಬೇಕಾದ ಅಗತ್ಯವಿಲ್ಲ. ಮಾತಿನ ಚತುರತೆಯು ಸಂಘಟನೆ ಮಾಡಲು ಉಪಯೋಗವಾಗುವುದು.

ಮಿಥುನ: ಸಂಸಾರದ ವಿಚಾರದಲ್ಲಿ, ಮಕ್ಕಳ ಭವಿಷ್ಯದ ವಿಚಾರದಲ್ಲಿ ಕಾಡುತ್ತಿದ್ದ ತಲೆನೋವು ಶಮನಹೊಂದುವುದು. ನೂತನ ವಾಹನ ಖರೀದಿಯ ಯೋಚನೆ ಅಗತ್ಯಕ್ಕೆ ಅನುಗುಣವಾಗಿ ತೀರ್ಮಾನಿಸಿ.

ಕರ್ಕಾಟಕ: ಖಾಸಗಿ ಉದ್ಯೋಗಿಗಳು ಆದಾಯ ಏರಿಕೆಯ ವಿಚಾರವನ್ನು ಮೇಲಧಿಕಾರಿಗಳಲ್ಲಿ ಪ್ರಸ್ತಾಪಿಸಬಹುದು. ಜಾಹೀರಾತು ಕ್ಷೇತ್ರದ ಕೆಲಸಗಳಿಂದ ಉತ್ತಮ ಅವಕಾಶಗಳು ಸಿಗಲಿವೆ. ಈಶ್ವರ ಆರಾಧನೆ ನಡೆಸಿ ಶುಭವಾಗುತ್ತದೆ.

ಸಿಂಹ: ಗಣಿತದಲ್ಲಿ ಅಥವಾ ಸಂಗೀತದಲ್ಲಿ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶಗಳು ಅರಸಿ ಬರಲಿದೆ. ಧ್ಯಾನ, ಯೋಗದಿಂದ ಮಾನಸಿಕ ಒತ್ತಡ ಸ್ವಲ್ಪ ಕಡಿಮೆಯಾಗುವುದು. ಆಕಸ್ಮಿಕ ಧನಲಾಭ ಉಂಟಾಗಲಿದೆ.

ಕನ್ಯಾ: ಮದುವೆಯ ವಿಷಯಕ್ಕೆ ಸಂಬಂಧಪಟ್ಟಂತೆ ತಾಯಿಯ ಮತ್ತು ಅಣ್ಣಂದಿರ ಮನಸೆಳೆಯುವಲ್ಲಿ ಯಶಸ್ವಿಯಾಗುವಿರಿ. ಒಪ್ಪಂದಗಳಿಗೆ ಒಪ್ಪಿಕೊಳ್ಳುವ ಮೊದಲು ಕೂಲಂಕಷವಾಗಿ ಯೋಚಿಸಿ ತೀರ್ಮಾನಿಸಿ.

ತುಲಾ: ಸಹೋದ್ಯೋಗಿಯೊಬ್ಬರ ಸಲಹೆ ಅತಿ ಸೂಕ್ತವಾದುದು ಎನಿಸಿ ಅದರಂತೆ ನಡೆದು ವ್ಯವಹಾರದಲ್ಲಿ ಲಾಭ ಹೊಂದುವಿರಿ. ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕಾಗಲಿದೆ. ಆರೋಗ್ಯದ ಬಗ್ಗೆ ಅನಗತ್ಯ ಭೀತಿ ಬೇಡ.

ವೃಶ್ಚಿಕ: ಸಹಜ ಜೀವನ ಶೈಲಿಯಲ್ಲಿ ಸಣ್ಣಪುಟ್ಟ ಸಂತಸದ ಕ್ಷಣಗಳನ್ನು ಕಾಣುವಿರಿ. ಅತೀವ ಪ್ರಯತ್ನದಿಂದ ಕೆಲಸ ಪೂರ್ಣಗೊಳಿಸುವಲ್ಲಿ ಯಶಸ್ವಿಯಾಗುವಿರಿ. ಮನೆಯಲ್ಲಿ ಶುಭ ಕಾರ್ಯಗಳು ಜರುಗುವುದು.

ಧನು: ಒಣಪ್ರತಿಷ್ಠೆಯಿಂದಾಗಿ ಸಂಬಂಧಗಳು ನುಚ್ಚುನೂರಾಗುವ ಪರಿಸ್ಥಿತಿ ತಂದುಕೊಳ್ಳಬೇಡಿ. ಗೃಹಿಣಿಯರಿಗೆ ವಿಶೇಷ ದಿನವಾಗಿದ್ದು ಆಕಸ್ಮಿಕ ಧನಲಾಭ ಅಥವಾ ತವರು ಮನೆಯವರಿಂದ ಉಡುಗೊರೆ ಸಿಗಲಿದೆ.

ಮಕರ: ಮನೆಯ ಹಿರಿಯರ ಮಧ್ಯಸ್ಥಿಕೆಯಿಂದ ವಿವಾದಗಳು ಬಗೆಹರಿಯುವುದು, ಪುನಃ ಮೊದಲಿನಂತೆ ಸಂಬಂಧ ಗಟ್ಟಿಯಾಗಲಿದೆ. ಅಗತ್ಯದ ಹಣ ಕೈಸೇರುವುದರಿಂದ ಮಾಡಿದ ಸಾಲವನ್ನು ತೀರಿಸಲು ಸಾಧ್ಯವಾಗಲಿದೆ.

ಕುಂಭ: ಬೆನ್ನು ನೋವು ಹೋಗಲಾಡಿಸಿಕೊಳ್ಳುವ ಸಲುವಾಗಿ ಚಿಕಿತ್ಸೆ ತೆಗೆದುಕೊಳ್ಳುವುದು ಅನಿವಾರ್ಯ. ವಿದ್ಯುತ್ ಉಪಕರಣ, ಯಂತ್ರೋಪಕರಣಗಳ ಮಾರಾಟದಿಂದ ಅಧಿಕ ಲಾಭ. ಖರ್ಚಿನ ಮೇಲೆ ಬಿಗಿಹಿಡಿತವಿರಲಿ.

ಮೀನ: ಕೋರ್ಟು ವ್ಯವಹಾರದಲ್ಲಿ ಬಹುನಿರೀಕ್ಷಿತ ಜಯದ ಸಿಹಿಯನ್ನು ಅನಿರೀಕ್ಷಿತವಾದ ಸೋಲಿನ ಕಹಿ ಕಸಿಯುವ ಸಾಧ್ಯತೆಗಳಿವೆ. ರಾಜಕಾರಣದ ರಹಸ್ಯ ಬಯಲಾಗಬಹುದು. ಮತ್ತು ಅಧಿಕ ಮಟ್ಟಿಗೆ ಪರಿಣಾಮ ಬೀರಲಿದೆ.

ಪದಬಂಧ 5569


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕೊನೆಗೆ ಜನರಿದ್ದಾಗ ಪ್ರೋತ್ಸಾಹಿಸುವುದು! (4)
3.ಜನರ ಹತ್ತಿರವಿರುವ ಮಾತೆ (3)
5.ಸನಿಹ ಎಂದು ಹೀಗೆನ್ನಿ (3)
7.ನಯವಾಗಿ ಹೊಳೆಯುವ ಕಣ್ಣು (3)
8.ನಿಧಾನವಾಗಿ ನೋಡಿ! ಇದು ಸರ್ಕಾರದ ಕಾರ್ಯಾಲಯ (5)
11.ಬಲೆ ಹಿಡಿದಿರುವ ಹೆಂಗಸು (3)
12.ಯಮ ವಿಧಿಸಿದ ಕಟ್ಟುಪಾಡು (3)
15.ಗುಲಾಮನ ಮೇಲೆ ಚಲ್ಲಿರುವ ಕೆಂಪುರಂಗು (3)
16.ಕಲ್ಪಿತ ಕತೆ (4)

ಮೇಲಿಂದ ಕೆಳಕ್ಕೆ

1.ಉಯ್ಯಾಲೆ ಆಡುವಾಗಿನ ಆನಂದ (3)
2.ನಗರದಲ್ಲಿರುವ ನಾಳ (2)
3.ಜನ ನೋಡುತ್ತಿರುವ ರಾಣೀವಾಸ (3)
4.ಒಂಚೂರೂ ಜಾಗವಿರದೆ ದಟ್ಟವಾದುದು (3)
6.ಪದ ಹೇಳಿ ಕನ್ನಡಿಗನು ಪಡೆದ ಡಿಗ್ರಿ (3)
7.ವರ್ತಮಾನದ ನಾಟ್ಯಶಾಲೆ (5)
9.ಅಧಮನ ರಕ್ತನಾಳ (3)
10.ಬೇರೆಯವರಿಗೂ ಆದ ಸೋಜಿಗ (3)
11.ಆ ಮೇಲೂ ಇಳಿಯದ ಮತ್ತು! (3)
13.ಮತ್ತೆ ಮತ್ತೆ ಮಾತೆ ತೋರುವ ಪ್ರೀತಿ (3)
14.ಮಂಕರಿ ಹೊತ್ತಿರುವ ಹೆಡ್ಡ (2)



5568ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಅಸಡ್ಡೆ 3.ನೈಪುಣ್ಯ
4.ಹಮಾಲ 6.ಅಧರ
8.ಕರವಾಲ 10.ಮನೆತನ
12.ಗುರಾಣಿ 14.ಮಂದಿರ
15.ಸಂಕೇತ 16.ಬರ್ಬರ

ಮೇಲಿಂದ ಕೆಳಕ್ಕೆ:
1.ಗಣ್ಯ 2.ಅನುಬಂಧ
3.ನೈಸರ್ಗಿಕ 5.ಮಾರುತ
6.ಅಲಗು 7.ರಮಣಿ
9.ರಸೀದಿ 11.ನವೀಕೃತ
13.ರಾಯಭಾರ 15.ಸಂಪು

ಸುಡೊಕು 5954

	5			7			3	
7			2		3	6		8
	3	6		4			2	
4		3		1		8		6
	1		9		4		7	
9		8		3		4		1
1		9	3		5		8	7
	6			9			1	
5		7	4		1	9		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5953 ಸುಡೊಕು

2	4	1	6	8	3	9	7	5
9	8	5	2	4	7	6	1	3
7	6	3	1	9	5	8	4	2
4	5	9	8	2	1	7	3	6
6	1	7	3	5	4	2	9	8
8	3	2	9	7	6	4	5	1
3	2	4	7	1	8	5	6	9
5	9	6	4	3	2	1	8	7
1	7	8	5	6	9	3	2	4

ದೇಣಿಗೆ ನೀಡುವ ನೆಪದಲ್ಲಿ ₹1.10 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಮಂಡ್ಯ: ಅಪರಿಚಿತನೊಬ್ಬ ₹ 25 ಕೋಟಿ ದೇಣಿಗೆ ನೀಡುವುದಾಗಿ ನಂಬಿಸಿ, ಮಳವಳ್ಳಿ ತಾಲ್ಲೂಕಿನ ಶಿಂಷಾಪುರ ಗ್ರಾಮದ ಶ್ಯಾಲೋಮ್ ಎಜುಕೇಷನಲ್ ಮತ್ತು ಚಾರಿಟೇಬಲ್ ಟ್ರಸ್ಟ್ ಖಜಾಂಚಿ ಮೇರಿ ಅವರಿಂದ ₹1.10 ಕೋಟಿ ಪಡೆದು ಪರಾರಿಯಾಗಿದ್ದಾನೆ.

ಮೇರಿಯವರನ್ನು ಸಂಪರ್ಕಿಸಿದ್ದ ಆರೋಪಿಯು, ದೇಣಿಗೆ ಕೊಡುವುದಕ್ಕೂ ಮೊದಲು ₹1.10 ಕೋಟಿ ತೆರಿಗೆ ಕಟ್ಟಲು ಹೇಳಿದ್ದ. ಅದನ್ನು ನಂಬಿ ಅವರು ಹಣ ಹೊಂದಿಸಿಕೊಂಡು ಕರೆ ಮಾಡಿದ್ದರು.

‘ಶನಿವಾರ ಕಾರಿನಲ್ಲಿ ಅವರ ಮನೆಗೆ ಬಂದ ಆರೋಪಿಯು ₹1.10 ಕೋಟಿ ಪಡೆದು, ತಾನು ತಂದಿದ್ದ ನಕಲಿ ನೋಟುಗಳ ಚೀಲ ನೀಡಿದ್ದ. ನಂತರ ತಾನೇ ತಂದಿದ್ದ ಜ್ಯೂಸ್ ಕುಡಿಯಲು ಕೊಟ್ಟು ಮನೆಯಲ್ಲಿದ್ದ ಎಲ್ಲರನ್ನೂ ಪ್ರಜ್ಞೆ ತಪ್ಪಿಸಿ ಪರಾರಿಯಾದ. ಎಚ್ಚರಗೊಂಡಾಗ ವಂಚನೆಗೊಳಗಾಗಿರುವ ವಿಷಯ ಗೊತ್ತಾಯಿತು’ ಎಂದು ಮೇರಿ ತಿಳಿಸಿದ್ದಾರೆ. ಬೆಳಕವಾಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.





ಯಾತ್ರೆಗೆ ತಡೆ, ರಾಹುಲ್ ಧರಣಿ

ಕಾನೂನು ಸುವ್ಯವಸ್ಥೆ ಹದಗೆಡುವ ನೆಪ • ಅಸ್ಸಾಂ ಪೊಲೀಸರಿಂದ 2 ಗಂಟೆ ಯಾತ್ರೆಗೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಗುವಾಹಟಿ: ಅಯೋಧ್ಯೆಯಲ್ಲಿ ಬಾಲರಾಮ ಪ್ರಾಣ ಪ್ರತಿಷ್ಠಾಪನೆಗೂ ಮೊದಲು, ಅಸ್ಸಾಂ ನಾಗಾಂವ್ ಜಿಲ್ಲೆಯ ವೈಷ್ಣವ ವಿರಕ್ತ ಸ್ಥಳ ‘ಬಟದ್ರವ ತಾಣ’ವನ್ನು ಪ್ರವೇಶಿಸದಂತೆ ಸೋಮವಾರ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರನ್ನು ತಡೆಯಲಾಯಿತು.

ಕಾನೂನು ಸುವ್ಯವಸ್ಥೆ ಹದಗೆಡಬಹುದು ಎಂದು ಅಧಿಕಾರಿಗಳು ಇದಕ್ಕೆ ಕಾರಣ ನೀಡಿದರು. ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ನಡೆಯುತ್ತಿರುವ ‘ಭಾರತ್ ಜೋಡೊ ನ್ಯಾಯ ಯಾತ್ರೆ’ಯನ್ನು ಅಸ್ಸಾಂನ ಪೊಲೀಸರು ಸುಮಾರು ಎರಡು ಗಂಟೆ ತಡೆಹಿಡಿದಿದ್ದರು.

15ನೇ ಶತಮಾನದ ಸಂತ, ಸಮಾಜ ಸುಧಾರಕ ಶ್ರೀಮಂತ ಶಂಕರದೇವ ಅವರ ಜನ್ಮಸ್ಥಳವಾದ ಬರ್ದೋವಾದಿಂದ ಕೆಲವೇ ಕಿ.ಮೀ ದೂರದಲ್ಲಿ ಪೊಲೀಸರು ನ್ಯಾಯಯಾತ್ರೆಯನ್ನು ತಡೆಹಿಡಿದರು.

ಭಾನುವಾರವಷ್ಟೇ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಅವರು, ‘ಪ್ರಾಣ ಪ್ರತಿಷ್ಠಾಪನೆ ದಿನದಂದು ವೈಷ್ಣವ ವಿರಕ್ತ ಸ್ಥಳ ಬಟದ್ರವ ತಾಣ ಪ್ರವೇಶಿಸಬಾರದು. ಶಂಕರದೇವ ಮತ್ತು ಶ್ರೀರಾಮ ನಡುವೆ ಸ್ಪರ್ಧೆ ಇರುವಂತೆ ಬಿಂಬಿಸಬಾರದು’ ಎಂದು ಮನವಿ ಮಾಡಿದ್ದರು.



ಅಸ್ಸಾಂನ ನಾಗಾಂವ್ ಜಿಲ್ಲೆಯ ಶ್ರೀ ಶಂಕರದೇವ ಜನ್ಮಸ್ಥಳಕ್ಕೆ ಭೇಟಿ ನೀಡಲು ಅವಕಾಶ ನೀಡದೇ ನ್ಯಾಯಯಾತ್ರೆಗೆ ತಡೆಯೊಡ್ಡಿದ ಪೊಲೀಸರ ಕ್ರಮವನ್ನು ಖಂಡಿಸಿ ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಸೋಮವಾರ ರಸ್ತೆಯಲ್ಲೇ ಧರಣಿ ನಡೆಸಿದರು. —ಪಿಟಿಐ ಚಿತ್ರ

ಅಲ್ಲದೆ, ನಾಗಾಂವ್ ಜಿಲ್ಲೆಯ ಅಧಿಕಾರಿಗಳು ಭಾನುವಾರ ರಾಹುಲ್ ಗಾಂಧಿ ಅವರಿಗೆ ಪತ್ರವನ್ನು ಬರೆದಿದ್ದು, ಪ್ರಾಣ ಪ್ರತಿಷ್ಠಾಪನೆ ನಿಮಿತ್ತ ದೊಡ್ಡ ಸಮೂಹ ಸೇರಲಿದೆ. ಹೀಗಾಗಿ, ಮಧ್ಯಾಹ್ನ 3 ಗಂಟೆಗೆ ಮೊದಲು ತಾವು ಜಿಲ್ಲೆಗೆ ಪ್ರವೇಶಿಸಬಾರದು ಎಂದು ಕೋರಿದ್ದರು.

‘ಬಾಲರಾಮ ಪ್ರತಿಷ್ಠಾಪನೆಯ ದಿನದಂದೇ ರಾಹುಲ್ ಗಾಂಧಿ ಅವರು ಕೋಮು ಸೂಕ್ಷ್ಮ ಸ್ಥಳವಾಗಿರುವ ನಾಗಾಂವ್ ಮತ್ತು ನೆರೆಯ ಮೊರಿಗಾಂವ್ ಜಿಲ್ಲೆಗೆ ಏಕೆ ಬರುತ್ತಿದ್ದಾರೆ?’ ಎಂದು ಮುಖ್ಯಮಂತ್ರಿ ಪ್ರಶ್ನಿಸಿದ್ದರು.

> **ದೇವಸ್ಥಾನಕ್ಕೆ ಯಾರು ಮತ್ತು ಯಾವಾಗ ಹೋಗಬೇಕು ಎಂಬುದನ್ನು ಈಗ ಪ್ರಧಾನಿ ಮೋದಿ ಅವರು ನಿರ್ಧರಿಸುತ್ತಾರೆಯೇ?**
> **ರಾಹುಲ್ ಗಾಂಧಿ,** ಕಾಂಗ್ರೆಸ್ ಮುಖಂಡ

ಮಣಿಪುರದಿಂದ ಜನವರಿ 14ರಂದು ಆರಂಭವಾಗಿದ್ದ, 67 ದಿನದ ಈ ನ್ಯಾಯ ಯಾತ್ರೆಯು ಎರಡು ದಿನದ ಅರುಣಾಚಲ ಪ್ರದೇಶದ ಭೇಟಿ ಬಳಿಕ ಭಾನುವಾರವಷ್ಟೇ ಅಸ್ಸಾಂ ರಾಜ್ಯವನ್ನು ಪ್ರವೇಶಿಸಿತ್ತು.

ಕಾಂಗ್ರೆಸ್ ನಾಯಕ ಜೈರಾಂ ರಮೇಶ್ ಅವರು, ಭಾನುವಾರ ನೀಡಿದ್ದ ಹೇಳಿಕೆಯಲ್ಲಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಭೂಪೇನ್ ಕುಮಾರ್ ಬೊರ್ರಾ ಅವರು ಇತರೆ ಕಾರ್ಯಕರ್ತರ ಮೇಲೆ ‘ಬಿಜೆಪಿ ಗೂಂಡಾಗಳು’ ಹಲ್ಲೆ ಮಾಡಿದ್ದಾರೆ ಎಂದು ಆರೋಪಿಸಿದ್ದರು.

ನಾಗಾಂವ್ ಜಿಲ್ಲೆಯ ರುಪೋಹಿಯಲ್ಲಿ ಭಾನುವಾರ ರಾತ್ರಿ ಮೊಕ್ಕಾಂ ಹೂಡಿದ್ದ ರಾಹುಲ್‌ಗಾಂಧಿ ಮತ್ತು ಬೆಂಬಲಿಗರು ಸೋಮವಾರ ಬೆಳಿಗ್ಗೆ, ಶ್ರೀಮಂತ ಶಂಕರದೇವ ಅವರ ಜನ್ಮಸ್ಥಳವಾದ ಬರ್ದೋವಾ ಕಡೆಗೆ ಪ್ರಯಾಣ ಆರಂಭಿಸಿದ್ದರು.

ನಿತೀಶ್, ಲಾಲುಗೆ ಆಹ್ವಾನ: ‘ಭಾರತ್ ಜೋಡೊ ನ್ಯಾಯ ಯಾತ್ರೆ’ಯು ಇದೇ 29ರಂದು ಬಿಹಾರ ಪ್ರವೇಶಿಸಲಿದೆ.

ನ್ಯಾಯಯಾತ್ರೆಯ ಸಾರ್ವಜನಿಕ ಸಮಾರಂಭಗಳಲ್ಲಿ ಭಾಗಿಯಾಗಿ ಎಂದು ಬಿಹಾರದ ಕಾಂಗ್ರೆಸ್ ಘಟಕವು, ‘ಇಂಡಿಯಾ’ ಮೈತ್ರಿಕೂಟದ ಪಾಲುದಾರ ಪಕ್ಷಗಳಿಗೆ ಸೋಮವಾರ ಆಹ್ವಾನ ನೀಡಿದೆ.

ರಾಜ್ಯದ ಮುಖ್ಯಮಂತ್ರಿ ನಿತೀಶ್ ಕುಮಾರ್, ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಅವರಿಗೂ ಆಹ್ವಾನ ನೀಡಲಾಗಿದೆ ಎಂದು ಪಕ್ಷ ತಿಳಿಸಿದೆ.

ನಮ್ಮ ತಪ್ಪಾದರೂ ಏನು: ರಾಹುಲ್ ಪ್ರಶ್ನೆ

‘ನಾವು ಮಾಡಿದ ತಪ್ಪಾದರೂ ಏನು? ಬಟದ್ರವ ತಾಣ ಭೇಟಿಗೆ ನೀಡಿದ್ದ ಅನುಮತಿಯನ್ನು ಅಧಿಕಾರಿಗಳು ಭಾನುವಾರ ರದ್ದುಪಡಿಸಿದ್ದಾರೆ. ಇದಕ್ಕೆ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಅವರ ಒತ್ತಡವೇ ಕಾರಣ’ ಎಂದು ರಾಹುಲ್‌ಗಾಂಧಿ ಅವರು ಆರೋಪಿಸಿದರು.

‘ನ್ಯಾಯ ಯಾತ್ರೆ’ಯನ್ನು ತಡೆಹಿಡಿದ ಕ್ರಮವನ್ನು ಖಂಡಿಸಿ ನಾಗಾಂವ್ ಜಿಲ್ಲೆಯ ಹೈಬೋರ್ಗಾಂವ್ ಬಳಿ ಬೆಂಬಲಿಗರೊಂದಿಗೆ ಅವರು ರಸ್ತೆ ತಡೆ ನಡೆಸಿದರು. ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದ ಬೆಂಬಲಿಗರು ಶಂಕರದೇವ ವಿರಚಿತ ನಾಮವನ್ನು ಪಠಿಸಿದರು. ಕೆಲವರು.. ರಘುಪತಿ ರಾಘವ ರಾಜಾ ರಾಮ್... ಹಾಡಿದರು.

ಬೆಳಿಗ್ಗೆ 9.30ಕ್ಕೆ ಬಟದ್ರವ ತಾಣಕ್ಕೆ ಭೇಟಿ ನೀಡಿದ್ದ ಕಾಂಗ್ರೆಸ್ ಸಂಸದ ಗೌರವ್ ಗೊಗೋಯಿ ಮತ್ತು ಸ್ಥಳೀಯ ಶಾಸಕ ಶಿವಮಣಿ ಬೋರಾ ಅವರು ರಾಹುಲ್ ಗಾಂಧಿ ಪರವಾಗಿ ನಮನ ಸಲ್ಲಿಸಿದರು.

ಯಾತ್ರೆಗೆ ಅಡ್ಡಿ ಮಾಡಿದ್ದನ್ನು ಖಂಡಿಸಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ನಾವು ಪ್ರಜಾಪ್ರಭುತ್ವದ ಹೊಸ ಕಾಲಘಟ್ಟದಲ್ಲಿದ್ದೇವೆ. ಇಲ್ಲಿ ಯಾರು, ಯಾವಾಗ ದೇಗುಲಕ್ಕೆ ಹೋಗಬೇಕು ಎಂದು ಬಿಜೆಪಿ ನಿರ್ಧರಿಸಲಿದೆ’ ಎಂದಿದ್ದಾರೆ.

ಪಿಎಸ್‌ಐ ನೇಮಕ: ನ್ಯಾ. ವೀರಪ್ಪ ನೇತೃತ್ವದ ಆಯೋಗದ ವರದಿ

3 ಹಂತದ ಸಮಿತಿ ರಚಿಸಲು ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿಯಲ್ಲಿ ಅಕ್ರಮ ತಡೆಗಟ್ಟಲು, ಮುಕ್ತ ಮತ್ತು ಪಾರದರ್ಶಕವಾಗಿ ಪ್ರಕ್ರಿಯೆ ನಡೆಸಲು ಮೂರು ಹಂತದ ಮೇಲುಸ್ತುವಾರಿ ಸಮಿತಿಗಳನ್ನು ರಚಿಸುವಂತೆ ನ್ಯಾಯಮೂರ್ತಿ ಬಿ. ವೀರಪ್ಪ ನೇತೃತ್ವದ ವಿಚಾರಣಾ ಆಯೋಗ ಶಿಫಾರಸು ಮಾಡಿದೆ.

ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರದ ಅವಧಿಯಲ್ಲಿ 545 ಪಿಎಸ್‌ಐ ನೇಮಕಾತಿಗೆ ನಡೆದಿದ್ದ ಪ್ರಕ್ರಿಯೆಯಲ್ಲಿನ ಅಕ್ರಮ ಕುರಿತು ವಿಚಾರಣೆ ಪೂರ್ಣಗೊಳಿಸಿರುವ ಆಯೋಗದ ಅಧ್ಯಕ್ಷ ವೀರಪ್ಪ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸೋಮವಾರ ವರದಿ ಸಲ್ಲಿಸಿದರು.

‘ಪಿಎಸ್‌ಐ ನೇಮಕಾತಿಯಲ್ಲಿ ಯಾವುದೇ ರೀತಿಯ ಅಕ್ರಮಕ್ಕೆ ಅವಕಾಶ ಇಲ್ಲದಂತಹ ಬಿಗಿಯಾದ ವ್ಯವಸ್ಥೆಯನ್ನು ರೂಪಿಸಬೇಕು. ಇದಕ್ಕಾಗಿ ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಮೇಲುಸ್ತುವಾರಿ ಸಮಿತಿ ಮತ್ತು ಪರೀಕ್ಷಾ ಮೇಲುಸ್ತುವಾರಿಗೆ ಪ್ರತ್ಯೇಕ ಸಮಿತಿ ರಚಿಸಬೇಕು. ಪರೀಕ್ಷಾ ಉಸ್ತುವಾರಿಯನ್ನು ಈ ಸಮಿತಿಗಳಿಗೆ ವಹಿಸಬೇಕು’ ಎಂಬ ಶಿಫಾರಸು ವರದಿಯಲ್ಲಿದೆ ಎಂದು ಗೊತ್ತಾಗಿದೆ.

ಈ ಹಗರಣದ ಕುರಿತು ಆರೋಪ–ಪ್ರತ್ಯಾರೋಪ ಮಾಡಿದ್ದ ಶಾಸಕರಾದ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಎಚ್.ಡಿ. ಕುಮಾರಸ್ವಾಮಿ, ಬಸನಗೌಡ ಪಾಟೀಲ ಯತ್ನಾಳ, ಬಸವರಾಜ ದಢೇಸೂಗೂರು ಮತ್ತಿತರರಿಗೆ ಆಯೋಗವು ಸಮನ್ಸ್ ಜಾರಿಗೊಳಿಸಿತ್ತು. ಕೆಲವರಷ್ಟೇ ಆಯೋಗದ ವಿಚಾರಣೆಗೆ ಹಾಜರಾಗಿ ಹೇಳಿಕೆ ದಾಖಲಿಸಿದ್ದರು.

ಇಂತಹ ಸೂಕ್ಷ್ಮ ಪ್ರಕರಣಗಳಲ್ಲಿ ರಾಜಕಾರಣಿಗಳ ನಡವಳಿಕೆ ಕುರಿತು ಆಯೋಗವು ತನ್ನ ವರದಿಯಲ್ಲಿ ಅಭಿಪ್ರಾಯ ನೀಡಿದೆ. ಬಹಿರಂಗವಾಗಿ ಮಾಡಿದ್ದ ಆರೋಪಗಳ ಕುರಿತು ವಿಚಾರಣೆಗೆ ಹಾಜರಾಗದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದೆ. ಇಂತಹ ಪ್ರಕರಣಗಳಲ್ಲಿ ರಾಜಕಾರಣಿಗಳು ಹೇಗೆ ವರ್ತಿಸಬೇಕೆಂಬ ಸಲಹೆಗಳನ್ನೂ ವರದಿಯಲ್ಲಿ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಮಾಧ್ಯಮಗಳ ಪಾತ್ರದ ಬಗ್ಗೆಯೂ ವರದಿಯಲ್ಲಿ ಉಲ್ಲೇಖವಿದೆ. ಪಿಎಸ್‌ಐ ನೇಮಕಾತಿಯಂತಹ ಪ್ರಕರಣಗಳಲ್ಲಿ ರಾಜಕಾರಣಿಗಳು ಪ್ರಬಲ ಸಾಕ್ಷ್ಯಾಧಾರವಿಲ್ಲದೇ ನೀಡುವ ಹೇಳಿಕೆಗಳಿಗೆ ಮಾಧ್ಯಮಗಳು ಹೆಚ್ಚು ಮಹತ್ವ ನೀಡಬಾರದು. ಅಕ್ರಮಗಳ ಕುರಿತು ಆಳಕ್ಕಿಳಿದು ವರದಿ ಮಾಡುವುದಕ್ಕೆ ಪ್ರಯತ್ನಿಸಬೇಕು ಎಂಬ ಸಲಹೆಯೂ ವರದಿಯಲ್ಲಿದೆ ಎಂಬ ಮಾಹಿತಿ ಲಭ್ಯವಾಗಿದೆ.



ಪಿಎಸ್‌ಐ ನೇಮಕಾತಿ ಅಕ್ರಮ ಕುರಿತು ವಿಚಾರಣೆ ನಡೆಸಿರುವ ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಬಿ. ವೀರಪ್ಪ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸೋಮವಾರ ವರದಿ ಸಲ್ಲಿಸಿದರು. ಆಯೋಗದ ಕಚೇರಿ ಅಧೀಕ್ಷಕ ಕೃಷ್ಣಮೂರ್ತಿ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಗಳಾದ ಕೆ. ಗೋವಿಂದರಾಜ್, ನಸೀರ್ ಅಹಮದ್, ಆಯೋಗದ ಕಾರ್ಯದರ್ಶಿ ನಂಜುಂಡಸ್ವಾಮಿ, ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್‌ಕೆ. ಅತೀಕ್ ಉಪಸ್ಥಿತರಿದ್ದರು

545 ಪಿಎಸ್‌ಐ ಹುದ್ದೆಗಳ ಭರ್ತಿಗೆ ನೇಮಕಾತಿ ಪ್ರಕ್ರಿಯೆ ನಡೆಸಲು 2021ರ ಜನವರಿಯಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು. ಅಕ್ಟೋಬರ್ 3ರಂದು ರಾಜ್ಯದ 92 ಕೇಂದ್ರಗಳಲ್ಲಿ ಲಿಖಿತ ಪರೀಕ್ಷೆ ನಡೆದಿತ್ತು. ನೇಮಕಾತಿ ಪ್ರಕ್ರಿಯೆಯಲ್ಲಿ ಭಾರಿ ಅಕ್ರಮ ನಡೆದಿರುವುದು ಕೆಲವು ದಿನಗಳ ಬಳಿಕ ಬಹಿರಂಗವಾಗಿತ್ತು. ಪ್ರಕರಣದ ತನಿಖೆ ನಡೆಸಿದ್ದ ಸಿಐಡಿ ಪೊಲೀಸರು, ಪೊಲೀಸ್ ನೇಮಕಾತಿ ಮತ್ತು ತರಬೇತಿ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಅಮ್ರಿತ್ ಪಾಲ್ ಸೇರಿದಂತೆ 110 ಮಂದಿಯನ್ನು ಬಂಧಿಸಿದ್ದರು.

2023ರ ಮೇ ತಿಂಗಳಲ್ಲಿ ಅಸ್ತಿತ್ವಕ್ಕೆ ಬಂದ ಸಿದ್ದರಾಮಯ್ಯ ನೇತೃತ್ವದ ಹೊಸ ಸರ್ಕಾರವು ಪಿಎಸ್‌ಐ ನೇಮಕಾತಿ ಅಕ್ರಮದ ಕುರಿತು ವಿಚಾರಣೆಗಾಗಿ ನ್ಯಾ. ಬಿ. ವೀರಪ್ಪ ನೇತೃತ್ವದ ಆಯೋಗವನ್ನು ನೇಮಿಸಿ ಜುಲೈನಲ್ಲಿ ಆದೇಶ ಹೊರಡಿಸಿತ್ತು. 28 ಸಾಕ್ಷಿಗಳ ಹೇಳಿಕೆ ಹಾಗೂ 324 ದಾಖಲೆಗಳೊಂದಿಗೆ 471 ಪುಟಗಳ ವರದಿಯನ್ನು ಆಯೋಗವು ಮುಖ್ಯಮಂತ್ರಿಯವರಿಗೆ ಸಲ್ಲಿಸಿದೆ.

ಬಜೆಟ್: 14 ಇಲಾಖೆಗಳ ಸಭೆ ನಡೆಸಿದ ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ಆರ್ಥಿಕ ವರ್ಷದ ಬಜೆಟ್ ತಯಾರಿಯನ್ನು ಚುರುಕುಗೊಳಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಸೋಮವಾರ 14 ಇಲಾಖೆಗಳ ಅಧಿಕಾರಿಗಳ ಜತೆ ಸಭೆ ನಡೆಸಿದರು.

ವೈದ್ಯಕೀಯ ಶಿಕ್ಷಣ, ಕೌಶಲಾಭಿವೃದ್ಧಿ, ಸಮಾಜ ಕಲ್ಯಾಣ, ಪರಿಶಿಷ್ಟ ಪಂಗಡಗಳ ಕಲ್ಯಾಣ, ಕ್ರೀಡೆ ಮತ್ತು ಯುವ ಸಬಲೀಕರಣ, ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ, ಕೃಷಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಸತಿ ಇಲಾಖೆಗಳೊಂದಿಗೆ ಸರಣಿ ಸಭೆ ನಡೆಸಿದ ಮುಖ್ಯಮಂತ್ರಿ, ಬಜೆಟ್ ಬೇಡಿಕೆಗಳ ಪ್ರಸ್ತಾವಗಳನ್ನು ಸ್ವೀಕರಿಸಿದರು.

ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್ ಅವರ ನೇತೃತ್ವದಲ್ಲಿ ಸಿದ್ದರಾಮಯ್ಯ ಅವರನ್ನು ಭೇಟಿಮಾಡಿದ ಮುಸ್ಲಿಂ ಜನಪ್ರತಿನಿಧಿಗಳ ನಿಯೋಗ, ಅಲ್ಪಸಂಖ್ಯಾತರಿಗೆ ಬಜೆಟ್‌ನಲ್ಲಿ ಹೆಚ್ಚು ಅನುದಾನ ಒದಗಿಸುವಂತೆ ಮನವಿ ಸಲ್ಲಿಸಿತು.

ಅನರ್ಹತೆ ಪ್ರಕರಣ: ಶಿಂದೆಗೆ ‘ಸುಪ್ರೀಂ’ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ (ಯುಬಿಟಿ) ಬಣವು ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್, ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಹಾಗೂ ಅವರ ಬೆಂಬಲಿಗ ಶಾಸಕರಿಗೆ ಸೋಮವಾರ ನೋಟಿಸ್ ಜಾರಿ ಮಾಡಿದೆ.

ಶಿಂದೆ ನೇತೃತ್ವದ ಶಿವಸೇನಾ ಪಕ್ಷವೇ ‘ನಿಜವಾದ ಶಿವಸೇನಾ’ ಎಂದು ಮಹಾರಾಷ್ಟ್ರ ವಿಧಾನಸಭೆಯ ಸ್ಪೀಕರ್ ರಾಹುಲ್ ನಾರ್ವೇಕರ್ ನೀಡಿರುವ ಆದೇಶವನ್ನು ಪ್ರಶ್ನಿಸಿ ಉದ್ಧವ್ ಠಾಕ್ರೆ ಬಣ ‘ಸುಪ್ರೀಂ’ ಮೆಟ್ಟಿಲೇರಿತ್ತು.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರನ್ನೊಳಗೊಂಡ ಪೀಠ ಅರ್ಜಿಯ ವಿಚಾರಣೆ ನಡೆಸಿತು.

ಠಾಕ್ರೆ ಬಣದ ಪರವಾಗಿ ಹಾಜರಾದ ಹಿರಿಯ ವಕೀಲರಾದ ಕಪಿಲ್ ಸಿಬಲ್ ಮತ್ತು ಅಭಿಷೇಕ್ ಸಿಂಘ್ವಿ ಅವರ ವಾದವನ್ನು ದಾಖಲಿಸಿಕೊಂಡ ಪೀಠ, ಎರಡು ವಾರಗಳಲ್ಲಿ ಪ್ರತಿಕ್ರಿಯಿಸುವಂತೆ ಮುಖ್ಯಮಂತ್ರಿ ಹಾಗೂ ಬೆಂಬಲಿಗ ಶಾಸಕರಿಗೆ ನೋಟಿಸ್ ಜಾರಿಗೊಳಿಸಿತು. ಶಿಂದೆ ಸೇರಿದಂತೆ ಅವರ ಬಣದ 16 ಶಾಸಕರನ್ನು ಅನರ್ಹಗೊಳಿಸಬೇಕು ಎಂಬ ಮನವಿಯನ್ನು ಸ್ಪೀಕರ್ ನಾರ್ವೇಕರ್ ಅವರು ತಳ್ಳಿಹಾಕಿದ್ದರು. ಅದೇ ರೀತಿ, ಠಾಕ್ರೆ ಬಣದ ಶಾಸಕರನ್ನು ಅನರ್ಹಗೊಳಿಸಬೇಕು ಎಂದು ಶಿಂದೆ ಬಣ ಇರಿಸಿದ್ದ ಕೋರಿಕೆಯನ್ನು ಕೂಡಾ ಅವರು ಪುರಸ್ಕರಿಸಿರಲಿಲ್ಲ. ಇದರಿಂದ ಎರಡೂ ಬಣಗಳು ಕೋರ್ಟ್ ಮೆಟ್ಟಿಲೇರಿದ್ದವು.

ಅರ್ಜಿ ಹಿಂಪಡೆದ ಅಮಿತ್ ಚಕ್ರವರ್ತಿ

ನವದೆಹಲಿ (ಪಿಟಿಐ): ‘ನ್ಯೂಸ್‌ಕ್ಲಿಕ್’ ಸುದ್ದಿಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಅಮಿತ್ ಚಕ್ರವರ್ತಿ ಅವರು ಭಯೋತ್ಪಾದನೆ ನಿಗ್ರಹ ಮತ್ತು ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯಡಿ (ಯುಎಪಿಎ) ತಮ್ಮನ್ನು ಬಂಧಿಸಿರುವುದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿದ್ದ ಅರ್ಜಿಯನ್ನು ಸೋಮವಾರ ಹಿಂಪಡೆದಿದ್ದಾರೆ.

ಚಕ್ರವರ್ತಿ ಮತ್ತು ನ್ಯೂಸ್‌ಕ್ಲಿಕ್ ಸಂಸ್ಥಾಪಕ ಪ್ರಬೀರ್ ಪುರಕಾಯಸ್ಥ ಅವರು ತಮ್ಮ ಬಂಧನವನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ನೇತೃತ್ವದ ನ್ಯಾಯಪೀಠ ವಿಚಾರಣೆ ನಡೆಸಿತು. ಈ ವೇಳೆ, ಚಕ್ರವರ್ತಿ ಅವರ ಪರ ಹಾಜರಿದ್ದ ವಕೀಲರು, ಅರ್ಜಿ ಹಿಂಪಡೆಯಲು ಅನುಮತಿ ನೀಡಬೇಕೆಂದು ಪೀಠವನ್ನು ಕೋರಿದರು. ಬಳಿಕ ನ್ಯಾಯಾಲಯವು ಅನುಮತಿ ನೀಡಿತು.

ಬಿಲ್ಕಿಸ್ ಪ್ರಕರಣ: ಶರಣಾದ 11 ಅಪರಾಧಿಗಳು

ಅಹಮದಾಬಾದ್: ಬಿಲ್ಕಿಸ್ ಬಾನು ಸಾಮೂಹಿಕ ಅತ್ಯಾಚಾರ ಪ್ರಕರಣದ ಎಲ್ಲಾ 11 ಅಪರಾಧಿಗಳು ಸುಪ್ರೀಂ ಕೋರ್ಟ್ ವಿಧಿಸಿದ್ದ ಗಡುವು ಮುಗಿಯುವ ಕೆಲವೇ ಕ್ಷಣಗಳ ಮುನ್ನ, ಭಾನುವಾರ ರಾತ್ರಿ 11:30ಕ್ಕೆ ಗೋಧ್ರಾ ಉಪ ಕಾರಾಗೃಹದ ಅಧಿಕಾರಿಗಳ ಮುಂದೆ ಶರಣಾದರು.

ಶರಣಾಗಲು ಹೆಚ್ಚುವರಿ ಕಾಲಾವಕಾಶ ನೀಡಬೇಕು ಎಂದು ಅಪರಾಧಿಗಳು ಸಲ್ಲಿಸಿದ್ದ ಮನವಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ತಿರಸ್ಕರಿಸಿತ್ತು.

‘ಅಧಿಸೂಚನೆ: ನಿರ್ದೇಶನ ನೀಡಲಾಗದು’

ನವದೆಹಲಿ (ಪಿಟಿಐ): ಸಂಸತ್ ಅಂಗೀಕರಿಸಿರುವ ಮಸೂದೆಗೆ ಕಾಯ್ದೆ ರೂಪ ನೀಡಿ ಅಧಿಸೂಚನೆ ಹೊರಡಿಸುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಹಣಕಾಸು ನಷ್ಟ ಹಾಗೂ ದಿವಾಳಿ ಸಂಹಿತೆ ಕುರಿತ ಕಾಯ್ದೆ ಜಾರಿಗೆ ಅಧಿಸೂಚನೆ ಹೊರಡಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ಕೋರಿ ಸೀಮಾ ಬಿ. ಖಯ್ಯುಮ್ ಎಂಬುವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತ ಅರ್ಜಿಯನ್ನು (ಪಿಐಎಲ್) ವಜಾಗೊಳಿಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರನ್ನೊಳಗೊಂಡ ಪೀಠವು ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಸಂಕ್ಷಿಪ್ತ ಸುದ್ದಿ

ಪಾಕ್ ಚುನಾವಣೆ: ಅಂತಿಮ ಕಣದಲ್ಲಿ 17,816 ಅಭ್ಯರ್ಥಿಗಳು

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದಲ್ಲಿ ಫೆಬ್ರುವರಿ 8ರಂದು ನಡೆಯಲಿರುವ ಸಾರ್ವತ್ರಿಕ ಚುನಾವಣೆಯಲ್ಲಿ ಸ್ಪರ್ಧಿಸಿರುವ 17,816 ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಪಾಕಿಸ್ತಾನ ಚುನಾವಣಾ ಆಯೋಗ ಬಿಡುಗಡೆ ಮಾಡಿದೆ.

ರಾವಲ್ಪಿಂಡಿಯ ಜೈಲಿನಲ್ಲಿರುವ ಪಾಕ್ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಹೆಸರು ಈ ಅಭ್ಯರ್ಥಿಗಳ ಪಟ್ಟಿಯಲ್ಲಿ ಇಲ್ಲ. ಖಾನ್ ಮತ್ತು ಅವರ ಪಾಕಿಸ್ತಾನ್ ತೆಹ್ರೀಕ್ ಎ ಇನ್ಸಾಫ್ (ಪಿಟಿಐ) ಪಕ್ಷದ ಹಲವು ನಾಯಕರ ಉಮೇದುವಾರಿಕೆಯನ್ನು ಆಯೋಗ ತಿರಸ್ಕರಿಸಿದೆ.

ಪಿಟಿಐ ಪಕ್ಷವು ತನ್ನ ‘ಕ್ರಿಕೆಟ್ ಬ್ಯಾಟ್’ ಚಿಹ್ನೆಯನ್ನು ಕಳೆದುಕೊಂಡ ಬಳಿಕ, ಅದು ತನ್ನ ಅಭ್ಯರ್ಥಿಗಳನ್ನು ಸ್ವತಂತ್ರವಾಗಿ ಕಣಕ್ಕಿಳಿಸಿದ್ದು, ಪ್ರತಿ ಅಭ್ಯರ್ಥಿಗೂ ವಿಭಿನ್ನ ಚಿಹ್ನೆಗಳನ್ನು ನೀಡಿದೆ.

ಈ ಪೈಕಿ 11,785 ಅಭ್ಯರ್ಥಿಗಳು ಸ್ವತಂತ್ರವಾಗಿ ಸ್ಪರ್ಧಿಸಿದ್ದರೆ, 6,031 ಅಭ್ಯರ್ಥಿಗಳು ವಿವಿಧ ರಾಜಕೀಯ ಪಕ್ಷಗಳ ಚಿಹ್ನೆಗಳಡಿ ಸ್ಪರ್ಧಿಸಿದ್ದಾರೆ.

ಪಾಕ್ ಸೇನೆಯಿಂದ ಏಳು ಉಗ್ರರ ಹತ್ಯೆ

ಕ್ವೆಟ್ಟಾ (ಎಪಿ): ಪಾಕಿಸ್ತಾನದ ಭದ್ರತಾ ಪಡೆಗಳು ಅಫ್ಗಾನಿಸ್ತಾನದ ಗಡಿ ಸಮೀಪ ಏಳು ಉಗ್ರರನ್ನು ಹತ್ಯೆ ಮಾಡಿವೆ ಎಂದು ಸೇನೆ ಸೋಮವಾರ ತಿಳಿಸಿದೆ.

ಗುಪ್ತಚರ ಮಾಹಿತಿ ಆಧರಿಸಿ ನೈರುತ್ಯ ಬಲೂಚಿಸ್ತಾನ ಪ್ರಾಂತ್ಯದ ಝೋಬ್ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಕಾರ್ಯಾಚರಣೆ ನಡೆಸಿದವು. ಈ ವೇಳೆ ನಡೆದ ಗುಂಡಿನ ಚಕಮಕಿಯಲ್ಲಿ ಏಳು ಉಗ್ರರು ಹತರಾದರು. ಅವರ ಬಳಿಯಿದ್ದ ಯುದ್ಧ ಸಾಮಗ್ರಿಗಳನ್ನು ವಶಕ್ಕೆ ಪಡೆದಿರುವುದಾಗಿ ಅದು ಹೇಳಿದೆ.

ಪಾಕಿಸ್ತಾನ–ಇರಾನ್ ಸಂಬಂಧ ಸುಧಾರಣೆಗೆ ಚೀನಾದ ಮಧ್ಯಸ್ಥಿಕೆ

ಬೀಜಿಂಗ್ (ಪಿಟಿಐ): ಕಳೆದ ವಾರವಷ್ಟೇ ಪರಸ್ಪರ ವೈಮಾನಿಕ ದಾಳಿ ನಡೆಸಿ, ಮನಸ್ತಾಪ ಮಾಡಿಕೊಂಡಿರುವ ಇರಾನ್ ಮತ್ತು ಪಾಕಿಸ್ತಾನದ ನಡುವಿನ ಸಂಬಂಧ ಸುಧಾರಣೆಗಾಗಿ ಎರಡೂ ದೇಶಗಳೊಂದಿಗೆ ನಿಕಟ ಸಂಪರ್ಕದಲ್ಲಿರುವುದಾಗಿ ಚೀನಾ ಸೋಮವಾರ ತಿಳಿಸಿದೆ.

ಈ ಎರಡೂ ದೇಶಗಳ ವಿಷಯದಲ್ಲಿ ಮಧ್ಯಸ್ಥಿಕೆ ವಹಿಸಲು ಚೀನಾ ವಿದೇಶಾಂಗ ಸಚಿವ ಸುನ್ ವೀಲ್‌ಡಾಂಗ್ ಅವರು ಪಾಕಿಸ್ತಾನಕ್ಕೆ ಭೇಟಿ ನೀಡಿದ್ದಾರೆ ಎಂಬ ವರದಿಗಳ ನಡುವೆಯೇ, ಚೀನಾ ವಿದೇಶಾಂಗ ಸಚಿವಾಲಯದ ಈ ಹೇಳಿಕೆ ಹೊರಬಿದ್ದಿದೆ.

ಪಾಕಿಸ್ತಾನದ ಬಲೂಚಿಸ್ತಾನ್ ಪ್ರಾಂತ್ಯದಲ್ಲಿರುವ ಸುನ್ನಿ ಬಲೂಚ್ ಉಗ್ರ ಸಂಘಟನೆಯಾದ ಜೈಷ್–ಅಲ್–ಅದ್ಲ್‌ಗೆ ಸಂಬಂಧಿಸಿದ ನೆಲೆಗಳನ್ನು ಗುರಿಯಾಗಿಸಿ ಇರಾನ್ ಕಳೆದ ಮಂಗಳವಾರ ಕ್ಷಿಪಣಿ ಮತ್ತು ಡ್ರೋನ್ ದಾಳಿ ನಡೆಸಿತ್ತು. ಇದಕ್ಕೆ ಪ್ರತಿಯಾಗಿ ಪಾಕಿಸ್ತಾನವು ಸೀಸ್ತಾನ್–ಬಲೂಚಿಸ್ತಾನದ ಪ್ರಾಂತ್ಯದಲ್ಲಿ ಗುರುವಾರ ಸೇನಾ ಕಾರ್ಯಾಚರಣೆ ನಡೆಸಿ, 9 ಮಂದಿಯನ್ನು ಕೊಂದುಹಾಕಿತ್ತು. ಇದರಿಂದ ಉಭಯ ದೇಶಗಳ ನಡುವಿನ ಸಂಬಂಧ ಹಳಸಿತ್ತು.

ಪಾಕಿಸ್ತಾನವು ಚೀನಾಗೆ ಆತ್ಮೀಯ ರಾಷ್ಟ್ರವಾಗಿದೆ. ಅಲ್ಲದೆ, ತನ್ನ ಪ್ರಭಾವವನ್ನು ಪಶ್ಚಿಮ ಏಷ್ಯಾ ಭಾಗಕ್ಕೂ ವಿಸ್ತರಿಸಿಕೊಳ್ಳಲು ಯತ್ನಿಸುತ್ತಿರುವ ಚೀನಾಗೆ ಇರಾನ್ ಅಗತ್ಯವೂ ಇದೆ. ಜೊತೆಗೆ ಇರಾನ್‌ನಿಂದ ಗಣನೀಯ ಪ್ರಮಾಣದ ತೈಲವನ್ನು ಆಮದು ಮಾಡಿಕೊಳ್ಳುತ್ತದೆ. ಹೀಗಾಗಿ ಈ ಎರಡೂ ದೇಶಗಳೊಂದಿಗೆ ಉತ್ತಮ ಬಾಂಧವ್ಯ ಸಾಧಿಸುವುದು ಚೀನಾಕ್ಕೆ ಅಗತ್ಯವಾಗಿದೆ.

ಈ ಕುರಿತು ಪಾಕಿಸ್ತಾನದ ಮಾಧ್ಯಮ ಪ್ರತಿನಿಧಿ ಸೋಮವಾರ ಕೇಳಿದ ಪ್ರಶ್ನೆಗೆ ಉತ್ತರಿಸಿದ ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ವಾಂಗ್ ವೆನ್‌ಬಿನ್, ‘ಇರಾನ್ ಮತ್ತು ಪಾಕಿಸ್ತಾನದ ಜೊತೆಗೆ ಚೀನಾ ನಿಕಟವಾದ ಸಂಪರ್ಕ ಹೊಂದಿದೆ. ಈ ಎರಡೂ ಸ್ನೇಹಪರ ರಾಷ್ಟ್ರಗಳಾಗಿದ್ದು, ಚೀನಾದ ಜೊತೆಗೆ ಉತ್ತಮ ಬಾಂಧವ್ಯ ಹೊಂದಿವೆ’ ಎಂದು ಹೇಳಿದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ (ಅಡಿಕೆ)		ಪುತ್ತೂರು		ಶಿವಮೊಗ್ಗ	
ಕೋಕ	18000-28500	ಕೋಕ	11000-25000	ಬೆಟ್ಟೆ	40099-54699
ಹೊಸತು	28500-36500	ಹೊಸತು	27500-36500	ಗೊರಬಲು	16509-36969
ಹಳತು	42000-44500			ರಾಶಿ	33300-49099
				ಸರಕು	72440-72440

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹7500-10400
ಪುತ್ತೂರು	₹5500-9200
ತುರುವೇಕೆರೆ	₹9600-9600

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹565
12 ಕ್ಕೆ	₹75
ಮೈಸೂರು	
100ಕ್ಕೆ	₹567

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ನೆನ್ನೆಯ ದರ)

ಶೇಂಗಾ (ರಿಫೈನ್ಡ್)	₹1550 (1550)
ಸೋಯಾ (ರಿಫೈನ್ಡ್)	₹905 (905)
ಸೂರ್ಯಕಾಂತಿ (ರಿಫೈನ್ಡ್)	₹920 (920)
ಪಾಮೋಲಿನ್	₹848 (850)

ಈರುಳ್ಳಿ



(ಕ್ವಿಂಟಲ್‌ಗೆ)

ದಪ್ಪ	₹1600-2000
ಮಧ್ಯಮ	₹1200-1600
ಸಣ್ಣ	₹600-1200

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹157
ಆರ್‌ಎಸ್‌ಎಸ್-5	₹151
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹135

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹255-470
ದ್ವಿತಳಿ (ಬಿ.ವಿ)	₹225-568

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹14300
ಎಸಿ	₹7900
ಆರ್‌ಪಿ	₹12000
ಆರ್‌ಸಿ	₹7240

ಏರ್ ಇಂಡಿಯಾದ ಏರ್‌ಬಸ್ ಸೇವೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏರ್ ಇಂಡಿಯಾ ಕಂಪನಿಯ ಏರ್‌ಬಸ್ ಎ350–900 ವಿಮಾನ ಸೇವೆಯು ಬೆಂಗಳೂರು–ಮುಂಬೈ ನಡುವೆ ಸೋಮವಾರ ಆರಂಭಗೊಂಡಿತು.

ಇಲ್ಲಿನ ಕೆಂಪೇಗೌಡ ಅಂತರ-ರಾಷ್ಟ್ರೀಯ ವಿಮಾನ ನಿಲ್ದಾಣದಿಂದ ನಿಗದಿತ ಸಮಯಕ್ಕೆ ವಿಮಾನವು (ಫ್ಲೈಟ್ ಎಐ 589) ಮುಂಬೈಗೆ ಹೊರಟಿತು. ವಿಮಾನದ ಆಸನಗಳು ಬಹುತೇಕ ಭರ್ತಿಯಾಗಿದ್ದವು.

ಆರಂಭದಲ್ಲಿ ದೇಶೀಯ ಮಾರ್ಗಗಳಲ್ಲಿ ಏರ್‌ಬಸ್ ಸೇವೆ ಲಭ್ಯವಿದ್ದು ಬೆಂಗಳೂರು, ಚೆನ್ನೈ, ದೆಹಲಿ, ಹೈದರಾಬಾದ್ ಮತ್ತು ಮುಂಬೈಗೆ ತೆರಳುವ ಪ್ರಯಾಣಿಕರಿಗೆ ದೊರೆಯಲಿದೆ.

ಮೂರು ವರ್ಗದ ಕ್ಯಾಬಿನ್ ಹೊಂದಿರುವ ಏರ್‌ಬಸ್ ಒಟ್ಟು 316 ಆಸನಗಳ ಸೌಲಭ್ಯ ಹೊಂದಿದೆ. 28 ಪ್ರೈವೆಟ್ ಬ್ಯುಸಿನೆಸ್ ಕ್ಲಾಸ್, 24 ಪ್ರೀಮಿಯಂ ಎಕಾನಮಿ ಮತ್ತು 264 ಎಕಾನಮಿ ದರ್ಜೆಯ ಸೀಟುಗಳಿವೆ.

ವಿಮಾನವು ಮಂಗಳವಾರ ಹೊರತುಪಡಿಸಿ ವಾರದ ಪ್ರತಿದಿನವೂ ಕಾರ್ಯ ನಿರ್ವಹಿಸುತ್ತದೆ. ಬೆಂಗಳೂರಿನಿಂದ ಬೆಳಿಗ್ಗೆ 7.05 ಗಂಟೆಗೆ ನಿರ್ಗಮಿಸಲಿದ್ದು, ಮುಂಬೈಗೆ ಬೆಳಿಗ್ಗೆ 8.50 ಗಂಟೆಗೆ ತಲುಪಲಿದೆ ಎಂದು ಕಂಪನಿ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

22-1-2024

ಜಾವಾ 70/80(ಹೊಸ)	12000-12100
ಜಾವಾ 80/90(ಹೊಸ)	11400-11500
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1560)
ಒಂದು ವಾರದ ಡೆಲಿವರಿ	1555 (1555)
ಸೋಯಾ ಕಚ್ಚಾ	860 (860)
ಪಾಮ್ ವಾರದ ಡೆಲಿವರಿ	850 (852)
ಸೂರ್ಯಕಾಂತಿ ಎಣ್ಣೆ ಕಚ್ಚಾ	875 (875)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

₹62,100 (62,100)

ಬೆಳ್ಳಿ ಕೆ.ಜಿ **₹70,500** (70,850)

ಆವರಣದಲ್ಲಿ ಶನಿವಾರದ ಧಾರಣೆ

ಕರ್ನಾಟಕದ ಸಣ್ಣ ಉದ್ದಿಮೆದಾರರ ಜತೆ ನಿಯೋಗ ಮಾತುಕತೆ: ಸೂಕ್ತ ನೆರವಿನ ಭರವಸೆ

‘ತಾಂಜಾನಿಯಾದಲ್ಲಿ ಹೂಡಿಕೆ ಮಾಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಜೊತೆಗಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ ಅನುಗುಣವಾಗಿ ತಾಂಜಾನಿಯಾದ ಕೃಷಿ, ಆರೋಗ್ಯ, ಪ್ರವಾಸೋದ್ಯಮ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಬಂಡವಾಳ ಹೂಡಿಕೆ ಮಾಡುವಂತೆ ಕರ್ನಾಟಕದ ಸಣ್ಣ ಉದ್ದಿಮೆದಾರರಿಗೆ ತಾಂಜಾನಿಯಾ ಸರ್ಕಾರವು ಮುಕ್ತ ಆಹ್ವಾನ ನೀಡಿದೆ.


ನಗರದ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) ಕಚೇರಿಯಲ್ಲಿ ಸೋಮವಾರ ತಾಂಜಾನಿಯಾ ದೇಶದ ಅಧ್ಯಕ್ಷರ ಕಚೇರಿಯ ಹೂಡಿಕೆ ಕೇಂದ್ರದ ನಿಯೋಗವು, ಈ ಕುರಿತು ಉದ್ದಿಮೆದಾರರನ್ನು ಭೇಟಿ ಮಾಡಿತು. ವಾಣಿಜ್ಯೋದ್ಯಮ ಚಟುವಟಿಕೆ ನಡೆಸಲು ಅಗತ್ಯವಿರುವ ಅವಕಾಶಗಳ ಬಗ್ಗೆ ಮನವರಿಕೆ ಮಾಡಿಕೊಟ್ಟಿತು.

ಗಣಿ, ಕೈಗಾರಿಕೆ, ಕೃಷಿ ಸಂಸ್ಕರಣೆ, ಇಂಧನ, ಮೀನುಗಾರಿಕೆ, ಟೆಕ್ಸ್‌ಟೈಲ್ ಸೇರಿದಂತೆ ರಿಯಲ್ ಎಸ್ಟೇಟ್ ವಲಯದಲ್ಲೂ ಹೂಡಿಕೆ ಮಾಡಬಹುದು ಎಂದು ನಿಯೋಗವು ವಿವರಿಸಿತು.

ಸಕ್ಕರೆ, ಸಿಹಿ ತಿನಿಸು, ಔಷಧೀಯ ಉತ್ಪನ್ನ ಸೇರಿದಂತೆ ಹಲವು ಸರಕುಗಳು ಭಾರತದಿಂದ ತಾಂಜಾನಿಯಾಕ್ಕೆ ರಫ್ತಾಗುತ್ತಿವೆ. ಸ್ಥಳೀಯ ಮಟ್ಟದಲ್ಲಿಯೇ ಇವುಗಳ ಉತ್ಪಾದನೆಗೆ ಉತ್ತೇಜನ ನೀಡುವುದು ಸರ್ಕಾರದ ಗುರಿಯಾಗಿದೆ. ಸರಕು ಸಾಗಣೆಗೆ ಸಮಸ್ಯೆಯಿಲ್ಲ. ರೈಲ್ವೆ ಸಂಪರ್ಕವೂ ಉತ್ತಮವಾಗಿದೆ. ಕಾರ್ಮಿಕರ ಕೊರತೆ ಇಲ್ಲ. ಜೊತೆಗೆ, ಹೂಡಿಕೆಸ್ನೇಹಿ ವಾತಾವರಣವಿದೆ ಎಂದು ಹೇಳಿತು.

ಕಳೆದ ವರ್ಷದ ಅಕ್ಟೋಬರ್‌ನಲ್ಲಿ ತಾಂಜಾನಿಯಾ ಅಧ್ಯಕ್ಷೆ ಸಾಮಿಯಾ ಸುಲುಹು ಹಸನ್ ಭಾರತಕ್ಕೆ ಭೇಟಿ ನೀಡಿದ್ದರು. ಈ ವೇಳೆ ನಡೆದ ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಒಪ್ಪಂದದ ಅನ್ವಯ ಹೂಡಿಕೆಗೆ ಆಹ್ವಾನ ನೀಡಲಾಗುತ್ತಿದೆ ಎಂದು ತಿಳಿಸಿತು.

ತಾಂಜಾನಿಯಾ ಹೂಡಿಕೆ ಕೇಂದ್ರದ ಮ್ಯಾನೇಜರ್‌ಗಳಾದ ಲತೀಫಾ, ಬೈಥು, ಕಂಪನಿಯ ಪ್ರತಿನಿಧಿಗಳಾದ ಟ್ಯಾಂಬೊ, ಎರಿಕ್ ಈ ನಿಯೋಗದಲ್ಲಿದ್ದರು. ಕಾಸಿಯಾ ಅಧ್ಯಕ್ಷ ಸಿ.ಎ. ಶಶಿಧರ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ಎಸ್. ನಾಗರಾಜು, ಉಪಾಧ್ಯಕ್ಷ ಎಂ.ಜಿ ರಾಜಗೋಪಾಲ್ ಹಾಜರಿದ್ದರು.



ಬೆಂಗಳೂರಿನಲ್ಲಿ ಸೋಮವಾರ ತಾಂಜಾನಿಯಾ ಹೂಡಿಕೆ ಕೇಂದ್ರದ ಮ್ಯಾನೇಜರ್ ಲತೀಫಾ ಅವರನ್ನು ಕಾಸಿಯಾ ಪ್ರಧಾನ ಕಾರ್ಯದರ್ಶಿ ಎಸ್ ನಾಗರಾಜು ಸ್ವಾಗತಿಸಿದರು. ಕಾಸಿಯಾ ಅಧ್ಯಕ್ಷ ಸಿ.ಎ. ಶಶಿಧರ ಶೆಟ್ಟಿ, ತಾಂಜಾನಿಯಾ ಹೂಡಿಕೆ ಕೇಂದ್ರದ ಮ್ಯಾನೇಜರ್ ಬೈಥು, ಉಪಾಧ್ಯಕ್ಷ ಎಂ.ಜಿ. ರಾಜಗೋಪಾಲ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

98 ವರ್ಷ ಭೂಮಿ ಗುತ್ತಿಗೆ

‘2021ರಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 7ರಷ್ಟಿದೆ. ಹಣದುಬ್ಬರ ಪ್ರಮಾಣವು ಶೇ 3.79ರಷ್ಟಿದೆ. ಆಂತರಿಕ ಕಲಹಗಳಿಲ್ಲ. ರಾಜಕೀಯ ಸ್ಥಿರತೆ ಇದೆ’ ಎಂದು ತಾಂಜಾನಿಯಾ ಹೂಡಿಕೆ ಕೇಂದ್ರದ ಮ್ಯಾನೇಜರ್ ಲತೀಫಾ ಉದ್ದಿಮೆದಾರರಿಗೆ ವಿವರಿಸಿದರು.

ಭೂಸ್ವಾಧೀನ ಪ್ರಕ್ರಿಯೆಯಲ್ಲೂ ಸಮಸ್ಯೆಯಿಲ್ಲ. ಹೂಡಿಕೆದಾರರಿಗೆ 98 ವರ್ಷಗಳ ಕಾಲ ಭೂಮಿಯನ್ನು ಗುತ್ತಿಗೆ ನೀಡುವ ಸಂಬಂಧ ಹೂಡಿಕೆ ನೀತಿ ರೂಪಿಸಲಾಗಿದೆ ಎಂದರು.

ಹೂಡಿಕೆಗೆ ಸಂಬಂಧಿಸಿದಂತೆ ‘ಎ’, ‘ಬಿ’ ಮತ್ತು ‘ಸಿ’ ವಿಭಾಗಗಳನ್ನು ರೂಪಿಸಲಾಗಿದೆ. ಕ್ರಮವಾಗಿ ₹4 ಕೋಟಿ, ₹400 ಕೋಟಿ ಹಾಗೂ ₹2,500 ಕೋಟಿ ಹೂಡಿಕೆ ಮಾಡಬಹುದು. ‘ಬಿ’ ಮತ್ತು ‘ಸಿ’ ವರ್ಗದಲ್ಲಿ ಹೂಡಿಕೆ ಮಾಡುವವರಿಗೆ ಸರ್ಕಾರದಿಂದ ತೆರಿಗೆ ವಿನಾಯಿತಿ ಸೇರಿದಂತೆ ಹಲವು ಸೌಲಭ್ಯಗಳು ದೊರೆಯಲಿವೆ ಎಂದು ಹೇಳಿದರು.

ವೀಳ್ಯದೆಲೆ ಧಾರಣೆ ಕುಸಿತ

ತಮಿಳುನಾಡು, ತೆಲಂಗಾಣ, ಆಂಧ್ರದಿಂದ ಹೆಚ್ಚಿದ ಪೂರೈಕೆ

• ಬಸವರಾಜ ಹವಾಲ್ದಾರ

ಬಾಗಲಕೋಟೆ: ವೀಳ್ಯದೆಲೆ ಧಾರಣೆ ಕುಸಿತವು ಬೆಳೆಗಾರರನ್ನು ಸಂಕಷ್ಟಕ್ಕೀಡು ಮಾಡಿದೆ.

ಕಳೆದ ವರ್ಷದ ಜೂನ್, ಜುಲೈ ತಿಂಗಳಿನಲ್ಲಿ ಪ್ರತಿ ಡಾಗ್ (12 ಸಾವಿರ ಎಲೆ) ₹7 ಸಾವಿರದಿಂದ ₹8 ಸಾವಿರಕ್ಕೆ ಮಾರಾಟ ಆಗುತ್ತಿತ್ತು. ಈಗ ದರವು ₹1,500ಕ್ಕೆ ಕುಸಿದಿದೆ.

ಜಿಲ್ಲೆಯ ಜಗದಾಳ, ನಾವಲಗಿ ಭಾಗದಲ್ಲಿ ಬೆಳೆಯುವ ವೀಳ್ಯದೆಲೆಯನ್ನು ಮುಂಬೈ, ಪುಣೆ, ಹೈದರಾಬಾದ್, ಬೆಂಗಳೂರು, ಸತಾರಾ, ಬೆಳಗಾವಿ ಸೇರಿದಂತೆ ಹಲವು ಸ್ಥಳಗಳಿಗೆ ಪೂರೈಸಲಾಗುತ್ತದೆ. ಆದರೆ, ಈ ಬಾರಿ ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶದಲ್ಲಿ ವೀಳ್ಯದೆಲೆಯ ಉತ್ತಮ ಫಸಲು ಬಂದಿದೆ. ಅಲ್ಲಿಂದ ಹೆಚ್ಚಿನ ಪ್ರಮಾಣದಲ್ಲಿ ಪೂರೈಕೆಯಾಗುತ್ತಿರುವ ಕಾರಣ ಬೆಲೆ ಕುಸಿದಿದೆ ಎಂದು ಸ್ಥಳೀಯ ವ್ಯಾಪಾರಿಗಳು ಹೇಳುತ್ತಾರೆ.

‘ಒಂದು ಎಕರೆ ಪ್ರದೇಶದಲ್ಲಿ ವೀಳ್ಯದೆಲೆ ಬೆಳೆಯಲು ವರ್ಷಕ್ಕೆ ₹3 ಲಕ್ಷ ಖರ್ಚಾಗುತ್ತದೆ. ತಿಪ್ಪೆ ಗೊಬ್ಬರ ಹೆಚ್ಚು ಹಾಕಬೇಕು. ಸದ್ಯ ಸಣ್ಣ ಟ್ರಕ್‌ಗೆ ₹7 ಸಾವಿರ ಇದ್ದರೆ, ಕುರಿ ಗೊಬ್ಬರಕ್ಕೆ ₹18 ಸಾವಿರ ದರ ಇದೆ. ಪ್ರತಿ ವರ್ಷ ಹೊಸ ಮಣ್ಣು ಹಾಕಬೇಕು. ಇದಕ್ಕಾಗಿ ಕೂಲಿಯಾಳು ಬೇಕಿರುವ ಕಾರಣ ಖರ್ಚು ಹೆಚ್ಚಿದೆ’ ಎಂದು ಜಗದಾಳದ ರೈತ ಸದಾಶಿವ ಮಲ್ಲಪ್ಪ ಬಂಗಿ ತಿಳಿಸಿದರು.

‘ವರ್ಷಕ್ಕೆ ಒಂದು ಎಕರೆಯಲ್ಲಿ 120ರಿಂದ 150 ಡಾಗ್ ಫಸಲು ಬರುತ್ತದೆ. ಮಳೆ ಕಡಿಮೆಯಾಗಿದ್ದರಿಂದ ಈ ಬಾರಿ ಅಷ್ಟೊಂದು ಫಸಲು ಬಂದಿಲ್ಲ. ಜೊತೆಗೆ, ಧಾರಣೆಯೂ ಕುಸಿದಿರುವುದು ಸಂಕಷ್ಟಕ್ಕೆ ದೂಡಿದೆ’ ಎಂದರು.



ಬಾಗಲಕೋಟೆ ಜಿಲ್ಲೆಯ ಜಗದಾಳದ ರೈತರೊಬ್ಬರ ವೀಳ್ಯದೆಲೆ ತೋಟ

ಬೆಲೆ ಕುಸಿದಿದ್ದರೂ ಕಟಾವು ಮಾಡಲೇಬೇಕು. ಇಲ್ಲದಿದ್ದರೆ, ಬಳ್ಳಿಯಲ್ಲೇ ವೀಳ್ಯದೆಲೆಗಳು ಕೊಳೆಯುತ್ತವೆ. ನಷ್ಟವಾದರೂ ಮಾರಬೇಕು

ಸದಾಶಿವ ಬಂಗಿ, ರೈತ, ಜಗದಾಳ, ಬಾಗಲಕೋಟೆ ಜಿಲ್ಲೆ

ಮಧ್ಯವರ್ತಿಗಳ ಹಾವಳಿ ತಪ್ಪಿಸಿ

ಭಾಷೆಯ ಸಮಸ್ಯೆಯಿರುವ ಕಾರಣ ಬಹುತೇಕ ರೈತರು ಬೇರೆ ರಾಜ್ಯಗಳಿಗೆ ವೀಳ್ಯದೆಲೆ ಮಾರಲು ಹೋಗುವುದಿಲ್ಲ. ಹಾಗಾಗಿ, ಮಧ್ಯವರ್ತಿಗಳು ನಿಗದಿಪಡಿಸಿದ ಬೆಲೆಗೆ ಮಾರಬೇಕಾದ ಪರಿಸ್ಥಿತಿ ಇದೆ. ಸರ್ಕಾರವು ಸೂಕ್ತ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿದರೆ ಹೆಚ್ಚಿನ ಲಾಭ ಸಿಗಲಿದೆ ಎಂದು ವೀಳ್ಯದೆಲೆ ಬೆಳೆಗಾರರು ಹೇಳಿದ್ದಾರೆ.

ಸೋನಿ–ಜೀ ವಿಲೀನ ರದ್ದು

ನವದೆಹಲಿ (ಪಿಟಿಐ): ಸೋನಿ ಪಿಕ್ಚರ್ಸ್ ನೆಟ್‌ವರ್ಕ್ಸ್ ಇಂಡಿಯಾ (ಎಸ್‌ಪಿಎನ್‌ಐ) ಮತ್ತು ಜೀ ಎಂಟರ್‌ಟೈನ್‌ಮೆಂಟ್ ಎಂಟರ್‌ಪ್ರೈಸಸ್ ಲಿಮಿಟೆಡ್ ನಡುವಿನ ವಿಲೀನ ಒಪ್ಪಂದ ಸೋಮವಾರ ಮುರಿದು ಬಿದ್ದಿದೆ.

ಸೋನಿ ಗ್ರೂಪ್ ಕಾರ್ಪೊರೇಷನ್ ಭಾರತದಲ್ಲಿರುವ ತನ್ನ ವ್ಯವಹಾರವನ್ನು ಜೀ ಎಂಟರ್‌ಟೈನ್‌ಮೆಂಟ್ ಜೊತೆಗೆ ವಿಲೀನಗೊಳಿಸಲು ಮುಂದಾಗಿತ್ತು. 2021ರ ಡಿಸೆಂಬರ್ 22ರಂದು ₹83 ಸಾವಿರ ಕೋಟಿ ಮೊತ್ತದ ಒಪ್ಪಂದಕ್ಕೆ ಎರಡೂ ಕಂಪನಿಗಳು ಒಪ್ಪಿಗೆ ನೀಡಿದ್ದವು. 2023ರ ಡಿಸೆಂಬರ್ 21ರೊಳಗೆ ವಿಲೀನ ಪ್ರಕ್ರಿಯೆ ಪೂರ್ಣಗೊಳ್ಳಬೇಕಿತ್ತು. ಈ ಒಪ್ಪಂದವನ್ನು ಸೋನಿ ಕೊನೆಗೊಳಿಸಿದ್ದು, ಈ ಕುರಿತು ಜೀ ಕಂಪನಿಗೆ ಅಧಿಕೃತ ಪತ್ರವನ್ನು ರವಾನಿಸಿದೆ.

ಒಣಮೆಣಸಿನಕಾಯಿ ಆವಕ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬ್ಯಾಡಗಿ (ಹಾವೇರಿ ಜಿಲ್ಲೆ): ಇಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆಗೆ ಸೋಮವಾರ 42,122 ಕ್ವಿಂಟಲ್ (1,68,489 ಚೀಲ) ಮೆಣಸಿನಕಾಯಿ ಮಾರಾಟಕ್ಕೆ ತರಲಾಗಿದ್ದು, ಆವಕದಲ್ಲಿ ಮತ್ತೆ ಹೆಚ್ಚಳವಾಗಿದೆ.

ಪ್ರಸಕ್ತ ಹಂಗಾಮಿನಲ್ಲಿ ಮೊದಲ ಬಾರಿಗೆ 1.50 ಲಕ್ಷಕ್ಕೂ ಹೆಚ್ಚು ಚೀಲ ಆವಕವಾಗಿದೆ. ಹಿಂದಿನ ವಾರ ಮಾರುಕಟ್ಟೆಗೆ 28,506 ಕ್ವಿಂಟಲ್ (1,14,026 ಚೀಲ) ಆವಕವಾಗಿತ್ತು.

ಡಬ್ಬಿ ಮೆಣಸಿನಕಾಯಿ ಕ್ವಿಂಟಲ್‌ಗೆ ₹61,999ರಂತೆ ಗರಿಷ್ಠ ಬೆಲೆಯಲ್ಲಿ ಮಾರಾಟವಾಗಿದ್ದು ಸ್ಥಿರತೆ ಕಾಯ್ದುಕೊಂಡಿದೆ. ಕಡ್ಡಿ ಮೆಣಸಿನಕಾಯಿ ಕ್ವಿಂಟಲ್‌ಗೆ ₹50,189ರಂತೆ ಗರಿಷ್ಠ ಬೆಲೆಯಲ್ಲಿ ಮಾರಾಟವಾಗಿದ್ದು, ಕಳೆದ ಗುರುವಾರಕ್ಕಿಂತ ಕ್ವಿಂಟಲ್‌ಗೆ ₹4 ಸಾವಿರ ಇಳಿಕೆ ಕಂಡಿದೆ. ಗುಂಟೂರು ತಳಿ ಮೆಣಸಿನಕಾಯಿ ₹18,129ರಂತೆ ಗರಿಷ್ಠ ಬೆಲೆಯಲ್ಲಿ ಮಾರಾಟವಾಗಿದ್ದು, ಸ್ಥಿರತೆ ಕಾಯ್ದುಕೊಂಡಿದೆ.

ಎಂಆರ್‌ಪಿಎಲ್‌ಗೆ ₹387 ಕೋಟಿ ಲಾಭ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಂಗಳೂರು ರಿಫೈನರಿ ಮತ್ತು ಪೆಟ್ರೋಕೆಮಿಕಲ್ಸ್ ಲಿಮಿಟೆಡ್ (ಎಂಆರ್‌ಪಿಎಲ್) 2023–24ನೇ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ತೆರಿಗೆ ಕಳೆದು ₹387 ಕೋಟಿ ಲಾಭ ಗಳಿಸಿದೆ.

ಕಳೆದ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ಕಂಪನಿಯು ತೆರಿಗೆ ಕಳೆದು ₹188 ಕೋಟಿ ನಷ್ಟ ಅನುಭವಿಸಿತ್ತು.

ಹಣಕಾಸು ವರ್ಷದ ಒಂಬತ್ತು ತಿಂಗಳುಗಳಲ್ಲಿ ಕಂಪನಿಯು ₹2,459 ಕೋಟಿ (ತೆರಿಗೆ ಕಳೆದು) ಲಾಭ ಗಳಿಸಿದೆ. ಕಳೆದ ಸಾಲಿನಲ್ಲಿ ಇದೇ ಅವಧಿಯಲ್ಲಿ ₹730 ಕೋಟಿ ಲಾಭ ಗಳಿಸಿತ್ತು.

ಮೂರನೇ ತ್ರೈಮಾಸಿಕದಲ್ಲಿ ಕಂಪನಿಯ ಕಾರ್ಯಾಚರಣೆ ವರಮಾನವು ಕುಸಿದಿದೆ. ಕಂಪನಿಯು ಕಾರ್ಯಾಚರಣೆಯಿಂದ ಒಟ್ಟು ₹28,383 ಕೋಟಿ ಗಳಿಸಿದೆ. 2022–23ನೇ ಸಾಲಿನಡಿ ಇದೇ ಅವಧಿಯಲ್ಲಿ ₹30,966 ಕೋಟಿ ವರಮಾನ ಗಳಿಸಿತ್ತು.

ಹಣಕಾಸು ವರ್ಷದ ಮೊದಲ ಒಂಬತ್ತು ತಿಂಗಳುಗಳಲ್ಲಿ ಕಂಪನಿಯು ಕಾರ್ಯಾಚರಣೆಯಿಂದ ಒಟ್ಟು ₹76,060 ಕೋಟಿ ವರಮಾನ ಗಳಿಸಿದೆ. 2022–23ನೇ ಸಾಲಿನಲ್ಲಿ ಈ ಅವಧಿಯಲ್ಲಿ ₹95,335 ಕೋಟಿ ವರಮಾನ ಗಳಿಸಿತ್ತು.

ಮೂರನೇ ತ್ರೈಮಾಸಿಕ ಮತ್ತು ಹಣಕಾಸು ವರ್ಷದ ಮೊದಲ ಒಂಬತ್ತು ತಿಂಗಳ ಲೆಕ್ಕಪರಿಶೋಧನೆಗೆ ಒಳಪಡದ ಆರ್ಥಿಕ ಫಲಿತಾಂಶಗಳಿಗೆ ಸೋಮವಾರ ನಡೆದ ಕಂಪನಿಯ ಆಡಳಿತ ಮಂಡಳಿಯ 260ನೇ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.

2023ರ ಡಿಸೆಂಬರ್‌ನಲ್ಲಿ ಕಂಪನಿಯು 15.58 ಲಕ್ಷ ಟನ್ ಕಚ್ಚಾತೈಲವನ್ನು ನಿರ್ವಹಣೆ ಮಾಡಿದ್ದು, ಇದು ಸಾರ್ವಕಾಲಿಕ ದಾಖಲೆಯಾಗಿದೆ. 2016ರ ಜನವರಿಯಲ್ಲಿ 15.57 ಲಕ್ಷ ಟನ್ ಕಚ್ಚಾತೈಲ ನಿರ್ವಹಣೆ ಮಾಡಿದ್ದು, ಇದುವರೆಗಿನ ದಾಖಲೆಯಾಗಿತ್ತು. ನವೆಂಬರ್‌ನಲ್ಲಿ 14.99 ಲಕ್ಷ ಟನ್ ಕಚ್ಚಾತೈಲವನ್ನು ನಿರ್ವಹಣೆ ಮಾಡಿತ್ತು.

ಎಂಆರ್‌ಪಿಎಲ್ ಮೊದಲ ಬಾರಿಗೆ 20 ಸಾವಿರ ಟನ್‌ಗಳಷ್ಟು ಸಲ್ಫರ್ ಇಂಧನ ತೈಲವನ್ನು ಖರೀದಿಸಿ ಸಂಸ್ಕರಿಸಿದೆ. ಕಂಪನಿಯು ಏರೊಮ್ಯಾಟಿಕ್ ಸಂಕೀರ್ಣವನ್ನು 20 ದಿನಗಳವರೆಗೆ ಪ್ಯಾರಾಕ್ಸೈಲೀನ್ ತಯಾರಿಕೆಗೆ ಬಳಸಿಕೊಳ್ಳಲಾಗಿದ್ದು, ಒಟ್ಟು 20 ಸಾವಿರ ಟನ್‌ಗಳಷ್ಟು ಪ್ಯಾರಾಕ್ಸೈಲೀನ್ ರಫ್ತು ಮಾಡಲಾಗಿದೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಶೇ 10ರಷ್ಟು ಮಧ್ಯಂತರ ಡಿವಿಡೆಂಡ್

ಷೇರುದಾರರಿಗೆ ಎಂಆರ್‌ಪಿಎಲ್ ಶೇ 10ರಷ್ಟು ಮಧ್ಯಂತರ ಡಿವಿಡೆಂಡ್ ಘೋಷಿಸಿದೆ. ಪ್ರತಿ ಷೇರಿಗೆ ₹1 ಡಿವಿಡೆಂಡ್ ಸಿಗಲಿದೆ. ಇದಕ್ಕಾಗಿ ಕಂಪನಿಯು ₹175.26 ಕೋಟಿ ಭರಿಸಬೇಕಿದೆ. ಫೆ. 2ರಂದು ಮಧ್ಯಂತರ ಡಿವಿಡೆಂಡ್ ನೀಡಲಾಗುವುದು ಎಂದು ಎಂಆರ್‌ಪಿಎಲ್ ತಿಳಿಸಿದೆ.

ಆಸ್ಟ್ರೇಲಿಯಾ ಓಪನ್ ಟೆನಿಸ್: ಪ್ರಮುಖ ಆಟಗಾರರು ಎಂಟರ ಘಟಕ್ಕೆ

ಕ್ವಾರ್ಟರ್‌ಫೈನಲ್‌ಗೆ ಡಯಾನಾ, ಲಿಂಡಾ

ಮೆಲ್ಬರ್ನ್ (ರಾಯಿಟರ್ಸ್): ಶ್ರೇಯಾಂಕ ಆಟಗಾರ್ತಿಯರನ್ನು ಮಣಿಸುತ್ತ ಯಶಸ್ಸಿನ ಓಟ ಮುಂದುವರಿಸಿರುವ ಡಯಾನಾ ಎಸ್ಟ್ರೆಮಸ್ಕ್ ಮತ್ತು ಲಿಂಡಾ ನೊಸ್ಕೊವಾ ಅವರು ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಸೋಮವಾರ ಎಂಟರ ಘಟಕ್ಕೆ ಲಗ್ಗೆಯಿಟ್ಟರು. ಆದರೆ ಪುರುಷರ ವಿಭಾಗದಲ್ಲಿ ಕಾರ್ಲೋಸ್ ಅಲ್ಕರಾಜ್ ಸೇರಿದಂತೆ ಶ್ರೇಯಾಂಕ ಆಟಗಾರರು ಗೆಲುವು ಸಾಧಿಸಿ ಕ್ವಾರ್ಟರ್‌ಫೈನಲ್‌ಗೆ ದಾಪುಗಾಲಿಟ್ಟರು.

ಎರಡನೇ ಶ್ರೇಯಾಂಕದ ಅಲ್ಕರಾಜ್ ಅವರು ರಾಡ್ ಲೇವರ್ ಅರೇನಾದಲ್ಲಿ 6-4, 6-4, 6-0 ಯಿಂದ ಸರ್ಬಿಯಾದ ಮೊಟೊಮಿರ್ ಕೆಕ್ಮನೋವಿಕ್ ಅವರನ್ನು ಸೋಲಿಸಿ ಮೊದಲ ಬಾರಿ ಈ ಟೂರ್ನಿಯ ಎಂಟರ ಘಟ್ಟ ತಲುಪಿದರು. ಅವರು ಕ್ವಾರ್ಟರ್‌ಫೈನಲ್‌ನಲ್ಲಿ, ಒಲಿಂಪಿಕ್ ಸ್ವರ್ಣ ವಿಜೇತ ಅಲೆಕ್ಸಾಂಡರ್ ಜ್ವರೇವ್ ಅವರನ್ನು ಎದುರಿಸಲಿದ್ದಾರೆ.

‘ನಾನು ಬಹುತೇಕ ಪರಿಪೂರ್ಣವಾಗಿ ಆಡಿದ್ದೇನೆ. ಪಂದ್ಯದಿಂದ ಪಂದ್ಯಕ್ಕೆ ಉತ್ತಮವಾಗಿ ಆಟ ವಾಡುತ್ತಿದ್ದೇನೆ’ ಎಂದು ಅಲ್ಕರಾಜ್ ಹೇಳಿದರು

ಮೂರನೇ ಕ್ರಮಾಂಕದ ಡೇನಿಯಲ್ ಮೆಡ್ವೆಡೇವ್ 6-3, 7-6 (4), 5-7, 6-1 ರಿಂದ ನುನೊ ಬೋರ್ಗೆಸ್ ಅವರನ್ನು ಹಿಮ್ಮೆಟ್ಟಿಸಿದರೆ, ಆರನೇ ಶ್ರೇಯಾಂಕದ ಅಲೆಕ್ಸಾಂಡರ್ ಜ್ವರೇವ್ (ಜರ್ಮನಿ) ಅವರು ಕ್ಯಾಮರೂನ್ ನೊರಿ (ಇಂಗ್ಲೆಂಡ್) ವಿರುದ್ಧ 7-5, 3-6, 6-3, 4-6, 7-6 (3) ರಿಂದ ಜಯಿಸಿದರು.

ಮೆಡ್ವೆಡೇವ್ ಮುಂದಿನ ಪಂದ್ಯದಲ್ಲಿ, ಪೋಲೆಂಡ್‌ನ ಹರ್ಬರ್ಟ್ ಹರ್ಕಾಜ್ ಅವರನ್ನು ಎದುರಿಸುವರು. ಮೊದಲ ಬಾರಿ ಈ ಟೂರ್ನಿಯಲ್ಲಿ ಆಡುತ್ತಿರುವ ಒಂಬತ್ತನೇ ಶ್ರೇಯಾಂಕದ ಹರ್ಕಾಜ್ 7–6 (8/6), 7–6 (7/3), 6–4 ರಿಂದ ಫ್ರಾನ್ಸ್‌ನ ಆರ್ಥರ್ ಕ್ಯಾಝೊಕ್ಸ್ ಅವರನ್ನು ಸೋಲಿಸಿದರು. ಆರ್ಥರ್ ವಿಶ್ವ ಕ್ರಮಾಂಕದಲ್ಲಿ 122ನೇ ಸ್ಥಾನದಲ್ಲಿದ್ದಾರೆ.

ಅನಿರೀಕ್ಷಿತ ಫಲಿತಾಂಶ: ಮಹಿಳಾ ವಿಭಾಗದಲ್ಲಿ ಅಚ್ಚರಿಯ ಫಲಿತಾಂಶಗಳು ಮುಂದುವರಿದಿವೆ. ಅಗ್ರ ಆಟಗಾರ್ತಿಯರು ಒಬ್ಬೊಬ್ಬರಾಗಿ ಟೂರ್ನಿಯಿಂದ ನಿರ್ಗಮಿಸುತ್ತಿದ್ದಾರೆ.

ಕಳೆದ ವರ್ಷ ಅಮೆರಿಕ ಓಪನ್‌ನಲ್ಲಿ ಎಂಟರ ಘಟ್ಟ ತಲುಪಿದ್ದ 12ನೇ ಶ್ರೇಯಾಂಕದ ಝೆಂಗ್ ಕ್ವಿನ್‌ವೆನ್ ಕಣದಲ್ಲಿ ಉಳಿದಿರುವ ಅತಿ ಹೆಚ್ಚಿನ ಶ್ರೇಯಾಂಕದ ಆಟಗಾರ್ತಿ ಎನಿಸಿದ್ದಾರೆ.

ಮೊದಲ ಸುತ್ತಿನಲ್ಲಿ ವಿಂಬಲ್ಡನ್ ಚಾಂಪಿಯನ್ ಮರ್ಕೆತಾ ವೊಂಡ್ರುಸೊವಾ ಅವರನ್ನು ಸೋಲಿಸಿದ್ದ ಡಯಾನಾ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ 18ನೇ ಶ್ರೇಯಾಂಕದ ವಿಕ್ಟೋರಿಯಾ ಅಜರೆಂಕಾ ವಿರುದ್ಧ 7-6 (6), 6-4 ರಿಂದ ಜಯಗಳಿಸಿದರು. ಅಜರೆಂಕಾ ಇಲ್ಲಿ ಎರಡು ಬಾರಿ ಚಾಂಪಿಯನ್ ಆಗಿದ್ದವರು.

ರಷ್ಯಾದ ಆ್ಯನಾ ಕಲಿನ್‌ಸ್ಕಾಯಾ 6–4, 6–2 ರಿಂದ 26ನೇ ಕ್ರಮಾಂಕದ ಜಾಸ್ಮಿನ್ ಪೌಲಿನಿ ಅವರನ್ನು ಹಿಮ್ಮೆಟ್ಟಿಸಿದರು. ಅವರು ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರ ಮೂರನೇ ಸುತ್ತು ತಲುಪಿದರು. 23ನೇ ಶ್ರೇಯಾಂಕದ ಎಲಿನಾ ಸ್ವಿಟೋಲಿನಾ ಬೆನ್ನು ನೋವಿನಿಂದಾಗಿ ಲಿಂಡಾ ನೊಸ್ಕೊವಾ ಅವರಿಗೆ ಪಂದ್ಯ ಬಿಟ್ಟುಕೊಡಬೇಕಾಯಿತು. ಆಗ ನೊಸ್ಕೊವಾ ಮೊದಲ ಸೆಟ್‌ನಲ್ಲಿ 3–0ಯಿಂದ ಮುಂದೆಯಿದ್ದರು.



ಡಯಾನಾ ಎಸ್ಟ್ರೆಮಸ್ಕ್ —ಎಎಫ್‌ಪಿ ಚಿತ್ರ

ಅಂಗಣಕ್ಕೆ ಕರಪತ್ರ ಎಸೆದ ಪ್ರತಿಭಟನಕಾರ

ಮೆಲ್ಬರ್ನ್ (ಆಸ್ಟ್ರೇಲಿಯಾ) (ಎಪಿ): ಒಲಿಂಪಿಕ್ ಚಾಂಪಿಯನ್ ಅಲೆಕ್ಸಾಂಡರ್ ಝ್ವೆರೆವ್ ಮತ್ತು ಬ್ರಿಟನ್‌ನ ಕ್ಯಾಮರೂನ್ ನೊರಿ ನಡುವಿನ ನಾಲ್ಕನೇ ಸುತ್ತಿನ ಪಂದ್ಯದ ವೇಳೆ ಪ್ರತಿಭಟನಕಾರ ಆಸ್ಟ್ರೇಲಿಯನ್ ಓಪನ್ ಅಂಗಣಕ್ಕೆ ಕರಪತ್ರಗಳನ್ನು ಎಸೆದಿದ್ದಾನೆ. ಇದರಿಂದ ಪಂದ್ಯ ಕೆಲಕಾಲ ವಿಳಂಬವಾಯಿತು.

ಮಾರ್ಗರೇಟ್ ಕೋರ್ಟ್ ಅರೇನಾದಲ್ಲಿ ಸೋಮವಾರ ನಡೆದ ಮೂರನೇ ಸೆಟ್‌ನ ಆರನೇ ಗೇಮ್‌ನಲ್ಲಿ ವೇಳೆ ನೀಲಿ ಶರ್ಟ್, ಟೋಪಿ ಮತ್ತು ಫೇಸ್ ಮಾಸ್ಕ್ ಧರಿಸಿದ ವ್ಯಕ್ತಿಯೊಬ್ಬ, ಯುದ್ಧ ವಿರೋಧಿ ಕರಪತ್ರಗಳನ್ನು ಸ್ಟ್ಯಾಂಡ್‌ನಿಂದ ಬೇಸ್ ಲೈನ್ ಹಿಂಭಾಗದ ಅಂಗಣಕ್ಕೆ ಎಸೆದ.

ಬೋಪಣ್ಣ–ಎಬ್ಡೆನ್ ಮುನ್ನಡೆ

ಭಾರತದ ರೋಹನ್ ಬೋಪಣ್ಣ ಮತ್ತು ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಜೋಡಿ ಪುರುಷರ ಡಬಲ್ಸ್‌ನಲ್ಲಿ ನೆದರ್ಲೆಂಡ್ಸ್‌ನ ವೆಸ್ಲಿ ಕೂಲ್‌ಹಾಫ್ ಮತ್ತು ಕ್ರೊವೇಷಿಯಾದ ನಿಕೋಲಾ ಮೆಕ್ಟಿಕ್ ವಿರುದ್ಧ 7–6, 7–6 | ರಿಂದ ಗೆಲುವು ಸಾಧಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದೆ.

ಕಬಡ್ಡಿ: ಜೈಪುರ ಗೆಲುವಿನ ಓಟ ಅಬಾಧಿತ

ಹೈದರಾಬಾದ್: ಯಶಸ್ಸಿನ ಓಟ ಮುಂದುವರಿಸಿದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡ, ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಸೋಮವಾರ 42–25 ಪಾಯಿಂಟ್‌ಗಳಿಂದ ಬೆಂಗಾಲ್ ವಾರಿಯರ್ಸ್ ತಂಡವನ್ನು ಸೋಲಿಸಿತು. ಪ್ಯಾಂಥರ್ಸ್ 63 ಅಂಕ ಗಳಿಸಿ ಅಗ್ರಸ್ಥಾನದಲ್ಲಿ ಮುಂದುವರಿದಿದೆ.

ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ಪ್ಯಾಂಥರ್ಸ್ ಆರಂಭದಿಂದಲೇ ಪಾರಮ್ಯ ಸಾಧಿಸಿತ್ತು. ಪ್ಯಾಂಥರ್ಸ್ ಪರ ಅರ್ಜುನ್ ದೇಶ್ವಾಲ್ 15, ಭವಾನಿ ರಜಪೂತ 7, ಅಂಕುಶ್ 6 ಅಂಕ ಕಲೆ ಹಾಕಿ ಮಿಂಚಿದರು. ರೈಡಿಂಗ್‌ನಲ್ಲಿ 21, ಟ್ಯಾಕಲ್‌ನಲ್ಲಿ 14 ಪಾಯಿಂಟ್ ಕಲೆ ಹಾಕಿತು. ಇದು 15 ಪಂದ್ಯಗಳಲ್ಲಿ ಪ್ಯಾಂಥರ್ಸ್ ತಂಡಕ್ಕೆ 11ನೇ ಜಯ.

ವಾರಿಯರ್ಸ್ ಪರ ವೈಭವ್ 9, ವೈಭವ್ ಭಾವೂಸಾಹೇಬ್ ಗರ್ಜೆ 5 ಪಾಯಿಂಟ್ ಗಳಿಸಲಷ್ಟೇ ಶಕ್ತರಾದರು. 38 ಪಾಯಿಂಟ್‌ಗಳೊಂದಿಗೆ ವಾರಿಯರ್ಸ್ ಆರನೇ ಸ್ಥಾನದಲ್ಲಿದೆ.

ಮತ್ತೊಂದು ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ ತಂಡವು 37–30 ಪಾಯಿಂಟ್‌ಗಳಿಂದ ಆತಿಥೇಯ ತೆಲುಗು ಟೈಟನ್ಸ್ ತಂಡವನ್ನು ಸೋಲಿಸಿತು. ಸ್ಟೀಲರ್ಸ್ ವಿರಾಮದ ವೇಳೆಗೆ 24–12 ರಿಂದ ಮುನ್ನಡೆ ಪಡೆದಿತ್ತು. ಉತ್ತರಾರ್ಧದಲ್ಲೂ ಸಾಂಘಿಕ ಪ್ರದರ್ಶನ ನೀಡಿದ ತಂಡವು ಏಳು ಪಾಯಿಂಟ್ಸ್ ಅಂತರದಿಂದ ಎದುರಾಳಿ ತಂಡವನ್ನು ಮಣಿಸಿತು.

ಕರ್ನಾಟಕದ ಸ್ಟ್ಯಾನಿಗೆ ಮೂರನೇ ಸ್ಥಾನ

ಮಿತ್ರಬಾಗೆ ಬ್ಲಿಟ್ಜ್ ಚೆಸ್ ಕಿರೀಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರ್ಯಾಂಡ್‌ಮಾಸ್ಟರ್ ಮಿತ್ರಬಾ ಗುಹಾ (ಪಶ್ಚಿಮ ಬಂಗಾಳ) ಅವರು ಬೆಂಗಳೂರು ಇಂಟರ್‌ನ್ಯಾಷನಲ್ ಗ್ರ್ಯಾಂಡ್ ಮಾಸ್ಟರ್ಸ್ ಓಪನ್ ಚೆಸ್ ಟೂರ್ನಿಯ ಭಾಗವಾಗಿ ನಡೆದ ಬ್ಲಿಟ್ಜ್ (ವೇಗದ) ಚೆಸ್ ಟೂರ್ನಿಯ ಕಿರೀಟ ಧರಿಸಿದರು. ಸೋಮವಾರ ನಡೆದ ಈ ಟೂರ್ನಿಯಲ್ಲಿ ಅವರು ಅಜೇಯ ಸಾಧನೆ ತೋರಿ 9 ಸುತ್ತುಗಳಿಂದ 8.5 ಪಾಯಿಂಟ್ಸ್ ಸಂಗ್ರಹಿಸಿದರು.

ಕಂಠೀರವ ಒಳಾಂಗಣ ಕ್ರೀಡಾಂಗಣ ದಲ್ಲಿ ಬೆಂಗಳೂರು ನಗರ ಜಿಲ್ಲಾ ಚೆಸ್ ಸಂಸ್ಥೆ ಆಶ್ರಯದಲ್ಲಿ ನಡೆದ ಟೂರ್ನಿಯಲ್ಲಿ ಅವರು ಟ್ರೋಫಿ ಜೊತೆ ₹50,000 ನಗದು ಬಹುಮಾನ ಪಡೆದರು. ತಮಿಳುನಾಡಿನ ಎಸ್.ಪಿ.ಸೇತುರಾಮನ್, ಕರ್ನಾಟಕ ಜಿ.ಎ.ಸ್ಟ್ಯಾನಿ ಮತ್ತು ಇರಾನ್‌ನ ತಹಬಾಜ್ ಅರಶ್, ಬಂಗಾಳದ ದೀಪ್ತಾಯನ ಘೋಷ್ ಅವರು ತಲಾ ಎಂಟು ಪಾಯಿಂಟ್ಸ್ ಸಂಗ್ರಹಿಸಿದರೂ, ಟೈಬ್ರೇಕ್ ಆಧಾರದಲ್ಲಿ ಕ್ರಮವಾಗಿ ಎರಡರಿಂದ ಐದರವರೆಗಿನ ಸ್ಥಾನ ಪಡೆದರು. ಸೇತುರಾಮನ್ ಮತ್ತು ಶಿವಮೊಗ್ಗದ ಸ್ಟ್ಯಾನಿ ಟ್ರೋಫಿಗಳ ಜೊತೆಗೆ ಕ್ರಮವಾಗಿ ₹40,000 ಮತ್ತು ₹35,000 ಬಹುಮಾನ ಜೇಬಿಗಿಳಿಸಿದರು.

ಟೂರ್ನಿಯಲ್ಲಿ 18 ಗ್ರ್ಯಾಂಡ್‌ಮಾಸ್ಟರ್‌ಗಳ ಜೊತೆಗೆ ಒಬ್ಬರು ಡಬ್ಲ್ಯುಜಿಎಂ, 28 ಇಂಟರ್‌ನ್ಯಾಷನಲ್ ಮಾಸ್ಟರ್ಸ್ ಸೇರಿದಂತೆ 16 ದೇಶಗಳ 476 ಆಟಗಾರರು ಕಣದಲ್ಲಿದ್ದರು.

ಬಿಳಿ ಕಾಯಿಗಳಲ್ಲಿ ಆಡಿದ ಸ್ಟ್ಯಾನಿ ಕೊನೆಯ ಸುತ್ತಿನಲ್ಲಿ ಮಿತ್ರಬಾ ಗುಹಾ ಜೊತೆ ‘ಡ್ರಾ’ ಮಾಡಿಕೊಂಡರು. ದೀಪ್ತಾಯನ ಘೋಷ್ ಎರಡನೇ ಬೋರ್ಡ್‌ನಲ್ಲಿ ಸಯಂತನ್ ದಾಸ್ (7) ಮಣಿಸಿದರು. ಸೇತುರಾಮನ್, ನಿತಿನ್ ಎಸ್. (7) ಅವರನ್ನು ಸೋಲಿಸಿದರು. ಜಿಎಂ ಸಂಕಲ್ಪ್ ಗುಪ್ತಾ, ತಹಹಾಜ್ ಅರಶ್ ಅವರಿಗೆ ಮಣಿದರು. ಬಂಗಾಳದ ಸಪ್ತರ್ಷಿ ರಾಯತ್ ಚೌಧರಿ (7.5), ಈಜಿಪ್ಟ್‌ನ ಫೌಜಿ ಆದಮ್ (7.5), ಕೇರಳದ ಕೆ.ರತ್ನಾಕರನ್ (7.5) ಕ್ರಮವಾಗಿ ಆರರಿಂದ ಎಂಟರವರೆಗಿನ ಸ್ಥಾನ ಪಡೆದರು. ಅವರಿಗೆ ₹20,000, 15,000 ಮತ್ತು 12,000 ನಗದು ಬಹುಮಾನ ನೀಡಲಾಯಿತು.



ಬ್ಲಿಟ್ಜ್ (ವೇಗದ) ಚೆಸ್ ಟೂರ್ನಿಯಲ್ಲಿ ಚಿನ್ನ ಗೆದ್ದ ಮಿತ್ರಬಾ ಗುಹಾ (ಮಧ್ಯ), ಬೆಳ್ಳಿ ಗೆದ್ದ ಎಸ್‌.ಪಿ.ಸೇತುರಾಮನ್ (ಎಡ) ಮತ್ತು ಕಂಚು ಗೆದ್ದ ಜಿ.ಎ.ಸ್ಟ್ಯಾನಿ

ಸಂಕ್ಷಿಪ್ತ ಸುದ್ದಿ

ಇಂಡೊನೇಷ್ಯಾ ಓಪನ್: ಹಿಂದೆ ಸರಿದ ಸಾತ್ವಿಕ್–ಚಿರಾಗ್

ಜಕಾರ್ತಾ (ಪಿಟಿಐ): ವಿಶ್ವದ ಎರಡನೇ ನಂಬರ್ ಡಬಲ್ಸ್ ಆಟಗಾರರಾದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಮಂಗಳವಾರ ಆರಂಭವಾಗುವ ಇಂಡೊನೇಷ್ಯನ್ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ. ಹೀಗಾಗಿ ಅನುಭವಿ ಸಿಂಗಲ್ಸ್ ಆಟಗಾರ ಎಚ್‌.ಎಸ್.ಪ್ರಣಯ್ ದೇಶದ ಸವಾಲನ್ನು ಮುನ್ನಡೆಸಲಿದ್ದಾರೆ.

ಬೆನ್ನುಬೆನ್ನಿಗೆ ನಡೆದ ಮಲೇಷ್ಯಾ ಸೂಪರ್ 1000 ಮತ್ತು ಇಂಡಿಯಾ ಓಪನ್ 750 ಟೂರ್ನಿಗಳಲ್ಲಿ ಸಾತ್ವಿಕ್–ಚಿರಾಗ್ ರನ್ನರ್ ಅಪ್ ಸ್ಥಾನ ಗಳಿಸಿದ್ದರು. ಮುಂದೆ ಬಿಡುವಿಲ್ಲದ ವೇಳಾಪಟ್ಟಿ ಇರುವ ಕಾರಣ ಇವರಿಬ್ಬರು ಈ ಟೂರ್ನಿಗೆ ವಿಶ್ರಾಂತಿ ಬಯಸಿದ್ದಾರೆ.

ಇವರಿಬ್ಬರ ಗೈರು ಟೂರ್ನಿಯ ಮಹತ್ವವನ್ನು ಕೊಂಚ ತಗ್ಗಿಸಲಿದೆ.

ಚೆಸ್: ಜಂಟಿ ಅಗ್ರಸ್ಥಾನದಲ್ಲಿ ಗುಕೇಶ್

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್): ಭಾರತದ ಡಿ.ಗುಕೇಶ್ ಅವರು ಟಾಟಾ ಸ್ಟೀಲ್ ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಸೋಮವಾರ ಮಹಿಳಾ ವಿಶ್ವ ಚಾಂಪಿಯನ್ ಚೀನಾದ ಜು ವೆಂಜುನ್ ವಿರುದ್ಧ ಡ್ರಾ ಸಾಧಿಸಿ, ಜಂಟಿ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಎಂಟು ಸುತ್ತಿನ ಬಳಿಕ 5 ಅಂಕ ಸಂಪಾದಿಸಿರುವ ಗುಕೇಶ್, ಆತಿಥೇಯ ದೇಶದ ಅನೀಶ್ ಗಿರಿ ಅವರೊಂದಿಗೆ ಮುನ್ನಡೆಯನ್ನು ಹಂಚಿಕೊಂಡಿದ್ದಾರೆ. ಭಾರತದ ವಿದಿತ್ ಗುಜರಾತಿ ಮತ್ತು ಆರ್. ಪ್ರಜ್ಞಾನಂದ ಅವರು 4.5 ಅಂಕಗಳೊಂದಿಗೆ ಜಂಟಿ ಮೂರನೇ ಸ್ಥಾನದಲ್ಲಿದ್ದಾರೆ.

ಎಎಫ್‌ಸಿ ಕಪ್: ಇಂದು ಭಾರತ– ಸಿರಿಯಾ ಪಂದ್ಯ

ಅಲ್ ಖೋರ್ (ಕತಾರ್), (ಪಿಟಿಐ): ಗುಂಪಿನಲ್ಲಿ ಆಡಿದ ಎರಡು ಪಂದ್ಯಗಳನ್ನು ಸೋತ ನಂತರ ಭಾರತ ತಂಡ, ಎಎಫ್‌ಸಿ ಏಷ್ಯಾ ಕಪ್ ಟೂರ್ನಿಯಲ್ಲಿ ಮಂಗಳ ವಾರ ಸಿರಿಯಾ ತಂಡವನ್ನು ಎದುರಿ ಸಲಿದೆ. ನಾಕ್‌ಔಟ್ ಪ್ರವೇಶಕ್ಕೆ ಇರುವ ಕ್ಷೀಣ ಅವಕಾಶವನ್ನು ಜೀವಂತವಾಗಿರಿಸಲು ಸಿರಿಯಾ ವಿರುದ್ಧ ಪಂದ್ಯವನ್ನು ಭಾರತ ಗೆಲ್ಲಲೇಬೇಕಿದೆ.

ಆಸ್ಟ್ರೇಲಿಯಾ ವಿರುದ್ಧ 0–2ರಿಂದ ಸೋತಿದ್ದ ಭಾರತ, ನಂತರ 0–3 ರಿಂದ ಉಜ್ಬೇಕಿಸ್ತಾನ ಎದುರೂ ಪರಾಜಯ ಕಂಡಿತ್ತು. ಈಗ ಸುನೀಲ್ ಚೆಟ್ರಿ ಬಳಕ್ಕೆ ಸ್ವಲ್ಪವಾದರೂ ಗೌರವ ಉಳಿಸಿಕೊಳ್ಳಲು ಮಂಗಳವಾರದ ಪಂದ್ಯದಲ್ಲಿ ಗೆಲುವಷ್ಟೇ ನೆರವಾಗಬಲ್ಲದು. ಫಿಫಾ ವಿಶ್ವ ಕ್ರಮಾಂಕದಲ್ಲಿ ಸಿರಿಯಾ 91ನೇ ಸ್ಥಾನದಲ್ಲಿದೆ.

ಭಾರತ 102ನೇ ಸ್ಥಾನದಲ್ಲಿದೆ. ಆದರೆ ಗೆಲುವು ಕೈಗೆಟಕದ್ದೇನಲ್ಲ. ಈ ಹಿಂದೆ ಭಾರತ 2007, 2009 ಮತ್ತು 2012ರ ವಿಶ್ವಕಪ್‌ನಲ್ಲಿ ಈ ತಂಡದ ವಿರುದ್ಧ ಜಯಗಳಿಸಿದೆ. ಅಹಮದಾಬಾದಿನಲ್ಲಿ ಕೊನೆಯ ಸಲ ಮುಖಾಮುಖಿ ಆದ ಸಂದರ್ಭದಲ್ಲಿ (ಇಂಟರ್‌ಕಾಂಟಿನೆಂಟಲ್ ಕಪ್) ಪಂದ್ಯ 1–1 ‘ಡ್ರಾ’ ಆಗಿತ್ತು.

ಬಾಂಗ್ಲಾ, ಆಸ್ಟ್ರೇಲಿಯಾ ತಂಡಗಳಿಗೆ ಜಯ

ಬ್ಲೊಮ್‌ಫೊಂಟೀನ್ (ದಕ್ಷಿಣ ಆಫ್ರಿಕಾ): ಬಾಂಗ್ಲಾದೇಶ ತಂಡ 19 ವರ್ಷದೊಳಗಿನವ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ‘ಎ’ ಗುಂಪಿನ ಪಂದ್ಯದಲ್ಲಿ ಐರ್ಲೆಂಡ್ ತಂಡವನ್ನು 6 ವಿಕೆಟ್‌ಗಳಿಂದ ಸೋಲಿಸಿತು.

ಕಿಂಬರ್ಲಿಯಲ್ಲಿ ನಡೆದ ‘ಸಿ’ ಗುಂಪಿನ ಪಂದ್ಯದಲ್ಲಿ ಆಸ್ಟ್ರೇಲಿಯಾ 4 ವಿಕೆಟ್‌ಗಳಿಂದ ನಮೀಬಿಯಾವನ್ನು ಮಣಿಸಿತು. ಕ್ಯಾಲಂ ವಿಡ್ಲರ್ ಮತ್ತು ಟಾಮ್ ಸ್ಟ್ರೇಕರ್‌ರವರ ಬೌಲಿಂಗ್ ದಾಳಿಯಿಂದ ಆಸ್ಟ್ರೇಲಿಯಾ ಜಯ ಸಾಧಿಸಿತು.

ಸಂಕ್ಷಿಪ್ತ ಸ್ಕೋರ್: ಐರ್ಲೆಂಡ್: 50 ಓವರುಗಳಲ್ಲಿ 8 ವಿಕೆಟ್‌ಗೆ 235; ಬಾಂಗ್ಲಾದೇಶ: 46.5 ಓವರುಗಳಲ್ಲಿ 4 ವಿಕೆಟ್‌ಗೆ 239. **ಕಿಂಬರ್ಲಿ:** ನಮೀಬಿಯಾ: 33.1 ಓವರುಗಳಲ್ಲಿ 91; ಆಸ್ಟ್ರೇಲಿಯಾ: 19.5 ಓವರುಗಳಲ್ಲಿ 6 ವಿಕೆಟ್‌ಗೆ 95.

ಪ್ಯಾರಿಸ್ ಒಲಿಂಪಿಕ್ಸ್ ಜುಲೈ 26ರಿಂದ

ಹಾಕಿ: ‘ಬಿ’ ಗುಂಪಿನಲ್ಲಿ ಭಾರತ

ಲುಸಾನ್ (ಸ್ವಿಟ್ಜರ್‌ಲೆಂಡ್) (ಪಿಟಿಐ): ಏಷ್ಯನ್ ಗೇಮ್ಸ್ ಚಾಂಪಿಯನ್ ಮತ್ತು ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಭಾರತ ಈ ವರ್ಷದ ಪ್ಯಾರಿಸ್ ಒಲಿಂಪಿಕ್ಸ್‌ನ ಪುರುಷರ ಹಾಕಿ ಸ್ಪರ್ಧೆಯಲ್ಲಿ ಪ್ರಬಲ ತಂಡಗಳಿರುವ ‘ಬಿ’ ಗುಂಪಿನಲ್ಲಿ ಸ್ಥಾನ ಪಡೆದಿದೆ.

ಭಾರತದ ಜೊತೆ ಹಾಲಿ ಚಾಂಪಿಯನ್ ಬೆಲ್ಜಿಯಂ, ಪ್ರಬಲ ಆಸ್ಟ್ರೇಲಿಯಾ, ಅರ್ಜೆಂಟೀನಾ, ನ್ಯೂಜಿಲೆಂಡ್ ಮತ್ತು ಐರ್ಲೆಂಡ್ ತಂಡಗಳು ‘ಬಿ’ ಗುಂಪಿನಲ್ಲಿವೆ. ಭಾರತ ಪ್ರಸ್ತುತ ವಿಶ್ವ ಕ್ರಮಾಂಕದಲ್ಲಿ ಮೂರನೇ ಸ್ಥಾನದಲ್ಲಿದೆ. ‘ಎ’ ಗುಂಪಿನಲ್ಲಿ ನೆದರ್ಲೆಂಡ್ಸ್, ಜರ್ಮನಿ, ಬ್ರಿಟನ್, ಸ್ಪೇನ್, ಫ್ರಾನ್ಸ್ ಮತ್ತು ದಕ್ಷಿಣ ಆಫ್ರಿಕಾ ತಂಡಗಳಿವೆ.

ಎಫ್‌ಐಎಚ್ ಹಾಕಿ ಒಲಿಂಪಿಕ್ ಅರ್ಹತಾ ಪಂದ್ಯಗಳು ಪೂರ್ಣಗೊಂಡ ನಂತರ ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ ಪುರುಷರ ಮತ್ತು ಮಹಿಳಾ ಹಾಕಿ ಸ್ಪರ್ಧೆಯ ಗುಂಪುಗಳನ್ನು ಭಾನುವಾರ ಪ್ರಕಟಿಸಿದೆ.

ಭಾರತ ವನಿತೆಯರ ತಂಡ ಈ ಬಾರಿಯ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸುವಲ್ಲಿ ವಿಫಲವಾಗಿದೆ. ಶುಕ್ರವಾರ ರಾಂಚಿಯಲ್ಲಿ ನಡೆದ ಒಲಿಂಪಿಕ್ ಅರ್ಹತಾ ಪಂದ್ಯಗಳಲ್ಲಿ ಜಪಾನ್ ವಿರುದ್ಧ 0-1 ಅಂತರದಿಂದ ಸೋತು ನಾಲ್ಕನೇ ಸ್ಥಾನ ಪಡೆದಿತ್ತು.

ಮಹಿಳೆಯರ ‘ಎ’ ಗುಂಪಿನಲ್ಲಿ ಹಾಲಿ ಚಾಂಪಿಯನ್ ನೆದರ್ಲೆಂಡ್ಸ್, ಬೆಲ್ಜಿಯಂ, ಜರ್ಮನಿ, ಜಪಾನ್, ಚೀನಾ ಮತ್ತು ಆತಿಥೇಯ ಫ್ರಾನ್ಸ್ ಸ್ಥಾನ ಪಡೆದರೆ, 'ಬಿ' ಗುಂಪಿನಲ್ಲಿ ಆಸ್ಟ್ರೇಲಿಯಾ, ಅರ್ಜೆಂಟೀನಾ, ಗ್ರೇಟ್ ಬ್ರಿಟನ್, ಸ್ಪೇನ್, ಅಮೆರಿಕ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ಸ್ಥಾನ ಪಡೆದಿವೆ. ಪುರುಷ ಮತ್ತು ಮಹಿಳಾ ವಿಭಾಗದಲ್ಲಿ ತಲಾ 12 ತಂಡಗಳು ಒಲಿಂಪಿಕ್ಸ್ ಕೂಟಕ್ಕೆ ಅರ್ಹತೆ ಪಡೆದಿವೆ. ಒಲಿಂಪಿಕ್ಸ್ ಹಾಕಿ ಪಂದ್ಯಗಳು ಜುಲೈ 27 ರಿಂದ ಆಗಸ್ಟ್ 9 ರವರೆಗೆ ನಡೆಯಲಿವೆ.

ಒಲಿಂಪಿಕ್ಸ್‌ಗೆ ಅರ್ಹತೆ: ಪಾಕ್ ಹಾಕಿ ತಂಡ ವಿಫಲ

ಕರಾಚಿ (ಪಿಟಿಐ): ನಾನಾ ಸಮಸ್ಯೆ ಎದುರಿಸುತ್ತಿರುವ ಪಾಕಿಸ್ತಾನದ ಹಾಕಿ ತಂಡ, ಮುಂಬರುವ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲು ವಿಫಲವಾಗಿದೆ. ಒಮಾನ್‌ನಲ್ಲಿ ನಡೆದ ಒಲಿಂಪಿಕ್ ಅರ್ಹತಾ ಟೂರ್ನಿಯ ಮೂಲಕ ಪ್ಯಾರಿಸ್‌ಗೆ ಟಿಕೆಟ್ ಪಡೆಯುವ ತಂಡದ ಯತ್ನ ಈಡೇರಿಲ್ಲ.

ತಂಡದ ವೈಫಲ್ಯಕ್ಕೆ ದೇಶದ ಮಾಜಿ ಘಟಾನುಘಟಿ ಆಟಗಾರರು ಬೇಸರ ಮತ್ತು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಒಮಾನ್ ಟೂರ್ನಿಯಲ್ಲಿ ಮೂರು–ನಾಲ್ಕನೇ ಸ್ಥಾನಕ್ಕೆ ನಡೆದ ಪಂದ್ಯದಲ್ಲಿ ಪಾಕ್ ತಂಡ 2–3 ಗೋಲುಗಳಿಂದ ನ್ಯೂಜಿಲೆಂಡ್ ಎದುರು ಪರಾಭವ ಕಂಡಿತು.

ಪಾಕಿಸ್ತಾನ ವಿರುದ್ಧ ಡೇವಿಸ್ ಕಪ್: ಸಿದ್ಧತೆ ಆರಂಭಿಸಿದ ಭಾರತ ತಂಡ

ನವದೆಹಲಿ (ಪಿಟಿಐ): ಭಾರತ ಡೇವಿಸ್ ಕಪ್ ತಂಡವು ಪಾಕಿಸ್ತಾನ ವಿರುದ್ಧ ಮುಂಬರುವ ವಿಶ್ವ ಗುಂಪಿನ ಪಂದ್ಯಕ್ಕಾಗಿ ತೀವ್ರ ಚಳಿಯ ನಡುವೆ ಸಿದ್ಧತಾ ಶಿಬಿರವನ್ನು ಆರಂಭಿಸಿದೆ. ಭಾರತದ ಅಗ್ರ ಆಟಗಾರ ಸುಮಿತ್ ನಗಾಲ್ ಅನುಪಸ್ಥಿತಿಯಲ್ಲಿ ಎರಡನೇ ಸಿಂಗಲ್ಸ್ ಆಟಗಾರನಿಗೆ ಹುಡುಕಾಟ ಆರಂಭಿಸಿದೆ.

ವಿಶ್ವದ 137ನೇ ಕ್ರಮಾಂಕದ ನಗಾಲ್ ಮತ್ತು ಶಶಿಕುಮಾರ್ ಮುಕುಂದ್ (463ನೇ ಕ್ರಮಾಂಕ) ಫೆಬ್ರುವರಿ 3 ಮತ್ತು 4ರಂದು ಇಸ್ಲಾಮಾಬಾದ್‌ನ ಹುಲ್ಲಿನಂಕಣದಲ್ಲಿ ನಡೆಯುವ ಪಂದ್ಯದಿಂದ ಹಿಂದೆ ಸರಿದಿದ್ದಾರೆ. ಅವರ ಅನುಪಸ್ಥಿತಿಯಲ್ಲಿ ರಾಮಕುಮಾರ್ ರಾಮನಾಥನ್ ತಂಡದ ಏಕೈಕ ಪರಿಣತ ಸಿಂಗಲ್ಸ್ ಆಟಗಾರರಾಗಿದ್ದಾರೆ.

ಎರಡನೇ ಸಿಂಗಲ್ಸ್ ಆಡಲು ಯೂಕಿ ಬಾಂಬ್ರಿ ಮತ್ತು ಎನ್. ಶ್ರೀರಾಮ್ ಬಾಲಾಜಿ ನಡುವೆ ಒಬ್ಬರನ್ನು ನಾಯಕ ರೋಹಿತ್ ರಾಜ್‌ಪಾಲ್ ಆಯ್ಕೆ ಮಾಡಬೇಕಾಗಿದೆ.

ಎಟಿಪಿ ಡಬಲ್ಸ್ ಪಟ್ಟಿಯಲ್ಲಿ 61ನೇ ಸ್ಥಾನದಲ್ಲಿರುವ ಬಾಂಬ್ರಿ, ತಂಡದ ಹೆಚ್ಚಿನ ಕ್ರಮಾಂಕಿತ ಆಟಗಾರನಾಗಿದ್ದು, ಡಬಲ್ಸ್‌ನಲ್ಲೂ ಆಡಲಿದ್ದಾರೆ. ಭಾರತದ ಅಗ್ರ ಡಬಲ್ಸ್ ಆಟಗಾರ ರೋಹನ್ ಬೋಪಣ್ಣ ಡೇವಿಸ್ ಕಪ್‌ನಿಂದ ನಿವೃತ್ತರಾಗಿದ್ದಾರೆ.

ನಿಕಿ ಪೂಣಚ್ಚ ಅವರನ್ನು ಆಯ್ಕೆಗೆ ಪರಿಗಣಿಸಬಹುದು. ಆದರೆ ಅವರು 783ನೇ ಸ್ಥಾನದಲ್ಲಿದ್ದಾರೆ ಮತ್ತು ತಂಡವು ಅವರನ್ನು ಸಿಂಗಲ್ಸ್‌ನಲ್ಲಿ ಕಣಕ್ಕಿಳಿಸುವ ಸಾಧ್ಯತೆ ಕಡಿಮೆ.

ರಾಮ್ ಕುಮಾರ್, ಪೂಣಚ್ಚ ಮತ್ತು ಸಾಕೇತ್ ಮೈನೇನಿ ಅವರು ಎರಡೂವರೆ ಗಂಟೆಗಳ ಕಾಲ ಅಭ್ಯಾಸ ನಡೆಸಿದರು.

ಗೋವಾ ವಿರುದ್ಧದ ರಣಜಿ ಪಂದ್ಯ ಡ್ರಾನಲ್ಲಿ ಅಂತ್ಯ • ಆತಿಥೇಯ ತಂಡಕ್ಕೆ 3 ಅಂಕ

ಕರ್ನಾಟಕ ಗೆಲುವಿಗೆ ಮುಳ್ಳಾದ ಸುಯಶ್

• ಆರ್. ಜಿತೇಂದ್ರ

ಮೈಸೂರು: ಇನಿಂಗ್ಸ್ ಮುನ್ನಡೆಯೊಂದಿಗೆ ಪಂದ್ಯ ಗೆಲ್ಲುವ ಕರ್ನಾಟಕದ ಕನಸಿಗೆ ಸೋಮವಾರ ಗೋವಾದ ಬ್ಯಾಟರ್ ಸುಯಶ್ ಪ್ರಭುದೇಸಾಯಿ ಅಜೇಯ ಶತಕದ (143*, 289 ಎ, 4X11) ಮೂಲಕ ಮುಳ್ಳಾದರು. ಇದರಿಂದಾಗಿ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ಆತಿಥೇಯ ತಂಡ ಮೂರು ಅಂಕಕ್ಕೆ ಸಮಾಧಾನ ಪಟ್ಟುಕೊಳ್ಳಬೇಕಾಯಿತು.

ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದ ಕೊನೆಯ ದಿನ, ಪ್ರವಾಸಿ ತಂಡದ 9 ವಿಕೆಟ್‌ಗಳನ್ನು ಬೇಗ ಉರುಳಿಸಿ, ಗುರಿ ಬೆನ್ನತ್ತುವ ಕನಸಿನೊಂದಿಗೆ ದಾಳಿಗೆ ಇಳಿದ ಕರ್ನಾಟಕದ ಲೆಕ್ಕಾಚಾರ ಕೈಕೊಟ್ಟಿತು. ದಿನವಿಡೀ ಆಡಿದ ಸುಯಶ್, ಬೌಲರ್‌ಗಳನ್ನು ವಿಶ್ವಾಸದಿಂದ ಎದುರಿಸಿದರು. ಪಂದ್ಯ ಕೊನೆಗೊಂಡಾಗ ಗೋವಾ ತಂಡ ಎರಡನೇ ಇನಿಂಗ್ಸ್‌ನಲ್ಲಿ 6 ವಿಕೆಟ್‌ಗೆ 282 ರನ್ ಗಳಿಸಿತ್ತು.

ಭಾನುವಾರ ಅಜೇಯರಾಗಿ ಉಳಿದಿದ್ದ ಸಿದ್ಧಾರ್ಥ್– ಸುಯಶ್ ಜೋಡಿಯನ್ನು ಸೋಮವಾರ ಆರಂಭದಲ್ಲೇ ಮಧ್ಯಮ ವೇಗಿ ವೈಶಾಖ ವಿಜಯಕುಮಾರ್ ಬೇರ್ಪಡಿಸಿದರು. ಸಿದ್ಧಾರ್ಥ್ (57) ನಿನ್ನೆಯ ಮೊತ್ತಕ್ಕೆ ಒಂದು ರನ್ ಸಹ ಸೇರಿಸದೇ ದೇವದತ್ತ ಪಡಿಕ್ಕಲ್‌ಗೆ ಕ್ಯಾಚಿತ್ತು ನಿರ್ಗಮಿಸಿದರು. ನಂತರ ಸ್ನೇಹಲ್ ಕೌತಣಕರ್ ಅವರನ್ನು (8) ವೇಗಿ ವೆಂಕಟೇಶ್ ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು.

ಆದರೆ, ನಾಲ್ಕನೇ ವಿಕೆಟ್‌ಗೆ ಜೊತೆಯಾದ ಸುಯಶ್– ದೀಪ್‌ರಾಜ್ ಜೋಡಿ ರಕ್ಷಣಾತ್ಮಕ ಆಟದ ಮೂಲಕ ಕರ್ನಾಟಕ ಬೌಲರ್‌ಗಳ ಬೆವರಿಳಿಸಿತು. 246 ಎಸೆತಗಳಲ್ಲಿ 97 ರನ್ ಸೇರಿಸುವ ಮೂಲಕ ತಂಡಕ್ಕೆ ಮುನ್ನಡೆ ದೊರಕಿಸಿತು. ಈ ಹಂತದಲ್ಲಿ ಉತ್ತಮವಾಗಿ ಆಡುತ್ತಿದ್ದ ದೀಪ್‌ರಾಜ್ (36, 134 ಎ, 4X1, 6X1) ಸ್ಪಿನ್ನರ್ ರೋಹಿತ್ ಎಸೆತದಲ್ಲಿ ಕೀಪರ್ ಶರತ್ ಶ್ರೀನಿವಾಸ್‌ಗೆ ಕ್ಯಾಚಿತ್ತರು. 96ನೇ ಓವರ್‌ನಲ್ಲಿ ಶುಭಾಂಗ್ ಎಸೆತದಲ್ಲಿ ಅರ್ಜುನ್ ತೆಂಡೂಲ್ಕರ್ (6) ಬಾರಿಸಿದ ಚೆಂಡನ್ನು ಮೊದಲ ಸ್ಲಿಪ್‌ನಲ್ಲಿದ್ದ ದೇವದತ್ತ ಪಡಿಕ್ಕಲ್ ಗಾಳಿಯಲ್ಲಿ ಹಾರಿ ಹಿಡಿಯುವ ಮೂಲಕ ಔಟ್ ಮಾಡಿದರು.

ಒಂದೆಡೆ ವಿಕೆಟ್‌ಗಳು ಉರುಳುತ್ತಿದ್ದರೂ ಧೃತಿಗೆಡದ ಸುಯಶ್ ತಂಡವನ್ನು ಸೋಲಿನಿಂದ ಪಾರು ಮಾಡಿದರು. 219 ಎಸೆತಗಳಲ್ಲಿ ಶತಕ ಬಾರಿಸಿದ ಅವರು ನಂತರವೂ ವಿಕೆಟ್ ಕಾಪಾಡಿಕೊಳ್ಳುವತ್ತ ಚಿತ್ತ ಹರಿಸಿದರು. ಕರ್ನಾಟಕದ ನಾಯಕ ಮಯಂಕ್ ಆಗಾಗ್ಗೆ ಬೌಲರ್‌ಗಳನ್ನು ಬದಲಿಸಿ ವಿಕೆಟ್‌ಗಾಗಿ ಪ್ರಯತ್ನಿಸಿದ್ದು, ಫಲ ನೀಡಲಿಲ್ಲ.

ಟೂರ್ನಿಯಲ್ಲಿ ಎಲೈಟ್ ಸಿ ಗುಂಪಿನಲ್ಲಿ ಆಡುತ್ತಿರುವ ಕರ್ನಾಟಕವು ಈ ಪಂದ್ಯದ ನಂತರ ಒಟ್ಟು ಮೂರು ಪಂದ್ಯಗಳಿಂದ 9 ಅಂಕ ಸಂಪಾದಿಸಿದ್ದು, ಗುಂಪಿನಲ್ಲಿ ಮೂರನೇ ಸ್ಥಾನದಲ್ಲಿದೆ. ಇದೇ 26ರಂದು ತ್ರಿಪುರ ವಿರುದ್ಧ ಮುಂದಿನ ಪಂದ್ಯವನ್ನು ಅಗರ್ತಲಾದಲ್ಲಿ ಆಡಲಿದೆ.


ರಣಜಿ ಪಂದ್ಯದಲ್ಲಿ ಕರ್ನಾಟಕ ವಿರುದ್ಧ ಅಜೇಯ ಶತಕ (143) ಸಿಡಿಸಿದ ಗೋವಾ ತಂಡದ ಸುಯಶ್ ಪ್ರಭುದೇಸಾಯಿ ಬ್ಯಾಟಿಂಗ್ ವೈಖರಿ ಪ್ರಜಾವಾಣಿ ಚಿತ್ರ/ಅನೂಪ್ ರಾಘ ಟಿ.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಗೋವಾ: 321
ಕರ್ನಾಟಕ: 9 ವಿಕೆಟ್‌ಗೆ 498 ಡಿಕ್ಲೇರ್
ಎರಡನೇ ಇನಿಂಗ್ಸ್: ಗೋವಾ: 6ಕ್ಕೆ 282 (100 ಓವರ್) (ಭಾನುವಾರ 1 ವಿಕೆಟ್‌ಗೆ 93)
ಸುಯಶ್ ಔಟಾಗದೇ 143
ಸಿದ್ಧಾರ್ಥ್ ಸಿ ಪಡಿಕ್ಕಲ್ ಬಿ ವೈಶಾಖ 57
ಸ್ನೇಹಲ್ ಎಲ್‌ಬಿಡಬ್ಲ್ಯು ವೆಂಕಟೇಶ್ 8
ದೀಪ್‌ರಾಜ್ ಸಿ ಶರತ್ ಬಿ ರೋಹಿತ್ 36
ದರ್ಶನ್ ಸಿ ಶುಭಾಂಗ್ ಬಿ ರೋಹಿತ್ 13
ಅರ್ಜುನ್ ಸಿ ಪಡಿಕ್ಕಲ್ ಬಿ ಶುಭಾಂಗ್ 6
ಸಮರ್ ದುಭಾಷಿ ಔಟಾಗದೇ 0
ಇತರೆ: 18 (ಬೈ 11, ಲೆಗ್ ಬೈ-4, ನೋಬಾಲ್-1, ವೈಡ್-2)
ವಿಕೆಟ್ ಪತನ: 2–94 (ಸಿದ್ಧಾರ್ಥ್; 27.3), 3–125 (ಸ್ನೇಹಲ್; 40.4), 4–222 (ದೀಪ್‌ರಾಜ್; 81.3), 5–249 (ದರ್ಶನ್; 90.1), 6–270 (ಅರ್ಜುನ್ ತೆಂಡೂಲ್ಕರ್; 95.5)
ಬೌಲಿಂಗ್: ವಾಸುಕಿ ಕೌಶಿಕ್ 14–3–40–0, ವೈಶಾಖ ವಿಜಯಕುಮಾರ್ 13–2–35–2, ಎ.ಸಿ. ರೋಹಿತ್‌ಕುಮಾರ್ 19–2–67–2, ಶುಭಾಂಗ್ ಹೆಗ್ಡೆ 36–5–77–1, ಎಂ. ವೆಂಕಟೇಶ್ 14–4–29–1, ನಿಕಿನ್ ಜೋಸ್ 4–0–19–0
ಪಂದ್ಯಶ್ರೇಷ್ಠ: ಮಯಂಕ್ ಅಗರವಾಲ್ (ಕರ್ನಾಟಕ)

ಫಲಿತಾಂಶ: ಪಂದ್ಯ ಡ್ರಾ



ಎರಡು ಟೆಸ್ಟ್ ಪಂದ್ಯಗಳಿಂದ ಹಿಂದೆ ಸರಿದ ವಿರಾಟ್

ನವದೆಹಲಿ (ಪಿಟಿಐ): ಭಾರತ ತಂಡದ ಪ್ರಮುಖ ಬ್ಯಾಟರ್ ವಿರಾಟ್ ಕೊಹ್ಲಿ ವೈಯಕ್ತಿಕ ಕಾರಣ ನೀಡಿ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯ ಮೊದಲ ಎರಡು ಪಂದ್ಯಗಳಿಂದ ಹಿಂದೆ ಸರಿದಿದ್ದಾರೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಸೋಮವಾರ ತಿಳಿಸಿದೆ.

ವಿರಾಮ ಪಡೆದುಕೊಳ್ಳಬೇಕಾದ ಕಾರಣಗಳ ಬಗ್ಗೆ ಊಹಾಪೋಹಗಳಿಂದ ದೂರವಿರಬೇಕು ಎಂದು ಅಭಿಮಾನಿಗಳಿಗೆ ಮತ್ತು ಮಾಧ್ಯಮಗಳಿಗೆ ಬಿಸಿಸಿಐ ಮನವಿ ಮಾಡಿದೆ. ಮೊದಲ ಕ್ರಿಕೆಟ್ ಟೆಸ್ಟ್ ಇದೇ 25ರಂದು (ಗುರುವಾರ) ಹೈದರಾಬಾದ್‌ನಲ್ಲಿ ಆರಂಭವಾಗಲಿದೆ.

'ವೈಯಕ್ತಿಕ ಕಾರಣಗಳಿಂದ, ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಟೆಸ್ಟ್ ಸರಣಿಯ ಮೊದಲ ಎರಡು ಪಂದ್ಯಗಳಿಂದ ಹಿಂದೆ ಸರಿಯಲು ಅವಕಾಶ ನೀಡುವಂತೆ ಕೊಹ್ಲಿ ಅವರು ಬಿಸಿಸಿಐಗೆ ವಿನಂತಿ ಮಾಡಿದ್ದಾರೆ' ಎಂದು ಮಂಡಳಿ ಕಾರ್ಯದರ್ಶಿ ಜಯ್ ಶಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಐಸಿಸಿ ವರ್ಷದ ಟಿ20 ತಂಡಕ್ಕೆ ಸೂರ್ಯ ನಾಯಕ



ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಧ್ಯಮ ಕ್ರಮಾಂಕದ ಬ್ಯಾಟರ್ ಸೂರ್ಯ ಕುಮಾರ್ ಯಾದವ್ ಐಸಿಸಿ ವರ್ಷದ ಪುರುಷರ ಟಿ20 ತಂಡದ ನಾಯಕರಾಗಿ ಆಯ್ಕೆಯಾಗಿದ್ದಾರೆ. ಇದರಲ್ಲಿ ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್, ಸ್ಪಿನ್ನರ್ ರವಿ ಬಿಷ್ಣೋಯಿ ಮತ್ತು ಎಡಗೈ ವೇಗಿ ಅರ್ಷ್‌ದೀಪ್ ಸಿಂಗ್ ಸೇರಿದ್ದಾರೆ.

ಬ್ಯಾಟಿಂಗ್, ಬೌಲಿಂಗ್ ಅಥವಾ ಅವರ ಆಲ್‌ರೌಂಡ್ ಸಾಧನೆಗಳಿಂದ ವರ್ಷದ ಅವಧಿಯಲ್ಲಿ ಪ್ರಭಾವ ಬೀರಿದ 11 ಅತ್ಯುತ್ತಮ ಆಟಗಾರನ್ನು ಗುರುತಿಸಿ ಐಸಿಸಿ ತಂಡ ಆಯ್ಕೆ ಮಾಡಲಾಗುತ್ತದೆ. ಸೂರ್ಯ ಕುಮಾರ್ ಸತತ ಎರಡನೇ ವರ್ಷ ತಂಡದಲ್ಲಿ ಸ್ಥಾನ ಪಡೆದಿದ್ದಾರೆ ಮತ್ತು ವರ್ಷದ ಟಿ20 ಪುರುಷರ ಕ್ರಿಕೆಟಿಗ ಪ್ರಶಸ್ತಿಯ ಸ್ಪರ್ಧೆಯಲ್ಲಿದ್ದಾರೆ. ಮುಂಬೈನ ಬಲಗೈ ಆಟಗಾರ ಕಳೆದ ವರ್ಷ ಉತ್ತಮ ಪ್ರದರ್ಶನ ನೀಡಿದ್ದರು.

ಭಾರತದ ನಾಲ್ವರ ಜೊತೆಗೆ ಇಂಗ್ಲೆಂಡ್‌ನ ಫಿಲ್ ಸಾಲ್ಟ್, ವಿಕೆಟ್ ಕೀಪರ್ ಆಗಿ ವೆಸ್ಟ್ ಇಂಡೀಸ್‌ನ ನಿಕೋಲಸ್ ಪೂರನ್, ನ್ಯೂಜಿಲೆಂಡ್‌ನ ಮಾರ್ಕ್ ಚಾಪ್‌ಮನ್, ಜಿಂಬಾಬ್ವೆಯ ಸಿಕಂದರ್ ರಝಾ, ಯುಗಾಂಡಾದ ಆಲ್‌ರೌಂಡರ್ ಅಲ್ಪೇಶ್ ರಾಮ್‌ಜಾನಿ, ಐರ್ಲೆಂಡ್‌ನ ಮಾರ್ಕ್ ಅಡ್ಯೆರ್ ಮತ್ತು ಜಿಂಬಾಬ್ವೆಯ ರಿಚರ್ಡ್ ಎನ್ಗರವಾ 11 ಸದಸ್ಯರ ತಂಡದಲ್ಲಿದ್ದಾರೆ.

ಮಹಿಳೆಯರ ವಿಭಾಗದಲ್ಲಿ ಆಫ್ ಸ್ಪಿನ್ನರ್ ದೀಪ್ತಿ ಶರ್ಮಾ ಅವರು ಶ್ರೀಲಂಕಾದ ಚಮರಿ ಅಟಪಟ್ಟು ನೇತೃತ್ವದ 11 ಮಂದಿಯ ತಂಡದಲ್ಲಿ ಸ್ಥಾನ ಪಡೆದ ಭಾರತದ ಏಕೈಕ ಆಟಗಾರ್ತಿ.

ಮನೀಷ್ ಬದಲು ಅನೀಶ್‌ಗೆ ಅವಕಾಶ

ಕರ್ನಾಟಕ ರಣಜಿ ತಂಡ: ಸ್ಪಿನ್ನರ್ ಶುಭಾಂಗ್ ಹೆಗ್ಡೆಗೆ ಕೊಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಡಗೈ ಸ್ಪಿನ್ನರ್ ಶುಭಾಂಗ್ ಹೆಗ್ಡೆ, ಬ್ಯಾಟರ್ ಮನೀಷ್ ಪಾಂಡೆ ಅವರನ್ನು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಮುಂದಿನ ಎರಡು ಪಂದ್ಯಗಳಿಗೆ ಕರ್ನಾಟಕ ತಂಡದಿಂದ ಕೈಬಿಡಲಾಗಿದೆ.

ಕರ್ನಾಟಕ ತಂಡವು ಇದೇ 26ರಿಂದ 29ರವರೆಗೆ ತ್ರಿಪುರ ವಿರುದ್ಧ ಅಗರ್ತಲಾದಲ್ಲಿ ಮತ್ತು ಫೆ.2 ರಿಂದ 5ರವರೆಗೆ ರೈಲ್ವೇಸ್ ವಿರುದ್ಧ ಸೂರತ್‌ನಲ್ಲಿ ಆಡಲಿದೆ. ಈ ಪಂದ್ಯಗಳಿಗಾಗಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು 16 ಮಂದಿಯ ರಾಜ್ಯ ತಂಡವನ್ನು ಸೋಮವಾರ ಪ್ರಕಟಿಸಿದ್ದು, ಆಲ್‌ರೌಂಡರ್ ಹಾರ್ದಿಕ್ ರಾಜ್, ಬ್ಯಾಟರ್ ಕೆ.ವಿ. ಅನೀಶ್ ಮತ್ತು ವೇಗದ ಬೌಲರ್ ಅಭಿಲಾಷ್ ಶೆಟ್ಟಿ ಅವರಿಗೆ ಅವಕಾಶ ಕಲ್ಪಿಸಲಾಗಿದೆ.

ಶುಭಾಂಗ್ ಬದಲು ಹಾರ್ದಿಕ್ ಸ್ಥಾನ ಪಡೆದಿದ್ದಾರೆ. 17 ವರ್ಷದ ಈ ಎಡಗೈ ಆಟಗಾರ, 19 ವರ್ಷದೊಳಗಿನವರ ಕೂಚ್ ಬಿಹಾರ್ ಟ್ರೋಫಿ ಗೆದ್ದ ಕರ್ನಾಟಕದ ತಂಡದ ಪರ ಉತ್ತಮ ಪ್ರದರ್ಶನ ತೋರಿದ್ದರು. ತಮಿಳುನಾಡು ವಿರುದ್ಧ ಸೆಮಿಫೈನಲ್ ಪಂದ್ಯದಲ್ಲಿ ಶತಕ ಸೇರಿದಂತೆ ಟೂರ್ನಿಯಲ್ಲಿ ಒಟ್ಟು 299 ರನ್ ಗಳಿಸಿದ್ದರು. ಜತೆಗೆ ಎಂಟು ಪಂದ್ಯಗಳಲ್ಲಿ ಎರಡು ಬಾರಿ ಐದು ವಿಕೆಟ್ ಗೊಂಚಲು ಸೇರಿದಂತೆ ಒಟ್ಟು 28 ವಿಕೆಟ್ ಪಡೆದು ಮಿಂಚಿದ್ದರು.

ಶುಭಾಂಗ್, ಈ ಹಿಂದಿನ ಪಂದ್ಯಗಳಲ್ಲಿ ನೀರಸ ಪ್ರದರ್ಶನ ನೀಡಿದ್ದರು. ಸೋಮವಾರ ಮುಕ್ತಾಯಗೊಂಡ ಗೋವಾ ವಿರುದ್ಧದ ಪಂದ್ಯದಲ್ಲೂ ನಿರೀಕ್ಷಿತ ಪ್ರದರ್ಶನ ನೀಡಿರಲಿಲ್ಲ.

ಗೋವಾ ವಿರುದ್ಧದ ಪಂದ್ಯದ ಮೊದಲ ದಿನ ಕ್ಯಾಚ್ ಹಿಡಿಯಲು ಪ್ರಯತ್ನಿಸುವಾಗ ಕೈಗೆ ಗಾಯಗೊಂಡ ಬ್ಯಾಟರ್ ಮನೀಷ್ ಪಾಂಡೆ ಅವರನ್ನು ಕೈಬಿಟ್ಟು, ಅನೀಶ್ ಅವರಿಗೆ ಅವಕಾಶ ಕಲ್ಪಿಸಲಾಗಿದೆ. ಅನೀಶ್ ಅವರು ಕರ್ನಲ್ ಸಿ.ಕೆ. ನಾಯ್ಡು ಕ್ರಿಕೆಟ್ ಟೂರ್ನಿಯಲ್ಲಿ ಕರ್ನಾಟಕದ ಪರ ಅಗ್ರ ಕ್ರಮಾಂಕದಲ್ಲಿ ಎರಡು ಶತಕಗಳನ್ನು ಗಳಿಸಿದ್ದರು. ದಕ್ಷಿಣ ಆಫ್ರಿಕಾ ವಿರುದ್ಧ ಭಾರತ ತಂಡವನ್ನು ಪ್ರತಿನಿಧಿಸಿದ್ದ ಪ್ರಸಿದ್ಧ ಕೃಷ್ಣ ಅವರು, ಗುಜರಾತ್ ವಿರುದ್ಧದ ಪಂದ್ಯದ ವೇಳೆ ಗಾಯಗೊಂಡಿದ್ದರು. ಹೀಗಾಗಿ, ಅಭಿಲಾಷ್ ಅವರನ್ನು ತಂಡಕ್ಕೆ ಸೇರಿಸಿಕೊಳ್ಳಲಾಗಿದೆ.

ಕರ್ನಾಟಕ ತಂಡ: ಮಯಂಕ್ ಅಗರವಾಲ್ (ನಾಯಕ), ಆರ್. ಸಮರ್ಥ್, ಡಿ.ನಿಶ್ಚಲ್, ದೇವದತ್ತ ಪಡಿಕ್ಕಲ್, ನಿಕಿನ್ ಜೋಸ್ ಎಸ್.ಜೆ (ಉಪನಾಯಕ), ಶರತ್ ಶ್ರೀನಿವಾಸ್ (ವಿಕೆಟ್ ಕೀಪರ್), ವೈಶಾಖ ವಿಜಯಕುಮಾರ್, ವಾಸುಕಿ ಕೌಶಿಕ್, ಕೆ. ಶಶಿಕುಮಾರ್, ಸುಜಯ್ ಸಾತೇರಿ (ವಿಕೆಟ್ ಕೀಪರ್), ಎಂ. ವೆಂಕಟೇಶ್, ಕಿಶನ್ ಎಸ್. ಬೆದರೆ, ಎ.ಸಿ.ರೋಹಿತ್ ಕುಮಾರ್, ಅಭಿಲಾಷ್ ಶೆಟ್ಟಿ, ಕೆ.ವಿ. ಅನೀಶ್, ಹಾರ್ದಿಕ್ ರಾಜ್.


ಕೆ.ವಿ. ಅನೀಶ್


ಹಾರ್ದಿಕ್ ರಾಜ್

ಬಿಸಿಸಿಐ ಪ್ರಶಸ್ತಿ ಪ್ರದಾನ ಇಂದು

ಶಾಸ್ತ್ರಿ, ಗಿಲ್‌ಗೆ ಗೌರವ

ಹೈದರಾಬಾದ್ (ಪಿಟಿಐ): ಭಾರತ ತಂಡದ ಮಾಜಿ ಮುಖ್ಯಕೋಚ್ ರವಿ ಶಾಸ್ತ್ರಿ ಅವರನ್ನು ಮಂಗಳವಾರ ನಡೆಯುವ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಜೀವಮಾನದ ಸಾಧನೆಗಾಗಿ ಗೌರವಿಸಲಾಗುವುದು. ಶುಭಮನ್ ಗಿಲ್ ಅವರಿಗೆ 'ವರ್ಷದ ಕ್ರಿಕೆಟಿಗ' ಪುರಸ್ಕಾರ ನೀಡಲಾಗುವುದು.

ಕಳೆದ ವರ್ಷ ಅವರು ಉತ್ತಮ ಸಾಧನೆ ತೋರಿದ್ದು, ಏಕದಿನ ಕ್ರಿಕೆಟ್‌ನಲ್ಲಿ ಅತಿ ವೇಗವಾಗಿ 2000 ರನ್‌ಗಳನ್ನು ಕಲೆಹಾಕಿದ್ದರು. ಈ ಮಾದರಿಯಲ್ಲಿ ಐದು ಶತಕಗಳನ್ನೂ ಗಳಿಸಿದ್ದರು.

'ಶಾಸ್ತ್ರಿ ಅವರನ್ನು ಜೀವಮಾನದ ಸಾಧಕ ಗೌರವಕ್ಕೆ ಮತ್ತು ಗಿಲ್ ಅವರನ್ನು ವರ್ಷದ ಕ್ರಿಕೆಟಿಗ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ ಎಂದು ಬಿಸಿಸಿಐ ಅಧಿಕಾರಿಯೊಬ್ಬರು ಹೇಳಿದ್ದಾರೆ. 2019ರಲ್ಲಿ ಮೊದಲ ಬಾರಿ ಈ ಪ್ರಶಸ್ತಿ ನೀಡುವ ಸಂಪ್ರದಾಯ ಆರಂಭಿಸಲಾಯಿತು. ಗುರುವಾರ ಇಲ್ಲಿ ಆರಂಭವಾಗುವ ಮೊದಲ ಕ್ರಿಕೆಟ್ ಟೆಸ್ಟ್‌ಗೆ ಪೂರ್ವಭಾವಿಯಾಗಿ ನಡೆಯುವ ಈ ಸಮಾರಂಭದಲ್ಲಿ ಭಾರತ ಮತ್ತು ಇಂಗ್ಲೆಂಡ್ ತಂಡಗಳು ಆಟಗಾರರು ಭಾಗವಹಿಸುವ ನಿರೀಕ್ಷೆಯಿದೆ.

61 ವರ್ಷದ ಶಾಸ್ತ್ರಿ ಅವರು 80 ಟೆಸ್ಟ್ ಮತ್ತು 150 ಏಕದಿನ ಪಂದ್ಯಗಳಲ್ಲಿ ಆಡಿದ್ದಾರೆ. ವೀಕ್ಷಕ ವಿವರಣೆಯಲ್ಲೂ ಛಾಪು ಮೂಡಿಸಿದ್ದಾರೆ. ಎರಡು ಬಾರಿ ಭಾರತ ತಂಡಕ್ಕೆ ಮುಖ್ಯ ಕೋಚ್ ಆಗಿದ್ದಾರೆ.

ಅವರು ಕೋಚ್ ಆಗಿದ್ದ ಅವಧಿಯಲ್ಲಿ ಭಾರತ, ಆಸ್ಟ್ರೇಲಿಯಾದಲ್ಲಿ ಆ ತಂಡದ ವಿರುದ್ಧ ಬೆನ್ನುಬೆನ್ನಿಗೆ ಸರಣಿ ಗೆದ್ದಿತ್ತು. ಆದರೆ ಅವರು ಕೋಚ್ ಆಗಿದ್ದ ಮತ್ತು ವಿರಾಟ್ ಕೊಹ್ಲಿ ನಾಯಕರಾಗಿದ್ದ ಅವಧಿಯಲ್ಲಿ ಭಾರತ ಐಸಿಸಿಯ ಟೂರ್ನಿಯಲ್ಲಿ ಪ್ರಶಸ್ತಿ ಗೆಲ್ಲಲು ಆಗಿರಲಿಲ್ಲ. 2019ರ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ ಫೈನಲ್ ತಲುಪಿದ್ದರೂ ಅಲ್ಲಿ ಎಡವಿತ್ತು. 2019ರ ವಿಶ್ವಕಪ್‌ನಲ್ಲೂ ಭಾರತ ಸೆಮಿಫೈನಲ್‌ನಲ್ಲಿ ಎಡವಿತ್ತು.


ರವಿ ಶಾಸ್ತ್ರಿ


ಶುಭಮನ್

ಬಿಎಫ್‌ಸಿ ತಂಡಕ್ಕೆ ಒಲಿವರ್ ಡ್ರೊಸ್ಟ್

ಬೆಂಗಳೂರು (ಪಿಟಿಐ): ಇಂಡಿಯನ್ ಸೂಪರ್ ಲೀಗ್‌ನಲ್ಲಿ ಆಡುವ ಬೆಂಗಳೂರು ಎಫ್‌ಸಿ ತಂಡ 2023–24ನೇ ಸಾಲಿಗೆ ಡೆನ್ಮಾರ್ಕ್‌ನ ಫಾರ್ವರ್ಡ್ ಆಟಗಾರ ಒಲಿವರ್ ಡ್ರೊಸ್ಟ್ ಅವರನ್ನು ಸೇರ್ಪಡೆ ಮಾಡಿಕೊಂಡಿದೆ.

28 ವರ್ಷದ ಡ್ರೊಸ್ಟ್, ಡೆನ್ಮಾರ್ಕ್‌ನ ಮೊದಲ ಡಿವಿಷನ್ ಕ್ಲಬ್ ಎಫ್‌ಸಿ ಹೆಲ್ಸಿಂಗೊರ್ ಪರ ಆಡುತ್ತಾರೆ. ಅವರು ಇಂಗ್ಲೆಂಡ್‌ನ ಕರ್ಟಿಸ್ ಮೇನ್ ಸ್ಥಾನದಲ್ಲಿ ಬಿಎಫ್‌ಸಿ ತಂಡಕ್ಕೆ ಸೇರಿಕೊಂಡಿದ್ದಾರೆ ಎಂದು ಬೆಂಗಳೂರಿನ ಕ್ಲಬ್ ಶುಕ್ರವಾರ ಪ್ರಕಟಿಸಿದೆ. ಕರ್ಟಿಸ್ ಅವರು ಈ ತಿಂಗಳ ಆರಂಭದಲ್ಲಿ ಒಪ್ಪಿಗೆ ಮೇರೆಗೆ ತಂಡ ತೊರೆದಿದ್ದರು.

'ಗೋಲುಗಳನ್ನು ಗಳಿಸುವ ಮತ್ತು ಪಾಸ್‌ಗಳನ್ನು ನೀಡುವ ಮೂಲಕ ತಂಡಕ್ಕೆ ನೆರವಾಗುವ ವಿಶ್ವಾಸವಿದೆ. ಜೊತೆ ಒಟ್ಟಾಗಿ ನಾವು ಐಎಸ್‌ಎಲ್ ಪ್ಲೇ ಆಫ್‌ಗೆ ಸ್ಥಾನ ಪಡೆಯಬಹುದು' ಎಂದು ಡ್ರೊಸ್ಟ್ ಹೇಳಿದ್ದಾರೆ.

ಮುಂಬೈ ಮ್ಯಾರಥಾನ್: ಇಬ್ಬರ ಸಾವು, 22 ಮಂದಿ ಆಸ್ಪತ್ರೆಗೆ

ಮುಂಬೈ (ಪಿಟಿಐ): ಇಲ್ಲಿ ನಡೆದ ವಾರ್ಷಿಕ ಟಾಟಾ ಮುಂಬೈ ಮ್ಯಾರಥಾನ್‌ನಲ್ಲಿ 74 ವರ್ಷದ ವ್ಯಕ್ತಿ ಸೇರಿದಂತೆ ಇಬ್ಬರು ಸ್ಪರ್ಧಿಗಳು ಕುಸಿದು ಬಿದ್ದು ಮೃತಪಟ್ಟಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಧಿಕಾರಿಯ ಪ್ರಕಾರ, ಭಾನುವಾರ ನಡೆದ ಓಟದ ಸ್ಪರ್ಧೆಯಲ್ಲಿ ಭಾಗವಹಿಸಿದ 22 ಜನರನ್ನು ನಿರ್ಜಲೀಕರಣ ಮತ್ತು ಇತರ ಕಾರಣಗಳಿಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮೃತರನ್ನು ಕೋಲ್ಕತ್ತಾದ ಸುವ್ರದೀಪ್ ಬ್ಯಾನರ್ಜಿ (40) ಮತ್ತು ಮುಂಬೈನ ರಾಜೇಂದ್ರ ಬೋರಾ (74) ಎಂದು ಗುರುತಿಸಲಾಗಿದೆ.

ಅನುಭವಿ ಮ್ಯಾರಥಾನ್ ಓಟಗಾರ, ಸಾಫ್ಟ್‌ವೇರ್ ಎಂಜಿನಿಯರ್ ಬ್ಯಾನರ್ಜಿ ಹಾಜಿ ಅಲಿ ಜಂಕ್ಷನ್ ಬಳಿ ಕುಸಿದು ಬಿದ್ದರು. ಮರೀನ್ ಡ್ರೈವ್ ಎದುರಿನ ಜನಪ್ರಿಯ ಪಿಜ್ಜಾ ಜಾಯಿಂಟ್ ಬಳಿಯ ಪೆಟ್ರೋಲ್ ಪಂಪ್ ಬಳಿ ರಸ್ತೆಯಲ್ಲಿ ಬೋರಾ ಕುಸಿದುಬಿದ್ದಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಹೇಲ್ ಲೆಮಿ ಬೆರ್ಹಾನು ಮತ್ತು ಅಬೆರಾಶ್ ಮಿನ್ಸೆವೊ ಕ್ರಮವಾಗಿ ಪುರುಷರ ಮತ್ತು ಮಹಿಳಾ ವಿಭಾಗದ ಪ್ರಶಸ್ತಿಗಳನ್ನು ಗೆಲ್ಲುವ ಮೂಲಕ ಇಥಿಯೋಪಿಯಾದ ಓಟಗಾರರು ಮುಂಬೈ ಮ್ಯಾರಥಾನ್ ನಲ್ಲಿ ಪ್ರಾಬಲ್ಯ ಸಾಧಿಸಿದರು.